ಸಂಪುಟ: 10 ಸಂಚಿಕೆ: 283 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಸಪ್ತಪದಿ ತುಳಿದ ರಘು ದೀಕ್ಷಿತ್ - ವಾರಿಜಶ್ರೀ

ಖ್ಯಾತ ಸಂಗೀತ ನಿರ್ದೇಶಕ, ಗಾಯಕ ರಘು ದೀಕ್ಷಿತ್ ಹಾಗೂ ಗ್ರ್ಯಾಮಿ ನಾಮನಿರ್ದೇಶಿತ ಗಾಯಕಿ ವಾರಿಜಶ್ರೀ ವೇಣುಗೋಪಾಲ್ ಅವರು ಶುಕ್ರವಾರ ವೈವಾಹಿಕ ಜೀವನಕ್ಕೆ ಕಾಲಿಟ್ಟಿದ್ದಾರೆ. ಆಪ್ತರು, ಸ್ನೇಹಿತರು ಹಾಗೂ ಕುಟುಂಬದವರ ಸಮ್ಮುಖದಲ್ಲಿ ಇವರಿಬ್ಬರ ಮದುವೆ ಶಾಸ್ತ್ರೋಕ್ತವಾಗಿ ನೆರವೇರಿದೆ.

ಸೊಂಪಾದ ಪುಟಗಳು

ಆರೆಸ್ಸೆಸ್‌ನ ಕಾರ್ಮಿಕ ಮತ್ತು ಮಹಿಳಾ ಸಂಘಟನೆ

ವೀಕೆಂಡ್ ವಿತ್ ಮೋಹನ್
ಮೋಹನ್ ವಿಶ್ವ 6

ಜಿಎಸ್‌ಟಿ 2.0: ಲಾಭ ಜನರಿಗೆ ತಲುಪಿದೆಯೇ?

ಕರಪ್ರವರ
ರವೀ ಸಜಂಗದ್ದೆ 7

ದಾರಿದೀಪೋಕ್ತಿ



ಈ ಜಗತ್ತಿನಲ್ಲಿ ಪರಿಶುದ್ಧರು ಮತ್ತು ಪರಿಪೂರ್ಣರು ಎಂಬುವವರು ಇಲ್ಲವೇ ಇಲ್ಲ. ಬೇರೆಯವರ ತಪ್ಪುಗಳಿಗೆ ನೀವು ಅವರನ್ನು ದೂರ ಮಾಡಿದರೆ, ನೀವು ಒಬ್ಬಂಟಿಯಾಗಿರಬೇಕಾಗುತ್ತದೆ. ಎಲ್ಲರ ಬಗ್ಗೆಯೂ ತೀರ್ಪು ಕೊಡುವುದನ್ನು ನಿಲ್ಲಿಸಿ.

ವಕ್ರತುಂಡೋಕ್ತಿ

ತಂತ್ರಜ್ಞಾನ ಅದ್ಭುತ ಎಂದೆನಿಸುತ್ತದೆ, ಆಟೋಕರೆಕ್ಟ್ ನಿಮ್ಮಲ್ಲಿ ಅನಕ್ಷರಸ್ಥ ಎಂಬ ಭಾವನೆ ಮೂಡಿಸುವವರೆಗೆ.

ಪಿಯೂಷ್ ಪಾಂಡೆ ಇನ್ನಿಲ್ಲ

ದೆಹಲಿ: ತೊಂಭತ್ತರ ದಶಕದಲ್ಲಿ ದೇಶದ ಏಕತೆಯ ಧ್ವನಿಯಂತಾಗಿದ್ದ 'ಮಿಲೇ ಸುರ್ ಮೇರಾ ತುಮ್ಹಾರ' ಗೀತೆಯ ರಚನೆಕಾರ, ಭಾರತದ ಜಾಹೀರಾತು ಕ್ಷೇತ್ರದ ದಿಗ್ಗಜ, ಸೃಜನಶೀಲತೆಗೆ ಮತ್ತೊಂದು ಹೆಸರಾಗಿದ್ದ ಪಿಯೂಷ್ ಪಾಂಡೆ (70) ಶುಕ್ರವಾರ ಬೆಳಗ್ಗೆ ನಿಧನರಾಗಿದ್ದಾರೆ. ಕಳೆದ ಕೆಲ ದಿನಗಳಿಂದ ತೀವ್ರ ಅನಾರೋಗ್ಯದ ಹಿನ್ನೆಲೆಯಲ್ಲಿ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. 2014ರಲ್ಲಿ ಪಿಯೂಷ್ ಪಾಂಡೆ ರೂಪಿಸಿದ ಘೋಷವಾಕ್ಯ 'ಅಬ್ ಕೀ ಬಾರ್ ಮೋದಿ ಸರ್ಕಾರ್' ಅತ್ಯಂತ ಪ್ರಭಾವಶಾಲಿಯಾಗಿ ಬಿಜೆಪಿಗೆ ಬಹುಮತ ತಂದುಕೊಟ್ಟಿತ್ತು.

ಫನ್‌ತರಂಗ
- ರಘುಪತಿ ಶೃಂಗೇರಿ -

'ಸಿಟಿ ಹೊಂಡಾ'



ಹೈದರಾಬಾದ್‌ನಿಂದ ಬೆಂಗಳೂರಿಗೆ ಬರುತ್ತಿದ್ದ ಖಾಸಗಿ ಬಸ್ ಕರ್ನೂಲ್ ಬಳಿ ಬೈಕ್‌ಗೆ ಡಿಕ್ಕಿ ಹೊಡೆದು ಭೀಕರ ದುರಂತ

ಬಸ್ ಭಸ್ಮ: 20 ಸಾವು

ಕರ್ನೂಲ್: ಹೈದರಾಬಾದ್‌ನಿಂದ ಬೆಂಗಳೂರಿಗೆ ತೆರಳುತ್ತಿದ್ದ ಖಾಸಗಿ ಬಸ್ ಕರ್ನೂಲ್ ಜಿಲ್ಲೆಯ ಚಿನ್ನೆಕೂರ್ ಬಳಿ ಬೈಕ್‌ಗೆ ಡಿಕ್ಕಿ ಹೊಡೆದು ಬೆಂಕಿ ಹತ್ತಿಕೊಂಡ ಪರಿಣಾಮ ಹಸುಗೂಸು ಸೇರಿ ಒಟ್ಟು 20 ಸಜೀವ ದಹನವಾಗಿದ್ದು, 15 ಮಂದಿ ಪವಾಡ ಸದೃಶ ರೀತಿಯಲ್ಲಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಒಡಿಸ್ಸಾದಲ್ಲಿ ನೋಂದಾಯಿತ ಕಾವೇರಿ ಟ್ರಾವಲ್ಸ್ ನ ಐಶಾರಾಮಿ ಸ್ಲೀಪರ್ ಕೋಚ್ ಬಸ್ಸಿನಲ್ಲಿ 40ಕ್ಕೂ ಹೆಚ್ಚು ಮಂದಿ ಪ್ರಯಾಣಿಸುತ್ತಿದ್ದರು. ಈ ಬಸ್ ಕರ್ನೂಲ್‌ನ ಚಿನ್ನೆಕೂರ್ ಬಳಿ ಮೋಟಾರ್ ಬೈಕ್‌ಗೆ ಡಿಕ್ಕಿ ಹೊಡೆದಿದೆ. ಅಪಘಾತದಲ್ಲಿ ಬೈಕ್ ಬಸ್ಸಿನಡಿ ಸಿಲುಕಿದರೂ ಚಾಲಕ ಬಸ್ ನಿಲ್ಲಿಸದ ಕಾರಣ ಬೈಕ್‌ನ್ನು ಸುಮಾರು ದೂರ ಎಳೆದುಕೊಂಡು ಹೋಗಿದೆ. ಈ ವೇಳೆ ಬೈಕ್‌ನ ಪೆಟ್ರೋಲ್ ಟ್ಯಾಂಕ್‌ಗೆ ಬೆಂಕಿ ಹತ್ತಿಕೊಂಡು ಸ್ಫೋಟಗೊಂಡಿದೆ. ಕ್ಷಣಾರ್ಧದಲ್ಲಿ ಬೆಂಕಿಯ ಕಿಡಿ ಇಡೀ ಬಸ್ಸನ್ನು ಆವರಿಸಿಕೊಂಡಿದೆ.

ಮುಂಜಾನೆ 3.30ರ ಸವಿ ನಿದ್ದೆಯ ಸಮಯದಲ್ಲಿ ಈ ದುರಂತ ಸಂಭವಿಸಿದೆ. ಪ್ರಯಾಣಿಕರು ಏನಾಗುತ್ತಿದೆ ಎಂದು ತಿಳಿಯುವಷ್ಟರಲ್ಲಿ ಬೆಂಕಿಯ ಕೆನ್ನಾಲಿಗೆ ಹಾಗೂ ಹೊಗೆ ಆವರಿಸಿತ್ತು. ಎಸಿ ಸ್ಲೀಪರ್ ಕೋಚ್ ಬಸ್ ಆಗಿದ್ದರಿಂದ ಕಿಟಕಿಯ ಗಾಜುಗಳನ್ನು ತೆರೆಯಲು ಅವಕಾಶವಿರಲಿಲ್ಲ. ಬೆಂಕಿಯಲ್ಲಿ ಬಸ್ಸಿನ ಎಲೆಕ್ಟ್ರಿಕ್ ವೈರ್‌ಗಳು ಸುಟ್ಟು ಹೋದ ಕಾರಣ ಯಾಂತ್ರಿಕೃತ ಬಾಗಿಲನ್ನು ಕೂಡ ತೆರೆಯಲು ಸಾಧ್ಯವಾಗಲಿಲ್ಲ ಎನ್ನಲಾಗಿದೆ.

ಈ ನಡುವೆ ಕೆಲವು ಪ್ರಯಾಣಿಕರು ಕಿಟಕಿಯ ಗಾಜುಗಳನ್ನು ಒಡೆದು ಹೊರಗೆ ಜಿಗಿದು ಪ್ರಾಣ ಉಳಿಸಿಕೊಂಡಿದ್ದಾರೆ. ಆದರೆ ಬಹುತೇಕರಿಗೆ ಇದು ಸಾಧ್ಯವಾಗಿಲ್ಲ. ಬೈಕ್ ಸವಾರ ಸೇರಿ 20 ಮಂದಿ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಗಾಯಾಳುಗಳಲ್ಲಿ ಕೆಲವರ ಸ್ಥಿತಿ ಗಂಭೀರವಾಗಿದ್ದು, ಸಾವಿನ ಸಂಖ್ಯೆ ಇನ್ನೂ ಹೆಚ್ಚಾಗಬಹುದು ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಪೊಲೀಸರು ಮತ್ತು ಅಗ್ನಿಶಾಮಕ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಬೆಂಕಿಯನ್ನು ನಂದಿಸಿದ್ದಾರೆ. ಘಟನೆಯಲ್ಲಿ ಬಸ್ಸಿನ ಡಿಸೇಲ್ ಟ್ಯಾಂಕ್‌ಗೆ ಬೆಂಕಿ ಹೊತ್ತಿಕೊಂಡಿಲ್ಲ. ಒಂದು ವೇಳೆ ಟ್ಯಾಂಕ್‌ಗೆ ಬೆಂಕಿ ತಾಗಿ ಸ್ಫೋಟಿಸಿದ್ದರೆ ಯಾರೂ ಬದುಕಿ ಉಳಿಯುವ ಸಾಧ್ಯತೆಗಳು ಕಡಿಮೆ ಇತ್ತು ಎನ್ನಲಾಗಿದೆ. ಕರ್ನೂಲ್ ಪೊಲೀಸರು ಚಾಲಕನನ್ನು ವಶಕ್ಕೆ ಪಡೆದು ತನಿಖೆ ಆರಂಭಿಸಿದ್ದಾರೆ. ಬೆಂಕಿ ಹೊತ್ತಿಕೊಂಡ ಬಸ್ಸಿನಲ್ಲಿ ಯಾವುದೇ ಅಗ್ನಿಶಾಮಕ ನಿಯಂತ್ರಣ ಸಾಧನಗಳು ಇರಲಿಲ್ಲ ಎಂದು ಡಿಐಜಿ ತಿಳಿಸಿದ್ದಾರೆ. ಇದು ಪ್ರಯಾಣದ ಸಮಯದಲ್ಲಿ ಸುರಕ್ಷತಾ ಅನುಸರಣೆ ಮತ್ತು ತುರ್ತು ಸಿದ್ಧತೆಯಲ್ಲಿನ ಲೋಪಗಳನ್ನು ಎತ್ತಿ ತೋರಿಸಿದೆ ಎಂದು ಅವರು ಹೇಳಿದ್ದಾರೆ. ಬಸ್ ದುರಂತದ ಬೆನ್ನಲ್ಲೇ ಖಾಸಗಿ ಬಸ್‌ಗಳ ಸುರಕ್ಷತೆಯ ಕುರಿತು ಚರ್ಚೆಗಳು ಶುರುವಾಗಿವೆ.

ಟೆಕ್ಕಿ ಕುಟುಂಬ ಸೇರಿ 8 ಮಂದಿ ಅಗ್ನಿಗಾಹುತಿ

ಬಸ್ ಅವಘಡದಲ್ಲಿ ಒಂದೇ ಕುಟುಂಬದ ನಾಲ್ವರು ಹಾಗೂ ನಾಲ್ವರು ಸಾಫ್ಟ್‌ವೇರ್ ಎಂಜಿನಿಯರ್‌ಗಳು ಸೇರಿ ಉದ್ಯೋಗ ಅರಸಿ ಬೆಂಗಳೂರಿನಲ್ಲಿ ನೆಲೆಸಿದ್ದ ಎಂಟು ಮಂದಿ ಸಜೀವ ದಹನವಾಗಿದ್ದಾರೆ. ಆಂಧ್ರಪ್ರದೇಶದ ನೆಲ್ಲೂರಿನ ಗೊಳ್ಳ ರಮೇಶ್ (38) ಅವರ ಕುಟುಂಬವು ನಗರದ ಕಮ್ಮನಹಳ್ಳಿಯಲ್ಲಿ ನೆಲಸಿತ್ತು. ಪತ್ನಿ ಅನುಷಾ (35), ಮಕ್ಕಳಾದ ಶಶಾಂಕ್ (12) ಹಾಗೂ ಮಾನ್ವಿತಾ (10) ಜತೆಗೆ ದೀಪಾವಳಿ ಹಬ್ಬಕ್ಕೆ ಊರಿಗೆ ತೆರಳಿದ್ದರು. ಬಸ್‌ನಿಂದ ಹೊರಕ್ಕೆ ಬರಲು ಸಾಧ್ಯವಾಗದೇ ಇಡೀ ಕುಟುಂಬವೇ ಅಗ್ನಿಯಲ್ಲಿ ಬೆಂದು ಹೋಗಿದೆ. ಇದೇ ಬಸ್‌ನಲ್ಲಿದ್ದ ಸಾಫ್ಟ್‌ವೇರ್ ಎಂಜಿನಿಯರ್‌ಗಳಾದ ಮೇಘನಾಥ್ (24), ಅನುಷಾ ರೆಡ್ಡಿ(26), ಚಂದನಾ ಹಾಗೂ ಜಿ.ಧಾತ್ರಿ ಅವರೂ ದುರಂತ ಅಂತ್ಯ ಕಂಡಿದ್ದಾರೆ.

ಮೊಬೈಲ್ ಸ್ಫೋಟದಿಂದ ತೀವ್ರತೆ ಹೆಚ್ಚಳ

ಆಂಧ್ರಪ್ರದೇಶ ಅಗ್ನಿಶಾಮಕ ಇಲಾಖೆಯ ಅಧಿಕಾರಿಗಳ ಪ್ರಕಾರ ದುರಂತಕ್ಕೀಡಾದ ಬಸ್ಸಿನ ಕೆಳಭಾಗದ ಲಗೇಜ್ ಜಾಗದಲ್ಲಿ ಹೊಸ ಮೊಬೈಲ್ ಫೋನ್‌ಗಳನ್ನು ಇಡಲಾಗಿತ್ತು. ಬೆಂಕಿ ಹೊತ್ತಿಕೊಂಡು ಶಾಖ ಹೆಚ್ಚಾಗಿದ್ದರಿಂದಾಗಿ 100ಕ್ಕೂ ಹೆಚ್ಚು ಹೊಸ ಫೋನ್‌ಗಳು ಒಮ್ಮೆಲೆ ಸ್ಫೋಟಗೊಂಡಿವೆ. ಇದು ದುರಂತದ ತೀವ್ರತೆ ಹೆಚ್ಚಾಗಲು ಕಾರಣವಾಗಿದೆ.

ಸಿದ್ದರಾಮಯ್ಯ ಸಂತಾಪ

ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಲೋಕಸಭೆ ವಿರೋಧಪಕ್ಷದ ನಾಯಕ ರಾಹುಲ್ ಗಾಂಧಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ತೆಲಂಗಾಣ ಮುಖ್ಯಮಂತ್ರಿ ರೇವಂತ್ ರೆಡ್ಡಿ, ಕೇಂದ್ರ ಸಚಿವರಾದ ಎಚ್.ಡಿ.ಕುಮಾರಸ್ವಾಮಿ ಸೇರಿದಂತೆ ಹಲವು ಗಣ್ಯರು ದುರ್ಘಟನೆಗೆ ಸಂತಾಪ ಸೂಚಿಸಿದ್ದಾರೆ.

2 ಲಕ್ಷ ರು. ಪರಿಹಾರ

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಬಸ್ ದುರಂತದ ಘಟನೆಗೆ ತೀವ್ರ ಆಘಾತ ವ್ಯಕ್ತಪಡಿಸಿದ್ದಾರೆ. ಮೃತರ ಕುಟುಂಬಕ್ಕೆ ತಲಾ 2 ಲಕ್ಷ ರೂಪಾಯಿಗಳ ಪರಿಹಾರ ಘೋಷಿಸಿದ್ದು, ಗಾಯಗೊಂಡವರಿಗೆ ತಲಾ 50 ಸಾವಿರ ರೂಪಾಯಿ ನೀಡುವುದಾಗಿ ಸಾಮಾಜಿಕ ಜಾಲತಾಣ ಖಾತೆಯಲ್ಲಿ ತಿಳಿಸಿದ್ದಾರೆ. ಬಸ್ ದುರಂತಕ್ಕೆ ರಾಷ್ಟ್ರಪತಿ ದ್ರೌಪದಿ ಮುರ್ಮು ತೀವ್ರ ಸಂತಾಪ ವ್ಯಕ್ತಪಡಿಸಿದ್ದು, ಸಂತ್ರಸ್ತ ಕುಟುಂಬದವರಿಗೆ ನೋವು ಭರಿಸುವ ಶಕ್ತಿ ನೀಡಲಿ ಎಂದು ಹೇಳಿದ್ದಾರೆ. ಸಂತ್ರಸ್ತ ಕುಟುಂಬಕ್ಕೆ **ಬೆಂಬಲ:** ಆಂಧ್ರ ಪ್ರದೇಶದ ಮುಖ್ಯಮಂತ್ರಿ ಎನ್.ಚಂದ್ರಬಾಬು ನಾಯ್ಡು ಅವರು ಗಾಯಗೊಂಡವರು ಮತ್ತು ಸಂತ್ರಸ್ತರ ಕುಟುಂಬಗಳಿಗೆ ಸರಕಾರ ಸಾಧ್ಯವಿರುವ ಎಲ್ಲ ಬೆಂಬಲವನ್ನು ನೀಡಲಿದೆ ಎಂದು ತಿಳಿಸಿದ್ದಾರೆ.

ನವೆಂಬರ್ ಕ್ರಾಂತಿ, ಉತ್ತರಾಧಿಕಾರಿ ಚರ್ಚೆ ಬೆನ್ನಲ್ಲೇ ನ.3ನೇ ವಾರ ರಾಜ್ಯಕ್ಕೆ ಭೇಟಿ

ರಾಜ್ಯಕ್ಕೆ ರಾಗಾ ಎಂಟ್ರಿ

ಬೆಂಗಳೂರು: ಗೊಂದಲದ ಗೂಡಾಗಿರುವ ರಾಜ್ಯ ಕಾಂಗ್ರೆಸ್‌ಗೆ ಮದ್ದು ನೀಡಲು ಕಾಂಗ್ರೆಸ್ ವರಿಷ್ಠ ರಾಹುಲ್ ಗಾಂಧಿ ಎಂಟ್ರಿಯಾಗುವ ಸಾಧ್ಯತೆಯಿದೆ. ಬಿಹಾರ ಚುನಾವಣೆಯ ಬಳಿಕ ಬೆಂಗಳೂರಿಗೆ ಆಗಮಿಸಿ, ರಾಜ್ಯ ಕಾಂಗ್ರೆಸ್‌ನಲ್ಲಿನ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಸಾಧ್ಯತೆಯಿದೆ. ರಾಜ್ಯ ಕಾಂಗ್ರೆಸ್‌ನಲ್ಲಿ ಅಧಿಕಾರ ಹಸ್ತಾಂತರ, ಸಂಪುಟ ಪುನಾರಚನೆ, ಉತ್ತರಾಧಿಕಾರಿ ಹೇಳಿಕೆಯಿಂದ ಹಲವು ಗೊಂದಲಗಳು ಸೃಷ್ಟಿಯಾಗಿದೆ. ಬಿಹಾರ ಚುನಾವಣೆ ಬಳಿಕ ಸಂಪುಟ ಪುನಾರಚನೆಯಾಗುವುದು ಖಚಿತವಾಗಿರುವುದರಿಂದ ಈ ಎಲ್ಲದರ ಕುರಿತು ಚರ್ಚಿಸಲು ರಾಹುಲ್ ಗಾಂಧಿ ಅವರು ಬೆಂಗಳೂರಿಗೆ ಆಗಮಿಸಲಿದ್ದಾರೆ. ಈ ವೇಳೆ ಸಿಎಂ, ಡಿಸಿಎಂ ಸೇರಿ ಪ್ರಮುಖರೊಂದಿಗೆ ಪ್ರತ್ಯೇಕ ಚರ್ಚೆ ಸಾಧ್ಯತೆ ದಟ್ಟವಾಗಿದೆ ಎಂದು ಮೂಲಗಳು ತಿಳಿಸಿವೆ.

ಸದ್ಯ ಬಿಹಾರ ವಿಧಾನಸಭಾ ಚುನಾವಣೆಯ ಬ್ಯುಸಿಯಲ್ಲಿರುವ ರಾಹುಲ್ ಗಾಂಧಿ, ನ.19 ಅಥವಾ 20ರಂದು ರಾಜ್ಯಕ್ಕೆ ಭೇಟಿ ನೀಡಲಿದ್ದಾರೆ. ನ.18ರಿಂದ ಮೂರು ದಿನಗಳ ಕಾಲ ಬೆಂಗಳೂರಿನಲ್ಲಿ ಬೆಂಗಳೂರು ಟೆಕ್ ಸಮಿಟ್ ಆಯೋಜಿಸಲಾಗಿದೆ. ಐಟಿ-ಬಿಟಿ ಇಲಾಖೆಯಿಂದ ಈ ಕಾರ್ಯಕ್ರಮ ಆಯೋಜಿಸಲಾಗಿದ್ದು, ಈ ಕಾರ್ಯಕ್ರಮದ ಉದ್ಘಾಟನೆ ಅಥವಾ ಸಮಾರೋಪದಲ್ಲಿ ಭಾಗವಹಿಸಲು ಸಚಿವ ಪ್ರಿಯಾಂಕ್ ಖರ್ಗೆ ರಾಹುಲ್ ಗಾಂಧಿ ಅವರಿಗೆ ಆಹ್ವಾನ ನೀಡಿದ್ದಾರೆ.

→ 4

ನಾನು ಯತೀಂದ್ರನನ್ನು ಕೇಳಿದೆ. ಸೈದ್ಧಾಂತಿಕವಾಗಿ ಮಾತ್ರ ಅಂತ ಹೇಳಿದ್ದೇನೆ ಅಂದರು. ಇಂಥವರೇ ಸಿಎಂ ಆಗಬೇಕು ಅಂತ ಹೇಳಿಲ್ಲ ಎಂದಿದ್ದಾರೆ. ಅಲ್ಲಿ ಯಾರೋ ಕೇಳಿದಾಗ ವೇದಿಕೆಯಲ್ಲಿ ಹೇಳಿರಬಹುದು ಅಷ್ಟೇ.

-ಸಿದ್ದರಾಮಯ್ಯ, ಮುಖ್ಯಮಂತ್ರಿ



ಯತೀಂದ್ರ ಹೇಳಿಕೆಗೆ ನನ್ನ ಸಹಮತವಿದೆ, ಅದರಲ್ಲಿ ತಪ್ಪೇನಿದೆ?. ಬೆಳಗಾವಿಯಲ್ಲಿ ಸಿದ್ದರಾಮಯ್ಯ ನಂತರ ಅಹಿಂದ ಚಳುವಳಿ ಮುಂದುವರಿಸುವಲ್ಲಿ ಸತೀಶ್ ಜಾರಕಿಹೊಳಿ ಸಮರ್ಥರಿದ್ದಾರೆ ಎಂದಿದ್ದಾರೆ. ಅದರಲ್ಲಿ ತಪ್ಪೇನಿಲ್ಲ, ಇದಕ್ಕೆ ನನ್ನ ಸಹಮತವಿದೆ.

-ಕೆ.ಎನ್.ರಾಜಣ್ಣ, ಮಾಜಿ ಸಚಿವ

ನೋಟಿಸ್ ನೀಡಲು ಒತ್ತಾಯ

ಸಿದ್ದರಾಮಯ್ಯ ಅವರ ಉತ್ತರಾಧಿಕಾರಿ ಸತೀಶ್ ಜಾರಕಿಹೊಳಿ ಎನ್ನುವ ವಿಧಾನಪರಿಷತ್ ಸದಸ್ಯ, ಸಿದ್ದರಾಮಯ್ಯ ಪುತ್ರ ಯತೀಂದ್ರ ಹೇಳಿಕೆ ಇದೀಗ ತೀವ್ರ ಚರ್ಚೆಗೆ ಗ್ರಾಸವಾಗಿದ್ದು, ಈ ಹಿಂದೆ ಅಧಿಕಾರ ಹಂಚಿಕೆಗೆ ಸಂಬಂಧಿಸಿದಂತೆ ಮಾತನಾಡಿದಾಗ ನೋಟಿಸ್ ಜಾರಿಗೊಳಿಸಿದಂತೆ ಈಗಲೂ ಜಾರಿಗೊಳಿಸಬೇಕು ಎನ್ನುವ ಆಗ್ರಹ ಶುರುವಾಗಿದೆ. ಸಿದ್ದರಾಮಯ್ಯ ಪುತ್ರ ಯತೀಂದ್ರ ಬೆಳಗಾವಿಯಲ್ಲಿ ನೀಡಿದ ಹೇಳಿಕೆಯಿಂದ ರಾಜ್ಯ ಕಾಂಗ್ರೆಸ್‌ನಲ್ಲಿ ಹಲವು ಗೊಂದಲಗಳು ಶುರುವಾಗಿದೆ. ಈ ಹಿಂದೆ ಅಧಿಕಾರ ಹಸ್ತಾಂತರದ ಬಗ್ಗೆ ಮಾತನಾಡಿದ್ದ ಶಾಸಕ ಶಿವಗಂಗಾ, ಇಕ್ಬಾಲ್ ಹುಸೇನ್, ರಂಗನಾಥ್ ಸೇರಿದಂತೆ ಹಲವರಿಗೆ ಕೆಪಿಸಿಸಿ ಶಿಸ್ತು ಸಮಿತಿ ನೋಟಿಸ್ ನೀಡಿತ್ತು. ಇದೀಗ ಯತೀಂದ್ರ ಅವರು ಉತ್ತರಾಧಿಕಾರಿ ಸಂಬಂಧಿಸಿದಂತೆ ಹೇಳಿಕೆ ನೀಡಿದ್ದಾರೆ. ಇದೀಗ ಇದನ್ನು ಪಕ್ಷದ ಶಿಸ್ತಿನ ಉಲ್ಲಂಘನೆ ಎಂದು ಭಾವಿಸಿ, ಅವರಿಗೆ ನೋಟಿಸ್ ನೀಡಲಾಗುವುದೇ ಎನ್ನುವ ಪ್ರಶ್ನೆಯನ್ನು ಹಲವು ಕಾಂಗ್ರೆಸಿಗರು ಎತ್ತಿದ್ದಾರೆ.

ಬೈರತಿಗೆ ಸಂಕಷ್ಟ

ಬೆಂಗಳೂರು: ರೌಡಿಶೀಟರ್ ಶಿವಪ್ರಕಾಶ್ ಅಲಿಯಾಸ್ ಬಿಕ್ಲು ಶಿವ ಹತ್ಯೆ ಪ್ರಕರಣ ಸಂಬಂಧ ಶಾಸಕ ಬೈರತಿ ಬಸವರಾಜ್ ಅವರನ್ನು ಬಂಧಿಸದಂತೆ ಹೊರಡಿಸಿರುವ ಮಧ್ಯಂತರ ಆದೇಶ ತೆರವುಗೊಳಿಸುವಂತೆ ಅಪರಾಧ ತನಿಖಾ ದಳದ (ಸಿಐಡಿ) ಪೊಲೀಸರು ಹೈಕೋರ್ಟ್‌ಗೆ ಮನವಿ ಮಾಡಿದ್ದಾರೆ. ಸಿಐಡಿ ಆದೇಶ ರದ್ದು ಕೋರಿ ಪ್ರಕರಣದ ಶಾಸಕ ಬಸವರಾಜ್ ಸಲ್ಲಿಸಿರುವ ತಕರಾರು ಅರ್ಜಿಯನ್ನು ನ್ಯಾಯಮೂರ್ತಿ ಎಸ್. ಸುನೀಲ್ ದತ್ ಯಾದವ್ ಅವರ ಪೀಠ ಗುರುವಾರ ವಿಚಾರಣೆ ನಡೆಸಿದೆ. ಅರ್ಜಿಗೆ ಸಿಐಡಿ ಪೊಲೀಸರ ಪರ ಹೆಚ್ಚುವರಿ ಸರಕಾರಿ ಅಭಿಯೋಜಕ ಬಿ.ಎನ್. ಜಗದೀಶ್, ಮಧ್ಯಂತರ ರಕ್ಷಣಾ ಆದೇಶ ತೆರವಿಗೆ ಒತ್ತಾಯಿಸಿದರು.

10 ದಿನ ಮಳೆ

ಬೆಂಗಳೂರು: ರಾಜ್ಯದಲ್ಲಿ ಮುಂಗಾರು ಕಾಲಾವಧಿ ಕೊನೆಗೊಂಡರೂ ವರ್ಷಾಧಾರೆ ಮುಂದುವರಿದಿದ್ದು, ಅರಬ್ಬಿ ಸಮುದ್ರ ಮತ್ತು ಬಂಗಾಳಕೊಳ್ಳಿಯಲ್ಲಿ ತೀವ್ರ ವಾಯುಭಾರ ಕುಸಿತ ಕಾಣಿಸಿಕೊಂಡಿದ್ದು ಮುಂದಿನ 10 ದಿನಗಳ ಕಾಲ ಹಲವು ಜಿಲ್ಲೆಗಳಲ್ಲಿ ಧಾರಾಕಾರ ಮಳೆ ಮುಂದುವರಿಯಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಪೂರ್ವ ಅರಬ್ಬಿ ಸಮುದ್ರದಲ್ಲಿ ಪಣಜಿಯಿಂದ 380 ಕಿ.ಮೀ ದೂರದಲ್ಲಿ ತೀವ್ರ ವಾಯುಭಾರ ಕುಸಿತ ಉಂಟಾಗಿದೆ. ಹಾಗೆಯೇ, ಬಂಗಾಳಕೊಲ್ಲಿಯ ಆಗ್ನೇಯ ಭಾಗದಲ್ಲಿ ವಾಯುಭಾರ ಕುಸಿತ ಉಂಟಾಗಿದ್ದು, ಇದು ಮತ್ತಷ್ಟು ತೀವ್ರಗೊಂಡು ಅಕ್ಟೋಬರ್ 27ರಂದು ಚಂಡಮಾರುತವಾಗಿ ಪರಿವರ್ತನೆಯಾಗುವ ಸಾಧ್ಯತೆಯಿದೆ.

→ 4

ಮತಗಳವು: ಬಗೆದಷ್ಟೂ ಆಳಂದ

ಬೆಂಗಳೂರು: ಆಳಂದ ಕ್ಷೇತ್ರದಲ್ಲಿ ಮತ ಕಳ್ಳತನ ನಡೆದಿದೆ ಎಂಬ ಆರೋಪ ಸಂಬಂಧ ಎಸ್‌ಐಟಿ ತನಿಖೆ ಚುರುಕುಗೊಂಡಿದ್ದು, ಅಕ್ರಮಗಳು ಒಂದೊಂದಾಗಿ ಬಯಲಿಗೆ ಬರುತ್ತಿವೆ.



ಮತದಾರರ ಹೆಸರು ಪಟ್ಟಿಯಿಂದ ಕೈಬಿಡಲು ಡೇಟಾ ಸೆಂಟರ್‌ಗೆ ತಲಾ 80 ರುಪಾಯಿಯಂತೆ ಪಾವತಿ ಮಾಡಿದ್ದ ಮತ ಕಳವು ಪ್ರಕರಣದ ಪ್ರಮುಖ ಸಂಚುಕೋರ ಮೊಹಮ್ಮದ್ ಅಶ್ಫಾಕ್ ಗ್ಯಾಂಗ್ ನೂರಕ್ಕೂ ಹೆಚ್ಚು ಸಿಮ್ ಕಾರ್ಡ್ ಖರೀದಿ ಮಾಡಿದ್ದಲ್ಲದೆ, ಆಳಂದ ಸುತ್ತಮುತ್ತಲಿನ ಕೋಳಿ ಫಾರಂ ಕೆಲಸಗಾರರ ಮೊಬೈಲ್ ಸಂಖ್ಯೆಯನ್ನು ದುರ್ಬಳಕೆ ಮಾಡಿಕೊಂಡಿರುವುದು ಬೆಳಕಿಗೆ ಬಂದಿದೆ. ನೂರಾರು ಸಿಮ್ ಕಾರ್ಡ್ ಖರೀದಿಸಿದ ಗ್ಯಾಂಗ್ ಅವುಗಳ ನಂಬರ್ ಕೊಟ್ಟು ಮತದಾರರ ಹೆಸರು ಡಿಲೀಟ್ ಮಾಡಲು ಅರ್ಜಿ ಸಲ್ಲಿಕೆ ಮಾಡಿತ್ತು. ಅಲ್ಲದೆ, ಕೋಳಿ ಫಾರಂ ಕೆಲಸಗಾರರ ಮೊಬೈಲ್ ಸಂಖ್ಯೆಯನ್ನು ದುರ್ಬಳಕೆ ಮಾಡಿ ಮತದಾರರ ಪಟ್ಟಿಯಿಂದ ಹೆಸರು ಡಿಲೀಟ್ ಮಾಡಲು ಅರ್ಜಿ ಸಲ್ಲಿಸಿತ್ತು. ಮತದಾರರ ಹೆಸರು ಪಟ್ಟಿಯಿಂದ ಡಿಲೀಟ್ ಮಾಡಲು ಅರ್ಜಿ ಸಲ್ಲಿಸಬೇಕಿದ್ದರೆ ಅರ್ಜಿ ಸಲ್ಲಿಸಿದ ವ್ಯಕ್ತಿ ಕೂಡ ಅದೇ ಕ್ಷೇತ್ರದವನಾಗಿರಬೇಕು ಎಂಬ ನಿಯಮವಿದೆ.

→ 4

ಸಿಎಂ ನೇತೃತ್ವದ ಸಭೆಯಲ್ಲಿ 13 ಕಂಪನಿಗಳ ಹೂಡಿಕೆಗೆ ಒಪ್ಪಿಗೆ
11 ಹೊಸ ಯೋಜನೆಗಳು, 8 ಸಾವಿರಕ್ಕೂ ಹೆಚ್ಚು ಉದ್ಯೋಗ ಸೃಷ್ಟಿ

27 ಸಾವಿರ ಕೋಟಿ ಹೂಡಿಕೆಗೆ ಅಸ್ತು

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆದ ಉನ್ನತ ಮಟ್ಟದ ಸಭೆಯಲ್ಲಿ 13 ಯೋಜನೆಯ 27 ಸಾವಿರ ಕೋಟಿ ರು. ಹೂಡಿಕೆಗೆ ಅನುಮತಿ ನೀಡಲಾಗಿದೆ.

ವಿಧಾನಸೌಧದಲ್ಲಿ ನಡೆದ ಉನ್ನತ ಮಟ್ಟದ ಯೋಜನಾ ಮಂಜೂರಾತಿ ಸಮಿತಿ ಸಭೆಯಲ್ಲಿ ಒಟ್ಟು 27,607.26 ಕೋಟಿ ರು.ಪಾಯಿ ಬಂಡವಾಳ ಹೂಡಿಕೆಗೆ ಒಪ್ಪಿಗೆ ಕೊಡಲಾಗಿದೆ. ಇದರಲ್ಲಿ 11 ಹೊಸ ಕೈಗಾರಿಕಾ ಯೋಜನೆಗಳು ಮತ್ತು ಎರಡು ಹೆಚ್ಚುವರಿ ಹೂಡಿಕೆ ಪ್ರಸ್ತಾವನೆಗಳು ಸೇರಿವೆ. ಈ ಯೋಜನೆಗಳಿಂದ ಕರ್ನಾಟಕದಲ್ಲಿ ಸುಮಾರು 8,704 ನೇರ ಉದ್ಯೋಗಗಳು ಸೃಷ್ಟಿಯಾಗಲಿವೆ ಎಂದು ಅಂದಾಜಿಸಲಾಗಿದೆ.

ಉನ್ನತ ಮಟ್ಟದ ಸಭೆಯಲ್ಲಿ ಅನುಮೋದನೆ ನೀಡುವುದರೊಂದಿಗೆ ಕರ್ನಾಟಕದಲ್ಲಿ ಸುಲಲಿತ ವಾಣಿಜ್ಯವನ್ನು ನಡೆಸಲು ಯಾವ ರೀತಿಯಲ್ಲಿ ಅವಕಾಶ ನೀಡಬೇಕು ಎನ್ನುವ ಬಗ್ಗೆ ಚರ್ಚಿಸಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಕಾಲಮಿತಿಯಲ್ಲಿ ಕೈಗಾರಿಕಾ ಅನುಮೋದನೆಗಳನ್ನು ನೀಡಬೇಕು. ಇದನ್ನು ಮೀರಿದರೆ ಅಧಿಕಾರಿಗಳ ವಿರುದ್ಧ ಕ್ರಮ ವಹಿಸಲಾಗುವುದು ಎನ್ನುವ ಎಚ್ಚರಿಕೆ ನೀಡಿದ್ದಾರೆ.

ಸಭೆಯಲ್ಲಿ ಉಪ ಮುಖ್ಯಮಂತ್ರಿ ಡಿ ಕೆ ಶಿವಕುಮಾರ್, ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್, ಇಂಧನ ಸಚಿವ ಕೆ.ಜೆ ಜಾರ್ಜ್, ಕಾನೂನು ಸಚಿವ ಎಚ್.ಕೆ.ಪಾಟೀಲ, ಐಟಿ ಸಚಿವ ಪ್ರಿಯಾಂಕ್ ಖರ್ಗೆ, ಉನ್ನತ ಶಿಕ್ಷಣ ಸಚಿವ ಎಂ ಸಿ ಸುಧಾಕರ್, ಕಾರ್ಮಿಕ ಸಚಿವ ಸಂತೋಷ್ ಲಾಡ್ ಉಪಸ್ಥಿತರಿದ್ದರು.

ಕೈಗಾರಿಕಾ ಸ್ನೇಹಿ ವಾತಾವರಣ ನಿರ್ಮಿಸುವ ಸಲುವಾಗಿ ಅಧಿಕಾರಿಗಳು ನ್ಯಾಯಾಲಯಗಳ ತೀರ್ಪಿನ ಕುಂಟು ನೆಪ ಹೇಳಿದರೆ ಸಹಿಸುವುದಿಲ್ಲ. ರಾಜ್ಯದಲ್ಲಿ ಬಂಡವಾಳ ಹೂಡಿಕೆದಾರ ಸ್ನೇಹಿ ವಾತಾವರಣವನ್ನು ಇನ್ನಷ್ಟು ಉತ್ತಮಪಡಿಸಬೇಕು. ಇದಕ್ಕಾಗಿ ಭೂ ಬಳಕೆ ಬದಲಾವಣೆ ಪ್ರಕ್ರಿಯೆ ಸೇರಿದಂತೆ ವಿವಿಧ ಎನ್‌ಒಸಿಗಳ ನೀಡಿಕೆಯ ಕಾಲಮಿತಿಯನ್ನು ಕಡಿಮೆ ಮಾಡಬೇಕು. ಕಾಲಮಿತಿಯನ್ನು ಕಡಿಮೆ ಮಾಡುವ ಬಗ್ಗೆ ವಿವರವಾದ ಪ್ರಸ್ತಾವನೆಯನ್ನು ಸಲ್ಲಿಸಬೇಕು. ಯಾವುದೇ ಕಾರಣಕ್ಕೂ ವಿಳಂಬಕ್ಕೆ ಅವಕಾಶ ನೀಡಬಾರದು

-ಸಿದ್ದರಾಮಯ್ಯ, ಮುಖ್ಯಮಂತ್ರಿ

ಯಾವ ಕಂಪನಿಯಿಂದ ಎಷ್ಟು ಹೂಡಿಕೆ

ಕಂಪನಿ	ಹೂಡಿಕೆಯ ಪ್ರಮಾಣ
ತೇಜಸ್ ನೆಟ್‌ವರ್ಕ್ಸ್	542.19 ಕೋಟಿ ರು.
ವಾಯು ಅಸೆಟ್ಸ್	1,251 ಕೋಟಿ ರು.
ಜಿಂದಾಲ್ ಸ್ಟೀಲ್ಸ್	1,300.57 ಕೋಟಿ ರು.
ಜಿಂದಾಲ್ ಎಲೆಕ್ಟ್ರಿಕಲ್ ಸ್ಟೀಲ್	7,102 ಕೋಟಿ ರು.
ಗ್ರಾಸಿಂ ಇಂಡಸ್ಟ್ರೀಸ್	1,386 ಕೋಟಿ ರು.
ಎಸ್‌ಎಫ್‌ಎಕ್ಸ್ ಇಂಡಿಯಾ	9,298 ಕೋಟಿ ರು.
ಎಚ್‌ಎಸ್‌ಎಸ್ ಟೆಕ್ಸ್‌ಟೈಲ್ಸ್	740 ಕೋಟಿ ರು.
ಸ್ನೈಡರ್ ಎಲೆಕ್ಟ್ರಿಕ್ ಪ್ರೈವೇಟ್ ಲಿಮಿಟೆಡ್	1,520.75 ಕೋಟಿ ರು.
ಕ್ಯೂಪಿಐಎಐ ಇಂಡಿಯಾ	1,136 ಕೋಟಿ ರು.
ಟೊಯೋಟಾ ಇಂಡಸ್ಟ್ರೀಸ್	1,330 ಕೋಟಿ ರು.
ರಿಲಯನ್ಸ್ ಕನ್ಸೂಮರ್ ಪ್ರಾಡಕ್ಟ್ಸ್	1,622 ಕೋಟಿ ರು.
ಎಂಬಿಸಿ ಇಂಡಸ್ಟ್ರಿಯಲ್ ಪಾರ್ಕ್	80 ಕೋಟಿ ರು.
ಬಾಲಾಜಿ ವೇಫರ್ಸ್ ಕಂಪನಿ	298.75 ಕೋಟಿ ರು.

|| ಗುರುಪೂರ್ಣ ಪ್ರಣಾಮಗಳು ||

ಅಧ್ಯಾತ್ಮಿಕ ವಿಶ್ವ ಗುರುಗಳಿಗೆ ಜನ್ಮದಿನದ ಹಾರ್ದಿಕ ಶುಭಾಶಯಗಳು

ಶ್ರೀ ಶ್ರೀ ಚಂದ್ರಶೇಖರ ಸ್ವಾಮೀಜಿ
ಅಧ್ಯಾತ್ಮಿಕ ವಿಶ್ವ ಗುರು ಅಂತಾರಾಷ್ಟ್ರೀಯ ವಾಸ್ತು ತಜ್ಞ, ವೈಜ್ಞಾನಿಕ ಜ್ಯೋತಿಷಿ

"ಗುರುರ್ಬ್ರಹ್ಮಾ ಗುರುರ್ವಿಷ್ಣುಃ ಗುರುರ್ದೇವೋ ಮಹೇಶ್ವರಃ। ಗುರುಃ ಸಾಕ್ಷಾತ್ ಪರಬ್ರಹ್ಮ ತಸ್ಮೈ ಶ್ರೀಗುರುವೇ ನಮಃ॥"
ಗುರುವು ಬ್ರಹ್ಮನಂತೆ ಸೃಷ್ಟಿಕರ್ತ, ವಿಷ್ಣುವಿನಂತೆ ಪಾಲಕ, ಮಹೇಶ್ವರನಂತೆ ಸಂಹಾರಕ. ಆದುದರಿಂದ ಆ ಪರಬ್ರಹ್ಮಸ್ವರೂಪನಾದ ಗುರುಗಳಿಗೆ ಶತಶಃ ನಮನಗಳು.

ನಮ್ಮ ಜೀವನದ ಕತ್ತಲಿಯಲ್ಲಿ ದೀಪವಾದ ಗುರುಗಳು,
ಜ್ಞಾನ, ಭಕ್ತಿ, ಶಾಂತಿ ಮತ್ತು ಧರ್ಮದ ಮಾರ್ಗದರ್ಶಕ.
ಅವರ ಕರುಣೆಯ ಕಿರಣಗಳು ಮನಸ್ಸಿಗೆ ಪ್ರಜ್ಞೆ,
ಬಾಳಿಗೆ ಪ್ರೇರಣೆ, ಜೀವನಕ್ಕೆ ಅರ್ಥ ನೀಡುವ ಬೆಳಕಾಗಲಿ.
ಈ ಪವಿತ್ರ ಜನ್ಮದಿನವು ಗುರುಚರಣಗಳ ಸ್ಮರಣೆಯ ಹಬ್ಬವಾಗಲಿ,

ನಮ್ಮೊಳಗಿನ ಸತ್ಯ, ಶುದ್ಧತೆ ಮತ್ತು
ಶ್ರದ್ಧೆಯ ಕಿರಣಗಳನ್ನು ಜಾಗೃತಗೊಳಿಸಲಿ.
ಗುರುವಿನ ಆಶೀರ್ವಾದದಿಂದ
ನಮ್ಮ ಬದುಕು ಸದಾ ಶಾಂತಿಯುತವಾಗಲಿ,
ಸೇವಾ ಮನೋಭಾವ, ನೈತಿಕತೆ ಮತ್ತು ಪ್ರಜ್ಞೆಯ ಹಾದಿಯಲ್ಲಿ ಬೆಳಗಲಿ.

ಸಮಾಜದ ಎಲ್ಲಾ ವರ್ಗದ ಜನರೊಂದಿಗೆ ಇರುವ ನಿಷ್ಕಲ್ಮಷ ಭ್ರಾತೃತ್ವದ ಪೂಜ್ಯ ಗುರುಗಳು,
ನಮ್ಮೆಲ್ಲರ ಸುಖ-ದುಃಖಗಳಲ್ಲಿ ಸಮಾನವಾಗಿ ಬಾಗಿಯಾಗಿ ಮಾರ್ಗದರ್ಶನ ನೀಡುವ
ಪರಮ ಪೂಜ್ಯ ಶ್ರೀ ಶ್ರೀ ಚಂದ್ರಶೇಖರ ಸ್ವಾಮೀಜಿ ಅವರಿಗೆ
ಜನುಮ ದಿನದ ಶುಭದಿನದಲ್ಲಿ ನಿಮಗೆ ನಮ್ಮ ಹೃದಯ ತುಂಬಿದ ಶುಭಾಶಯಗಳು

ರಾಕ್‌ಲೈನ್ ವೆಂಕಟೇಶ್
ಚಿತ್ರ ನಿರ್ಮಾಪಕರು,
ಬೆಂಗಳೂರು

Dr. K.J Purushotham
International Human Rights
Defence Committee Expert Paris.
Pro Vice Chancellor Of AIU.
The Bahrain - India Trade
Commisioner

ಸಮಾಚಾರ ಸಣ್ಣದಲ್ಲ

ಅ.27ರಿಂದ ನ.2ರವರೆಗೆ ಜಾಗೃತಿ ಸಪ್ತಾಹ

ಬೆಂಗಳೂರು: ಭ್ರಷ್ಟಾಚಾರದ ವಿರುದ್ಧ ಜಾಗೃತಿ ಮೂಡಿಸಲು ಅ.27 ರಿಂದ ನ.2 ರವರೆಗೆ ಜಾಗೃತಿ ಸಪ್ತಾಹ-2025 ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಈ ಕಾರ್ಯಕ್ರಮದ ಅಂಗವಾಗಿ ಸಚಿವಾಲಯದ ಎಲ್ಲಾ ಇಲಾಖೆಗಳ ಅಧಿಕಾರಿ / ನೌಕರರಿಗೆ ಬೆಂಗಳೂರಿನ ವಿಧಾನಸೌಧದ ಕೊಠಡಿ ಸಂಖ್ಯೆ 334 ಸಮ್ಮೇಳನ ಸಭಾಂಗಣದಲ್ಲಿ ಬೆಳಗ್ಗೆ 11 ಗಂಟೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರತಿಜ್ಞಾ ವಿಧಿ ಬೋಧಿಸಲಿದ್ದಾರೆ. ಈ ವರ್ಷದ ಜಾಗೃತಿ ಅರಿವು ಸಪ್ತಾಹದ ಆಚರಣೆಯ ವಿಷಯವು Vigilance: Our Shared Responsibility ಆಗಿದೆ. ಈ ಜಾಗೃತಿ ಅರಿವಿನ ಸಪ್ತಾಹವನ್ನು ಎಲ್ಲಾ ಇಲಾಖೆಗಳಲ್ಲಿ ತಪ್ಪದೇ ಆಚರಿಸುವಂತೆ ಸರಕಾರದ ಮುಖ್ಯ ಕಾರ್ಯದರ್ಶಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬ್ಯಾಂಕಿಂಗ್ ಹುದ್ದೆಗೆ ಪರೀಕ್ಷಾ ತರಬೇತಿ

ಬೆಂಗಳೂರು: ರಾಜ್ಯ ಮುಕ್ತ ವಿವಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರವು ಅ.29 ರಂದು ಬೆಳಗ್ಗೆ 11:30ಕ್ಕೆ ಕಾವೇರಿ ಸಭಾಂಗಣದಲ್ಲಿ ಆಯೋಜಿಸಲಾಗಿರುವ 50 ದಿನಗಳ ಬ್ಯಾಂಕಿಂಗ್ ಮತ್ತು ಕೇಂದ್ರ ಸರಕಾರದ ಹುದ್ದೆಗಳ ನೇಮಕಾತಿ ಪರೀಕ್ಷೆಗಳ ತರಬೇತಿ ಶಿಬಿರದ ಉದ್ಘಾಟನೆಯನ್ನು ನಿವೃತ್ತ ಪೊಲೀಸ್ ಮಹಾನಿರ್ದೇಶಕ ಶಂಕರ್ ಬಿದರಿ ನೆರವೇರಿಸಲಿದ್ದಾರೆ. ಮೈಸೂರು ನಗರ ಪೊಲೀಸ್ ಉಪ ಆಯುಕ್ತ ಆರ್.ಎನ್. ಬಿಂದುಮಣಿ ಅತಿಥಿ ಭಾಷಣಮ ರಾಜ್ಯ ಮುಕ್ತ ವಿವಿ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ ಅಧ್ಯಕ್ಷತೆ ವಹಿಸಲಿದ್ದು, ಕುಲಸಚಿವ ಪ್ರೊ.ಎಸ್.ಕೆ ನವೀನ್ ಕುಮಾರ್ ಉಪಸ್ಥಿತರಿರುವರು.

ಬಿಎಂಟಿಸಿ, ಗುತ್ತಿಗೆ ಸಂಸ್ಥೆ ವಿರುದ್ಧ ಗಂಭೀರ ಆರೋಪ ಮಾಡಿದ ಎಲೆಕ್ಟ್ರಿಕ್ ಬಸ್ ಚಾಲಕರು

ಬಿಎಂಟಿಸಿ ಬಸ್ ಅಪಘಾತಕ್ಕೆ ಟಾರ್ಗೆಟ್ ಕಾರಣ

ಬೆಂಗಳೂರು: ಬಿಎಂಟಿಸಿ ಬಸ್‌ಗಳಿಂದ ನಗರದಲ್ಲಿ ಎಲೆಕ್ಟ್ರಿಕ್ ಬಸ್‌ಗಳ ಅಪಘಾತ ಪ್ರಕರಣಗಳಿಗೆ ಬಸ್ ಚಾಲಕರ ನಿರ್ಲಕ್ಷ್ಯವೇ ಕಾರಣ ಎನ್ನುವ ಆರೋಪಗಳ ಬೆನ್ನಲ್ಲೇ ಆಕ್ಸಿಡೆಂಟ್‌ಗಳಿಗೆ ಬಿಎಂಟಿಸಿ ಹಾಗೂ ಗುತ್ತಿಗೆ ಸಂಸ್ಥೆ ನೀಡಿರುವ ಟಾರ್ಗೆಟ್ ಕಾರಣ ಎಂದು ಚಾಲಕರು ದೂರಿದ್ದಾರೆ.

ರಾಜಧಾನಿ ಬೆಂಗಳೂರಿನಲ್ಲಿ ಎಲೆಕ್ಟ್ರಿಕ್ ಬಸ್‌ಗಳು ಹೆಚ್ಚು ಆಕ್ಸಿಡೆಂಟ್‌ಗಳನ್ನು ಮಾಡುತ್ತಿವೆ. ಆಕ್ಸಿಡೆಂಟ್‌ಗಳಿಂದಾಗಿ ಪಾದಚಾರಿಗಳು, ವಾಹನ ಸವಾರರು ಪ್ರಾಣ ಕಳೆದುಕೊಳ್ಳುತ್ತಿರುವುದಕ್ಕೆ ಮುಖ್ಯವಾಗಿ ಬೇರೆ ಬೇರೆ ಕಾರಣಗಳಿವೆ. ಎಲೆಕ್ಟ್ರಿಕ್ ಬಸ್‌ಗಳ ಚಾಲಕರಾಗಿ ನೇಮಕ ಮಾಡಿಕೊಳ್ಳುತ್ತಿರುವ ಚಾಲಕರಿಗೆ ಸರಿಯಾದ ತರಬೇತಿ ಇಲ್ಲದೇ ಇರುವುದೇ ಕಾರಣವೆಂದು ಹೇಳಲಾಗುತ್ತಿತ್ತು. ಆದರೆ ಇದೀಗ ಎಲೆಕ್ಟ್ರಿಕ್ ಬಸ್‌ಗಳ ಅಪಘಾತಕ್ಕೆ ಹೊಸ ಕಾರಣವೊಂದನ್ನು ಎಲೆಕ್ಟ್ರಿಕ್ ಬಸ್ ಚಾಲಕರುಗಳೇ ನೀಡಿದ್ದಾರೆ. ಎಲೆಕ್ಟ್ರಿಕ್ ಬಸ್‌ಗಳ ಅಪಘಾತಕ್ಕೆ ಚಾಲಕರಿಗೆ ತರಬೇತಿ ಇಲ್ಲದೇ ಇರೋದು ಕಾರಣವಲ್ಲ ಬದಲಾಗಿ ಚಾಲಕರಿಗೆ ನೀಡಲಾಗಿರುವ ಟಾರ್ಗೆಟ್‌ನಿಂದಲೇ ಹೆಚ್ಚು ಅಪಘಾತ ಸಂಭವಿಸುತ್ತಿವೆ. ಟಾರ್ಗೆಟ್‌ನಿಂದ ಚಾಲಕರಿಗೆ ಒತ್ತಡ ಹೆಚ್ಚಾಗಿರುವುದರಿಂದ ಅಪಘಾತಗಳು ಸಂಭವಿಸುತ್ತಿದ್ದು, ಒತ್ತಡವನ್ನು ಕಡಿಮೆ ಮಾಡದಿದ್ದರೆ ಈ ನರೀತಿಯಲ್ಲಿ ಅಪಘಾತಗಳು ಆಗೇ ಆಗುತ್ತದೆ ಎಂದು ಹೇಳಿದ್ದಾರೆ.

ಎಲೆಕ್ಟ್ರಿಕ್ ಬಸ್‌ಗಳಿಂದ 3 ವರ್ಷದಲ್ಲಿ ಅಂದಾಜು 40 ಜನ ಸಾವನ್ನಪ್ಪಿದ್ದಾರೆ. ಪದೇ ಪದೆ ಎಲೆಕ್ಟ್ರಿಕ್ ಬಸ್‌ಗಳಿಂದ ಅಪಘಾತ ಸಂಭವಿಸುತ್ತಿವೆ. ಬೆಂಗಳೂರಿನಲ್ಲಿ ಬಿಎಂಟಿಸಿಯ ಎಲೆಕ್ಟ್ರಿಕ್ ಬಸ್‌ಗಳನ್ನು ಓಡಿಸುವ ಗುತ್ತಿಗೆಯನ್ನು ಬಿವಿಜಿ ಸಂಸ್ಥೆ ಗುತ್ತಿಗೆ ಪಡೆದಿದೆ. ಬಿವಿಜಿ ಸಂಸ್ಥೆ ಚಾಲಕರಿಗೆ ಕಿರುಕುಳ ನೀಡುತ್ತಿರುವ ಆರೋಪ ಕೇಳಿ ಬಂದಿದೆ. ಜತೆಗೆ ಟಾರ್ಗೆಟ್ ರೀಚ್ ಆಗುವಂತೆ ಒತ್ತಡ ಕೂಡ ಹೇರಲಾಗುತ್ತಿದೆ.

ಎಲೆಕ್ಟ್ರಿಕ್ ಬಸ್‌ಗಳಿಗೆ ಕಂಡಕ್ಟರ್‌ಗಳನ್ನು ಬಿಎಂಟಿಸಿ ನೇಮಕ ಮಾಡಿದೆ. ಚಾಲಕರನ್ನು ಮಾತ್ರವೇ ಗುತ್ತಿಗೆ ಪಡೆದಿರುವ ಬಿವಿಜಿ ಸಂಸ್ಥೆ ನೇಮಕ ಮಾಡಿದೆ. ಬಿಎಂಟಿಸಿ ಎಲೆಕ್ಟ್ರಿಕ್ ಬಸ್ ಚಾಲಕರಿಗೆ ಯಾವುದೇ ಟಾರ್ಗೆಟ್ ಕೊಡದೇ ಇದ್ದರೇ, ಯಾವುದೇ ಆಕ್ಸಿಡೆಂಟ್‌ಗಳೂ ಆಗಲ್ಲ. ಚಾಲಕರು ಆರಾಮಾಗಿ ಬಸ್ ಚಾಲನೆ ಮಾಡುತ್ತಾರೆ. ಬಿಎಂಟಿಸಿ ಹಾಗೂ ಬಿವಿಜಿ ಸಂಸ್ಥೆ ನೀಡಿರುವ ಟಾರ್ಗೆಟ್ ರೀಚ್ ಆಗುವ ಧಾವಂತದಲ್ಲೇ ಆಕ್ಸಿಡೆಂಟ್ ಗಳು ಆಗುತ್ತಿವೆ ಎಂಬ ವಿಚಾರವನ್ನು ಚಾಲಕರು ತಿಳಿಸಿದ್ದಾರೆ.

8 ತಾಸಿನಲ್ಲಿ 130 ಕಿ.ಮೀ ಟಾರ್ಗೆಟ್

ಬೆಂಗಳೂರಿನಲ್ಲಿ ಎಲೆಕ್ಟ್ರಿಕ್ ಬಸ್ ಚಾಲಕರು ಒಂದು ಶಿಫ್ಟ್ ನಲ್ಲಿ 8 ಗಂಟೆ ಅವಧಿಯಲ್ಲಿ 130 ಕಿ.ಮೀ ವರೆಗೂ ಎಲೆಕ್ಟ್ರಿಕ್ ಬಸ್‌ಗಳನ್ನು ಓಡಿಸಬೇಕು ಎಂದು ಟಾರ್ಗೆಟ್ ನೀಡಲಾಗಿದೆ. ಬೆಂಗಳೂರಿನ ಟ್ರಾಫಿಕ್ ಜಾಮ್ ಮಧ್ಯೆ ಕೇವಲ 8 ಗಂಟೆಯಲ್ಲಿ 130 ಕಿ.ಮೀವರೆಗೂ ಬಸ್ ಓಡಿಸುವುದೇ ದೊಡ್ಡ ಸವಾಲು. ಇದರಿಂದಾಗಿ ಚಾಲಕರಿಗೆ ಮಾನಸಿಕ ಒತ್ತಡ ಎದುರಾಗಿದೆ. ಟಾರ್ಗೆಟ್ ರೀಚ್ ಆಗುವ ಭರದಲ್ಲಿ ಬಸ್‌ಗಳನ್ನು ವೇಗವಾಗಿ ಓಡಿಸಲೇಬೇಕಾಗುತ್ತೆ. ವೇಗವಾಗಿ ಹೋದಾಗ ಆಕ್ಸಿಡೆಂಟ್‌ಗಳು ಆಗುವುದು ಸಾಮಾನ್ಯವಾಗಿದ್ದು, ನಿಧಾನವಾಗಿ ಬಸ್ ಚಲಾಯಿಸಿದರೇ 130 ಕಿ.ಮೀ ಟಾರ್ಗೆಟ್ ರೀಚ್ ಆಗಲು ಸಾಧ್ಯವಿಲ್ಲ. ಟಾರ್ಗೆಟ್ ಕೊಟ್ಟು ರೀಚ್ ಮಾಡಿ ಎಂದು ಬಿಎಂಟಿಸಿ, ಬಿವಿಜಿ ಸಂಸ್ಥೆ ಹೇಳುತ್ತೆ. ಹೀಗಾಗಿ ವೇಗವಾಗಿ ಬಸ್‌ಗಳನ್ನು ಚಲಾಯಿಸಲೇಬೇಕು. ವೇಗದ ಚಾಲನೆಯಿಂದ ಆಕ್ಸಿಡೆಂಟ್ ಆಗುತ್ತಿವೆ ಎಂದು ಬಿಎಂಟಿಸಿ ಎಲೆಕ್ಟ್ರಿಕ್ ಬಸ್ ಚಾಲಕರು ಹೇಳಿದ್ದಾರೆ.

ಕೊಲೆ ವಿಚಾರಣೆ ವಿಳಂಬಿಸಲು ಆರೋಪಿಗಳಿಂದ ತಂತ್ರಗಾರಿಕೆ

ಬೆಂಗಳೂರು: ರೇಣುಕಾಸ್ವಾಮಿ ಕೊಲೆ ಪ್ರಕರಣ ಸಂಬಂಧ ದರ್ಶನ್ ಮತ್ತು ಅವರ ತಂಡವು ಕೋರ್ಟ್‌ನಲ್ಲಿ ವಿಚಾರಣೆ ವಿಳಂಬ ಮಾಡಲು ತಂತ್ರಗಾರಿಕೆ ರೂಪಿಸಿದ್ದು, ಈ ಕುರಿತು ಎಸ್‌ಪಿಪಿ ಪ್ರಸನ್ನ ಕುಮಾರ್ ಕೋರ್ಟ್‌ಗೆ ಮೆಮೋ ಸಲ್ಲಿಸಿದ್ದಾರೆ.

ಮೆಮೋದಲ್ಲಿ ಉದ್ದೇಶಪೂರ್ವಕವಾಗಿಯೇ ಆರೋಪಿಗಳು ಕೋರ್ಟ್‌ನಲ್ಲಿ ವಿಚಾರಣೆ ವಿಳಂಬವಾಗುವಂತೆ ಮಾಡುತ್ತಿದ್ದಾರೆ. ಆದಷ್ಟು ಬೇಗ ವಿಚಾರಣೆ ಮುಗಿಸುವಂತೆ ಸುಪ್ರೀಂ ಕೋರ್ಟ್ ಸೂಚನೆ ನೀಡಿದೆ. ಪ್ರಕರಣದಿಂದ ತಮ್ಮನ್ನು ಮುಕ್ತಗೊಳಿಸುವಂತೆ ಕೋರಿ ಅರ್ಜಿಗಳನ್ನು ಸಲ್ಲಿಸುವ ಮೂಲಕ ವಿಚಾರಣೆ ವಿಳಂಬ ಮಾಡುವ ಯತ್ನ ಮಾಡುತ್ತಿದ್ದಾರೆ ಎಂದು ಮೆಮೊ ಸಲ್ಲಿಸಿದ್ದಾರೆ.

ಪ್ರಕರಣದಿಂದ ತಮ್ಮನ್ನು ಮುಕ್ತಗೊಳಿಸುವಂತೆ ಸಲ್ಲಿಸುವ ಅರ್ಜಿಗಳನ್ನೆಲ್ಲಾ ಎಲ್ಲ ಆರೋಪಿಗಳು ಒಟ್ಟಿಗೆ ಸಲ್ಲಿಸುವಂತೆ ಸುಪ್ರೀಂಕೋರ್ಟ್ ಸೂಚಿಸಿತ್ತು. ಆದರೇ, ಈಗ ಒಬ್ಬರ ನಂತರ ಒಬ್ಬರು ಪ್ರಕರಣದಿಂದ ಮುಕ್ತಿಗೊಳಿಸುವಂತೆ ಕೋರಿ ಅರ್ಜಿ ಸಲ್ಲಿಸುತ್ತಿದ್ದಾರೆ. ಆರೋಪಿಗಳ ಪರ ವಕೀಲರಿಂದ ಉದ್ದೇಶಪೂರ್ವಕವಾಗಿ ವಿಳಂಬ ಧೋರಣೆ ಅನುಸರಿಸಲಾಗುತ್ತಿದೆ. ಕಳೆದ 2 ತಿಂಗಳಿನಿಂದ ಕೋರ್ಟ್ ಸಮಯ ಹಾಳು ಮಾಡುವ ಯತ್ನ ನಡೆಯುತ್ತಿದೆ. ಹೀಗಾಗಿ ಕೆಳ ನ್ಯಾಯಾಲಯದಲ್ಲಿ ಆದಷ್ಟು ಬೇಗ ವಿಚಾರಣೆ ಆರಂಭಿಸುವಂತೆ ಮನವಿ ಮಾಡಿಕೊಂಡಿದ್ದಾರೆ. ಕಳೆದ 2 ತಿಂಗಳಿನಿಂದ ನಡೆದ ವಿಳಂಬ ಪ್ರಕ್ರಿಯೆಯನ್ನು ಉಲ್ಲೇಖಿಸಿ ಕೋರ್ಟ್‌ಗೆ ಮನವಿ ಸಲ್ಲಿಕೆ ಮಾಡಲಾಗಿದೆ.

ಕುಡಿದು ಶಾಲಾ ಬಸ್ ಚಾಲನೆ 36 ಮಂದಿ ವಿರುದ್ಧ ಪ್ರಕರಣ

ಬೆಂಗಳೂರು: ಮದ್ಯಪಾನ ಮಾಡಿ ಶಾಲಾ ಬಸ್‌ಗಳನ್ನು ಚಾಲನೆ ಮಾಡುವ ಚಾಲಕರಿಗೆ ಬೆಂಗಳೂರು ಸಂಚಾರ ಪೊಲೀಸರು ಶಾಕ್ ಕೊಟ್ಟಿದ್ದಾರೆ. ಶುಕ್ರವಾರ ಬೆಳಗ್ಗೆ 7 ಗಂಟೆಯಿಂದ 9.30ರ ವರೆಗೆ ಬೆಂಗಳೂರಿನ ವಿವಿಧೆಡೆ ಶಾಲಾ ಬಸ್ ಚಾಲಕರ ತಪಾಸಣೆ ಮಾಡಲಾಗಿದ್ದು, ಒಟ್ಟು 5,881 ಡ್ರೈವರ್‌ಗಳನ್ನು ಪರೀಕ್ಷಿಸಲಾಗಿದೆ. ಆ ಪೈಕಿ 36 ಮಂದಿ ಮದ್ಯ ಸೇವಿಸಿ ಬಸ್ ಚಾಲನೆ ಮಾಡುತ್ತಿರುವುದು ಬೆಳಕಿಗೆ ಬಂದಿದೆ. ಪಾನಮತ್ತ ಚಾಲಕರ ವಿರುದ್ಧ ಪ್ರಕರಣ ದಾಖಲಿಸಲಾಗಿದ್ದು, ಡಿಎಲ್ ರದ್ದುಪಡಿಸುವಂತೆ ಆರ್‌ಟಿಒ ಸಂಚಾರಿ ಪೊಲೀಸರು ಪತ್ರ ಬರೆದಿದ್ದಾರೆ.

ಶಾಲಾ ವಾಹನಗಳ ವಿರುದ್ಧ ವಿಶೇಷ ಕಾರ್ಯಾಚರಣೆ ಸಂಬಂಧ ಪಶ್ಚಿಮ ವಿಭಾಗದ ಸಂಚಾರ ಡಿಸಿಪಿ ಅನೂಪ್ ಶೆಟ್ಟಿ ಪ್ರತಿಕ್ರಿಯಿಸಿದ್ದು, ಸಂಚಾರ ವಿಭಾಗ ಜಂಟಿ ಪೊಲೀಸ್ ಆಯುಕ್ತರ ಸೂಚನೆಯಂತೆ ವಿಶೇಷ ಕಾರ್ಯಾಚರಣೆ ನಡೆಸಲಾಗಿದೆ. ಶಾಲಾ ವಾಹನ ಚಾಲಕರಿಗೆ ಡ್ರಂಕ್ ಆ್ಯಂಡ್ ಡ್ರೈವ್ ಪರೀಕ್ಷೆ ಮಾಡಲಾಗಿದ್ದು, ಈ ವೇಳೆ ಹಲವರು ಕುಡಿದು ವಾಹನ ಚಾಲನೆ ಮಾಡುತ್ತಿರುವುದು ಪತ್ತೆಯಾಗಿದೆ. ಅಂತಹವರ ವಿರುದ್ಧ ಪ್ರಕರಣ ದಾಖಲಿಸಿದ್ದೇವೆ ಎಂದು ತಿಳಿಸಿದ್ದಾರೆ.

THE SOUTH INDIA PAPER MILLS LIMITED

CIN : L85110KA1959PLC001352
Regd. Office: Chikkayana Chatra, Nanjangud - 571 302 Karnataka State

₹. In Lakhs except per share data

STATEMENT OF UNAUDITED FINANCIAL RESULTS FOR THE QUARTER / HALF YEAR ENDED 30th SEPTEMBER 2025

Sl No	Particulars	Quarter Ended 30-09-2025	Six Months Ended 30-09-2025	Quarter ended 30-09-2024
1.	Total income from operations	11,156.57	21,845.41	10,177.26
2.	Net Profit / (Loss) for the period (before Tax, Exceptional and / or Extraordinary Items)	376.12	507.33	(226.53)
3.	Net Profit / (Loss) for the period before Tax, (after Exceptional and /or Extraordinary Items)	376.12	507.33	(161.78)
4.	Net Profit / (Loss) for the period after tax, (after exceptional and / or extraordinary items)	281.47	379.63	(121.07)
5.	Total comprehensive Income for the period [comprising Profit /(Loss) for the period (after tax) and other comprehensive income (after tax)]	281.47	379.63	(121.07)
6.	Equity Share Capital	1,875.00	1,875.00	1,875.00
7.	Reserves (excluding Revaluation Reserve as shown in the Audited Balance Sheet of the previous year)	19,103.33 (as on 31-03-2025)	19,103.33 (as on 31-03-2025)	20,067.42 (as on 31-03-2024)
8.	Earnings Per Share (of Rs. 10/- each) in Rs. Basic :	1.50	2.02	(0.64)
	Diluted :	1.50	2.02	(0.64)

1. The above is an extract of the detailed format of Quarterly Financial Results filed with the Stock Exchange under Regulation 33 of the SEBI (Listing Obligations and Disclosure Requirements) Regulations, 2015. The full format of the Quarterly Financial Results are available on the website of BSE Limited at www.bseindia.com & Company's website www.sipaper.com and can be accessed by using the QR Code provided below

Place : Bangalore
Date : 23-10-2025

By Order of the Board
Sd/-
MANISH M PATEL
MANAGING DIRECTOR
DIN: 00128179

5.5 ಕೋಟಿ ಮೌಲ್ಯದ ಮಾದಕ ವಸ್ತು ವಶ: ಸೆರೆ

ಬೆಂಗಳೂರು: ಸಿಸಿಬಿ ಮಾದಕ ದ್ರವ್ಯ ನಿಗ್ರಹ ದಳದ ಅಧಿಕಾರಿ ಮತ್ತು ಸಿಬ್ಬಂದಿ ನಡೆಸಿದ ಕಾರ್ಯಾಚರಣೆಯಲ್ಲಿ ಅಂದಾಜು 5.5 ಕೋಟಿ ಮೌಲ್ಯದ 1.047 ಕೆ.ಜಿ. ಎಂಡಿಎಂಎ ಕ್ರಿಸ್ಟಲ್ ಮತ್ತು 3 ಕೆ.ಜಿ. ಹೈಡ್ರೋಗಾಂಜಾ ವಶಪಡಿಸಿಕೊಳ್ಳಲಾಗಿದೆ.

ಪ್ರಕರಣ ಸಂಬಂಧ ಇಬ್ಬರು ನೈಜೀರಿಯಾ ಪ್ರಜೆಗಳನ್ನು ಬಂಧಿಸಲಾಗಿದ್ದು, 42,800 ರು. ನಗದನ್ನು ಆರೋಪಿಗಳಿಂದ ಜಪ್ತಿ ಮಾಡಲಾಗಿದೆ. ಹೆಬ್ಬಗೋಡಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಮಾದಕ ವಸ್ತು ಸಂಗ್ರಹದ ಬಗ್ಗೆ ಖಚಿತ ಮಾಹಿತಿಯ ಆಧಾರದಲ್ಲಿ ದಾಳಿ ನಡೆಸಿರುವ ಮಾದಕ ದ್ರವ್ಯ ನಿಗ್ರಹ ದಳದ ಪಿಐ ವಿ.ಡಿ.ಶಿವರಾಜು ಮತ್ತು ಸಿಬ್ಬಂದಿ, ನೈಜೀರಿಯಾ ಮೂಲದ ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ. ಬಂಧಿತರಿಂದ ಅಂದಾಜು 2.5 ಕೋಟಿ ರು. ಮೌಲ್ಯದ 1,047 ಕೆ.ಜಿ. ತೂಕದ ಎಂಡಿಎಂಎ ಕ್ರಿಸ್ಟೆಲ್ ಮತ್ತು 42,800 ರು. ನಗದನ್ನು ವಶಕ್ಕೆ ಪಡೆಯಲಾಗಿದೆ. ಆರೋಪಿಗಳು ಬ್ಯುಸಿನೆಸ್ ವೀಸಾ ಪಡೆದು ಭಾರತಕ್ಕೆ ಬಂದು, ಡ್ರಗ್ ಪೆಡ್ಲಿಂಗ್‌ನಲ್ಲಿ ತೊಡಗಿರುವುದು ತನಿಖೆ ವೇಳೆ ಗೊತ್ತಾಗಿದೆ.

ಕೆ.ಜಿ. ನಗರ ಠಾಣಾ ವ್ಯಾಪ್ತಿಯಲ್ಲಿರುವ ಅಂಚೆ ಕಚೇರಿಗೆ ವಿದೇಶದಿಂದ ಮಾದಕ ವಸ್ತುವಿರುವ ಅನುಮಾನಾಸ್ಪದ ಪಾರ್ಸೆಲ್‌ಗಳು ಬಂದಿರುವ ಬಗ್ಗೆ ಮಾಹಿತಿ ಹಿನ್ನೆಲೆ, ಮಾದಕ ದ್ರವ್ಯ ನಿಗ್ರಹ ದಳದ ಪಿಐ ರಕ್ಷಿತ್ ಮತ್ತು ತಂಡ ದಾಳಿ ನಡೆಸಿದೆ. ಈ ವೇಳೆ ಅಂದಾಜು 3 ಕೋಟಿ ರು. ಮೌಲ್ಯದ 3 ಕೆ.ಜಿ. ತೂಕದ ಹೈಡ್ರೋಗಾಂಜಾ ವಶಪಡಿಸಿಕೊಳ್ಳಲಾಗಿದೆ. ಆರೋಪಿಗಳು ವಿದೇಶಿ ಕಂಪನಿಗಳ ಬಿಸ್ಕತ್, ಚಾಕೊಲೇಟ್ ಪ್ಯಾಕೇಟ್‌ಗಳಲ್ಲಿ ಡ್ರಗ್ಸ್ ಮರೆಮಾಚಿ ಥೈಲ್ಯಾಂಡ್, ಫ್ರಾನ್ಸ್ ದೇಶಗಳಿಂದ ಆಮದು ಮಾಡಿಕೊಂಡಿದ್ದರು ಎಂಬುದು ಗೊತ್ತಾಗಿದೆ. ಈ ಬಗ್ಗೆ ಕೆ.ಜಿ.ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಡ್ರಿಂಕ್ ಆಂಡ್ ಡ್ರೈವ್ ಕೇಸ್ ಪತ್ತೆ ವೇಳೆ ಪೊಲೀಸರ ವರ್ತನೆ ಬಗ್ಗೆ ಪ್ರಶ್ನಿಸಿದ ಕೋರ್ಟ್

ಪೊಲೀಸರಿಗೆ ಸೌಜನ್ಯದ ಭಾಷೆ ಗೊತ್ತೇ?: ಹೈಕೋರ್ಟ್

ಬೆಂಗಳೂರು: ಡ್ರಿಂಕ್ ಆಂಡ್ ಡ್ರೈವ್ ಪತ್ತೆ ಹಚ್ಚುವ ಸಮಯದಲ್ಲಿ ಪೊಲೀಸರು ಸೌಜನ್ಯದಿಂದ ವರ್ತಿಸುತ್ತಾರೆಯೇ ಎಂದು ಹೈಕೋರ್ಟ್ ಪ್ರಶ್ನೆ ಮಾಡಿದೆ. ನಮ್ಮ ಪೊಲೀಸರು ಯಾವಾಗ ಸೌಜನ್ಯದ ಭಾಷೆ ಮಾತನಾಡಲು ಆರಂಭಿಸಿದ್ದಾರೆ ಎಂದು ರಾಜ್ಯ ಪ್ರಾಸಿಕ್ಯೂಷನ್ ವಿರುದ್ಧ ಹೈಕೋರ್ಟ್ ವಾಗ್ದಾಳಿ ನಡೆಸಿದೆ.

ಎಚ್‌ಎಲ್ ಠಾಣೆಯ ಪೊಲೀಸರು ನನ್ನ ವಿರುದ್ಧ 29ನೇ ಎಸಿಎಂಎಂ ಕೋರ್ಟ್‌ಗೆ ಸಲ್ಲಿಸಿರುವ ಚಾರ್ಜ್‌ಶೀಟ್ ರದ್ದುಪಡಿಸಬೇಕು ಎಂದು ಕೋರಿ ನಗರದ ರಾಮಾಂಜಲು ಸಲ್ಲಿಸಿರುವ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು. ವಿಚಾರಣೆ ವೇಳೆ ಅರ್ಜಿದಾರರ ಪರ ಹೈಕೋರ್ಟ್ ವಕೀಲ ಎಸ್.ಸುನಿಲ್ ಕುಮಾರ್ ಅವರಿಗೆ ನ್ಯಾಯಮೂರ್ತಿಗಳು, ಕುಡಿದು ಚಾಲನೆ ಮಾಡುವವರೆಲ್ಲಾ ಹೀಗೇನೆ. ಅಂಥವರನ್ನು ಚೆಕ್ ಮಾಡಿ ಅವರ ವಿರುದ್ಧ ಕ್ರಮ ಕೈಗೊಳ್ಳದೆ ಇನ್ನೇನು ಮಾಡೋಕ್ಕಾಗುತ್ತೆ ಎಂದು ಪ್ರಶ್ನಿಸಿದರು.

ಇದಕ್ಕೆ ಸುನಿಲ್ ಕುಮಾರ್, ಸ್ವಾಮಿ ಎಫ್ ಐಆರ್‌ನಲ್ಲಿ ಪೊಲೀಸರು ಸೌಜನ್ಯದಿಂದ ಪ್ರಶ್ನಿಸಿದರು ಎಂದು ಬರೆಯಲಾಗಿದೆ. ಸೌಜನ್ಯದಿಂದ ಕೇಳಿದರೆ ನಮ್ಮ ಅರ್ಜಿದಾರರು ಯಾಕೆ ಸಿಡಿಮಿಡಿಗೊಳ್ಳುತ್ತಿದ್ದರು? ಅವರು ಬ್ಯಾರಿಕೇಡ್ ಹಾಕಿ ನಿಲ್ಲಿಸುವಾಗ ಇವರು ಕಾರನ್ನು ಪಕ್ಕಕ್ಕೆ ತೆಗೆದುಕೊಂಡಿದ್ದಾರೆ ಅಷ್ಟೇ. ಮಾತ್ರವಲ್ಲ, ಕುಡಿದು ವಾಹನ ಚಲಾಯಿಸುವವರನ್ನು ಪತ್ತೆ ಹಚ್ಚುವಾಗ ವಿಡಿಯೋಗ್ರಾಫ್ ಮಾಡಬೇಕು ಎಂದು ಸರಕಾರ 2023ರಲ್ಲೇ ಸುತ್ತೋಲೆ ಹೊರಡಿಸಿದೆ. ಆದರೆ, ಪೊಲೀಸರು ಈ ಪ್ರಕರಣದಲ್ಲಿ ವಿಡಿಯೋಗ್ರಾಫ್ ಅನ್ನೇ ಮಾಡಿಲ್ಲ. ವೈದ್ಯಕೀಯ ವರದಿಯೂ ಇಲ್ಲ ಎಂದರು.

ಅರ್ಜಿದಾರರು ನನ್ನ ಮೇಲೆಯೇ ಕಾರು ಚಲಾಯಿಸಿದರು. ಇದರಿಂದ ಮೊಣಕಾಲಿನ ಬಳಿ ಗಂಭೀರ ಸ್ವರೂಪದ 11 ಗಾಯಗಳಾದವು. ತಕ್ಷಣವೇ ಮಣಿಪಾಲ್ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದೆ ಎಂಬ ಹೆಡ್ ಕಾನ್‌ಸ್ಟೆಬಲ್ ವಿವರಣೆ ಸತ್ಯಕ್ಕೆ ದೂರ. ವಾಸ್ತವದಲ್ಲಿ ವೈದ್ಯರು ಅವರಿಗೆ ಅವತ್ತು ಮೊಣಕಾಲಿನ ಮೇಲೆ ಐಸ್ ಪ್ಯಾಕ್ ಇರಿಸಿ ಸಾಕು ಎಂದು ಸಲಹೆ ನೀಡಿದ್ದಾರೆ. ಹೆಡ್ ಕಾನ್‌ಸ್ಟೆಬಲ್ ಸಲ್ಲಿಸಿರುವ ವೈದ್ಯಕೀಯ ವರದಿ 1 ತಿಂಗಳ ನಂತರ ಸಲ್ಲಿಸಿರುವ ಸುಳ್ಳು ದಾಖಲೆ. ಹಾಗಾಗಿ ಹುರುಳಿಲ್ಲದ ಈ ದೂರನ್ನು ವಜಾಗೊಳಿಸಬೇಕು ಎಂದು ಕೋರಿದರು.

ಇದಕ್ಕೆ ರಾಜ್ಯ ಪ್ರಾಸಿಕ್ಯೂಷನ್ ಪರ ಹಾಜರಿದ್ದ ಹೆಚ್ಚುವರಿ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್, ಕುಡಿದು ವಾಹನ ಚಲಾಯಿಸುವವರನ್ನು ಪತ್ತೆ ಹಚ್ಚುವಾಗ ಸೌಜನ್ಯದಿಂದ ಮಾತನಾಡಿಸಿದರೆ ಅವರು ಎಲ್ಲಿ ಕೇಳುತ್ತಾರೆ. ಅವರನ್ನು ಬೇರೆಯದೇ ದಾಟಿಯಲ್ಲಿ ಪ್ರಶ್ನಿಸಬೇಕಾಗುತ್ತದೆ ಎಂದರು. ವಾದ-ಪ್ರತಿವಾದ ಆಲಿಸಿದ ನ್ಯಾಯಪೀಠ ವಿಚಾರಣೆಯನ್ನು ನವೆಂಬರ್ ಎರಡನೇ ವಾರಕ್ಕೆ ಮುಂದೂಡಿದೆ.

ಪ್ರಕರಣವೇನು?

ಮದ್ಯಪಾನ ಮಾಡಿ ವಾಹನ ಚಾಲನೆ ಮಾಡುವವರನ್ನು ಪತ್ತೆ ಹಚ್ಚಿ ಅವರ ವಿರುದ್ಧ ಪ್ರಕರಣ ದಾಖಲಿಸುವ ವಿಶೇಷ ಕರ್ತವ್ಯದ ಮೇರೆಗೆ ನಿಯೋಜನೆಗೊಂಡಿದ್ದ ಹೆಡ್ ಕಾನ್‌ಸ್ಟೆಬಲ್, ಎಚ್‌ಎಎಲ್ ಅಂಚೆ ಕಚೇರಿ ಜಂಕ್ಷನ್ ಹತ್ತಿರ 2021ರ ಅಕ್ಟೋಬರ್ 21ರಂದು ನಡೆದ ಘಟನೆಗೆ ಸಂಬಂಧಿಸಿದಂತೆ ರಾಮಾಂಜಲು ವಿರುದ್ಧ ಪ್ರಕರಣ ದಾಖಲಿಸಿದ್ದರು. ಅರ್ಜಿದಾರರು ಅಂದು ರಾತ್ರಿ 10.45ರ ಸುಮಾರಿಗೆ ತಮ್ಮ ಕಾರನ್ನು ಅಡ್ಡಾದಿಡ್ಡಿಯಾಗಿ ಓಡಿಸಿಕೊಂಡು ಬರುತ್ತಿದ್ದರು. ಹೀಗಾಗಿ, ಕಾರನ್ನು ನಿಲ್ಲಿಸಿ ಚಾಲಕನ ಸ್ಥಾನದಲ್ಲಿದ್ದ ಅರ್ಜಿದಾರರನ್ನು ಮೆಷಿನ್ ಮೂಲಕ ಪರೀಕ್ಷಿಸಲು ಸೌಜನ್ಯದಿಂದ ಸೂಚಿಸಿ ಮುಂದಾ ಗುತ್ತಿದ್ದಂತೆಯೇ ಅವರು, ನಮ್ಮ ಮೇಲೆ ಕಾರು ಚಲಾಯಿಸಲು ಪ್ರಯತ್ನಿಸಿದರು ಎಂಬ ಆರೋಪದಡಿ ಪ್ರಕರಣ ದಾಖಲಿಸಲಾಗಿದೆ. ಈ ಸಂಬಂಧ ಭಾರತೀಯ ದಂಡ ಸಂಹಿತೆ-1860ರ ಕಲಂ 353,307,279,427,506 ಅಡಿಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಿಸಿ 29ನೇ ಎಸಿಎಂಎಂ ನ್ಯಾಯಾಲ ಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ.

ಆರ್ಥಿಕ ಆಸ್ತಿಯ ಭದ್ರತೆ ಮತ್ತು ಪುನನಿರ್ಮಾಣ ಮತ್ತು ಬಡ್ಡಿಯ ಹಿತಾಸಕ್ತಿ ರಕ್ಷಣಾಕ್ರಮದ ಅಧಿನಿಯಮ 2002 ಸೆಕ್ಷನ್ 13 (2) ಕಾಲಂನ ಪ್ರಕಾರ ಜಾರಿ ಮಾಡುವದಕ್ಕಾಗಿ ಕೊಟ್ಟ ಸೂಚನೆ (ಅಧಿನಿಯಮ)

ಅ ನಂ.	ಸಾಲಗಾರರ ಹೆಸರು (ಎ)	ಅಡವು ಇಟ್ಟ ಆಸ್ತಿಯ ವಿವರ (ಬಿ)	ಎನ್‌ಪಿಎಯ ತಾರೀಖು (ಸಿ)	ಬಾಕಿ ಉಳಿದ ಕೊಡಬೇಕಾದಹಣ (ಡಿ)
1.	ಸಾಲ ಖಾತೆ ನಂ. HHLMAL00353344 1. ಸುಬ್ರಮಣ್ಯ ವಿ ಅಲಿಯಾಸ್ ಪಯಸ್ವಿನಿ ಸುಬ್ರಮಣ್ಯ ವಿ 2. ಪಯಸ್ವಿನಿ ಎಸ್ ಎಸ್ 3. ಮೈಸೂರು ಸುಬ್ಬರಾವ್ ಸೋಮಸುಂದರ ಅಲಿಯಾಸ್ ಎಂ. ಎಸ್. ಸೋಮಸುಂದರ (ಖಾತರಿದಾರ)	ಐಟಂ ಸಂಖ್ಯೆ 1 ಆಸ್ತಿ ಹೊಂದಿರುವ ಸಂಖ್ಯೆ. 35, ಪುರಸಭೆ ಖಾತಾ ಸಂಖ್ಯೆ. 25/8, ಹೊಸ ಬಿಬಿಎಂಪಿ ಖಾತಾ ಸಂಖ್ಯೆ. 32/54/154/25/8/35, ಬೆಂಗಳೂರು ದಕ್ಷಿಣ ತಾಲ್ಲೂಕಿನ ಕೆಂಗೇರಿ ಹೋಬಳಿ, ದುಬಾಸಿಪಾಳ್ಯ ಗ್ರಾಮದಲ್ಲಿದೆ, ಪೂರ್ವದಿಂದ ಪಶ್ಚಿಮಕ್ಕೆ: 30-0 ಅಡಿ, ಉತ್ತರದಿಣ್ದ ದಕ್ಷಿಣಕ್ಕೆ: 20-0 ಅಡಿ, ಒಟ್ಟು 600 ಚದರ ಅಡಿ ಅಳತೆಯನ್ನು ಹೊಂದಿದೆ, ಈ ಆಸ್ತಿಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮಿತಿಯಡಿಯಲ್ಲಿ ಬರುತ್ತದೆ, ಅಲ್ಲಿ 2 ಚದರ ಆರ್.ಸಿ.ಸಿ ಛಾವಣಿಯ, ರೆಡ್ ಆಕ್ಸೈಡ್ ನೆಲಹಾಸು ಎಲ್ಲಾ ನಾಗರಿಕ ಸೌಲಭ್ಯಗಳನ್ನು ಹೊಂದಿದೆ ಹಾಗೂ ಈ ಭೂಮಿಯ ಎಲ್ಲಾ ಭಾಗಗಳು ಐಟಂ ಸಂಖ್ಯೆ 2 ಆಸ್ತಿ ಹೊಂದಿರುವ ಸಂಖ್ಯೆ. 36, ಪುರಸಭೆ ಖಾತಾ ಸಂಖ್ಯೆ. 25/8, ಹೊಸ ಬಿಬಿಎಂಪಿ ಖಾತಾ ಸಂಖ್ಯೆ. 33/54/155/25/8/36, ಬೆಂಗಳೂರು ದಕ್ಷಿಣ ತಾಲ್ಲೂಕಿನ ಕೆಂಗೇರಿ ಹೋಬಳಿ, ದುಬಾಸಿಪಾಳ್ಯ ಗ್ರಾಮದಲ್ಲಿದೆ, ಪೂರ್ವದಿಂದ ಪಶ್ಚಿಮಕ್ಕೆ: 30-0 ಅಡಿ, ಉತ್ತರದಿಣ್ದ ದಕ್ಷಿಣಕ್ಕೆ: 20-0 ಅಡಿ, ಒಟ್ಟು 600 ಚದರ ಅಡಿ ಅಳತೆಯನ್ನು ಹೊಂದಿದೆ, ಈ ಆಸ್ತಿಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮಿತಿಯಡಿಯಲ್ಲಿ ಬರುತ್ತದೆ, ಅಲ್ಲಿ 2 ಚದರ ಆರ್.ಸಿ.ಸಿ ಛಾವಣಿಯ, ರೆಡ್ ಆಕ್ಸೈಡ್ ನೆಲಹಾಸು ಎಲ್ಲಾ ನಾಗರಿಕ ಸೌಲಭ್ಯಗಳನ್ನು ಹೊಂದಿದೆ ಹಾಗೂ ಈ ಭೂಮಿಯ ಎಲ್ಲಾ ಭಾಗಗಳು	03.08.2025	ದಿನಾಂಕ 29.09.2025 ರಂತೆ ರೂ. 34,55,506.42/- (ರೂಪಾಯಿ ಮೂವತ್ತ ನಾಲ್ಕು ಲಕ್ಷ ಐವತ್ತ ಐದು ಸಾವಿರದ ಐದು ನೂರ ಆರು ಮತ್ತು ಪೈಸೆ ನಲವತ್ತ ಎರಡು ಮಾತ್ರ)
2.	ಸಾಲ ಖಾತೆ ನಂ. HHLMAL00434885 1. ಸುಬ್ರಮಣ್ಯ ವಿ ಅಲಿಯಾಸ್ ಪಯಸ್ವಿನಿ ಸುಬ್ರಮಣ್ಯ ವಿ 2. ಪಯಸ್ವಿನಿ ಎಸ್ ಎಸ್	ಐಟಂ ಸಂಖ್ಯೆ 1 ಆಸ್ತಿ ಹೊಂದಿರುವ ಸಂಖ್ಯೆ. 35, ಪುರಸಭೆ ಖಾತಾ ಸಂಖ್ಯೆ. 25/8, ಹೊಸ ಬಿಬಿಎಂಪಿ ಖಾತಾ ಸಂಖ್ಯೆ. 32/54/154/25/8/35, ಬೆಂಗಳೂರು ದಕ್ಷಿಣ ತಾಲ್ಲೂಕಿನ ಕೆಂಗೇರಿ ಹೋಬಳಿ, ದುಬಾಸಿಪಾಳ್ಯ ಗ್ರಾಮದಲ್ಲಿದೆ, ಪೂರ್ವದಿಂದ ಪಶ್ಚಿಮಕ್ಕೆ: 30-0 ಅಡಿ, ಉತ್ತರದಿಣ್ದ ದಕ್ಷಿಣಕ್ಕೆ: 20-0 ಅಡಿ, ಒಟ್ಟು 600 ಚದರ ಅಡಿ ಅಳತೆಯನ್ನು ಹೊಂದಿದೆ, ಈ ಆಸ್ತಿಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮಿತಿಯಡಿಯಲ್ಲಿ ಬರುತ್ತದೆ, ಅಲ್ಲಿ 2 ಚದರ ಆರ್.ಸಿ.ಸಿ ಛಾವಣಿಯ, ರೆಡ್ ಆಕ್ಸೈಡ್ ನೆಲಹಾಸು ಎಲ್ಲಾ ನಾಗರಿಕ ಸೌಲಭ್ಯಗಳನ್ನು ಹೊಂದಿದೆ ಹಾಗೂ ಈ ಭೂಮಿಯ ಎಲ್ಲಾ ಭಾಗಗಳು ಐಟಂ ಸಂಖ್ಯೆ 2 ಆಸ್ತಿ ಹೊಂದಿರುವ ಸಂಖ್ಯೆ. 36, ಪುರಸಭೆ ಖಾತಾ ಸಂಖ್ಯೆ. 25/8, ಹೊಸ ಬಿಬಿಎಂಪಿ ಖಾತಾ ಸಂಖ್ಯೆ. 33/54/155/25/8/36, ಬೆಂಗಳೂರು ದಕ್ಷಿಣ ತಾಲ್ಲೂಕಿನ ಕೆಂಗೇರಿ ಹೋಬಳಿ, ದುಬಾಸಿಪಾಳ್ಯ ಗ್ರಾಮದಲ್ಲಿದೆ, ಪೂರ್ವದಿಂದ ಪಶ್ಚಿಮಕ್ಕೆ: 30-0 ಅಡಿ, ಉತ್ತರದಿಣ್ದ ದಕ್ಷಿಣಕ್ಕೆ: 20-0 ಅಡಿ, ಒಟ್ಟು 600 ಚದರ ಅಡಿ ಅಳತೆಯನ್ನು ಹೊಂದಿದೆ, ಈ ಆಸ್ತಿಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮಿತಿಯಡಿಯಲ್ಲಿ ಬರುತ್ತದೆ, ಅಲ್ಲಿ 2 ಚದರ ಆರ್.ಸಿ.ಸಿ ಛಾವಣಿಯ, ರೆಡ್ ಆಕ್ಸೈಡ್ ನೆಲಹಾಸು ಎಲ್ಲಾ ನಾಗರಿಕ ಸೌಲಭ್ಯಗಳನ್ನು ಹೊಂದಿದೆ ಹಾಗೂ ಈ ಭೂಮಿಯ ಎಲ್ಲಾ ಭಾಗಗಳು	03.08.2025	ದಿನಾಂಕ 29.09.2025 ರಂತೆ ರೂ. 57,99,753.73/- (ರೂಪಾಯಿ ಐವತ್ತ ಏಳು ಲಕ್ಷ ತೊಂಬತ್ತ ಒಂಬತ್ತು ಸಾವಿರದ ಏಳು ನೂರ ಐವತ್ತ ಮೂರು ಮತ್ತು ಪೈಸೆ ಎಪ್ಪತ್ತ ಮೂರು ಮಾತ್ರ)

ಈ ಮೇಲೆಹೆಸರಿಸಲಾದಸಾಲಗಾರರುಆರ್ಥಿಕಶಿಸ್ತು ಮತ್ತು ಸಾಲದ ಖಾತೆಯಜವಾಬ್ದಾರಿಯಹೊಣೆಯನ್ನು ಸರಿಯಾಗಿ ಪಾಲಿಸದೇಇದ್ದುದರಿಂದಕಂಪನಿಯು ತಮ್ಮ ಲೆಕ್ಕಾಶಾಸ್ತ್ರ ಪುಸ್ತಕಗಳಆಧಾರದಿಂದ ಈ ಸಾಲ ಪಡೆದವರ ಈಗ ಕೊಡಬೇಕಾದಮೊತ್ತವನ್ನು ಕಾಲಮ್ ಡಿ ಸಾಮಾನ್ಯ ಉದ್ಯೋಗ ನಿರ್ವಹಣೆಯ ಪ್ರಕಾರ, ಕೊಡದೇವಿಫಲರಾಗಿದ್ದಾರೆಎಂದುತೋರಿಸಿಕೊಟ್ಟಿದೆ.

ಪ್ರತಿಯೊಬ್ಬ ಸಾಲ ಪಡೆದವ (ರು) ಮರಳಿ ಸಾಲ ತೀರಿಸುವಬಗ್ಗೆ ದೀರ್ಘಕಾಲದ ತೀವ್ರಉಪೇಕ್ಷೆತೋರಿಸಿದುದರಿಂದ ಅವರ ಸಾಲದ ಖಾತೆಯನ್ನು ಕಂಪನಿಯವರು ನಿರ್ದಿಷ್ಟಪಡಿಸಲಾದ ನಿಯಮಗಳಂತೆ ಅನುತ್ಪಾದಕ ಆಸ್ತಿ (ಕಾಲಮ್ ಸಿಯಲ್ಲಿನ ತಾರೀಖಿನಂದು) ಎಂದುವರ್ಗೀಕರಿಸಿದ್ದಾರೆ. ತತ್ಪರಿಣಾಮವಾಗಿ ಆ್ಯಕ್ಟ್‌ನಸೆಕ್ಷನ್ 13 (2) ಅಧಿನಿಯಮದಂತೆ ಪ್ರತಿಯೊಬ್ಬ ಸಾಲಗಾರನಿಗೆ (ರಿಗೆ) ಸೂಚನೆಗಳನ್ನು ಕೂಡಾ ನೀಡಲಾಗಿದೆ.

ಈ ಮೇಲಿನದ್ದರ ಕಾರಣ ಈ ಮೇಲೆಹೆಸರಿಸಲಾದ ಪ್ರತೀಯೊಬ್ಬ ಸಾಲಗಾರನಿಗೆ (ರಿಗ)ಕಂಪೆನಿಯು ಈ ಮೇಲೆಕಾಲಮ್ ಡಿಯಲ್ಲಿ ದರ್ಶಿಸಲಾದ ಬಾಕಿ ಮೊತ್ತವನ್ನು ಈ ತನಕದಬಡ್ಡಿ,ವೆಚ್ಚಗಳುಮತ್ತು ಚಾರ್ಜಸ್‌ನೊಂದಿಗೆ ಈ ಸೂಚನೆ ಪ್ರಕಟವಾದ 60 ದಿನಗಳಲ್ಲಿ ಪಾವತಿಸುವಮೂಲಕಕಂಪೆನಿಯ ಮೇಲಿನ ಅವನ/ಅವಳ ಸಂಪೂರ್ಣ ಬಾಧ್ಯತೆಯನ್ನು ಪೂರ್ಣಗೊಳಿಸಬೇಕೆಂದು ಈ ಮೂಲಕಕೇಳಿಕೊಳ್ಳುತ್ತಿದ್ದು ಇದಕ್ಕೆ ತಪ್ಪಿದಲ್ಲಿ, ಕಂಪನಿಯು ಈ ಮೇಲೆಕಾಲಮ್ ಬಿಯಲ್ಲಿ ನಮೂದಿಸಲಾದಅಡವುಇಟ್ಟ ಆಸ್ತಿಯನ್ನು ಸ್ವಾಧೀನ ಪಡಿಸಿಕೊಳ್ಳಲುಅರ್ಹವಾಗಿದೆಮತ್ತು ಕಂಪೆನಿ ಕಾನೂನಿನಲ್ಲಿ ಉಪಲಬ್ಧವಿರುವಇತರಕ್ರಮಗಳನ್ನು ಕೂಡಾತೆಗೆದುಕೊಳ್ಳುತ್ತದೆ.

ಎಸ್‌ಏಆರ್‌ಎಫ್‌ಏಇಎಸ್‌ಐ (SARFAESI) ಆ್ಯಕ್ಟ್‌ನ ಸೆಕ್ಷನ್ 13ರ ಸೆಕ್ಷನ್ (8)ರ ನಿಬಂಧನೆಗಳ ವಿಶಿಷ್ಟಭಾಷೆಯಲ್ಲಿರುವ ಮುಂದಿನ ವಿಷಯವನ್ನು ದಯವಿಟ್ಟುಗಮನಿಸಿರಿ: ''ಒಬ್ಬ ಸಾಲಗಾರನು ಅಡವಿನ ಆಧಾರದ ಮೇಲೆ ತನಗೆ ಸಾಲ ಕೊಟ್ಟಿರುವವನಿಗೆ, ಆತ ಸಾರ್ವಜನಿಕ ಹರಾಜಿನ ಮೂಲಕ, ಸಾರ್ವಜನಿಕರಿಂದ ಕೊಟೇಶನ್‌ಗಳನ್ನು, ಟೆಂಡರನ್ನು ಆಹ್ವಾನಿಸುವ ಮೂಲಕ ಅಥವಾ ಖಾಸಗಿ ಕರಾರಿನ ಮೂಲಕ ಅಡವಿಟ್ಟಿರುವ ಆಸ್ತಿಯನ್ನು(ಗಳನ್ನು) ಮಾರಾಟ ಮಾಡಲು ನೋಟೀಸನ್ನು ಪ್ರಕಟಿಸುವ ತಾರೀಖಿನ ತನಕ ಮಾತ್ರ, ಆತನ ಎಲ್ಲಾ ವ್ಯವಹಾರದ ವೆಚ್ಚಗಳು, ಚಾರ್ಜುಗಳು ಮತ್ತು ಖರ್ಚುಗಳೊಂದಿಗೆ ತನ್ನಿಂದ ಬಾಕಿ ಇರುವ ಹಣದ ಸಂಪೂರ್ಣ ಮೊತ್ತವನ್ನು ಸಲ್ಲಿಸಬಹುದು. ಜೊತೆಯಲ್ಲೇ ಇದನ್ನೂ ಗಮನಿಸಬಹುದು: ಸಾಲಗಾರನು ಮೇಲೆ ಹೇಳಿರುವ ಕಾಯಿದೆಬದ್ಧವಾಗಿ ಆದೇಶಿಸಿರುವ ಸಮಯದ ಚೌಕಟ್ಟಿನೊಳಗೆ ತಾನು ಅಡವಿಟ್ಟಿರುವ ಆಸ್ತಿಯನ್ನು ಬಿಡಿಸಿಕೊಳ್ಳದೆ ಹೋದರೆ, ಸಾಲಗಾರನು ಆ ಆಸ್ತಿಯನ್ನು ಬಿಡಿಸಿಕೊಳ್ಳುವ ಹಕ್ಕಿಗೆ ಅರ್ಹನಿಲ್ಲದಿರಬಹುದು''

ಎಸ್‌ಏಆರ್‌ಎಫ್‌ಏಇಎಸ್‌ಐ ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (13)ರ ನಿಬಂಧನೆ ಪ್ರಕಾರ ಒಂದೋ ಮಾರಾಟ, ಲೀಸ್ ಅಥವಾ ಅನ್ಯಥಾ (ಅವನ ವ್ಯಾಪಾರದ ಸಾಮಾನ್ಯ ವಿಧಾನದ ಹೊರತಾಗಿ)ವಿಧಾನದಿಂದ ಸೂಚನೆಯಲ್ಲಿಉಲ್ಲೇಖಿಸಲಾದ ಯಾವುದೇ ಸೆಕ್ಯೂರ್ಡ್ ಆಸ್ತಿಯನ್ನುಸೆಕ್ಯೂರ್ಡ್ ಕ್ರೆಡಿಟರರ ಲಿಖಿತ ಪೂರ್ವ ಸಮ್ಮತಿ ಇಲ್ಲದೆ ನೀವು ವರ್ಗಾಯಿಸುವುದನ್ನು ಈ ಮೂಲಕ ನಿಷೇಧಿಸಲಾಗಿದೆ.

ಸ್ಥಳ : ಬೆಂಗಳೂರು

ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್
(ಹಿಂದೆ ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು)
ಅಧಿಕೃತ ಅಧಿಕಾರಿ

IN THE COURT OF THE HON'BLE XVI ADDITIONAL JUDGE (SCCH-14), COURT OF SMALL CAUSES AND JMFC, AT BENGALURU

S.C. No. 980 OF 2024

BETWEEN : State Bank of India, (RACPC) Address at No.5/1, Prestige Star Building, 1st Floor, Ring Road, Near Mother Dairy, Yelahanka New Town, BENGALURU 65 Rept., by its Chief Manager Maintenance, Miss. NAGAMANI.B ...PLAINTIFF
AND : Mr. MURTHY G K ...DEFENDANT

Notice to the Defendant under Order V Rule 20(1-A) Of CPC:

To: Mr. MURTHY G K, S/o. Mr. Kalappa, Aged about 63 years, R/at No. 120/3, 6th Cross, Near Muneshwara Temple, Anathapura Village, Singanayakanhalli, Yelahanka Hobli, Bangalore -560064.

The plaintiff has instituted the above suit against you for the recovery of a total Sum of Rs.1,80,345/- (Rupees One Lakh Eighty Thousand Three Hundred Forty-Five Only) as on 03.09.2024. Therefore, you are hereby summoned to appear before this Hon'ble Court either in person or through a duly instructed advocate on 14.11.2025 at 11. A.M. to answer the claim of the Plaintiff. On your failure to appear before the Hon'ble Court on the aforesaid date the case will be decided EXPARTE.

Given under my hand and seal of the court on 18/10/2025, Bengaluru.

By Order of the Court
Sd/- Assistant Registrar
Court of Small Causes, Bangalore

Advocate for Plaintiff : Mr. G.M. RUDRASWAMY, Office at No.27, Akshya Complex, 2nd Cross, First Floor, Nagappa Street, Palace-Guttahalli, BENGALURU-560003. Phone: 99868 33635

IN THE COURT OF THE Vth ADDITIONAL DISTRICT AND SESSIONS JUDGE AT TIPTUR

Com. O.S. No. 10001/2025

BETWEEN : Mr. SURESH KUMAR ...PLAINTIFF
AND : MR. MOHAMMED KHALANDER PASHA Proprietor of Hindustan Trading Company Ground Floor, Khatha No.99/85, Shop No.2, Mahanthi Matt Main Road, Nelamangala Town, Bengaluru Urban - 562123. ...Defendant

Whereas the above-named plaintiff has instituted a suit against you before the Hon'ble Vth Add. District and Session Judge at Tiptur for recovery of money, and whereas it has been ordered summons by way of substituted service through newspaper publication.

You are hereby notified that the said suit will be heard by the Hon'ble Court on 20.11.2025 at 11.00 A.M.

You are therefore required to appear in person or through an authorized advocate before the said Court on the aforesaid date. In default of your appearance, the matter will be heard and decided ex parte against you.

Given under my hand and seal of the Court on 18.10.2025 Issued by Order of the Hon'ble Court.

By Order of the Court, Sheristedar, V Addl. Dist. & Sessions Judge Court, Tiptur
Advocate for the Plaintiff:

ಐದು ದಶಕಗಳ ಕಾಲ ವಕೀಲಿವೃತ್ತಿ ಪೂರೈಸಿದ ಹೈಕೋರ್ಟ್‌ನ ಹಿರಿಯ ನ್ಯಾಯವಾದಿ ಕೆ.ಎಸ್. ವ್ಯಾಸರಾಯ ಅವರನ್ನು ಭಾರತ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು ಬೆಂಗಳೂರಿನಲ್ಲಿ ಶುಕ್ರವಾರದಂದು ಸನ್ಮಾನಿಸಿ ಶುಭಹಾರೈಸಿದರು.

ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಕನಕಪುರ

ಸಿ.ಮಿಸ್.ನಂ. 616/2025

ಅರ್ಜಿದಾರರು: ಶ್ರೀಮತಿ ದೇವಮ್ಮ ಬಿನ್ ಲೇಟ್ ಮೊದುರೇಗೌಡ ವಾಸ: ನರಿಪುರ ಗ್ರಾಮ, ಕಸಬಾ ಹೋಬಳಿ, ಕನಕಪುರ ತಾಲ್ಲೋಕು, ರಾಮನಗರ ಜಿಲ್ಲೆ. & ಇತರರು.

ವಿರುದ್ಧ

ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ ತಾಲ್ಲೋಕು. 2. ಗ್ರಾಮ ಲೆಕ್ಕಾಧಿಕಾರಿಗಳು, ಹಾರೋಹಳ್ಳಿ ಗ್ರಾಮ, ಹಾರೋಹಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ.

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1 ರಿಂದ 7 ನೇ ಅರ್ಜಿದಾರರ ತಾತನವರಾದ ಶ್ರೀ ವೆಂಕಟಗಿರಿಯಪ್ಪ ಬಿನ್ ಲೇಟ್ ಬಜ್ಜಯ್ಯ ರವರು ರಾಮನಗರ ಜಿಲ್ಲೆ, ಹಾರೋಹಳ್ಳಿ ತಾಲ್ಲೂಕು, ಹಾರೋಹಳ್ಳಿ ಹೋಬಳಿ, ಸಿದ್ದಾಪುರ ಗ್ರಾಮದಲ್ಲಿ ದಿನಾಂಕ: 15/08/1968 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರು ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂ-ದರೆ, ದಿನಾಂಕ: 6/12/2025 ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯಥ-ರ್ಗೊಳಿಸಲಾಗುವುದು.

2025ರ ಅಕ್ಟೋಬರ್ 17ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ. ನ್ಯಾಯಾಲಯ, ಕನಕಪುರ

ಅರ್ಜಿದಾರರ ಪರ ವಕೀಲರು
ಕೆ.ನಂಜೇಗೌಡ
ವಕೀಲರು, ಕನಕಪುರ ಟೌನ್
ಸ್ಥಳ : ಕನಕಪುರ
ದಿನಾಂಕ: 13/10/2025

ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಕನಕಪುರ

ಸಿ.ಮಿಸ್.ನಂ. 615/2025

ಅರ್ಜಿದಾರರು: ಶ್ರೀಮತಿ ದೇವಮ್ಮ ಬಿನ್ ಲೇಟ್ ಮೊದುರೇಗೌಡ ವಾಸ: ನರಿಪುರ ಗ್ರಾಮ, ಕಸಬಾ ಹೋಬಳಿ, ಕನಕಪುರ ತಾಲ್ಲೋಕು, ರಾಮನಗರ ಜಿಲ್ಲೆ. & ಇತರರು.

ವಿರುದ್ಧ

ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ ತಾಲ್ಲೋಕು. 2. ಗ್ರಾಮ ಲೆಕ್ಕಾಧಿಕಾರಿಗಳು, ಹಾರೋಹಳ್ಳಿ ಗ್ರಾಮ, ಹಾರೋಹಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ.

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1 ರಿಂದ 5ನೇ ಅರ್ಜಿದಾರರ ತಾಯಿಯವರಾದ ಹಾಗೂ 6 ಮತ್ತು 7ನೇ ಅರ್ಜಿದಾರರ ದೊಡ್ಡಮ್ಮನವರಾದ ಲಕ್ಷ್ಮಮ್ಮ ಕೋಂ ಲೇಟ್ ಮೊದುರೇಗೌಡ ರವರು ರಾಮನಗರ ಜಿಲ್ಲೆ, ಹಾರೋಹಳ್ಳಿ ತಾಲ್ಲೂಕು, ಕೋಡಿಹಳ್ಳಿ ಹೋಬಳಿ, ಕೋಡಿಹಳ್ಳಿ ಗ್ರಾಮದಲ್ಲಿ ದಿನಾಂಕ: 10/04/1989 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರು ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, ದಿನಾಂಕ: 11/12/2025 ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.

2025ರ ಅಕ್ಟೋಬರ್ 17ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ

ಅರ್ಜಿದಾರರ ಪರ ವಕೀಲರು
ಕೆ.ನಂಜೇಗೌಡ
ವಕೀಲರು, ಕನಕಪುರ ಟೌನ್
ಸ್ಥಳ : ಕನಕಪುರ
ದಿನಾಂಕ: 13/10/2025

ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಕನಕಪುರ

ಸಿ.ಮಿಸ್.ನಂ. 606/2025

ಅರ್ಜಿದಾರರು: ಶ್ರೀಮತಿ ದೇವಮ್ಮ ಬಿನ್ ಲೇಟ್ ಮೊದುರೇಗೌಡ ವಾಸ: ನರಿಪುರ ಗ್ರಾಮ, ಕಸಬಾ ಹೋಬಳಿ, ಕನಕಪುರ ತಾಲ್ಲೋಕು, ರಾಮನಗರ ಜಿಲ್ಲೆ. & ಇತರರು.

ವಿರುದ್ಧ

ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ ತಾಲ್ಲೋಕು. 2. ಗ್ರಾಮ ಲೆಕ್ಕಾಧಿಕಾರಿಗಳು, ಹಾರೋಹಳ್ಳಿ ಗ್ರಾಮ, ಹಾರೋಹಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ.

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1 ರಿಂದ 7 ನೇ ಅರ್ಜಿದಾರರ ದೊಡ್ಡಪ್ಪನವರಾದ ಶ್ರೀ ರಾಮಯ್ಯ ಬಿನ್ ಲೇ॥ ವೆಂಕಟಗಿ-ರಿಯಪ್ಪ ರವರು ರಾಮನಗರ ಜಿಲ್ಲೆ, ಹಾರೋಹಳ್ಳಿ ತಾಲ್ಲೂಕು, ಹಾರೋಹಳ್ಳಿ ಹೋಬಳಿ, ಸಿದ್ದಾಪುರ ಗ್ರಾಮದಲ್ಲಿ ದಿನಾಂಕ: 03/06/1985 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರು ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂ-ದರೆ, ದಿನಾಂಕ: 6/12/2025 ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ-ಗೊಳಿಸಲಾಗುವುದು.

2025ರ ಅಕ್ಟೋಬರ್ 17ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ. ನ್ಯಾಯಾಲಯ, ಕನಕಪುರ

ಅರ್ಜಿದಾರರ ಪರ ವಕೀಲರು
ಕೆ.ನಂಜೇಗೌಡ
ವಕೀಲರು, ಕನಕಪುರ ಟೌನ್
ಸ್ಥಳ : ಕನಕಪುರ
ದಿನಾಂಕ: 13/10/2025

ಪತ್ನಿ ಕೊಲೆಗೈದು ದೇವರ ಮೊರೆ

ಬೆಂಗಳೂರು: ಮಾರತಹಳ್ಳಿಯಲ್ಲಿ ವೈದ್ಯ ಪತಿ ಮಹೇಂದ್ರ ರೆಡ್ಡಿ ತನ್ನ ಪತ್ನಿ ಡಾ.ಕೃತಿಕಾಗೆ ಅನಸ್ತೇಷಿಯಾ ಕೊಟ್ಟು ಕೊಲೆ ಮಾಡಿದ್ದ. ವಿಚಾರ ಗೊತ್ತಾದರೆ ಜೈಲು ಸೇರಬೇಕಾಗುತ್ತದೆ ಎಂಬ ಆತಂಕ ಕಾಡುತ್ತಿತ್ತು. ಪತ್ನಿ ಡಾ ಕೃತಿಕಾಳಿಗೆ ಔಷಧಿ ಕೊಟ್ಟು ಕೊಲೆ ಮಾಡಿದ ಬಳಿಕ ಹಂತಕ ಮಹೇಂದ್ರ ರೆಡ್ಡಿ ಮನಃಶಾಂತಿಗಾಗಿ ಟೆಂಪಲ್ ರನ್ ಮಾಡಿದ್ದಾನೆ. ಹಂತಕ ದೇವಸ್ಥಾನಗಳಿಗೆ ಹೋಗಿ ದೇವರ ಮೊರೆ ಹೋಗಿದ್ದಾನೆ. ಆತಂಕ, ಭಯ ದೂರ ಮಾಡಿಕೊಳ್ಳಲು ಧರ್ಮಸ್ಥಳ, ಚಾಮುಂಡಿ ಬೆಟ್ಟ, ತಿರುಪತಿ, ಕುಕ್ಕೆ ಸೇರಿದಂತೆ ಹತ್ತಾರು ಕಡೆ ಹೋಗಿ, ಪತ್ನಿ ಕೊಲೆ ಪ್ರಕರಣದಿಂದ ಪಾರು ಮಾಡುವಂತೆ ದೇವರಲ್ಲಿ ಪ್ರಾರ್ಥಿಸಿಕೊಂಡಿದ್ದ. ಬೇರೆ ಬೇರೆ ದೇವಸ್ಥಾನಗಳಿಗೆ ಹೋಗಿ ಬಂದಿರುವ ಫೋಟೋಗಳನ್ನು ತನಿಖೆ ವೇಳೆ ಪರಿಶೀಲನೆ ಮಾಡಿದ್ದಾರೆ.

ಸಮಾಚಾರ ಸಣ್ಣದಲ್ಲ

ಪಠ್ಯ ಪುಸ್ತಕದಲ್ಲಿ ಪತ್ರಿಕೆಗಳ ವಿಷಯ ಸೇರಿಸಿ

ಬೆಂಗಳೂರು: ಪಠ್ಯ ಪುಸ್ತಕದಲ್ಲಿ ಪತ್ರಿಕೆಗಳ ವಿಷಯವನ್ನು ಸೇರಿಸಿ ವಿದ್ಯಾರ್ಥಿಗಳಿಗೆ ಕಲಿಕೆಯಲ್ಲಿ ಜ್ಞಾನದ ಹಸಿವನ್ನು ಹೆಚ್ಚಿಸಬೇಕು ಎಂದು ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟದ (ರಿ) ರಾಜ್ಯಾಧ್ಯಕ್ಷ ಕೆ.ಶಂಭುಲಿಂಗ ಒತ್ತಾಯಿಸಿದ್ದಾರೆ. ಮಕ್ಕಳ ಕಲಿಕಾ ಶಕ್ತಿಯನ್ನು ಹೆಚ್ಚಿಸಲು ಹಾಗೂ ವಿಶ್ವದ ಸಮಗ್ರ ಸುದ್ದಿಗಳ ಸಂಪೂರ್ಣ ಹೂರಣವನ್ನು ಅನಾವರಣ ಮಾಡುವ ಪತ್ರಿಕೆಗಳನ್ನು ಮಕ್ಕಳು ಓದುವುದರಿಂದ ಮಕ್ಕಳ ಬೌದ್ಧಿಕ ವಿಕಸನ ಹೆಚ್ಚಾಗಲು ಹಾಗೂ ವಿವಿಧ ಭಾಷಾ ಸಂಸ್ಕೃತಿಗಳ ವಿಚಾರವನ್ನು ಅರಿಯಲು ಪತ್ರಿಕೆಗಳು ಬಹು ಮುಖ್ಯ. ಈ ವಿಚಾರದ ಕುರಿತಾಗಿ ಪತ್ರಿಕೆಗಳನ್ನು ಕೂಡ ಪಠ್ಯಪುಸ್ತಕದಂತೆ ಮಕ್ಕಳಿಗೆ ಅಭ್ಯಾಸ ಮಾಡಿಸಲು ಪತ್ರಿಕೆಗಳನ್ನು ಪಠ್ಯವೆಂದು ಪರಿಗಣಿಸಿ ಪ್ರತಿ ತಿಂಗಳು ಮಕ್ಕಳಿಗೆ ಮಾಸಿಕ ಪರೀಕ್ಷೆ ಸಂದರ್ಭದಲ್ಲಿ ಪತ್ರಿಕೆಗಳ ವಿಚಾರ ಕುರಿತು ಪರೀಕ್ಷೆಯನ್ನು ಮಾಡ ಬೇಕು. ಮುಂಬರುವ 2026-27ನೇ ಸಾಲಿನಿಂದ ಇದನ್ನು ಜಾರಿ ಬರುವಂತೆ ಮಾಡಬೇಕೆಂದು ಸರಕಾರವನ್ನು ಮನವಿ ಮಾಡಿಕೊಳ್ಳುತ್ತಿದ್ದೇವೆ ಹೇಳಿದ್ದಾರೆ.

26ಕ್ಕೆ ಕಾಯುವ ಕಾಯಕ ನಾಟಕ ಪ್ರದರ್ಶನ

ಬೆಂಗಳೂರು: ಅಂತರಂಗ ತಂಡದಿಂದ ನಯನ ಸಭಾಂಗಣದಲ್ಲಿ ಅ.26ರಂದು ಸಂಜೆ 6.30ಕ್ಕೆ ಖ್ಯಾತ ಕವಿ ಡುಂಡಿರಾಜ್ ಅವರ ನಾಟಕ ಕಾಯುವ

ಕಾಯಕದ ಪ್ರದರ್ಶನ ಇರಲಿದೆ. ಈ ನಾಟಕವನ್ನು ಅರ್ಚನಾ ಶ್ಯಾಮ್ ನಿರ್ದೇಶಿಸಿದ್ದಾರೆ. ಸಂಜೆ 6 ಗಂಟೆಗೆ ನಡೆಯುವ ಸಭಾ ಕಾರ್ಯಕ್ರಮದಲ್ಲಿ ದಿ. ಸಿ.ಜಿ.ಕೆ. ಒಡನಾಟದಲ್ಲಿದ್ದ ವಿ.ಎಂ. ನಾಗೇಶ್, ಖ್ಯಾತ ರಂಗ ಸಂಘಟಕರು, ರಂಗಸಂಪದ, ಇವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಸಿಜಿಕೆ ಅವರ ಬಗ್ಗೆ ಮಾತನಾಡಲಿದ್ದಾರೆ. ಕಾಯುವಿಕೆಯೆಂಬ ಪರಿಕಲ್ಪನೆಯಲ್ಲಿ ನಿರೀಕ್ಷೆ, ಹುಡುಕಾಟ, ಸಂದಿಗ್ಧತೆ, ಸಂಬಂಧಗಳ ಸಂಕೀರ್ಣತೆ, ಮನಸಿನ ತೊಳಲಾಟ, ಅಸಹಾಯಕತೆ ಇವೆಲ್ಲವನ್ನೂ ಒಳಗೊಂಡ ಮತ್ತು ಇವೆಲ್ಲವನ್ನೂ ಮೀರಿದ ಸಂಗತಿಗಳ ಪ್ರಸ್ತುತಿಯನ್ನು ಡುಂಡೀರಾಜ್ ಸೊಗಸಾಗಿ ಮೂಡಿಸಿದ್ದಾರೆ. ನಾಟಕದ ಟಿಕೆಟ್‌ಗೆ ಆನ್ ಲೈನ್ ಬುಕಿಂಗ್ - ಬುಕ್ ಮೈ ಶೋ, ಟಿಕೆಟ್ ದರ 100 ರು. ಆಗಿರಲಿದೆ. ಹೆಚ್ಚಿನ ಮಾಹಿತಿಗೆ ಅಂಕಲ್ ಶ್ಯಾಮ್: 98809 14509, 99869 11321 ಸಂಪರ್ಕಿಸಿ.

ಸುಧನ್ವ ಮೋಕ್ಷ ಕಾರ್ಯಕ್ರಮ ನಾಳೆ

ಬೆಂಗಳೂರು: ಚಂದ್ರ ಬಡಾವಣೆ ನಿವಾಸಿಗಳ ಸಂಘ ಹಾಗೂ ನಿರ್ಮಾಣ್ ಯಕ್ಷ ಬಳಗದ ಸಹಯೋಗದಲ್ಲಿ ಅ.26 ರಂದು ಸುಧನ್ವ ಮೋಕ್ಷ ಕಾರ್ಯಕ್ರಮ ನಡೆಯಲಿದೆ. ಚಂದ್ರ ಬಡಾವಣೆಯಲ್ಲಿರುವ ಶ್ರೀ ಪ್ರಸನ್ನ ಗಣಪತಿ ದೇವಾಲಯದಲ್ಲಿ ಈ ಕಾರ್ಯಕ್ರಮ ನಡೆಯಲಿದೆ. ತಿಂಗಳು ತಿರಳು ಸರಣಿಯ 36ನೇ ಯಕ್ಷಗಾನ ತಾಳಮದ್ದಳೆ ಕಾರ್ಯಕ್ರಮವಾಗಿದೆ. ಹಿಮ್ಮೇಳದಲ್ಲಿ ಪ್ರಸನ್ನಕುಮಾರ್ ಹೆಗಡೆ, ಗಜಾನನ ಹೆಗಡೆ ಕಲ್ಲಬ್ಬೆ (ಭಾಗವತರು), ಆಗ್ನೇಯ ಭಟ್ ಕ್ಯಾಸನೂರು (ಮದ್ದಳೆ), ನಿನಾದ ಪುರಪ್ಪೆಮನೆ (ಚೆಂಡೆ) ಮತ್ತು ಮುಮ್ಮೇಳದಲ್ಲಿ ಯಶಸ್ ನಗರ (ಅರ್ಜುನ), ಅಕ್ಷಯ್ ಹೆಗಡೆ ಹೊಡ್ಲಮನೆ (ಸುಧನ್ವ), ವಸಂತಿ ಭಟ್ (ಕುವಲೆ), ಕಾರ್ತಿಕ್ ದಂಟಕಲ್ (ವೃಷಕೇತು) ಭಾಗವಹಿಸಲಿದ್ದಾರೆ. ಕೃಷ್ಣನಾಗಿ ಗಣಪತಿ ಐತುಮನೆ ಅತಿಥಿ ಕಲಾವಿದರು ಕಾರ್ಯಕ್ರಮದಲ್ಲಿ ಇರಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ತ್ರಯಿ ಕಲಾಶಾಲೆಯ ಮೊದಲ ವಾರ್ಷಿಕೋತ್ಸವ

ಬೆಂಗಳೂರು: ನಗರದ ತ್ರಯಿ ಸ್ಕೂಲ್ ಆಫ್ ಫೈನ್ ಆರ್ಟ್ಸ್‌ನವರು ಶಾರದಾ ಸ್ತ್ರೀ ಸಮಾಜದಲ್ಲಿ ಅ.26 ರಂದು ಸಂಜೆ 5.15 ಗಂಟೆಗೆ ಮೊದಲ ವಾರ್ಷಿಕೋತ್ಸವವನ್ನು ಆಚರಿಸಲಿದೆ. ಈ ಕಾರ್ಯಕ್ರಮಕ್ಕೆ ಅತಿಥಿಗಳಾಗಿ ಖ್ಯಾತ ಕೊಳಲು ವಾದಕ ವಿದ್ವಾನ್ ಮಹೇಶ್ ಸ್ವಾಮಿ ಹಾಗೂ ಭರತನಾಟ್ಯ ಕಲಾವಿದೆ ವಿದುಷಿ ಅರಣ್ಯ ನಾರಾಯಣ್ ಆಗಮಿಸಲಿದ್ದಾರೆ. ಭರತನಾಟ್ಯ ಕಲಾವಿದೆ ವಿದುಷಿ ಕು.ಅವನಿ ಅವರು ಈ ಸಂಸ್ಥೆಯನ್ನು ನಡೆಸುತ್ತಿದ್ದು, ಇಪ್ಪತ್ತಕ್ಕೂ ಹೆಚ್ಚು ಪುಟಾಣಿಗಳು ಇಲ್ಲಿ ಕಲಿಯುತ್ತಿದ್ದಾರೆ. ಹಿರಿಯ ಶಿಕ್ಷಣಾರ್ಥಿಗಳೂ ಇದ್ದಾರೆ. ಈ ಸಮಾರಂಭದಲ್ಲಿ ಪುಟಾಣಿಗಳು ನೃತ್ಯ ಹಾಗೂ ಸಂಗೀತವನ್ನು ಪ್ರಸ್ತುತ ಪಡಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಸಾಯಿ ವಿದ್ಯಾ ತಾಂತ್ರಿಕ ಕಾಲೇಜಿನಲ್ಲಿ ಕಾರ್ಯಾಗಾರ

ಬೆಂಗಳೂರು: ಬೆಂಗಳೂರಿನ ಸಾಯಿ ವಿದ್ಯಾ ತಾಂತ್ರಿಕ ಮಹಾವಿದ್ಯಾಲಯದ ಮೆಕ್ಯಾನಿಕಲ್ ಎಂಜಿನಿಯರಿಂಗ್ ವಿಭಾಗವು ಅ.30, 31ರಂದು 'ಕೈಗಾರಿಕಾ ಅನ್ವಯಿಕೆಗಳಿಗೆ ಸುಧಾರಿತ ವಸ್ತುಗಳು-2025' ಎಂಬ ವಿಷಯದ ಕುರಿತು ಎರಡು ದಿನಗಳ ಕಾರ್ಯಾಗಾರ ಆಯೋಜಿಸಲಾಗಿದೆ. ಕಾಲೇಜಿನ ಪ್ರಾಂಶುಪಾಲರಾದ ಡಾ. ಟಿ.ಎನ್. ಮಂಜುನಾಥ್ ಮತ್ತು ಕಾರ್ಯಾಗಾರದ ಕಾರ್ಯದರ್ಶಿ ಡಾ. ಎಸ್. ರಾಘವೇಂದ್ರ ಅವರು ಪಾಲ್ಗೊಳ್ಳುವರು. ಇವರೊಂದಿಗೆ 'ಕೈಗಾರಿಕಾ ಅನ್ವಯಿಕೆಗಳಿಗೆ ಸುಧಾರಿತ ವಸ್ತುಗಳ ಸಂಶೋಧನಾ ಪ್ರಗತಿ' ಕುರಿತು ಚರ್ಚಿಸಲು ಕರ್ನಾಟಕದಾದ್ಯಂತದ ನಾನಾ ಸಂಸ್ಥೆಗಳ ಪ್ರಾಧ್ಯಾಪಕರು ಮತ್ತು ಕೈಗಾರಿಕೆಗಳ ಪರಿಣಿತರು ಭಾಗವಹಿಸಲಿದ್ದಾರೆ. ರಾಜಾನುಕುಂಟೆಯಲ್ಲಿರುವ ಕಾಲೇಜು ಆವರಣದಲ್ಲಿ ಕಾರ್ಯಾಗಾರ ನಡೆಯಲಿದೆ. ಶೈಕ್ಷಣಿಕ ಮತ್ತು ಕೈಗಾರಿಕೆಗಳನ್ನು ಒಂದೇ ವೇದಿಕೆಯಲ್ಲಿ ಒಟ್ಟುಗೂಡಿಸುವುದರ ಜತೆಗೆ ವಸ್ತು ವಿಜ್ಞಾನದಲ್ಲಿನ ಪ್ರಸ್ತುತ ಪ್ರಗತಿಯನ್ನು ಹೆಚ್ಚಿಸಲು ಲಭ್ಯವಿರುವ ಸಂಭಾವ್ಯ ಕ್ರಮಗಳನ್ನು ತಿಳಿಸುವ ಗುರಿಯನ್ನು ಕಾರ್ಯಾಗಾರ ಹೊಂದಿದೆ ಎಂದು ಕಾರ್ಯಾಗಾರದ ಕಾರ್ಯದರ್ಶಿ ಡಾ. ಎಸ್. ರಾಘವೇಂದ್ರ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

72 ಕಿಮೀ ಉದ್ದದ ನಮ್ಮ ಮೆಟ್ರೋ ಹೊಸ ಮಾರ್ಗ

ಪೂರ್ವ, ದಕ್ಷಿಣ ಬೆಂಗಳೂರನ್ನು ಸಂಪರ್ಕಿಸುವ ಮಾರ್ಗ | ಡಿಪಿಆರ್ ತಯಾರಿಕೆ ಕಾರ್ಯಾರಂಭ

ಬೆಂಗಳೂರು: ನಮ್ಮ ಮೆಟ್ರೋ ಪೂರ್ವ ಹಾಗೂ ದಕ್ಷಿಣ ಬೆಂಗಳೂರನ್ನು ಸಂಪರ್ಕಿಸುವ 72 ಕಿ.ಮೀ ಉದ್ದದ ಹೊಸ ಮೆಟ್ರೋ ಮಾರ್ಗವನ್ನು ನಿರ್ಮಾಣ ಮಾಡಲು ಚಿಂತನೆ ನಡೆಸಿದೆ.

ನಮ್ಮ ಮೆಟ್ರೋದಲ್ಲಿ ಸಂಚಾರ ನಡೆಸುವವರ ಸಂಖ್ಯೆಯು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಸದ್ಯ ಹಸಿರು, ನೇರಳೆ, ಹಳದಿ ಮಾರ್ಗಗಳು ಕಾರ್ಯನಿರ್ವಹಿಸುತ್ತಿದ್ದು, 2026ರ ಮಧ್ಯಭಾಗದಲ್ಲಿ ನಾಗವಾರ - ಕಾಳೇನ ಅಗ್ರಹಾರ ನಡುವಿನ ಗುಲಾಬಿ ಮಾರ್ಗ, 2027 ಕ್ಕೆ ಸರ್ಜಾಪುರ - ವಿಮಾನ ನಿಲ್ದಾಣ ಸಂಪರ್ಕ ಕಲ್ಪಿಸುವ ನೀಲಿ ಮಾರ್ಗ ಆರಂಭವಾಗಲಿದೆ. ಜತೆಗೆ ಬೂದು, ಕಿತ್ತಳೆ ಮಾರ್ಗದ ಕಾಮಗಾರಿಗೆ ಪ್ರಧಾನಿ ಇತ್ತೀಚೆಗೆ ಚಾಲನೆ ಕೊಟ್ಟಿದ್ದರು. ಇದರೊಂದಿಗೆ ಹೆಬ್ಬಾಳ-ಸರ್ಜಾಪುರ ಕೆಂಪು ಮಾರ್ಗಕ್ಕೂ ಯೋಜನೆ ರೂಪಿಸಲಾಗುತ್ತಿದೆ. ಈ ನಡುವೆ ಅತಿ ಉದ್ದದ ಮೆಟ್ರೋ ಮಾರ್ಗಕ್ಕೆ ಯೋಜನೆ ರೂಪಿಸುತ್ತಿದೆ. ಇದರ ಜತೆಗೆ ನಮ್ಮ ಮೆಟ್ರೋವು ಬರೋಬ್ಬರಿ 72 ಕಿ.ಮೀ ಉದ್ದದ ಮೆಟ್ರೋ ಮಾರ್ಗ ನಿರ್ಮಾಣಕ್ಕೆ ಮುಂದಾಗಿದೆ. ಈ ಮಾರ್ಗವು ಬೆಂಗಳೂರಿನ ಪೂರ್ವ-ದಕ್ಷಿಣ ಭಾಗವನ್ನು ಸಂಪರ್ಕಿಸಲಿದ್ದು, 50ಕ್ಕೂ ಅಧಿಕ ನಿಲ್ದಾಣಗಳನ್ನು ಹೊಂದಿರಲಿದೆ. ಮುಖ್ಯವಾಗಿ ಬೆಂಗಳೂರಿನಲ್ಲಿ ನಿರ್ಮಾಣವಾಗಲಿರುವ ದೇಶದ 2ನೇ ಅತಿ ದೊಡ್ಡ ಕ್ರೀಡಾಂಗಣಕ್ಕೂ ಸಂಪರ್ಕ ಕಲ್ಪಿಸಲು ಯೋಜಿಸಲಾಗುತ್ತಿದೆ.

ಅಕ್ಟೋಬರ್ ಅಂತ್ಯಕ್ಕೆ ಸರಕಾರಕ್ಕೆ ವರದಿ: ಈ ಹಿನ್ನೆಲೆ ದೆಹಲಿ ಮೂಲದ ಇಂಟ್ರೋಸಾಫ್ಟ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್ ಮಾರ್ಗದ ಸಮಗ್ರ ಅಧ್ಯಯನ ವರದಿಯನ್ನು ಸಿದ್ಧಪಡಿಸಿದ್ದು, ವರದಿಯಲ್ಲಿ ಮಾರ್ಗದ ವಿನ್ಯಾಸ, ಪ್ರಯಾಣಿಕರ ಬೇಡಿಕೆ, ಭೂಸ್ವಾಧೀನ, ಅಂದಾಜು ವೆಚ್ಚ, ನಿಲ್ದಾಣಗಳ ಸಂಖ್ಯೆ ಮತ್ತು ಪ್ರಯಾಣಿಕರ ಸಂಖ್ಯೆಯ ಮುನ್ಸೂಚನೆಗಳ ಮಾಹಿತಿಯನ್ನು ನೀಡಲಾಗಿದೆ. ಈ ವರದಿಯನ್ನು ಅಕ್ಟೋಬರ್ ಅಂತ್ಯದೊಳಗೆ ರಾಜ್ಯ ಸರಕಾರಕ್ಕೆ ಸಲ್ಲಿಸಲು ಬಿಎಂಆರ್‌ಸಿಎಲ್ ಉದ್ದೇಶಿಸಿದೆ. ಅನುಮೋದನೆ ದೊರೆತ ನಂತರ, ವಿವರವಾದ ಯೋಜನಾ ವರದಿ (ಡಿಪಿಆರ್) ತಯಾರಿಸುವ ಕಾರ್ಯ ಆರಂಭವಾಗಲಿದೆ.



ಹೊಸ ಮಾರ್ಗ ಹಾದು ಹೋಗುವ ನಿಲ್ದಾಣ?

ಮೆಟ್ರೋ ರೂಪಿಸಿರುವ ಈ ಮಹತ್ವಾಕಾಂಕ್ಷೆಯ ಯೋಜನೆಯು ಕಾಳೇನ ಅಗ್ರಹಾರದಿಂದ ಕಾಡುಗುಡಿ ಟ್ರೀ ಪಾರ್ಕ್‌ವರೆಗೆ ಸಾಗುತ್ತದೆ. ಇದು ಬನ್ನೇರುಘಟ್ಟ, ಜಿಗಣಿ, ಅತ್ತಿಬೆಲೆ, ಸರ್ಜಾಪುರ, ದೊಮ್ಮಸಂದ್ರ ವೃತ್ತ ಮತ್ತು ವರ್ತೂರು ಕೋಡಿ ಮೂಲಕ ಹಾದುಹೋಗಲಿದ್ದು, ನಗರದ ಪ್ರಮುಖ ಟೆಕ್ ಹಬ್‌ಗಳಿಗೂ ಸಂಪರ್ಕ ಕಲ್ಪಿಸಲಿದೆ. ವಿವರವಾದ ಯೋಜನಾ ವರದಿ (ಡಿಪಿಆರ್) ತಯಾರಿಸಲು ಸಾಮಾನ್ಯವಾಗಿ ಒಂದು ವರ್ಷ ಬೇಕಾಗುತ್ತದೆ. ನಂತರ ರಾಜ್ಯ ಮತ್ತು ಕೇಂದ್ರ ಸರಕಾರದಿಂದ ಅನುಮೋದನೆ ಪಡೆಯಲು ಇನ್ನೂ ಎರಡು ವರ್ಷಗಳ ಕಾಲಾವಕಾಶ ಬೇಕಾಗಬಹುದು. ಎಲ್ಲ ಅನುಮೋದನೆಗಳು ಸರಿಯಾಗಿ ದೊರೆತರೆ, 2029ರ ವೇಳೆಗೆ ನಿರ್ಮಾಣ ಕಾರ್ಯ ಆರಂಭವಾಗಬಹುದು. ನಿರ್ಮಾಣ ಪೂರ್ಣಗೊಳ್ಳಲು 5 ರಿಂದ 10 ವರ್ಷಗಳು ಬೇಕಾಗಬಹುದು ಎಂದು ಅಂದಾಜಿಸಲಾಗಿದೆ.

ಡಿಸೆಂಬರ್ ಬಳಿಕ 12 ನಿಮಿಷಕ್ಕೊಂದು ರೈಲು

ಹಳದಿ ಮೆಟ್ರೋದಲ್ಲಿ ಸದ್ಯ 19 ನಿಮಿಷಕ್ಕೊಂದರಂತೆ ರೈಲು ಸಂಚಾರ

ಬೆಂಗಳೂರು: ನಗರದ ಹಳದಿ ಮೆಟ್ರೋದಲ್ಲಿ ಸದ್ಯ ನಾಲ್ಕು ರೈಲುಗಳು ಸಂಚಾರ ನಡೆಸುತ್ತಿದ್ದು, 19 ನಿಮಿಷಕ್ಕೊಂದರಂತೆ ಸಂಚಾರ ನಡೆಸುತ್ತಿವೆ. ಡಿಸೆಂಬರ್‌ನ ಬಳಿಕ 12 ನಿಮಿಷಗಳಿಗೊಂದರಂತೆ ರೈಲು ಸಂಚಾರ ನಡೆಸಲಿದೆ ಎಂದು ಮೆಟ್ರೋ ಮೂಲಗಳು ತಿಳಿಸಿದೆ.

ಮೊದಲು ಮೂರು ರೈಲುಗಳ ಮೂಲಕ ಬಿಎಂಆರ್‌ಸಿಎಲ್ ಹಳದಿ ಮಾರ್ಗದಲ್ಲಿ ಸಂಚಾರ ಆರಂಭಿಸಿತ್ತು. ಈಗ 5ನೇ ರೈಲು ಹೆಬ್ಬಗೋಡಿ ಡಿಪೋಗೆ ಆಗಮಿಸಿದ್ದು, ಪ್ರಾಯೋಗಿಕ ಸಂಚಾರದ ಬಳಿಕ ನವೆಂಬರ್ ಮೊದಲ ವಾರದಲ್ಲಿ ಮಾರ್ಗದಲ್ಲಿ ಸಂಚಾರ ಆರಂಭಿಸಲಿದೆ. ಒಂದು ರೈಲು 750 ಕಿ.ಮೀ. ಪ್ರಾಯೋಗಿಕ ಸಂಚಾರ ನಡೆಸಿದ ಬಳಿಕ ವಾಣಿಜ್ಯ ಸಂಚಾರಕ್ಕೆ ನಿಯೋಜನೆ ಮಾಡಲಾಗುತ್ತದೆ. ಆದ್ದರಿಂದ ಇನ್ನೂ ಕೆಲವು ದಿನ 5ನೇ ರೈಲು ಪ್ರಾಯೋಗಿಕ ಸಂಚಾರವನ್ನು ಪೂರ್ಣಗೊಳಿಸಬೇಕಿದೆ. 3 ರೈಲುಗಳು ಸಂಚಾರ ನಡೆಸುವಾಗ 25 ನಿಮಿಷಕ್ಕೊಂದು ರೈಲು ಸಂಚಾರ ಮಾಡುತ್ತಿತ್ತು. 5ನೇ ರೈಲು ನವೆಂಬರ್‌ನಲ್ಲಿ ಸೇರ್ಪಡೆಯಾದ ಬಳಿಕ 15 ನಿಮಿಷಕ್ಕೊಂದು ರೈಲು ಸಂಚಾರ ಮಾಡಲಿದೆ. 6ನೇ ರೈಲು ತಯಾರಿಕೆಯೂ ನಡೆದಿದೆ. ಚೀನಾದಿಂದ ಕೋಲ್ಕತ್ತಾದ ಟಿಟಾಗಢ ಬೋಗಿ ಆಗಮಿಸಿದೆ.

ನವೆಂಬರ್ 2ನೇ ವಾರದಲ್ಲಿ 6ನೇ ರೈಲು ಬೆಂಗಳೂರಿಗೆ ಬರುವ ನಿರೀಕ್ಷೆಯಿದ್ದು, ಡಿಸೆಂಬರ್‌ಅಂತ್ಯಕ್ಕೆ ಹಳದಿ ಮಾರ್ಗದಲ್ಲಿ ಸಂಚಾರ ಆರಂಭಿಸಲಿದೆ. 6ನೇ ರೈಲು ಸಂಚಾರ ಆರಂಭಿಸಿದರೆ ಹಳದಿ ಮಾರ್ಗದಲ್ಲಿ 12 ನಿಮಿಷಕ್ಕೊಂದು ರೈಲು ಸಂಚಾರ ಆರಂಭವಾಗಲಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ರೈಲುಗಳ ಸಂಖ್ಯೆ ಕಡಿಮೆ ಇರುವ ಕಾರಣ ನಿರ್ವಹಣೆ ಮಾಡಲು ಸಮಯ ಸಿಗುತ್ತಿಲ್ಲ. ಕಳೆದ ಭಾನುವಾರ ಡಿಪೋಗೆ ಆಗಮಿಸಿದ್ದ ರೈಲಿನಲ್ಲಿ ತಾಂತ್ರಿಕ ಸಮಸ್ಯೆ ಕಾಣಿಸಿಕೊಂಡಿತ್ತು. ರೈಲುಗಳ ಸಂಖ್ಯೆ ಹೆಚ್ಚಾದರೆ ಅವುಗಳ ನಿರ್ವಹಣೆ ಸರಿಯಾಗಿ ಮಾಡಬಹುದಾಗಿದೆ.

ಕೋವಿಡ್ ಕಾರಣದಿಂದ ರೈಲುಗಳ ಆಗಮನಕ್ಕೆ ತಡ

ಕೆಲವು ದಿನಗಳ ಹಿಂದೆ ತಾಂತ್ರಿಕ ಕಾರಣಗಳಿಂದ ಹಳದಿ ಮಾರ್ಗದಲ್ಲಿ 20 ನಿಮಿಷ ರೈಲು ನಿಂತು ಹೋಗಿತು ಹಳದಿ ಮಾರ್ಗದ 7-8ನೇ ರೈಲು ಬೋಗಿಗಳು ಈಗಾಗಲೇ ಚೀನಾದಿಂದ ಹೊರಟಿವೆ. ಜನವರಿ 2026ರ ಬಳಿಕ ಈ ಬೋಗಿಗಳು ಬೆಂಗಳೂರು ನಗರಕ್ಕೆ ಆಗಮಿಸಲಿವೆ. 2019ರಲ್ಲಿ ಬೋಗಿ ಒದಗಿಸಲು ಒಪ್ಪಂದ ಮಾಡಿಕೊಳ್ಳಲಾಗಿತ್ತು. ಆದರೆ ಕೋವಿಡ್ ಸೇರಿ ವಿವಿಧ ಕಾರಣಕ್ಕೆ ಬೋಗಿಗಳ ಆಗಮನ ತಡವಾಗಿದೆ. ಆಗಸ್ಟ್ 11ರಿಂದ ಹಳದಿ ಮಾರ್ಗದಲ್ಲಿ ರೈಲುಗಳ ಸಂಚಾರ ಆರಂಭವಾಗಿದೆ. ಸದ್ಯ ಪ್ರತಿದಿನ 80,000 ಪ್ರಯಾಣಿಕರು ಹಳದಿ ಮಾರ್ಗದಲ್ಲಿ ಸಂಚಾರವನ್ನು ನಡೆಸುತ್ತಿದ್ದಾರೆ. ರೈಲುಗಳ ಸಂಖ್ಯೆ ಹೆಚ್ಚಾದರೆ ಪ್ರಯಾಣಿಕರ ಸಂಖ್ಯೆ 1 ಲಕ್ಷ ದಾಟಲಿದೆ ಎಂದು ಅಧಿಕಾರಿಗಳು ಅಂದಾಜಿಸಿದ್ದಾರೆ.

ದುರಸ್ತಿ ಕಾರ್ಯ ತ್ವರಿತಗೊಳಿಸಿ: ಪೊಮ್ಮಲ ಸುನೀಲ್

ಫೋನ್-ಇನ್ ಕಾರ್ಯಕ್ರಮದಲ್ಲಿ ನಾಗರಿಕರಿಂದ ಅಹವಾಲು ಸ್ವೀಕಾರ

ಬೆಂಗಳೂರು: ಉತ್ತರ ನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಆಯುಕ್ತ ಪೊಮ್ಮಲ ಸುನೀಲ್ ಕುಮಾರ್ ಶುಕ್ರವಾರ ಬೆಳಗ್ಗೆ 7 ಗಂಟೆಗೆ ಅಮೃತಹಳ್ಳಿ ಮುಖ್ಯರಸ್ತೆಯಲ್ಲಿರುವ ಬ್ಯಾಟರಾಯನಪುರ ನಿಯಂತ್ರಣ ಕೊಠಡಿಯಲ್ಲಿ ನಾಗರಿಕರ ಅಹವಾಲುಗಳನ್ನು ಆಲಿಸಲು ಫೋನ್-ಇನ್ ಕಾರ್ಯಕ್ರಮ ನಡೆಸಿದರು.

ಕಾರ್ಯಕ್ರಮದ ವೇಳೆ ರಸ್ತೆಗುಂಡಿ ಮತ್ತು ರಸ್ತೆ ದುರಸ್ತಿ ಕುರಿತಂತೆ ಹಲವು ದೂರಗಳು ಬಂದ ಹಿನ್ನೆಲೆ, ಆಯುಕ್ತರು ಸಂಬಂಧಿಸಿದ ವಿಭಾಗದ ಅಧಿಕಾರಿಗಳಿಗೆ ತಕ್ಷಣ ಕ್ರಮ ಕೈಗೊಂಡು ರಸ್ತೆಗುಂಡಿಗಳನ್ನು ಮುಚ್ಚುವಂತೆ ಹಾಗೂ ಹಾಳಾಗಿರುವ ಮಾರ್ಗಗಳಲ್ಲಿ ಅಗತ್ಯ ದುರಸ್ತಿ ಕಾರ್ಯಗಳನ್ನು ತ್ವರಿತಗೊಳಿಸುವಂತೆ ಸೂಚಿಸಿದರು. ನಾಗರಿಕರು ಸುಗಮವಾಗಿ ಸಂಚರಿಸಲು ರಸ್ತೆ ನಿರ್ವಹಣೆಯನ್ನು ಪ್ರಾಮುಖ್ಯತೆಯಿಂದ ಕೈಗೊಳ್ಳಬೇಕು ಎಂದು ತಿಳಿಸಿದರು.

ಕಾರ್ಯಕ್ರಮದ ವೇಳೆ ಅಸಮರ್ಪಕ ತ್ಯಾಜ್ಯ ನಿರ್ವಹಣೆ ಕುರಿತು ಬಂದ ದೂರುಗಳನ್ನು ಪರಿಗಣಿಸಿ, ಆಯುಕ್ತರು ಸಂಬಂಧಪಟ್ಟ ಅಧಿಕಾರಿಗಳಿಗೆ ತಕ್ಷಣ ಸಮಸ್ಯೆ ನಿವಾರಣೆ ಮಾಡಿ, ಪ್ರತಿಯೊಂದು ವಾರ್ಡ್ ವ್ಯಾಪ್ತಿಯಲ್ಲೂ ನಿಗದಿತ ವೇಳಾಪಟ್ಟಿಯ ಪ್ರಕಾರ ಸಮರ್ಪಕ ತ್ಯಾಜ್ಯ ಸಂಗ್ರಹ ಮತ್ತು ವಿಲೇವಾರಿ ಕ್ರಮಗಳನ್ನು ಕೈಗೊಳ್ಳುವಂತೆ ಸೂಚಿಸಿದರು.

ಫೋನ್ ಇನ್ ಕಾರ್ಯಕ್ರಮದಲ್ಲಿ ಸಾರ್ವಜನಿಕರಿಂದ ಒಟ್ಟು 33 ಕರೆಗಳು ಸ್ವೀಕರಿಸಲ್ಪಟ್ಟಿದ್ದು, 39 ಅಹವಾಲುಗಳು ದಾಖಲೆಯಾಗಿವೆ. ಪ್ರತಿ ಅಹವಾಲಿನ ವಿಷಯವನ್ನು ಪರಿಶೀಲಿಸಿ, ಸಂಬಂಧಪಟ್ಟ ಅಧಿಕಾರಿಗಳ ಮೂಲಕ ಕ್ರಮ ಕೈಗೊಳ್ಳುವಂತೆ ನಿರ್ದೇಶಿಸಲಾಗಿದೆ. ನಾಗರಿಕರ ಅಹವಾಲುಗಳನ್ನು ನೇರವಾಗಿ ಆಲಿಸಿ, ತ್ವರಿತ ಪರಿಹಾರ ಒದಗಿಸುವ ಜೊತೆಗೆ ನಗರ ಅಭಿವೃದ್ಧಿ ಕಾರ್ಯಗಳ ಪ್ರಗತಿಯನ್ನು ನಿರಂತರವಾಗಿ ಅವಲೋಕಿಸಲು ಪ್ರತಿ ಶುಕ್ರವಾರ ಆಯುಕ್ತರಿಂದ ಫೋನ್-ಇನ್ ಕಾರ್ಯಕ್ರಮ ಮುಂದುವರೆಯಲಿದೆ ಎಂದರು.

ಅಹವಾಲುಗಳ ಸಾರಾಂಶ

- ಬೀದಿ ದೀಪಗಳ ಸೂಕ್ತ ನಿರ್ವಹಣೆ ಕುರಿತಂತೆ ದೂರು ಸ್ವೀಕಾರ
- ಹೆಣ್ಣೂರು ಟ್ರಾಫಿಕ್ ಪೊಲೀಸ್ ಸ್ಟೇಷನ್, ಜೆ.ಪಿ ಪಾರ್ಕ್ ಸುತ್ತಲಿನ ಪ್ರದೇಶ ಹಾಗೂ ಅನಂತಪುರ ಗೇಟ್ ಬಳಿ ಪಾದಚಾರಿ ಮಾರ್ಗ ಒತ್ತುವರಿಯಿಂದಾಗಿ ಪಾದಚಾರಿಗಳಿಗೆ ಅಡಚಣೆಯಾಗುತ್ತಿರುವುದರ ಕುರಿತು ದೂರು
- ರಾಚೇನಹಳ್ಳಿ ರೈಲ್ವೆ ಕೆಳ ಸೇತುವೆ ಬಳಿ ಬೀದಿ ದೀಪದ ಅಳವಡಿಕೆಸಲು ಮನವಿ
- ಅಬ್ಬಿಗೆರೆ ಇಂದಿರಾ ಕ್ಯಾಂಟೀನ್ ಹಾಗೂ ಸುಮಂಗಲಿ ಸೇವಾ ಆಶ್ರಮ ರಸ್ತೆ ಸೇರಿದಂತೆ ಇನ್ನಿತರ ಪ್ರದೇಶಗಳಲ್ಲಿ ಬ್ಲ್ಯಾಕ್ ಸ್ಪಾಟ್ ಗಳಿಂದಾಗಿ ನಾಗರಿಕರಿಗೆ ಸಮಸ್ಯೆ
- ಹೆಬ್ಬಾಳ ಕೆಂಪಾಪುರ, ಎಎಮ್‌ಎಸ್ ಲೇಔಟ್ ಹಾಗೂ ಅಗ್ರಹಾರಲ ಲೇಔಟ್ ಸೇರಿದಂತೆ ಇತರೆ ಪ್ರದೇಶಗಳಲ್ಲಿ ರಸ್ತೆ ಗುಂಡಿ ಗಳಿಂದಾಗಿ ಸುಗಮ ಸಂಚಾರಕ್ಕೆ ಅಡಚಣೆ ಬಗ್ಗೆ ದೂರು

ಸ್ವಾತಂತ್ರ್ಯ ಉದ್ಯಾನವನ ಸಮಗ್ರ ಅಭಿವೃದ್ಧಿಗೆ ಕ್ರಮ

ಬೆಂಗಳೂರು: ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಸ್ವಾತಂತ್ರ್ಯ ಉದ್ಯಾನವನವನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವಂತೆ ಬೆಂಗಳೂರು ಕೇಂದ್ರ ನಗರ ಪಾಲಿಕೆ ಆಯುಕ್ತ ರಾಜೇಂದ್ರ ಚೋಳನ್ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಅಧಿಕಾರಿಗಳಿಗೆ ಕೇಂದ್ರ ನಗರ ಪಾಲಿಕೆ ಆಯುಕ್ತ ಚೋಳನ್ ನಿರ್ದೇಶನ

ನಗರದ ಸ್ವಾತಂತ್ರ್ಯ ಉದ್ಯಾನವನಕ್ಕೆ ಶುಕ್ರವಾರ ಬೆಳಗ್ಗೆ ಭೇಟಿ ನೀಡಿ ಪರಿಶೀಲನೆ ನಡೆಸಿ ಮಾತನಾಡಿ, ಪಾರ್ಕ್‌ನಲ್ಲಿ ವಿದ್ಯುತ್ ಸಂಪರ್ಕ, ಕುಡಿಯುವ ನೀರಿನ ವ್ಯವಸ್ಥೆ, ವಾಯುವಿಹಾರಿಗಳ ನಡಿಗೆಗೆ ಸುಗಮ ಮಾರ್ಗ, ಸೂಕ್ತ ಭದ್ರತಾ ವ್ಯವಸ್ಥೆ ಸೇರಿದಂತೆ ಸಮಗ್ರ ಅಭಿವೃದ್ಧಿ ಕ್ರಮ ಕೈಗೊಳ್ಳಬೇಕು. ನಗರದ ಹೃದಯ ಭಾಗದಲ್ಲಿರುವ ಸ್ವಾತಂತ್ರ್ಯ ಉದ್ಯಾನವನದಲ್ಲಿ ವಾಯುವಿಹಾರಕ್ಕೆ ಆಗಮಿಸುವ ನಾಗರಿಕರು, ಮಹಿಳೆಯರು, ಮಕ್ಕಳ ನಡಿಗೆಗೆ ಸುಗಮವಾಗುವಂತೆ ಮಾರ್ಗ ನಿರ್ಮಿಸಬೇಕು ಎಂದರು.

ಉದ್ಯಾನವನಕ್ಕೆ ಆಗಮಿಸುವ ಮಕ್ಕಳ ಆಟೋಟಕ್ಕಾಗಿ ಆಟದ ಉಪಕರಣಗಳೊಂದಿಗೆ ಕಿಡ್ಸ್ ಪಾರ್ಕ್ ನಿರ್ಮಾಣ ಮಾಡಬೇಕು. ಸಾರ್ವಜನಿಕರ ಅನುಕೂಲಕ್ಕಾಗಿ ಶೌಚಾಲಯ ವ್ಯವಸ್ಥೆ ಕಲ್ಪಿಸಬೇಕು ಮತ್ತು ಉದ್ಯಾನವನದಲ್ಲಿ ಸ್ವಚ್ಛತೆ ಕಾಪಾಡಬೇಕು. ಹೆಚ್ಚು ಸಸಿಗಳನ್ನು ನೆಟ್ಟು ಅವುಗಳ ಸರಿಯಾದ ಪೋಷಣೆಗೆ ಕ್ರಮ ವಹಿಸಲು ಹಾಗೂ ಒಣಗಿದ ಹಾಗೂ ಅಪಾಯಕಾರಿ ಮರ ಮತ್ತು ರೆಂಬೆ ಕೊಂಬೆಗಳನ್ನು ತೆರವುಗೊಳಿಸಬೇಕು. ಬಹುಮಹಡಿ ವಾಹನ ನಿಲುಗಡೆ ಕಟ್ಟಡದ ಮೇಲ್ಭಾಗದ ಸ್ಥಳವನ್ನು ವಾಣಿಜ್ಯ ಉದ್ದೇಶ ಬಳಸಿ ಕಂದಾಯ ಉತ್ಪತ್ತಿಗೆ ಕ್ರಮ ವಹಿಸಿ ಎಂದು ಸೂಚನೆ ನೀಡಿದರು. ಈ ವೇಳೆ ಅಭಿವೃದ್ಧಿ ಅಪರ ಆಯುಕ್ತರಾದ ದಲ್ಜಿತ್ ಕುಮಾರ್, ಜಂಟಿ ಆಯುಕ್ತರಾದ ರಂಗನಾಥ್ ಮತ್ತು ಹೇಮಂತ್ ಶರಣ್, ಮುಖ್ಯ ಅಭಿಯಂತರರಾದ ವಿಜಯ್ ಕುಮಾರ್ ಹರಿದಾಸ್ ಮತ್ತು ಸುಗುಣಾ, ಕಾರ್ಯಪಾಲಕ ಅಭಿಯಂತರರು, ಅಧಿಕಾರಿಗಳು ಇದ್ದರು.

ಕಟ್ಟಡ ತ್ಯಾಜ್ಯ ರಸ್ತೆಗೆ ಸುರಿದವರಿಗೆ ದಂಡ ವಿಧಿಸಿ

ಸ್ಥಳ ಪರಿಶೀಲನೆ ಸಂದರ್ಭದಲ್ಲಿ ಕಟ್ಟಡ ನಿರ್ಮಾಣ ಹಂತದಲ್ಲಿರುವ ಕೆಲವು ಕಟ್ಟಡಗಳ ತ್ಯಾಜ್ಯ, ಕಬ್ಬಿಣ, ಜಲ್ಲಿಕಲ್ಲು, ಮರಳು ಇತರೆ ವಸ್ತುಗಳನ್ನು ರಸ್ತೆಯಲ್ಲಿ ಹಾಕಿದ್ದು ಇದರಿಂದ ಸಂಚಾರಕ್ಕೆ ತೊಂದರೆಯಾಗುತ್ತಿರುವ ಕಾರಣ ಅದನ್ನು ಕೂಡಲೇ ತೆರವುಗೊಳಿಸಲು ಹಾಗೂ ಕಟ್ಟಡ ಮಾಲೀಕರಿಗೆ ದಂಡ ವಿಧಿಸಲು ಅಧಿಕಾರಿಗಳಿಗೆ ರಾಜೇಂದ್ರ ಚೋಳನ್ ಸೂಚಿಸಿದರು.

ರಾಜ್ಯ ಸರಕಾರದ ವತಿಯಿಂದ ನಡೆಸಲಾಗುತ್ತಿರುವ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿ ಮಾಜಿ ಸಚಿವ ಅರವಿಂದ ಲಿಂಬಾವಳಿ ಹಾಗೂ ಶಾಸಕಿ ಮಂಜುಳಾ ಅರವಿಂದ ಲಿಂಬಾವಳಿ ಅವರು ತಮ್ಮ ಮನೆಯಲ್ಲಿ ಭಾಗವಹಿಸಿ ಸಮೀಕ್ಷೆದಾರರಿಗೆ ಅಗತ್ಯ ವಿವರಗಳನ್ನು ನೀಡಿದರು.

ಮಂತ್ರಿ ಶಾಪಿಂಗ್ ಫೆಸ್ಟಿವಲ್ 2.0ಕ್ಕೆ ತಾರೆ ಡೇಸಿ ಶಾ ಚಾಲನೆ

ಬೆಂಗಳೂರು: ಪ್ರಮುಖ ಮಾಲ್ ಆಗಿರುವ ಮಂತ್ರಿ ಸ್ಕ್ವೇರ್ ಮಾಲ್, ತನ್ನ ವಾರ್ಷಿಕ ವಿಶೇಷ ಕಾರ್ಯಕ್ರಮದ ಭಾಗವಾಗಿ 'ಮಂತ್ರಿ ಶಾಪಿಂಗ್ ಫೆಸ್ಟಿವಲ್ 2.0' ಅನ್ನು ಆರಂಭಿಸಿದೆ. '101 ಡೇಸ್ ಆಫ್ ಗ್ಲಾಮರ್ - ಗಿಫ್ಟಿಂಗ್ ಗ್ಯಾಲೋರ್' ಎಂಬ ಥೀಮ್ ಹೊಂದಿರುವ ಈ ವರ್ಷದ ಉತ್ಸವ ಆವೃತ್ತಿಯನ್ನು ಮಾಲ್‌ನಲ್ಲಿ ಬಾಲಿವುಡ್ ತಾರೆ ಡೇಸಿ ಶಾ ಅತ್ಯಂತ ಹರ್ಷೋಲ್ಲಾಸದ ವಾತಾವರಣದಲ್ಲಿ ಉದ್ಘಾಟಿಸಿದರು. ಮೊದಲ ಆವೃತ್ತಿಯ ಯಶಸ್ಸಿನ ನಂತರ, ಮುಂದಿನ ವರ್ಷ ಜನವರಿ 26ರವರೆಗೆ ನಡೆಯಲಿರುವ ಮಂತ್ರಿ ಶಾಪಿಂಗ್ ಫೆಸ್ಟಿವಲ್ 2.0 ಇನ್ನೂ ದೊಡ್ಡದಾಗಿ ಮತ್ತು ಹೆಚ್ಚು ಲಾಭದಾಯಕ ವಾಗಲಿದೆ ಎಂದು ಮಾಲ್‌ನ ಸಿಬ್ಬಂದಿ ಅಭಿಪ್ರಾಯ ಪಟ್ಟಿದ್ದಾರೆ. ಖರೀದಿದಾರರು ವಿಶೇಷಹಬ್ಬದ ಕೊಡುಗೆಗಳು, ಆಕರ್ಷಕ ಬಹುಮಾನಗಳನ್ನು ಗೆಲ್ಲುವ ಅವಕಾಶವನ್ನು ಪಡೆಯಲಿದ್ದಾರೆ. 9,999 ಅಥವಾ ಅದಕ್ಕಿಂತ ಹೆಚ್ಚು ಖರೀದಿ ಮಾಡುವ ಗ್ರಾಹಕರು ಸಾಪ್ತಾಹಿಕ ಲಕ್ಕಿ ಡ್ರಾನಲ್ಲಿ ಭಾಗವಹಿಸಬಹುದು, ಅಲ್ಲಿ ಪ್ರತಿ ವಾರದಲ್ಲಿ ಇಬ್ಬರು ಅದೃಷ್ಟವಂತರು ಒಬ್ಬೊಬ್ಬರು ಜಾವಾ ಯೆಜ್ಡಿ ರೋಡ್‌ಸ್ಟಾರ್ ಬೈಕ್ ಗೆದ್ದುಕೊಳ್ಳುವರು ಎಂದು ಸಿಬ್ಬಂದಿಗಳು ತಿಳಿಸಿದ್ದಾರೆ.

ವರುಣನ ಕಾಟಕ್ಕೆ ಪಟಾಕಿ ಮಾರಾಟ ಠುಸ್!

ಹೂಡಿದ ಬಂಡವಾಳಕ್ಕೆ ಸಿಗದ ನಿರೀಕ್ಷಿತ ಲಾಭ | ಪಟಾಕಿ ವ್ಯಾಪಾರಿಗಳು ಕಂಗಾಲು

ಆನೇಕಲ್ ರವಿ ಬೆಂಗಳೂರು

ಆನೇಕಲ್ ತಾಲೂಕಿನ ಗಡಿ ಭಾಗ ಅತ್ತಿಬೆಲೆ ರಾಜ್ಯದಲ್ಲೇ ಅತಿ ಹೆಚ್ಚು ಪಟಾಕಿ ಮಾರಾಟಕ್ಕೆ ಹೆಸರುವಾಸಿಯಾದ ವ್ಯಾಪಾರಿ ಕೇಂದ್ರ. ತಮಿಳುನಾಡಿನಿಂದ ತಯಾರಾಗಿ ಬರುವ ಪಟಾಕಿಗಳು ವಿವಿಧ ಬ್ರಾಂಡ್‌ಗಳ ಲೇಬಲ್‌ನಲ್ಲಿ ಪ್ಯಾಕ್ ಆಗಿ ನೂರಾರು ಟನ್‌ಗಳು ಮಾರಾಟವಾಗುತ್ತಿದೆ. ಆದರೆ ಪಟಾಕಿ ಮೇಲೆ ವ್ಯಾಪಾರಿಗಳು ಹಾಕಿದ ಬಂಡವಾಳವೇ ವಾಪಸಾಗಿಲ್ಲವಂತೆ!

ಕೋಟ್ಯಂತರ ರು.ಗಳ ವಹಿವಾಟು ಕೆಲವೇ ದಿನಗಳಲ್ಲಿ ನಡೆದು ರಾಜ್ಯದ ಬೊಕ್ಕಸಕ್ಕೆ ಅಲ್ಪ ಪ್ರಮಾಣದ ತೆರಿಗೆ ಆದಾಯವನ್ನೂ ತಂದು ಕೊಡುತ್ತದೆ. ಆದರೆ ಈ ಬಾರಿ ದೀಪಾವಳಿ ಝುಡಿ ಮಳೆ 8 ದಿನ ಮೊದಲೇ ಪ್ರಾರಂಭವಾಗಿ ರಾತ್ರಿಯಿಡಿ, ಕೆಲಬಾರಿ ದಿನವಿಡೀ ಸುರಿದು ರಸ್ತೆ ಕೆಸರು ಮಯವಾಗಿ ಗ್ರಾಹಕರಿಗೆ ತೊಂದರೆಯಾಯಿತು. ಪ್ರತಿಬಾರಿಯೂ ನೂರಾರು ಅಂಗಡಿಗಳು ನಾಯಿ ಕೊಡೆಗಳಂತೆ ತೆರೆದು ಮುನ್ನೆಚ್ಚರಿಕೆ ಕ್ರಮಗಳನ್ನು ವಹಿಸದೆ ಪಟಾಕಿ ಮಾರಾಟ ಭರಾಟೆ ಜೋರಾಗಿ ನಡೆಯುತ್ತಿತ್ತು. ಈ ಬಾರಿ ಜಿಲ್ಲಾಡಳಿತ ಎಲ್ಲಾ ಸ್ಥಳೀಯ ಸಂಸ್ಥೆಗಳ ಕಣ್ಗಾವಲಿನಡಿ ನಿಯಮಗಳನ್ನು ಪಾಲಿಸಿರುವುದನ್ನು ಖಚಿತ ಪಡಿಸಿಕೊಂಡಿದೆ. ಬೆರಳೆಣಿಕೆಯಷ್ಟು ಪಟಾಕಿ ಅಂಗಡಿಗಳಿಗೆ(27) ಮಾತ್ರ ಅಧಿಕೃತ ಮಾರಾಟ ಪರವಾನಗಿ ನೀಡಿ ವ್ಯಾಪಾರ ಮಾಡಲು ಅವಕಾಶ ನೀಡಿದೆ.

ನಷ್ಟವಿಲ್ಲ ಲಾಭ ಕಡಿಮೆ: ಬಹುತೇಕ ಅಂಗಡಿ ಮಾಲೀಕರು ತಮ್ಮಲ್ಲಿರುವ ದಾಸ್ತಾನು ಖಾಲಿ ಆಗಲಿಲ್ಲ. ಹೂಡಿದ ಬಂಡವಾಳಕ್ಕೆ ನಿರೀಕ್ಷಿತ ಲಾಭ ಸಿಗಲಿಲ್ಲ ಎಂದರೆ ಕೆಲವರು ಅಸಲು ನೋಡುವುದೇ ಕಷ್ಟ. ದಿನವಿಡೀ ಸುರಿದ ಮಳೆಯ ಕಾರಣ ಹೆಚ್ಚಿನ ಗ್ರಾಹಕರು ಅಂಗಡಿಯತ್ತ ಸುಳಿಯಲಿಲ್ಲ. ಮೂರು, ನಾಲ್ಕು ಚಕ್ರ ವಾಹನದಲ್ಲಿ ಬಂದವರು ಒಂದಷ್ಟು ಕೊಂಡರೆ ದ್ವಿಚಕ್ರ ವಾಹನದಲ್ಲಿ ಬರುತ್ತಿದ್ದವರ ಸಂಖ್ಯೆ ಮಳೆ ಕಾರಣ ಬಹಳ ಕಡಿಮೆ ಇತ್ತು ಎಂದು ಅಲವತ್ತುಕೊಂಡರು.

ಸ್ಥಳೀಯ ಮುಖಂಡ, ಸಗಟು ಹಾಗೂ ಚಿಲ್ಲರೆ ಪಟಾಕಿ ಮಾರಾಟಗಾರ ರಾಮಸ್ವಾಮಿ ಮಾತನಾಡಿ, ಸತತ 2 ತಿಂಗಳ ಮೊದಲಿನಿಂದಲೂ ಓಡಾಟ ಮಾಡಿ ನಾಲ್ಕರು ಕಚೇರಿಗಳನ್ನು ಸುತ್ತಿ ಎನ್‌ಓಸಿ ಪಡೆದು ಎಲ್ಲಾ ರೀತಿಯ ಮುನ್ನೆಚ್ಚರಿಕೆ ಕ್ರಮ ವಹಿಸಿ ಸೇಲ್ಸ್ ಬಾಯ್‌ಗಳನ್ನು ನೇಮಿಸಿಕೊಂಡು ಮಾರಾಟ ಮಾಡಿದರೂ ಸೋರಿಕೆ ತಡೆಯಲು ಸಾಧ್ಯವಾಗಲಿಲ್ಲ. ಸ್ಥಳೀಯರನ್ನು ವಿಶ್ವಾಸಕ್ಕೆ ಪಡೆದು ಮಾರಾಟ ಮಾಡಬೇಕಾದ ಸಂದರ್ಭ ಇದ್ದು ಲಾಭ ಕಡಿಮೆಯಾಗಿದೆ ಎಂದರು.

ಆದೇಶದಲ್ಲೇ ಉಳಿದ ಹಸಿರು ಪಟಾಕಿ

ಸರಕಾರ ಹಸಿರು ಪಟಾಕಿ ಮಾರಾಟ ಕಡ್ಡಾಯ ಎಂದು ಆದೇಶ ಹೊರಡಿಸಿದ್ದು ನಾಮ್ ಕಾ ವಾಸ್ತೆ ಅಂಗಡಿ ಮುಂದೆ ಕೆಲ ಮಾದರಿಯ ಹಸಿರು ಪಟಾಕಿ ಪೇರಿಸಿಟ್ಟಿದ್ದರು. ಗ್ರಾಹಕರೂ ಹೆಚ್ಚಿನ ಮಟ್ಟದಲ್ಲಿ ಕೊಳ್ಳಲು ಆಸಕ್ತಿ ವಹಿಸಲಿಲ್ಲ. ಅಂಗಡಿಯವರೂ ಮಾರಾಟ ಮಾಡಲು ಉತ್ಸಾಹ ವಹಿಸಲಿಲ್ಲ. ಬೆಸ್ಕಾಂನವರು ಉದಾರವಾಗಿ ನೀಡಿದ ವಿದ್ಯುತ್ ಕಾರಣ ಎಲ್ಲಾ ಅಂಗಡಿಗಳೂ ವಿದ್ಯುತ್ ದೀಪಗಳಿಂದ ಝಗ ಮಗಿಸುತ್ತಿದ್ದವು. ಅಗ್ನಿ ಶ್ಯಾಮಕ ವಾಹನಗಳು, ಆಂಬುಲೆನ್ಸ್‌ಗಳು ಆಯಕಟ್ಟು ಸ್ಥಳದಲ್ಲಿದ್ದವು ಒಟ್ಟಾರೆ ಪಟಾಕಿ ಭರಾಟೆಗೆ ತೆರೆ ಬಿದ್ದಿತು.

ಬಹಳ ವರ್ಷಗಳಿಂದ ಪಟಾಕಿ ವ್ಯಾಪಾರ ಮಾಡುತ್ತಿದ್ದು, ಈ ಬಾರಿ ಶೇ. 50%ಕ್ಕೂ ಹೆಚ್ಚು ದಾಸ್ತಾನು ಉಳಿದಿದೆ. ಅತ್ತಿಬೆಲೆ ಇಂದ ಈಚೆಗೆ ಪಟಾಕಿ ಮಳಿಗೆ ಇಟ್ಟು ಒಳ್ಳೆ ಕಂಪನಿಗಳ ಮಾಲನ್ನು ಸ್ಪರ್ಧಾತ್ಮಕ ಬೆಲೆಯಲ್ಲಿ ಮಾರಾಟ ಮಾಡಿದರೂ ಅತ್ತಿಬೆಲೆ ಗಡಿ ದಾಟಿ ಪಟಾಕಿ ಕೊಳ್ಳುವ ಮನೋಭಾವದವರೇ ಹೆಚ್ಚು. ಹಾಗಾಗಿ ಈ ಬಾರಿ ಲಾಭ ಇಲ್ಲದ ಕಾರಣ ನಷ್ಟವೇ ಹೆಚ್ಚು.

-**ಮೋಹನ್** ರಾಜಾಜಿನಗರ ಪತ್ರಿಕಾ ವಿತರಕ

ಜಿಬಿಎ ವ್ಯಾಪ್ತಿ ಹೊರವಲಯ ಪ್ರದೇಶಗಳ ಸಮೀಕ್ಷೆಗೆ ಸೂಚನೆ

ನಗರ ಬಿ ಖಾತೆ ಎ ಖಾತಾಗೆ ಪರಿವರ್ತನೆ ತಯಾರಿ: ಡಿಕೆ

ಬೆಂಗಳೂರು: ಭವಿಷ್ಯದಲ್ಲಿ ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಗೆ ಸೇರ್ಪಡೆ ಮಾಡಿಕೊಳ್ಳಬೇಕಾದ ಬೆಂಗಳೂರು ಹೊರವಲಯದ ಪ್ರದೇಶಗಳ ಸಮೀಕ್ಷೆ ನಡೆಸಲು ಸೂಚಿಸಲಾಗಿದೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು.

ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯ ಸ್ಥಳೀಯ ಸಂಸ್ಥೆಗಳ ಪ್ರಗತಿ ಪರಿಶೀಲನೆ ಸಭೆ ಬಳಿಕ ಮಾತನಾಡಿದ ಅವರು, ಬೆಂಗಳೂರು ನಗರ ಜಿಲ್ಲೆಯ 12 ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳ ಸಭೆ ನಡೆಸಲಾಯಿತು. ಭವಿಷ್ಯದಲ್ಲಿ ಬೆಂಗಳೂರು ಬೆಳೆಯಲಿದೆ. ಬಿಎಂಆರ್‌ಡಿಎ ವ್ಯಾಪ್ತಿಯ ಪ್ರದೇಶಗಳು ಇಂದಲ್ಲ ನಾಳೆ ಬೆಂಗಳೂರು ನಗರದ ಭಾಗವಾಗಲಿವೆ. ನಗರ ಪ್ರದಕ್ಷಿಣೆ ಮಾಡಿ ಅವಲೋಕನ ನಡೆಸಿದೆ. ಈಗಿನಿಂದಲೇ ರಸ್ತೆ ಅಗಲೀಕರಣ ಮತ್ತಿತರ ಮೂಲಸೌಕರ್ಯಗಳ ಅಭಿವೃದ್ಧಿ ಮಾಡಬೇಕಿದೆ. ಇದಕ್ಕೆ ಸೂಕ್ತ ಯೋಜನೆ ಮಾಡಬೇಕಿದೆ. ಸಿಎಂಸಿ, ಪಪಂ ಸೇರಿ ಒಂದಷ್ಟು ಪ್ರದೇಶಗಳಲ್ಲಿ ರಸ್ತೆಗಳು ಕಿರಿದಾಗಿವೆ. ಭವಿಷ್ಯದಲ್ಲಿ ಕಷ್ಟಪಡುವ ಬದಲು ಈಗಲೇ ಲೋಕೋಪಯೋಗಿ, ನಗರ ಯೋಜನೆ ಇಲಾಖೆಯವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮಾಸ್ಟರ್ ಪ್ಲಾನ್ ಸಿದ್ಧಪಡಿಸಿ ಎಂದು ಸೂಚನೆ ನೀಡಿದ್ದೇನೆ ಎಂದರು.

ಹೊರವಲಯ ಗಡಿಭಾಗದ ಒಂದಷ್ಟು ಪಂಚಾಯತಿಗಳು, ಮುನ್ಸಿಪಾಲಿಟಿಗಳು ಭವಿಷ್ಯದಲ್ಲಿ ಬೆಂಗಳೂರು ನಗರದ ಒಳಗೆ ಸೇರುತ್ತವೆಯಾದ್ದರಿಂದ ಈಗಿನಿಂದಲೇ ಮಾನಸಿಕವಾಗಿ ತಯಾರು ಮಾಡಲಾಗುತ್ತಿದೆ. ಈ ಪ್ರದೇಶಗಳಲ್ಲಿಯೂ ಸಹ ಬಿ ಖಾತೆಯಿಂದ ಎ ಖಾತೆ ಪರಿವರ್ತನೆ ವ್ಯವಸ್ಥೆಗೆ ತಯಾರಿ ನಡೆಸಲು ಸೂಚನೆ ನೀಡಿದ್ದೇನೆ. ಬೆಂಗಳೂರು ನಗರದಲ್ಲಿ ಆಸ್ತಿ ಮೌಲ್ಯ ಆಧಾರಿತ ತೆರಿಗೆ ಸಂಗ್ರಹದಂತೆ ಈ ಭಾಗದಲ್ಲಿಯೂ ಸಹ ತೆರಿಗೆ ಸಂಗ್ರಹದಲ್ಲಿ ಏಕರೂಪತೆ ತರಲು ಸೂಚಿಸಿದ್ದೇನೆ. ಈಗಿನಿಂದಲೇ ಅಕ್ರಮ ಕಟ್ಟಡಗಳ ನಿರ್ಮಾಣಕ್ಕೆ ಕಡಿವಾಣ ಹಾಕಬೇಕು ಎಂದು ಸೂಚನೆ ನೀಡಿದ್ದೇನೆ. ಏಕೆಂದರೆ ಮುಂದೆ ನಾವೇ ನೀರು ಮತ್ತಿತರ ಮೂಲಸೌಕರ್ಯಗಳನ್ನು ನೀಡಬೇಕಾಗುತ್ತದೆ. ಆದ ಕಾರಣ ಅಕ್ರಮ ಕಟ್ಟಡ, ಬಡಾವಣೆ ನಿರ್ಮಾಣ ಯೋಜನೆಗಳಿಗೆ ಕಡಿವಾಣ ಹಾಕಬೇಕಿದೆ. ಕಾನೂನಿನ ಪ್ರಕಾರ ನಡೆದುಕೊಳ್ಳಬೇಕು ಎಂದು ಸೂಚನೆ ನೀಡಿದ್ದೇನೆ ಎಂದು ತಿಳಿಸಿದರು.

ಬೆಂಗಳೂರು ನಗರ ಮಾದರಿಯಲ್ಲಿಯೇ ಇಲ್ಲಿಯೂ ಎಲ್ಲ ಆಸ್ತಿ ದಾಖಲೆಗಳನ್ನು ಈಗಿನಿಂದಲೇ ಡಿಜಿಟಲೀಕರಣ ಮಾಡಲಾಗು ವುದು. 110 ಹಳ್ಳಿಗಳಿಗೆ ಮೂಲಸೌಕರ್ಯಗಳನ್ನು ಒದಗಿಸಲಾಗುತ್ತಿದೆ. ಹೀಗಾಗಿ ಭವಿಷ್ಯದಲ್ಲಿ ಸೇರ್ಪಡೆಯಾಗುವ ಪ್ರದೇಶಗಳಲ್ಲಿ ನಾಗರಿಕ ಪ್ರಜ್ಞೆ ಮೂಡಿಸಬೇಕಿದೆ. ನಗರ ವ್ಯಾಪ್ತಿಯಲ್ಲಿ ಬದುಕಲು ಬೇಕಾದ ರೀತಿ-ನೀತಿಗಳ ಬಗ್ಗೆ ಮಾನಸಿಕವಾಗಿ ತಯಾರು ಮಾಡಲಾಗುತ್ತದೆ. ಕಸವನ್ನು ಎಲ್ಲೆಂದರಲ್ಲಿ ಬಿಸಾಡಲಾಗುತ್ತಿದೆ. ಬೆಂಗಳೂರು ನಗರದ ಮಾದರಿಯಲ್ಲಿ ಕಸ ಸಂಗ್ರಹ ವ್ಯವಸ್ಥೆ ಬಗ್ಗೆಯೂ ಸೂಚನೆ ನೀಡಲಾಗಿದೆ.

- **ಡಿ.ಕೆ.ಶಿವಕುಮಾರ್** ಉಪಮುಖ್ಯಮಂತ್ರಿ

ಸಮಾಚಾರ ಸಣ್ಣದಲ್ಲ

ಅಪ್ರಾಪ್ತೆಗೆ ಲೈಂಗಿಕ ದೌರ್ಜನ್ಯ: ನಾಲ್ವರ ಸೆರೆ

ಹಾವೇರಿ: ಇನ್‌ಸ್ಟಾಗ್ರಾಮ್ ಮೂಲಕ ಪರಿಚಯವಾದ ಅಪ್ರಾಪ್ತೆ ಮೇಲೆ ಸರಣಿ ಅತ್ಯಾಚಾರ ಎಸಗಿರುವ ಪ್ರಕರಣಕ್ಕೆ ಸಂಬಂಧಿಸಿ ಪೊಲೀಸರು ನಾಲ್ವರನ್ನು ಬಂಧಿಸಿರುವ ಘಟನೆ ಹಾವೇರಿ ಜಿಲ್ಲೆಯ ಹಾನಗಲ್ಲ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬೆಳಕಿಗೆ ಬಂದಿದೆ. ಉದಯ, ಕಿಶನ್, ಆಕಾಶ್ ಮತ್ತು ಚಂದ್ರು ಬಂಧಿತ ಆರೋಪಿಗಳಾಗಿದ್ದು, ಇದರಲ್ಲಿ ಎ1 ಉದಯ, ಎ2 ಕಿಶನ್, ಎ3 ಆಕಾಶ್ ಎ4 ಚಂದ್ರು ಆಗಿದ್ದಾರೆ. ಬಾಲಕಿ ಎಂಟು ತಿಂಗಳ ಗರ್ಭಿಣಿಯಾಗಿದ್ದು ಇದರಿಂದ ಆಘಾತಗೊಂಡ ಮನೆಮಂದಿ ಬಾಲಕಿಯನ್ನು ವಿಚಾರಣೆ ನಡೆಸಿದ ವೇಳೆ ಉದಯ ಹಾಗೂ ಕಿಶನ್ ಸೇರಿ ಹಲವು ಬಾರಿ ಅತ್ಯಾಚಾರ ಎಸಗಿರುವ ವಿಚಾರ ಹೇಳಿಕೊಂಡಿದ್ದಾಳೆ. ಘಟನೆ ಸಂಬಂಧ ಹಾನಗಲ್ ಪೊಲೀಸ್ ಠಾಣೆಯಲ್ಲಿ ಪೋಕ್ಸೋ ಪ್ರಕರಣ ದಾಖಲಿಸಲಾಗಿದ್ದು, ಇದೀಗ ಪೊಲೀಸರು ನಾಲ್ವರನ್ನು ಬಂಧಿಸಿ ವಿಚಾರಣೆ ನಡೆಸುತ್ತಿದ್ದಾರೆ.

ಆಸ್ತಿ ವಿಚಾರಕ್ಕೆ ಮಗನ ಮೇಲೆ ಫೈರಿಂಗ್

ದೊಡ್ಡಬಳ್ಳಾಪುರ: ಆಸ್ತಿ ವಿಚಾರಕ್ಕೆ ಮಗನನ್ನು ತಂದೆ ಗನ್‌ನಿಂದ ಶೂಟ್ ಮಾಡಿರುವ ಘಟನೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ತಾಲೂಕಿನ ಮರಳೇನಹಳ್ಳಿಯಲ್ಲಿ ನಡೆದಿದೆ.

ಹರೀಶ್ (30) ಎಂಬುವವರ ತಲೆಗೆ ಗಂಭೀರ ಗಾಯವಾಗಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ. ತಂದೆ ಸುರೇಶ್ ಮದ್ಯ ಸೇವಿಸಿ ಜಮೀನು ಮಾರಾಟ ಮಾಡಿದ್ದನು ಎನ್ನಲಾಗಿದೆ. ಇದನ್ನು ಪ್ರಶ್ನಿಸಿ ಮಗ ಹರೀಶ್ ಜತೆ ಗಲಾಟೆ ಮಾಡಿದ್ದ. ಗಲಾಟೆ ವಿಕೋಪಕ್ಕೆ ತಿರುಗಿ ಫೈರಿಂಗ್ ಮಾಡಲಾಗಿದೆ. ಈ ಸಂಬಂಧ ದೊಡ್ಡಬಳ್ಳಾಪುರ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಗುಂಡು ಹಾರಿಸಿ ಸುರೇಶ್ ಮನೆಯಿಂದ ಪರಾರಿಯಾಗಿದ್ದು, ಪೊಲೀಸರು ಹುಡುಕಾಟ ನಡೆಸಿದ್ದಾರೆ.

ಯಾರೇ ಮಾತನಾಡಿದರೂ ನೋಟಿಸ್ ನೀಡಬೇಕಲ್ಲವೇ ಎಂದ ಕೈ ನಾಯಕರು | ಡಿಕೆಶಿ ಬೆನ್ನಿಗೆ ನಿಂತ ಕುಣಿಗಲ್ ಶಾಸಕ ರಂಗನಾಥ್

ಉತ್ತರಾಧಿಕಾರಿ ಹೇಳಿಕೆ ಬೆನ್ನಲ್ಲೇ ಶುರುವಾದ ಭಿನ್ನಧ್ವನಿ

ಬೆಂಗಳೂರು: ಸಿದ್ದರಾಮಯ್ಯ ಅವರ ಉತ್ತರಾಧಿಕಾರಿ ಸತೀಶ್ ಜಾರಕಿಹೊಳಿ ಎನ್ನುವ ಹೇಳಿಕೆ ಇದೀಗ ತೀವ್ರ ಚರ್ಚೆಗೆ ಗ್ರಾಸವಾಗಿದ್ದು, ಈ ಹಿಂದೆ ಅಧಿಕಾರ ಹಂಚಿಕೆಗೆ ಸಂಬಂಧಿಸಿದಂತೆ ಮಾತನಾಡಿದಾಗ ನೋಟಿಸ್ ಜಾರಿಗೊಳಿಸಿದಂತೆ ಈಗಲೂ ಜಾರಿಗೊಳಿಸಬೇಕು ಎನ್ನುವ ಆಗ್ರಹ ಶುರುವಾಗಿದೆ.

ಸಿದ್ದರಾಮಯ್ಯ ಪುತ್ರ ಯತೀಂದ್ರ ಬೆಳಗಾವಿಯಲ್ಲಿ ನೀಡಿದ ಹೇಳಿಕೆಯಿಂದ ರಾಜ್ಯ ಕಾಂಗ್ರೆಸ್‌ನಲ್ಲಿ ಹಲವು ಗೊಂದಲಗಳು ಶುರುವಾಗಿದೆ. ಈ ಹಿಂದೆ ಪವರ್ ಶೇರಿಂಗ್ ವಿಷಯವಾಗಿ ಮಾತನಾಡಿದ್ದ ಶಾಸಕ ಶಿವಗಂಗಾ, ಇಕ್ಬಾಲ್ ಹುಸೇನ್, ರಂಗನಾಥ್ ಸೇರಿದಂತೆ ಹಲವರಿಗೆ ಕೆಪಿಸಿಸಿ ಶಿಸ್ತು ಸಮಿತಿ ನೋಟಿಸ್ ನೀಡಿತ್ತು. ಇದೀಗ ಯತೀಂದ್ರ ಅವರು ಉತ್ತರಾಧಿಕಾರಿ ಸಂಬಂಧಿಸಿದಂತೆ ಹೇಳಿಕೆ ನೀಡಿದ್ದಾರೆ. ಇದೀಗ ಇದನ್ನು ಪಕ್ಷದ ಶಿಸ್ತಿನ ಉಲ್ಲಂಘನೆ ಎಂದು ಭಾವಿಸಿ, ಅವರಿಗೆ ನೋಟಿಸ್ ನೀಡಲಾಗುವುದೇ ಎನ್ನುವ ಪ್ರಶ್ನೆಯನ್ನು ಹಲವು ಕಾಂಗ್ರೆಸಿಗರು ಎತ್ತಿದ್ದಾರೆ.

ಇದಿಷ್ಟೇ ಅಲ್ಲದೇ ಕೆಲ ದಿನಗಳಿಂದ ತಣ್ಣಗಾಗಿದ್ದ ಪವರ್ ಶೇರಿಂಗ್ ವಿವಾದ ಇದೀಗ ಮತ್ತೆ ಮುನ್ನಲೆಗೆ ಬಂದಿದ್ದು, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಆಪ್ತ ಕುಣಿಗಲ್ ಶಾಸಕ ರಂಗನಾಥ್ ಅವರು ಡಿಕೆಶಿ ಮುಖ್ಯಮಂತ್ರಿಯಾಗಲೇಬೇಕು ಎಂದು ಆಗ್ರಹಿಸಿದ್ದಾರೆ.

ಈ ಬಗ್ಗೆ ಮಾತನಾಡಿರುವ ಅವರು, ಡಿ.ಕೆ. ಶಿವಕುಮಾರ್ ಅವರು ಕಷ್ಟಪಟ್ಟು ಪಕ್ಷ ಸಂಘಟನೆ ಮಾಡಿದ್ದಾರೆ. ಒಂದಲ್ಲ ಒಂದು ದಿನ ಅವರು ಮುಖ್ಯಮಂತ್ರಿಯಾಗಲೇಬೇಕು ಎಂಬುದು ನಮ್ಮೆಲ್ಲರ ಅಭಿಪ್ರಾಯ. ಆದರೆ ಇಂತಹದ್ದೇ ಸಮಯದಲ್ಲಿ ಮುಖ್ಯಮಂತ್ರಿಯಾಗಬೇಕೆಂದು ನಾವು ಹೇಳುತ್ತಿಲ್ಲ, ನವೆಂಬರ್‌ನಲ್ಲಿ ಬದಲಾವಣೆಯ ಕ್ರಾಂತಿಯಾಗಲಿದೆ. ಅದರ ಬಗ್ಗೆ ಡಿಸೆಂಬರ್‌ನಲ್ಲಿ ನಡೆಯುವ ಬೆಳಗಾವಿಯ ಚಳಿಗಾಲದ ಅಧಿವೇಶನದಲ್ಲಿ ಚರ್ಚೆ ಮಾಡುತ್ತೇವೆ ಎಂದಿದ್ದಾರೆ.

ಮುಖ್ಯಮಂತ್ರಿ ಅವರ ಪುತ್ರ ಡಾ. ಯತೀಂದ್ರ ಸಿದ್ದರಾಮಯ್ಯ ಅವರ ಹೇಳಿಕೆಯಿಂದ ಯಾವುದೇ ರೀತಿಯ ಗೊಂದಲಗಳಾಗುವುದಿಲ್ಲ. ರಾಜ್ಯ ರಾಜಕಾರಣದ ಬಗ್ಗೆ ಹೈಕಮಾಂಡ್ ತೆಗೆದುಕೊಂಡಿರುವ ನಿರ್ಧಾರ ಎಲ್ಲರಿಗೂ ಗೊತ್ತಿದೆ. ಮುಂದಿನ ದಿನಗಳಲ್ಲೂ ಸೂಕ್ತ ಸಮಯಕ್ಕೆ ಅಗತ್ಯ ನಿರ್ಧಾರ ತೆಗೆದುಕೊಳ್ಳಲಿದೆ. ಕಾಂಗ್ರೆಸ್ ಪಕ್ಷ ಉತ್ತಮವಾಗಿದೆ ಮತ್ತು ಸದೃಢವಾಗಿದೆ ಅನಗತ್ಯವಾಗಿ ಗೊಂದಲ ಮೂಡಿಸುವ ಪ್ರಯತ್ನಗಳು ಯಶಸ್ವಿಯಾಗುವುದಿಲ್ಲ ಎಂದರು.

ಯತೀಂದ್ರ ಮಾತಲ್ಲಿ ತಪ್ಪೇನಿಲ್ಲ : ಪರಂ

ಇನ್ನು ಗೃಹ ಸಚಿವ ಡಾ.ಜಿ. ಪರಮೇಶ್ವರ ಮಾತನಾಡಿದ್ದು, ವಿಧಾನ ಪರಿಷತ್ ಸದಸ್ಯ ಡಾ. ಯತೀಂದ್ರ ಸಿದ್ದರಾಮಯ್ಯ ಅವರು ಹೇಳಿಕೆ ವೈಯಕ್ತಿಕವಾಗಿದ್ದು, ಅವರ ಹೇಳಿಕೆಯಲ್ಲಿ ತಪ್ಪಿಲ್ಲ ಎಂದು ಸಮರ್ಥಿಸಿಕೊಂಡಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಚಿವ ಸತೀಶ್ ಜಾರಕಿಹೊಳಿ ಹೆಸರು ಪ್ರಸ್ತಾಪಿಸಿ, ಮುಂದೆ ಅಹಿಂದ ನಾಯಕ ಎಂದು ಹೇಳಿದ್ದಾರೆ. ಅವರು ಎರಡೂವರೆ ವರ್ಷಗಳ ನಂತರ ಆಗಬಹುದು. ನಾಳೆಯೇ ಜಾರಕಿಹೊಳಿ ಅವರು ಸಿಎಂ ಆಗುತ್ತಾರೆ ಎಂದೇನು ಹೇಳಿಲ್ಲ. 2028ಕ್ಕೆ ಸಿಎಂ ಆಗಬಹುದು ಎಂದು ಹೇಳಿದ್ದಾರೆ. ಸತೀಶ್ ನಾನು ಸಿಎಂ ಆಕಾಂಕ್ಷಿ ಅಲ್ಲ ಅಂದಿದ್ದಾರೆ. ಆ ದೃಷ್ಟಿಯಿಂದ ಯತೀಂದ್ರ ಹೇಳಿರಬಹುದು. ಹೈಕಮಾಂಡ್‌ಗಿಂತ ಯತೀಂದ್ರ ಪವರ್ ಫುಲ್ ಅಂತೇನೂ ಇಲ್ಲ. ಆದರೆ, ಯತೀಂದ್ರ ಅವರ ಮಾತಿನಲ್ಲಿ ತಪ್ಪೇನೂ ಇಲ್ಲ. ಇದು ಮುಖ್ಯಮಂತ್ರಿಯವರ ಹೇಳಿಕೆಯಲ್ಲ. ನಮಗೂ ಸತೀಶ್ ಜಾರಕಿಹೊಳಿ ಸಿಎಂ ಆಗಬೇಕು ಎಂಬುದು ಇದೆ ಎಂದು ಅವರು ತಿಳಿಸಿದರು.

ಪಕ್ಷದಲ್ಲಿ ನಾನು ಸಾಮಾನ್ಯ ಕಾರ್ಯಕರ್ತ. ಯಾರಿಗೂ ಬುದ್ಧಿ ಹೇಳುವಷ್ಟು ದೊಡ್ಡವನಲ್ಲ. ಆದರೆ ನಮ್ಮ ಹೇಳಿಕೆಗಳಿಂದ ಕಾಂಗ್ರೆಸ್ ಪಕ್ಷಕ್ಕೆ ನಷ್ಟವಾಗಬಾರದು ಎಂಬ ಎಚ್ಚರಿಕೆ ಎಲ್ಲರಿಗೂ ಅಗತ್ಯ. 2028ಕ್ಕೆ ಕಾಂಗ್ರೆಸ್ ಪಕ್ಷವನ್ನು ಮರಳಿ ಅಧಿಕಾರಕ್ಕೆ ತರುವುದು ನಮ್ಮೆಲ್ಲರ ಆದ್ಯತೆಯಾಗಿದೆ. ನಾನು ನನ್ನ ಮಿತಿಯಲ್ಲಿದ್ದೇನೆ. ಹಗುರವಾದ ಹೇಳಿಕೆಗಳನ್ನು ಜನ ಬಯಸುವುದಿಲ್ಲ. ಪಕ್ಷದ ಅಧ್ಯಕ್ಷರಾದ ಡಿ.ಕೆ. ಶಿವಕುಮಾರ್ ಕಟ್ಟಪ್ಪಣೆಯಿಂದಾಗಿ ನಾನು ಯಾವುದೇ ಪ್ರತಿಕ್ರಿಯೆ ನೀಡುವುದಿಲ್ಲ.

-**ರಂಗನಾಥ್**, ಕುಣಿಗಲ್ ಶಾಸಕ

ಹಣ ನೀಡದ್ದಕ್ಕೆ ಹೆಣವಾದ ಸೆಕ್ಯೂರಿಟಿ

ಕೋಲಾರ: ಹಣಕ್ಕಾಗಿ ಸಹೋದ್ಯೋಗಿ ಸೆಕ್ಯೂರಿಟಿ ಗಾರ್ಡ್ ಕೊಲೆ ಮಾಡಿರುವ ಘಟನೆ ಶುಕ್ರವಾರ 10 ಗಂಟೆಯಲ್ಲಿ ನಡೆದಿದೆ.

ನರಸಾಪುರ ಕೈಗಾರಿಕಾ ಪ್ರದೇಶದ ಕಂಪನಿಯ ಸೆಕ್ಯೂರಿಟಿ ಗಾರ್ಡ್ ಖಾಜಿಕಲ್ಲಹಳ್ಳಿ ಪಿಳ್ಳಪ್ಪ(60) ಕೊಲೆಯಾದವರು. ಬಿಹಾರ ಮೂಲದ ಟಿಂಕು ಕುಮಾರ್ (30) ಬಂಧಿತ ಆರೋಪಿ. ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ವೇಳೆ ಕೊಲೆ ನಡೆದಿದೆ. ಕುಡಿಯಲು ಹಣ ಕೇಳಿದ ಆರೋಪಿಯನ್ನು ಗದರಿ ಕಳಿಸಿದ ಪಿಳ್ಳಪ್ಪನನ್ನು ಚಾಕುವಿನಿಂದ ಚುಚ್ಚಿ ಕೊಲೆ ಮಾಡಲಾಗಿದೆ. ಆರೋಪಿ ಟಿಂಕು ಕುಮಾರ್‌ನನ್ನು ವೇಮಗಲ್ ಪೊಲೀಸರು ಬಂಧಿಸಿದ್ದು ತನಿಖೆ ಮುಂದುವರೆದಿದೆ. ಕೊಲೆ ನಂತರ ಪಿಳ್ಳಪ್ಪನ ಮೊಬೈಲ್ ಕಸಿದುಕೊಂಡು ಕಂಪನಿ ಮ್ಯಾನೇಜರ್‌ಗೆ ಕರೆ ಮಾಡಿ 5 ಲಕ್ಷ ರು.ಬೇಡಿಕೆ ಇರಿಸಿದ್ದು ಕೊಡದಿದ್ದರೆ ಕೊಲೆ ಮಾಡುವುದಾಗಿ ಹೆದರಿಸಿದ್ದರ ಸಂಬಂಧ ಮತ್ತೊಂದು ದೂರು ನೀಡಲಾಗಿದೆ.

ಪರಿಸರ, ಅಗ್ನಿಶಾಮಕ ಇಲಾಖೆಯಲ್ಲಿಯೇ ವಿಳಂಬ | ನ್ಯಾಯಾಲಯದ ತೀರ್ಪಿನ ಕುಂಟುನೆಪ ಹೇಳಬೇಡಿ: ಸಿಎಂ

ಕೈಗಾರಿಕಾ ಸ್ನೇಹಿ ವಾತಾವರಣ ಸೃಷ್ಟಿಸಲು ಕ್ರಮವಹಿಸಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕೈಗಾರಿಕಾ ಸ್ನೇಹಿ ವಾತಾವರಣ ನಿರ್ಮಿಸುವ ಸಲುವಾಗಿ ಅಧಿಕಾರಿಗಳು ನ್ಯಾಯಾಲಯಗಳ ತೀರ್ಪಿನ ಕುಂಟು ನೆಪ ಹೇಳಿದರೆ ಸಹಿಸುವುದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಎಚ್ಚರಿಸಿದ್ದಾರೆ.

ವಿಧಾನಸೌಧ ಸಭಾಂಗಣದಲ್ಲಿ ನಡೆದ ಬಂಡವಾಳ ಹೂಡಿಕೆ ಆಕರ್ಷಣೆ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದ ಅವರು, ರಾಜ್ಯದಲ್ಲಿ ಬಂಡವಾಳ ಹೂಡಿಕೆದಾರ ಸ್ನೇಹಿ ವಾತಾವರಣವನ್ನು ಇನ್ನಷ್ಟು ಉತ್ತಮಪಡಿಸಬೇಕು. ಇದಕ್ಕಾಗಿ ಭೂ ಬಳಕೆ ಬದಲಾವಣೆ ಪ್ರಕ್ರಿಯೆ ಸೇರಿದಂತೆ ವಿವಿಧ ಎನ್‌ಒಸಿಗಳ ನೀಡಿಕೆಯ ಕಾಲಮಿತಿಯನ್ನು ಕಡಿಮೆ ಮಾಡಬೇಕು. ಕಾಲಮಿತಿಯನ್ನು ಕಡಿಮೆ ಮಾಡುವ ಬಗ್ಗೆ ವಿವರವಾದ ಪ್ರಸ್ತಾವನೆಯನ್ನು ಸಲ್ಲಿಸಬೇಕು. ಯಾವುದೇ ಕಾರಣಕ್ಕೂ ವಿಳಂಬಕ್ಕೆ ಅವಕಾಶ ನೀಡಬಾರದು ಎಂದು ಹೇಳಿದ್ದಾರೆ.

ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಅಗ್ನಿಶಾಮಕ ಇಲಾಖೆ ಅನುಮೋದನೆ ವಿಳಂಬವಾಗುತ್ತಿದ್ದು, ಇದನ್ನು ತ್ವರಿತಗೊಳಿಸಬೇಕು. ಇದಕ್ಕಾಗಿ ಮಂಡಳಿಯ ನಿಯಮಾವಳಿಯಲ್ಲಿ ಅಗತ್ಯ ಬದಲಾವಣೆಗಳನ್ನು ಮಾಡಬೇಕು. ಕೈಗಾರಿಕೆಗಳಿಗೆ ರಸ್ತೆ, ನೀರು, ವಿದ್ಯುತ್ ಸೇರಿದಂತೆ ಅಗತ್ಯ ಮೂಲಸೌಲಭ್ಯಗಳನ್ನು ಒದಗಿಸುವ ಕುರಿತಾಗಿ ಸಂಬಂಧಪಟ್ಟ ಇಲಾಖೆಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು ಎಂದು ಸೂಚನೆ ನೀಡಿದ್ದಾರೆ.

ರಾಜ್ಯದಲ್ಲಿ ಈ ವರ್ಷದ ಆರಂಭದಲ್ಲಿ ನಡೆದ ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ 10.27 ಲಕ್ಷ ಕೋಟಿ ರು. ಹೂಡಿಕೆ ಆಕರ್ಷಿಸಲಾಗಿದ್ದು, ಈಗಾಗಲೇ ಶೇ.60ರಷ್ಟು ಹೂಡಿಕೆಗಳು ಅನುಷ್ಠಾನ ಹಂತದಲ್ಲಿವೆ. ಸುಮಾರು 1.5ಲಕ್ಷ ಕೋಟಿಗೂ ಹೆಚ್ಚಿನ ಬಂಡವಾಳ ಹೂಡಿಕೆ ಪ್ರಸ್ತಾವನೆಗಳು ವಿವಿಧ ಹಂತದಲ್ಲಿವೆ. ಸುಪ್ರೀಂಕೋರ್ಟ್ ತೀರ್ಪಿನ ನೆಪ ಹೇಳಿಕೊಂಡು ಅಧಿಕಾರಿಗಳು ಕೂರಬಾರದು. ಅಕ್ಕ ಪಕ್ಕದ ರಾಜ್ಯಗಳಿಗೆ ಇರುವುದೂ ಇದೇ ಸುಪ್ರೀಂಕೋರ್ಟ್. ಬೇರೆ ರಾಜ್ಯಗಳಿಗೆ ಆಗದ ಸಮಸ್ಯೆ ನಮಗೆ ಆಗಲಿದೆ ಅನ್ನುವ ನೆಪ ಹೇಳಿಕೊಂಡು ಕೂತರೆ ಕ್ರಮ ಜರುಗಿಸಬೇಕಾಗುತ್ತೆ ಎಂದು ಎಚ್ಚರಿಕೆ ನೀಡಿದರು.

ರಾಜ್ಯದಲ್ಲಿ ಬಂಡವಾಳ ಹೂಡಿಕೆ ಸಂಬಂಧ ಸಿಎಂ ಸಿದ್ದರಾಮಯ್ಯ ವಿಧಾನಸೌಧ ಸಭಾಂಗಣದಲ್ಲಿ ಅಧಿಕಾರಿಗಳ ಸಭೆ ನಡೆಸಿದರು. ಈ ವೇಳೆ ಡಿಸಿಎಂ ಡಿ.ಕೆ.ಶಿವಕುಮಾರ್, ಸಚಿವರಾದ ಎಂ.ಬಿ.ಪಾಟೀಲ್, ಕೆ.ಜೆ.ಜಾರ್ಜ್ ಇದ್ದರು.

ಏಕಗವಾಕ್ಷಿ ವ್ಯವಸ್ಥೆಯಲ್ಲಿ ಅರ್ಜಿಗಳ ವಿಲೇವಾರಿ ಆಗುತ್ತಿಲ್ಲ ಎಂದು ದೂರು ಗಳಿವೆ. ಎಲ್ಲಾ ಸೇವೆಗಳನ್ನು ನೀಡಲು ಕ್ರಮ ಕೈಗೊಳ್ಳಬೇಕು. ಪ್ರಸ್ತುತ 29 ಸೇವೆಗಳು ಏಕಗವಾಕ್ಷಿ ವ್ಯವಸ್ಥೆ ಯಿಂದ ಹೊರಗಿದ್ದು, ಅವುಗಳನ್ನು ಸಹ ಇದರಲ್ಲಿ ತರಬೇಕು. ಎಲ್ಲಾ ಅರ್ಜಿಗಳನ್ನು ಏಕಗವಾಕ್ಷಿ ವ್ಯವಸ್ಥೆ ಯಡಿ ಏಕೀಕೃತ ವಿಲೇವಾರಿಗೆ ಕ್ರಮವಹಿಸಬೇಕು

-ಸಿದ್ದರಾಮಯ್ಯ, ಮುಖ್ಯಮಂತ್ರಿ

ನೆರೆ ರಾಜ್ಯದ ವ್ಯವಸ್ಥೆ ಅಧ್ಯಯನಕ್ಕೆ ಸೂಚನೆ

ಸಭೆಯ ಬಳಿಕ ಮಾತನಾಡಿದ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್, ಸುಲಲಿತ ವಾಣಿಜ್ಯ ಸಂಸ್ಕೃತಿ ಯಲ್ಲಿ ರಾಜ್ಯವನ್ನು ಇಡೀ ದೇಶದಲ್ಲೇ ನಂ.1 ಮಾಡಲಾಗುವುದು. ಹೂಡಿಕೆದಾರರು ಎದುರಿಸುತ್ತಿರುವ ಸಮಸ್ಯೆಗಳನ್ನು ಕ್ಷಿಪ್ರಗತಿ ಯಲ್ಲಿ ಬಗೆಹರಿಸಲು ಕ್ರಮ ಕೈಗೊಳ್ಳಲಾಗು ವುದು. ನಾನಾ ಇಲಾಖೆ ಗಳಲ್ಲಿ ಆಗಬೇಕಿರುವ ಕೆಲಸಗಳ ಬಗ್ಗೆ ನಿರ್ದೇಶನ ನೀಡಿ, ವರದಿ ಕೊಡುವಂತೆ ಮುಖ್ಯ ಕಾರ್ಯದರ್ಶಿಯವರಿಗೆ ಸೂಚಿಸಲಾಗಿದೆ. ಇದನ್ನು ಮುಂದಿನ ಸಂಪುಟ ಸಭೆಯಲ್ಲಿ ಚರ್ಚಿಸಿ, ಸೂಕ್ತ ಆದೇಶ ಹೊರಡಿಸಲಾಗು ವುದು ಎಂದು ಹೇಳಿ ದರು. ಕೈಗಾರಿಕಾ ಯೋಜನೆಗಳಿಗೆ ಸಂಬಂಧಿಸಿ ದಂತೆ ನೆರೆಹೊರೆಯ ತೆಲಂಗಾಣ, ತಮಿಳುನಾಡು ಮತ್ತು ಆಂಧ್ರಪ್ರದೇಶಗಳಲ್ಲಿ ಯಾವ್ಯಾವ ಕೆಲಸ ಗಳಿಗೆ ಎಷ್ಟೆಷ್ಟು ದಿನಗಳಲ್ಲಿ ಒಪ್ಪಿಗೆ ಕೊಡಲಾ ಗುತ್ತಿದೆ ಎನ್ನುವುದನ್ನು ಮುಖ್ಯಮಂತ್ರಿಗಳು ಸಭೆಯಲ್ಲಿ ಚರ್ಚಿಸಿ, ಅಧ್ಯಯನಕ್ಕೆ ಸೂಚಿಸಲಾ ಗಿದೆ. ಇಂತಹ ವಿಚಾರಗಳಲ್ಲಿ ಭೂ ಬಳಕೆಯ ಉದ್ದೇಶ ಬದಲಾವಣೆ, ವಿದ್ಯುತ್ ಸೌಲಭ್ಯ, ಮರ ಕಡಿಯಲು/ಸ್ಥಳಾಂತರಕ್ಕೆ ಒಪ್ಪಿಗೆ, ನೀರಿನ ಪೂರೈಕೆ, ಅಗ್ನಿಶಾಮಕ ಇಲಾಖೆಯ ಒಪ್ಪಿಗೆ, ಕೈಗಾರಿಕೆಗಳ ನೋಂದಣಿ ಮತ್ತು ಲೈಸೆನ್ಸ್, ಬಾಯ್ಲರ್ ನೋಂದಣಿ, ಲಿಫ್ಟ್ ಬಳಕೆಗೆ ಲೈಸೆನ್ಸ್ ಮುಂತಾದವು ಇವೆ. ಆ ರಾಜ್ಯಗಳಲ್ಲಿ ಈ ಸೇವೆಗಳನ್ನು ಕನಿಷ್ಠ 7 ದಿನಗಳಿಂದ ಹಿಡಿದು ಗರಿಷ್ಠ 66 ದಿನಗಳಲ್ಲಿ ಒದಗಿಸಲಾಗುತ್ತಿದೆ. ಆದರೆ ರಾಜ್ಯದಲ್ಲಿ ಇವುಗಳ ಪೈಕಿ ಕೆಲವಕ್ಕೆ ಕನಿಷ್ಠ 20 ದಿನಗಳಿಂದ ಗರಿಷ್ಠ 120 ದಿನಗಳು ಹಿಡಿಯುತ್ತಿವೆ. ಇದನ್ನೆಲ್ಲ ಬಗೆಹರಿಸುವಂತೆ ಮುಖ್ಯಮಂತ್ರಿಯವರು ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ ಎಂದು ಹೇಳಿದರು.

ಕರ್ನಾಟಕ ಸರಕಾರ
(ಲೋಕೋಪಯೋಗಿ, ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರ್‌ರವರ ಕಛೇರಿ ಲೋಕೋಪಯೋಗಿ ಇಲಾಖೆ,
ಸೇಡಂ ವಿಭಾಗ ಜಿಲ್ಲೆಃ ಕಲಬುರಗಿ.

ಸಂ:ಕಾನಿಇಂ/ಲೋಇ./ಸೇವಿ/ತಾಶಾ–2/2025–26/1832 ದಿನಾಂಕ : 23–10–2025

:: ಅಲ್ಪಾವಧಿ ಇ–ಪ್ರೊಕ್ಯೂರಮೆಂಟ್ ಟೆಂಡರ್ ಪ್ರಕಟಣೆ ::

1) ಕಾಮಗಾರಿಯ ವಿವರ : 1. **ಸೇಡಂ** ತಾಲೂಕಿನ 04 ಕಾಮಗಾರಿಗಳ ಇಂಡೆಂಟ್ ಸಂ: 27938 (ಪ.ಜಾತಿ), 27932, 28229 & 28230, 2. **ಚಿತ್ತಾಪೂರ** ತಾಲೂಕಿನ 02 ಕಾಮಗಾರಿಗಳ ಇಂಡೆಂಟ್ ಸಂ: 22794 & 21948/CALL-2, 3. **ಚಿಂಚೋಳಿ** ತಾಲೂಕಿನ 05 ಕಾಮಗಾರಿಗಳ ಇಂಡೆಂಟ್ ಸಂ : 28199, 28198, 28197 (ಪ್ರ–2ಎ), 28196 & 28082 (ಪ.ಜಾತಿ), 2) ಲೆಕ್ಕ ಶೀರ್ಷಿಕೆ: 2024–25 & 2025–26 ನೇ ಸಾಲಿನ ಕೆ.ಕೆ.ಆರ್.ಡಿ.ಬಿ., 2059, ಎಸ್.ಡಿ.ಮ್.ಎಫ್., ಪಿ.ಎಮ್.ಎ.ಜಿ.ವೈ & 8443 ಯೋಜನೆಯಡಿಯಲ್ಲಿನ ಕಾಮಗಾರಿಗಳು, 3) ಟೆಂಡರಿಗಿಟ್ಟ ಮೊತ್ತ : **ಕನಿಷ್ಠ ರೂ. 2.00 ಲಕ್ಷಗಳು, ಗರಿಷ್ಠ ರೂ. 530.00 ಲಕ್ಷಗಳು,** 4) ಗುತ್ತಿಗೆದಾರರ ಅರ್ಹತೆ: 4ನೇ ದರ್ಜೆ & ಮೇಲ್ಪಟ್ಟು, 5) ಪೂರ್ವಬಾವಿ ಸಭೆ : **03–11–2025 ಬೆಳಿಗ್ಗೆ 11:00 ಗಂಟೆಗೆ,** 6) ಟೆಂಡರ್ ಸ್ಪಷ್ಟೀಕರಣ ಪಡೆಯುವ ದಿನಾಂಕ: **04–11–2025 ಸಾಯಂಕಾಲ 17:30 ಗಂಟೆಯವರೆಗೆ,** 7) ಟೆಂಡರ್ ಅರ್ಜಿ ಬೆಲೆ ಮತ್ತು ಇ.ಎಂ.ಡಿ ಮೊತ್ತ : ಟೆಂಡರ್ ಫಾರಂ ಬೆಲೆ & ಇ.ಎಮ್.ಡಿ ಇ–ಪ್ರೊಕ್ಯೂರಮೆಂಟ್‌ನಲ್ಲಿ ನಮೂದಿಸಿದಂತೆ, 8) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ: **05–11–2025 ರ ಸಾಯಂಕಾಲ 16:00 ಗಂಟೆಯವರೆಗೆ,** 9) ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **06–11–2025 ರ ಸಾಯಂಕಾಲ 16:30 ಗಂಟೆಯವರೆಗೆ,** 10) ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ: **07–11–2025 ರ ಸಾಯಂಕಾಲ 16:30 ಗಂಟೆಯವರೆಗೆ,** 11) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ: ಕಾರ್ಯನಿರ್ವಾಹಕ ಇಂಜಿನೀಯರ್, ಲೋಕೋಪಯೋಗಿ ಇಲಾಖೆ, ವಿಭಾಗ ಸೇಡಂ, 12) ಅಂತರಜಾಲ ತಾಣದ ವಿಳಾಸ: www.kppp.karnataka.gov.in, 13) ಬದಲಾವಣೆಗಾಗಿ ಸಂಪರ್ಕಿಸುವ ಬಗ್ಗೆ: ಯಾವುದೇ ಮಾರ್ಪಾಡು ಬದಲಾವಣೆಗಳನ್ನು www.kppp.karnataka.gov.in ಮಾಡಲಾಗುವುದು.
ಟಿಪ್ಪಣಿ : 1) ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಪ್ರಕ್ರಿಯೆಯ ಮುಂದೂಡುವಿಕೆ/ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. 2) ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರ್
ಲೋಕೋಪಯೋಗಿ, ಇಲಾಖೆ ವಿಭಾಗ ಸೇಡಂ
ವಾ.ಸಾ.ಸಂ.ಇ/ಕಲಬುರಗಿ/645/ಕೆ.ಎಸ್.ಎಂ.ಸಿ.&ಎ/2025–26

ಪಂಚಾಯತ ರಾಜ್ ಇಂಜನೀಯರಿಂಗ್ ವಿಭಾಗ, ಕೊಪ್ಪಳ
ಕಾರ್ಯಪಾಲಕ ಅಭಿಯಂತರರ ಕಾರ್ಯಾಲಯ, ಕೊಪ್ಪಳ, ಇ–ಮೇಲ್ : eepredkpl@gmail.com
ಸಂಖ್ಯೆ : ಪಂ.ರಾ.ಇಂ./ವಿ.ಕೊ./ತಾ.ಶಾ./ಸ.ಇಂ./ಟೆಂಡರ್/2025–26/1795 ದಿನಾಂಕ : 24–10–2025

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದೇಶ 1999 – 2000 ರ ಪ್ರಕಾರ ಪಾರದರ್ಶಕತೆ ಆಕ್ಟ್ 2000 ನಿಯಮದಂತೆ ಸ್ಟ್ಯಾಂಡರ್ಡ ಬಿಡ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ – 1, 2, 3 ಮತ್ತು 4ರ ಪ್ರಕಾರ ನಿಯಮಗಳನ್ವಯ ಪಂಚಾಯತ್ ರಾಜ್ ಇಂಜನೀಯರಿಂಗ್/ಪಿ.ಡಬ್ಲೂ.ಡಿ ಇಲಾಖೆಯಲ್ಲಿ ನೊಂದಾಯಿಸಿದ ಅರ್ಹಗುತ್ತಿಗೆದಾರರಿಂದ kppp.karnataka.gov.in ಪೋರ್ಟಲ್ ಮುಖಾಂತರ ಈ ಕೆಳಗೆ ನಮೂಧಿಸಿದ ಅನುಬಂಧದಲ್ಲಿಯ 2025–26 ನೇ ಸಾಲಿನ ಲಿಂಕ್ ಡಾಕ್ಯೂಮೆಂಟ್, ಅನಿರ್ಬಂಧಿತ ಅನುದಾನ 3054 ಸಿ ಎಮ್ ಜಿ ಎಸ್ ವೈ ಯೋಜನೆಯಡಿ ಕೊಪ್ಪಳ ಜಿಲ್ಲೆಯ ವಿವಧ ತಾಲೂಕಿನ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ, ಅರ್ಹ ಗುತ್ತಿಗೆದಾರರು kppp.karnataka.gov.in ಪೋರ್ಟಲ್ ಮುಖಾಂತರ ಭಾಗವಹಿಸಬಹುದು. ಹಾಗೂ ಇನ್ನಿತರೆ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ.

ವಿವರ : 1) ಯಲಬುರ್ಗಾ ತಾಲೂಕಿನ ಜೂಲಕಟ್ಟಿ ಗ್ರಾಮದಿಂದ ಮಾಟ್ರಂಗಿ ಹೋಗುವ ರಸ್ತೆ (VR-188) ಅಭಿವೃದ್ಧಿಪಡಿಸುವುದು. (CH:0.00 TO 1.00KM), 2) ಕುಕನೂರು ತಾಲೂಕಿನ ಲಕಮಾಪೂರ ಗ್ರಾಮದಿಂದ ಎನ್.ಹೆಚ್.–63 ವರೆಗೆ ರಸ್ತೆ ಸುಧಾರಣೆ ಮಾಡುವುದು. (VR-106) (CH 0.00 TO 2.900 KM), ಟೆಂಡರಗಿಟ್ಟ ಮೊತ್ತ : ರೂ. 85.62 ಲಕ್ಷ, ಪ್ಯಾಕೇಜ್ –1, ಕಾಲಾವಧಿ : 03 ತಿಂಗಳು.

ಟೆಂಡರ್ ವಿವರ : 1) ಟೆಂಡರ್ ಆಕ್ಷೇಪಣೆ / ಸ್ಪಷ್ಟೀಕರಣಗಳಿಗಾಗಿ ನಿಗಧಿಪಡಿಸಿದ ಅಂತಿಮ ದಿನಾಂಕ ಹಾಗೂ ಸಮಯದ ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು : 27–10–2025 ರ ಬೆಳಿಗ್ಗೆ 10.00 ಗಂಟೆ ನಂತರದಿಂದ : 06–11–2025 ರ ಸಂಜೆ 4.00 ಗಂಟೆವರೆಗೆ, 2) ಟೆಂಡರ್‌ಗಳನ್ನು ಸ್ವೀಕರಿಸುವ ಅಂತಿಮ ದಿನಾಂಕ ಹಾಗೂ ಸಮಯ : 27–10–2025 ರ ಬೆಳಿಗ್ಗೆ 11.00 ಗಂಟೆ ನಂತರದಿಂದ : 06–11–2025 ರ ಸಂಜೆ 4.30 ಗಂಟೆವರೆಗೆ, 3) ಟೆಂಡರ್ ತೆರೆಯುವ ದಿನಾಂಕ : 07–11–2025 ಕಚೇರಿ ಸಮಯದಲ್ಲಿ ಕೆ.ಡಬ್ಲ್ಯೂ 4 ಇದ್ದಲ್ಲಿ ಆರ್ಥಿಕ ಬಿಡ್ ತೆರೆಯುವ ದಿನಾಂಕ : ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಗೊಂಡ ನಂತರ ತೆರೆಯಲಾಗುವುದು

ಸಾಮಾನ್ಯ ಸೂಚನೆಗಳು : 1) ಗುತ್ತಿಗೆದಾರರು ಗುತ್ತಿಗೆಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬೇಕು. 2) ಪೂರ್ವಾರ್ಹತೆಗೆ ಬೇಕಾಗುವ ಎಲ್ಲಾ ಪ್ರಮಾಣ ಪತ್ರ ಹಾಗೂ ದಾಖಲೆಗಳನ್ನು ಸ್ಕ್ಯಾನ್ ಮಾಡಿ, ಆನ್‌ಲೈನ್‌ನಲ್ಲಿ ಟೆಂಡರ್ ಭರ್ತಿ ಸಮಯದಲ್ಲಿ ಲಗತ್ತಿಸಬೇಕು. 3) ನಿಗಧಿತ ಇ.ಎಮ್.ಡಿ. ಹಣವನ್ನು ಆನ್‌ಲೈನ್ ಮೂಲಕ ನಿಗಧಿಪಡಿಸಿದಂತೆ ಸಂದಾಯ ಮಾಡಬೇಕು.

ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು ಮತ್ತು ಅಂತರ್ಜಾಲದ ಮೂಲಕ ವೆಬ್‌ಸೈಟ್ : kppp.karnataka.gov.in ಪೋರ್ಟಲ್‌ರಲ್ಲಿ ಪಡೆಯಬಹುದು. ಟೆಂಡರ್ ಹಾಗೂ ಮಾಹಿತಿಯನ್ನು ಸದರಿ ವೆಬ್‌ಸೈಟ್‌ನಲ್ಲಿ ದಿನಾಂಕ : 27–10–2025 ರ ನಂತರದಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.

ಟಿಪ್ಪಣಿ : ಬಿಡ್‌ಗಳನ್ನು ತೆರೆಯುವ ವೇಳೆಯಲ್ಲಿ ಟೆಂಡರ್‌ನಲ್ಲಿ ಬಾಗವಹಿಸಿದ ಗುತ್ತಿಗೆದಾರರು ಇ.ಎಮ್.ಡಿ. ಮೂಲ ದಾಖಲೆಗಳನ್ನು ಪರಿಶೀಲನೆಗಾಗಿ ಒದಗಿಸತಕ್ಕದ್ದು.
ಸೂಚನೆ : ಯಾವುದೇ ಅಥವಾ ಎಲ್ಲಾ ಟೆಂಡರ್‌ಗಳನ್ನು ಯಾವುದೇ ಕಾರಣವಿಲ್ಲದೇ, ಯಾವುದೇ ಹಂತದಲ್ಲಿ ತಿರಸ್ಕರಿಸುವ ಹಾಗೂ ಹಿಂತೆಗೆದುಕೊಳ್ಳುವ ಅಥವಾ ಯಾವುದೇ ಟೆಂಡರ್ ಅನುಮೋದಿಸುವ ಹಕ್ಕನ್ನು ಈ ಕೆಳಗೆ ಸಹಿ ಮಾಡಿದವರು ಕಾಯ್ದಿರಿಸಿಕೊಂಡಿದ್ದಾರೆ.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಪಂ.ರಾ.ಇಂ. ವಿಭಾಗ, ಕೊಪ್ಪಳ.
ಡಿಐಪಿಆರ್/ಕೊಪ್ಪಳ/408/ಮಣಿಪಾಲ್/2025–26

10 ದಿನ ಭಾರೀ ಮಳೆ ನಿರೀಕ್ಷೆ

← ಮೊದಲಪುಟದಿಂದ

ಈ ಹಿನ್ನೆಲೆಯಲ್ಲಿ ಬೆಂಗಳೂರು ಸೇರಿದಂತೆ ರಾಜ್ಯದ ವಿವಿಧೆಡೆ ಭಾರೀ ಮಳೆ ಆಗಲಿದ್ದು, 7 ಜಿಲ್ಲೆಗಳಲ್ಲಿ ಆರೆಂಜ್ ಅಲರ್ಟ್ ಘೋಷಿಸಲಾಗಿದೆ. ಅಕ್ಟೋಬರ್ 25 ಹಾಗೂ 26 ರಂದು 11 ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ನೀಡಲಾಗಿದೆ ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ, ಉತ್ತರ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಭಾರೀ ಮಳೆ ಮುಂದುವರಿದಿದೆ. ಈ ಜಿಲ್ಲೆಗಳಲ್ಲಿ ಗಾಳಿಯ ವೇಗವು ಗಂಟೆಗೆ 30ರಿಂದ 40 ಕಿ.ಮೀ ವೇಗದಲ್ಲಿ ಇರಲಿದೆ. ಕರ್ನಾಟಕದ ಉತ್ತರ ಒಳನಾಡಿನ ಬೆಳಗಾವಿ, ಧಾರವಾಡ, ಬಾಗಲಕೋಟೆ, ರಾಯಚೂರು, ಯಾದಗಿರಿ, ಕಲಬುರಗಿ ಹಾಗೂ ವಿಜಯಪುರ ಜಿಲ್ಲೆಗಳಲ್ಲಿ ಭಾರೀ ಮಳೆ ಇರಲಿದೆ. ಅಲ್ಲದೇ ಚಿತ್ರದುರ್ಗ, ದಾವಣಗೆರೆ, ಬಳ್ಳಾರಿ, ವಿಜಯನಗರ, ಬೆಂಗಳೂರು ನಗರ ಭಾಗದಲ್ಲೂ ಭಾರೀ ಮಳೆ ಆಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಎಚ್ಚರಿಕೆ ನೀಡಿದೆ. ಬೀದರ್, ಗದಗ, ಹಾವೇರಿ, ಕೊಪ್ಪಳ, ಬೆಂಗಳೂರು ಗ್ರಾಮಾಂತರ, ಚಾಮರಾಜ ನಗರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಹಾಸನ, ಕೊಡಗು, ಕೋಲಾರ, ಮಂಡ್ಯ, ಮೈಸೂರು, ರಾಮನಗರ, ಶಿವಮೊಗ್ಗ ಹಾಗೂ ತುಮಕೂರು ಜಿಲ್ಲೆಗಳಲ್ಲಿ ಹಗುರ ದಿಂದ ಕೂಡಿದ ಸಾಧಾರಣ ಮಳೆ ಆಗಲಿದೆ ಎಂದು ಇಲಾಖೆ ಮಾಹಿತಿ ನೀಡಿದೆ.

ಮತಗಳವು: ಬಗೆದಷ್ಟೂ ಆಳಂದ

← ಮೊದಲಪುಟದಿಂದ

ಹೀಗಾಗಿ ಕೋಳಿ ಫಾರಂ ಕೆಲಸಗಾರರ ಮೊಬೈಲ್ ನಂಬರ್ ದುರ್ಬಳಕೆ ಮಾಡಲಾಗಿತ್ತು ಎಂಬುದು ತನಿಖೆಯಿಂದ ತಿಳಿದು ಬಂದಿದೆ. ಮೊಹಮ್ಮದ್ ಅಶ್ಫಾಕ್ ನೇತೃತ್ವದಲ್ಲಿಯೇ ಇಡೀ ಮತಕಳವು ಪ್ರಕರಣ ನಡೆದಿತ್ತು ಎನ್ನಲಾಗಿದೆ. ಈ ಸಂಬಂಧ ಎಸ್‌ಐಟಿ ಇದೀಗ 20ಕ್ಕೂ ಹೆಚ್ಚು ಮಂದಿಯ ವಿಚಾರಣೆ ಮಾಡಿದೆ. ಸದ್ಯ ದುಬೈಯಲ್ಲಿರುವ ಅಶ್ಫಾಕ್ ಸೇರಿ ಆರು ಜನರನ್ನು ಎಸ್‌ಐಟಿ ಬಂಧಿಸುವ ಸಾಧ್ಯತೆ ದಟ್ಟವಾಗಿದೆ. ಅಶ್ಫಾಕ್‌ಗೆ ಡೀಲ್ ನೀಡಿದ್ದು ಯಾರು ಎಂಬುದರ ಬಗ್ಗೆ ಎಸ್‌ಐಟಿ ಮಾಹಿತಿ ಕಲೆ ಹಾಕುತ್ತಿದೆ. ಆಳಂದ ಮತ ಕಳವು ಪ್ರಕರಣದ ಬಗ್ಗೆ ತನಿಖೆ ನಡೆಸುತ್ತಿರುವ ಎಸ್‌ಐಟಿ ಕರ್ನಾಟಕದ ಮುಖ್ಯ ಚುನಾವಣಾ ಅಧಿಕಾರಿಗೆ ಪತ್ರ ಬರೆದಿದ್ದು, 2022 ರ ಫೆಬ್ರವರಿ ಮತ್ತು 2023ರ ಫೆಬ್ರವರಿ ನಡುವೆ ಆಳಂದ ಕ್ಷೇತ್ರದ ಮತದಾರರ ಪಟ್ಟಿಯಿಂದ ಹೆಸರುಗಳನ್ನು ಅಳಿಸಲು ಅರ್ಜಿಗಳನ್ನು ಸಲ್ಲಿಸಲು ಬಳಸಲಾಗಿದೆ ಎಂದು ವರದಿಯಾಗಿರುವ ಪೋರ್ಟಲ್‌ಗಳು, ಐಪಿ ಅಡ್ರೆಸ್ ಮತ್ತು ಒಟಿಪಿ ಟ್ರೇಲ್‌ಗಳಂತಹ ವಿವರಗಳನ್ನು ಕೋರಿದೆ ಎಂಬುದಾಗಿ ಮೂಲಗಳು ತಿಳಿಸಿವೆ.

ರಾಜ್ಯಕ್ಕೆ ರಾಗಾ ಎಂಟ್ರಿ

← ಮೊದಲಪುಟದಿಂದ

ಆದ್ದರಿಂದ ಈ ಕಾರ್ಯಕ್ರಮದಲ್ಲಿ ಭಾಗವಹಿಸುವ ನೆಪದಲ್ಲಿ ರಾಜ್ಯಕ್ಕೆ ಆಗಮಿಸಲಿರುವ ರಾಹುಲ್ ಗಾಂಧಿ, ಬಳಿಕ ರಾಜ್ಯ ನಾಯಕರೊಂದಿಗೆ ಚರ್ಚಿಸಿ, ಗೊಂದಲ ನಿವಾರಿಸುವ ಪ್ರಯತ್ನ ಮಾಡಲಿದ್ದಾರೆ ಎನ್ನಲಾಗಿದೆ.

ಕ್ರಾಂತಿಯ ಹೊಸ್ತಿಲಲ್ಲಿ ಆಗಮನ; ಕುತೂಹಲ ಸಚಿವ ಸಂಪುಟ ಪುನಾರಚನೆಯ ಹೊಸ್ತಿಲಿನಲ್ಲಿ ರಾಹುಲ್ ಗಾಂಧಿ ಅವರ ರಾಜ್ಯ ಪ್ರವಾಸ ಹಲವು ಕುತೂಹಲಕ್ಕೆ ಕಾರಣವಾಗಿದೆ. ಅದರಲ್ಲಿಯೂ ನವೆಂಬರ್ ಕ್ರಾಂತಿ, ಅಧಿಕಾರ ಹಂಚಿಕೆ ಸೂತ್ರ ಜಾರಿಯಾಗುತ್ತದೆ ಎಂಬ ಚರ್ಚೆಗಳು ಬಿರುಸಾಗಿದೆ.ಇನ್ನು ಯತೀಂದ್ರ ಸಿದ್ದರಾಮಯ್ಯ ಅವರು ನೀಡಿರುವ ಹೇಳಿಕೆ ಮಾಸುವ ಮೊದಲೇ, ರಾಹುಲ್ ಬೆಂಗಳೂರಿಗೆ ಆಗಮಿಸುವುದು ಖಚಿತವಾಗಿರುವುದು ಹಲವು ರೀತಿಯ ಚರ್ಚೆಗೆ ಎಡೆಮಾಡಿಕೊಟ್ಟಿದೆ.

ಎಲ್ಲಿ ಮಾತನಾಡಬೇಕೋ ಅಲ್ಲಿ ಮಾತಾಡುವೆ: ಇನ್ನು ಯತೀಂದ್ರ ಅವರ ಹೇಳಿಕೆಗೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿರುವ ಡಿ.ಕೆ.ಶಿವಕುಮಾರ್, ಯಾರ ಹತ್ತಿರ, ಏನು ಮಾತನಾಡಬೇಕೋ ಅಲ್ಲಿ ಮಾತನಾಡುತ್ತೇನೆ ಎಂದು ಪರೋಕ್ಷ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಯತೀಂದ್ರ ಹೇಳಿಕೆಗೆ ಯಾವುದೇ ಪ್ರತಿಕ್ರಿಯೆ ನೀಡುವುದಿಲ್ಲ. ಈ ಬಗ್ಗೆ ನಾನು ಈಗ ಮಾತನಾಡಲ್ಲ, ಎಲ್ಲಿ ಮಾತನಾಡಬೇಕೋ ಅಲ್ಲಿ ಮಾತಾನಾಡುವೆ. ಆದರೆ ನಾನು ಶಿಸ್ತಿನ ಜತೆ ನಿಲ್ಲುತ್ತೇನೆ. ಶಿಸ್ತು ನನ್ನ ಪಕ್ಷದ ಆದ್ಯತೆ ಎನ್ನುವ ಮೂಲಕ ಯತೀಂದ್ರ ಹೇಳಿಕೆಗೆ ಪರೋಕ್ಷ ಅಸಮಾಧಾನ ಹೊರ ಹಾಕಿದರು.

ಯತೀಂದ್ರ ಪರ ರಾಜಣ್ಣ ಬ್ಯಾಟಿಂಗ್

ಬೆಂಗಳೂರು: ಯತೀಂದ್ರ ಹೇಳಿಕೆಗೆ ನಮ್ಮ ಸಹಮತವಿದೆ. ತಪ್ಪೇನಿದೆ ಅದರಲ್ಲಿ ಎಂದು ಮಾಜಿ ಸಚಿವ ಕೆ.ಎನ್.ರಾಜಣ್ಣ ಸಮರ್ಥಿಸಿಕೊಂಡಿದ್ದಾರೆ.

ಬೆಂಗಳೂರಲ್ಲಿ ಮಾತನಾಡಿದ ಅವರು, ಯತೀಂದ್ರ ಹೇಳಿಕೆಗೆ ನಮ್ಮ ಸಹಮತವಿದೆ ತಪ್ಪೇನಿದೆ ಅದರಲ್ಲಿ? ಯತೀಂದ್ರ ಬೆಳಗಾವಿಯಲ್ಲಿ ಸಿದ್ದರಾಮಯ್ಯ ನಂತರ ಅಹಿಂದ ಚಳವಳಿ ಮುಂದುವರೆಸುವಲ್ಲಿ ಜಾರಕಿಹೊಳಿ ಸಮರ್ಥರಿದ್ದಾರೆ ಎಂದಿದ್ದಾರೆ. ಇದಕ್ಕೆ ನನ್ನ ಸಹಮತವಿದೆ. ಸತೀಶ್ ಜಾರಕಿಹೊಳಿ ಈಗ ಸಿಎಂ ಆಗಲ್ಲ. 2028ಕ್ಕೆ ಸಿಎಂ ಆಕಾಂಕ್ಷಿ ಎಂದಿದ್ದಾರೆ. ಅದಕ್ಕೂ ನನ್ನ ಸಹಮತವಿದೆ ಎಂದು ಅವರು ಹೇಳಿದ್ದಾರೆ. ಯತೀಂದ್ರಗೆ ನೋಟಿಸ್ ನೀಡುವ ವಿಚಾರವಾಗಿ ಪ್ರತಿಕ್ರಿಯಿಸಿದ ರಾಜಣ್ಣ, ಡಿ.ಕೆ.ಶಿವಕುಮಾರ್ ಮತ್ತು ಟೀಂ ಒತ್ತಡ ಹೇರಿದರೆ ನೋಡೋಣ. ಅವರೆಲ್ಲ ಮೇಧಾವಿಗಳಿದ್ದಾರೆ. ತೀರ್ಮಾನ ನೋಡೋಣ ಬಿಡಿ ಎಂದು ಸೂಕ್ಷ್ಮವಾಗಿ ತಿಳಿಸಿದ್ದಾರೆ. ನನಗೆ ಎಲ್ಲ ಕಾಲದಲ್ಲಿಯೂ ಅದೃಷ್ಟ ಇದೆ. ಮತ್ತೆ ಮಂತ್ರಿಯಾಗುವ ಬಗ್ಗೆ ನಾನು ಅದೇನೂ ಹೇಳಲ್ಲ. ಹೈಕಮಾಂಡ್ ಎಲ್ಲ ತೀರ್ಮಾನ ಮಾಡತ್ತದೆ. ನಮ್ಮ ಮೇಲಿನ ಅಭಿಮಾನಕ್ಕೆ ಅಭಿಮಾನಿಗಳು ಮಾತನಾಡುತ್ತಾರೆ. ಆದರೆ ನಮ್ಮ ಸಮುದಾಯದರು 16 ಜನ ಶಾಸಕರು ಇದ್ದೇವೆ. ಇಬ್ಬರನ್ನು ತೆಗೆದಿದ್ದಾರೆ. ಆ ಸ್ಥಾನ ತುಂಬಬೇಕು. ಸಿಎಂ ಬದಲಾವಣೆ ಇಲ್ಲವೇ ಇಲ್ಲ. ಅದನ್ನು ಹೈಕಮಾಂಡ್ ನಿರ್ಧಾರ ಮಾಡುತ್ತದೆ. ನಾನು ದೆಹಲಿಗೆ ಹೋಗುತ್ತೇನೆ. ಸಚಿವಗಿರಿ ಕೊಡಿ ಅಂತ ಹೋಗಲ್ಲ, ನನ್ನ ಮೇಲೆ ಬಂದಿರೋ ಆರೋಪದ ಬಗ್ಗೆ ಸ್ಪಷ್ಟನೆ ಕೊಡಲು ಹೋಗ್ತೇನೆ. ಸಿಎಂ ಅವರು ಹೋಗೋದು ಗೊತ್ತಿಲ್ಲ. ಬಿಹಾರ ಚುನಾವಣೆ ಮುಗಿದ ಬಳಿಕ ಹೈಕಮಾಂಡ್ ಸಮಯ ಕೊಡಬೇಕು ಎಂದರು.

ಮರು ಸಮೀಕ್ಷೆ ಅವಧಿ ಡಿ.31ರವರೆಗೆ ವಿಸ್ತರಣೆ

ಬೆಂಗಳೂರು: ಮಾಜಿ ದೇವದಾಸಿ ಮಹಿಳೆಯರ ಮರು ಸಮೀಕ್ಷೆ ಅವಧಿಯನ್ನು ಬೆಳಗಾವಿ, ವಿಜಯಪುರ, ಬಾಗಲಕೋಟೆ, ರಾಯಚೂರು, ಕೊಪ್ಪಳ, ಧಾರವಾಡ, ಹಾವೇರಿ, ಗದಗ, ಕಲಬುರ್ಗಿ, ಯಾದಗಿರಿ, ಚಿತ್ರದುರ್ಗ, ದಾವಣಗೆರೆ, ಶಿವಮೊಗ್ಗ, ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳಲ್ಲಿ ಡಿಸೆಂಬರ್ 31 ರವರೆಗೆ ವಿಸ್ತರಿಸಲಾಗಿದೆ. ಸಮೀಕ್ಷೆಯನ್ನು 15 ಜಿಲ್ಲೆಗಳ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿಯಲ್ಲಿ ನಡೆಸಲಾಗುತ್ತಿದೆ.

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ದೂರವಾಣಿ ಸಂಖ್ಯೆ:08276–274365
ಹಾರಂಗಿ ಪುನರ್ವಸತಿ ವಿಭಾಗ ಫ್ಯಾಕ್ಸ್ ಸಂಖ್ಯೆ:08236–274365
ಕುಶಾಲನಗರ–571234 ಇಮೇಲ್:eehrdksh@gmail.com
ಸೋಮವಾರಪೇಟೆ ತಾ॥ ಕೊಡಗು ಜಿಲ್ಲೆ ಕರ್ನಾಟಕ
ಸಂ:ಕಾ.ಇಂ/ಕಾ.ನೀ.ನಿ.ನಿ/ಹಾಪುವಿ/ಪಿಬಿಬಿ/ಟೆಂಡರ್ ಪ್ರಕಟಣೆ ಸಂಖ್ಯೆ:11/2025–26, ದಿನಾಂಕ: 24–10–2025
(ಕರ್ನಾಟಕ ಸರ್ಕಾರದ ಉದ್ಯಮ)
ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಅಲ್ಪಾವಧಿ ಕರೆ)
(ಐಟಂವಾರು : ಇ–ಪ್ರೊಕ್ಯೂರ್‌ಮೆಂಟ್ ಪೋರ್ಟ್ ಪದ್ಧತಿ ಮೂಲಕ ಮಾತ್ರ)
ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು ರವರ ಪರವಾಗಿ ಸೂಚಿತ ದರ್ಜೆ ಗುತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಮೋರ್ಟಲ್ ಪದ್ಧತಿ ಮುಖಾಂತರ ಐಟಂವಾರು ದರದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.
ಈ ವಿಭಾಗ ವ್ಯಾಪ್ತಿಯಿಂದ, ಕುಶಾಲನಗರ ತಾಲ್ಲೂಕು ವ್ಯಾಪ್ತಿಯಲ್ಲಿ ಬರುವ 4701 ಲೆಕ್ಕಶೀರ್ಷಿಕೆಯಡಿ I ಕಾಮಗಾರಿಗೆ ಐಟಂವಾರು ಟೆಂಡರ್ ಕರೆಯಲಾಗಿದ್ದು, ಈ ಕಾಮಗಾರಿಯ ಅಂದಾಜು ಮೊತ್ತ ರೂ 490.00 ಲಕ್ಷಗಳಿದ್ದು, ಈ ಕಾಮಗಾರಿಗೆ ನಿಗಧಿತ ದರ್ಜೆ ಗುತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ ಅಲ್ಪಾವಧಿ ಟೆಂಡರ್ ಕರೆಯಲಾಗಿದೆ.
ಟೆಂಡರ್ ದಸಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಡೌನ್ ಲೋಡ್ ಮಾಡಿಕೊಳ್ಳಬಹುದಾಗಿದ್ದು, ಭರ್ತಿ ಮಾಡಿದ ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ದಿನಾಂಕ: 03–11–2025 ಅಪರಾಹ್ನ 4.00 ಗಂಟೆಯವರೆಗೆ ಸಲ್ಲಿಸಬಹುದಾಗಿದೆ. ತಾಂತ್ರಿಕ ಬಿಡ್ಡನ್ನು ದಿನಾಂಕ: 04–11–2025 ರ ಅಪರಾಹ್ನ 4.30 ಗಂಟೆಗೆ ತೆರೆಯಲಾಗುವುದು. ಆರ್ಥಿಕ ಬಿಡ್ಡನ್ನು ತಾಂತ್ರಿಕ ಬಿಡ್ಡು ಅನುಮೋದನೆಯಾದ ನಂತರ ತೆರೆಯಲಾಗುವುದು, ಹೆಚ್ಚಿನ ವಿವರಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್ ಸೈಟ್ ವಿಳಾಸ:https://kppp.karnataka.gov.in ರಲ್ಲಿ ಪಡೆಯಬಹುದಾಗಿದೆ. ಈ ಕಾಮಗಾರಿಗೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ತಿಳಿಸಿರುವಂತೆ ಟೆಂಡರ್ ಪ್ರೊಸೆಸಿಂಗ್ ಶುಲ್ಕ ನಿಗದಿಯಾಗಿದ್ದು, ಹೆಚ್ಚಿನ ಮಾಹಿತಿಯನ್ನು ಕಛೇರಿ ವೇಳೆಯಲ್ಲಿ ಕೆಳಸಹಿದಾರರನ್ನು ಸಂಪರ್ಕಿಸಿ ಪಡೆಯಬಹುದಾಗಿರುತ್ತದೆ.
ಕಾರ್ಯಪಾಲಕ ಇಂಜಿನಿಯರ್,
ಹಾರಂಗಿ ಪುನರ್ವಸತಿ ವಿಭಾಗ,
ಕಾವೇರಿ ನೀರಾವರಿ ನಿಗಮ ನಿಯಮಿತ
ಕುಶಾಲನಗರ, ಸೋಮವಾರಪೇಟೆ ತಾ.,
ಕೊಡಗು ಜಿಲ್ಲೆ – 571234

ಪಡಿತರ ಅಕ್ಕಿ ಜಪ್ತಿ: ತನಿಖೆಗೆ ಆದೇಶ

ಬೆಂಗಳೂರು: ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲೂಕಿನ ಕೋನಸಾಗರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಚೌಡಿಪುರ ಗ್ರಾಮದಲ್ಲಿ ಅಕ್ರಮವಾಗಿ ಸಂಗ್ರಹಿಸಿಟ್ಟಿದ್ದ 262 ಕ್ವಿಂಟಾಲ್ ಅಕ್ಕಿ ಜಪ್ತಿ ಪ್ರಕರಣ ಸಂಬಂಧ ಮೊಳಕಾಲ್ಮೂರು ತಾಲೂಕಿನ ಎಲ್ಲ ನ್ಯಾಯಬೆಲೆ ಅಂಗಡಿಗಳನ್ನು ತಪಾಸಣೆ ನಡೆಸುವಂತೆ ಆಹಾರ ಇಲಾಖೆ ಆದೇಶ ಹೊರಡಿಸಿದೆ.

ಗ್ರಾಮದ ಸರಕಾರಿ ಸಮುದಾಯ ಭವನದಲ್ಲಿ ಸಂಗ್ರಹಿಸಿಟ್ಟಿದ್ದ ಅಕ್ಕಿಯನ್ನು ಪೊಲೀಸರು ದಾಳಿ ನಡೆಸಿ 535 ಚೀಲ ಅಕ್ಕಿಯನ್ನು ಜಪ್ತಿ ಮಾಡಿ ಆರೋಪಿಗಳ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ. ಇದು ಮೇಲ್ನೋಟಕ್ಕೆ ಪಡಿತರ ಅಕ್ಕಿ ಎಂಬುದು ಸಾಬೀತಾಗಿದೆ. ಈ ಅಕ್ಕಿಯು ಎಲ್ಲಿಂದ ಸಂಗ್ರಹಣೆ ಮಾಡಲಾಗಿದೆ ಎಂಬುದನ್ನು ಪರಿಶೀಲಿಸುವ ಸಲುವಾಗಿ ತಾಲೂಕಿನ ಎಲ್ಲ ನ್ಯಾಯಬೆಲೆ ಅಂಗಡಿಗಳಲ್ಲಿ ತಪಾಸಣೆ ನಡೆಸಿ ವಾರದೊಳಗೆ ವರದಿ ನೀಡುವಂತೆ ಇಲಾಖೆಯ ಜಂಟಿ ನಿರ್ದೇಶಕ, ತಹಶೀಲ್ದಾರ್‌ಗೆ ಸೂಚಿಸಿದ್ದಾರೆ.

ಅಧಿಕಾರಿಗಳು ಶಾಮೀಲು: ಪಡಿತರ ಅಕ್ಕಿ ದುರ್ಬಳಕೆ ಹಿಂದೆ ಗೋಡೌನ್ ಮ್ಯಾನೇಜರ್ ಸೇರಿ ಇಲಾಖೆಯ ಇತರ ಭ್ರಷ್ಟ ಅಧಿಕಾರಿಗಳು ಶಾಮೀಲಾಗಿರುವ ಶಂಕೆ ವ್ಯಕ್ತವಾಗುತ್ತಿದೆ. ಬೇರೆ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಯನ್ನು ತನಿಖಾಧಿಕಾರಿಯಾಗಿ ನೇಮಿಸಿ ತನಿಖೆ ನಡೆಸಿದರೆ ತಪ್ಪಿತಸ್ಥರ ವಿರುದ್ಧ ಶಿಸ್ತು ಕ್ರಮ ತೆಗೆದುಕೊಳ್ಳಲು ಸಾಧ್ಯವಾಗಲಿದೆ. ಇಲ್ಲವಾದರೆ, ಅದೇ ತಾಲೂಕಿನ ಅಧಿಕಾರಿಯನ್ನು ತನಿಖೆ ಹೊಣೆ ವಹಿಸಿದರೆ ಭ್ರಷ್ಟರು ತಪ್ಪಿಸಿಕೊಳ್ಳಲಿದ್ದಾರೆ ಎಂದು ಸಾರ್ವಜನಿಕ ವಲಯದಲ್ಲಿ ಚರ್ಚೆಯಾಗುತ್ತಿದೆ.



ಯಾದಗಿರಿ ಜಿಲ್ಲೆಯಲ್ಲಿ ಜಪ್ತಿಮಾಡಲಾಗಿದ್ದ ಸಂಗ್ರಹಿಸಿಟ್ಟ ಅಕ್ರಮ ಪಡಿತರ ಅಕ್ಕಿ.

ಸಮಾಚಾರ ಸಣ್ಣದಲ್ಲ

ಸಿಂದಗಿ: ಪತ್ನಿಗೆ ಪತಿಯಿಂದ ಮಚ್ಚಿನೇಟು

ವಿಜಯಪುರ: ಪತ್ನಿ ಮೇಲೆ ಪತಿ ಹಾಡಹಗಲೇ ಮಾರಣಾಂತಿಕವಾಗಿ ಹಲ್ಲೆ ಮಾಡಿರುವ ಘಟನೆ ಸಿಂದಗಿ ಪಟ್ಟಣದಲ್ಲಿ ಸಂಭವಿಸಿದೆ. ಪತಿ ಅನಸುಯಾ ಮಾದರ್ (50) ಎಂಬಾಕೆ ಮೇಲೆ ಯಮನಪ್ಪ ಮಾದರ್ (60) ಹಲ್ಲೆ ಮಾಡಿದ್ದಾನೆ. ಕೌಟುಂಬಿಕ ಕಲಹ ಹಿನ್ನೆಲೆಯಲ್ಲಿ ಯಮನಪ್ಪ ಪತ್ನಿ ಮೇಲೆ ನಡು ರಸ್ತೆಯಲ್ಲೇ ಅಟ್ಟಾಡಿಸಿ ಮಚ್ಚಿನಿಂದ ಹಲ್ಲೆ ಮಾಡಿದ್ದಾನೆ. ಬಿಡಿಸಲು ಬಂದ ಸ್ಥಳೀಯರಿಗೆ ಮಚ್ಚು ತೋರಿಸಿ ಬೆದರಿಸಿದ್ದಾನೆ. ಈ ವೇಳೆ ಸಾರ್ವಜನಿಕರು ಹಲ್ಲೆಕೋರನಿಗೆ ಕಲ್ಲು ಹಾಗೂ ಡೊಣ್ಣೆಯಿಂದ ತಲೆಗೆ ಹೊಡೆದುರುಳಿಸಿದ್ದಾರೆ. ಸದ್ಯ ಇಬ್ಬರ ಸ್ಥಿತಿ ಗಂಭೀರವಾಗಿದ್ದು ಸಿಂದಗಿ ತಾಲೂಕಾ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗಿದ್ದು, ಬಳಿಕ ಹೆಚ್ಚಿನ ಚಿಕಿತ್ಸೆಗಾಗಿ ವಿಜಯಪುರ ಜಿಲ್ಲಾಸ್ಪತ್ರೆಗೆ ಪತ್ನಿಯನ್ನು ರವಾನೆ ಮಾಡಲಾಗಿದೆ. ಹಲ್ಲೆ ವಿಡಿಯೊ ಸ್ಥಳೀಯರ ಮೊಬೈಲ್‌ನಲ್ಲಿ ಸೆರೆಯಾಗಿದೆ.

ಅಪಘಾತ: ದಂಪತಿ ಸ್ಥಳದಲ್ಲೇ ದುರ್ಮರಣ

ನೆಲಮಂಗಲ: ತಾಲೂಕಿನ ಟಿ.ಬೇಗೂರ ಬಳಿ ಲಾರಿ, ಕಾರು ನಡುವೆ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಕಾರಿನಲ್ಲಿದ್ದ ದಂಪತಿ ಸ್ಥಳದಲ್ಲೇ

ಮೃತಪಟ್ಟಿರುವ ಘಟನೆ ತುಮಕೂರು- ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಶುಕ್ರವಾರ ನಡೆದಿದೆ. ಗದಗ ಜಿಲಗೆಲೆ ರೋಣ ತಾಲೂಕಿನ ಕೃಷ್ಣಾಪೂರ ಮೂಲದ ಶಿವನಗೌಡ (60) ಮತ್ತು ಪತ್ನಿ ಪ್ರಮೀಳಾ (55) ಮೃತ ದುರ್ದೈವಿಗಳು. ಕುಟುಂಬದ ಮೂಲಗಳ ಪ್ರಕಾರ ಮೃತ ಪ್ರಮೀಳಾ ಪಾಟೀಲ ಅವರ ತಾಯಿ ಹೊನ್ನಮ್ಮ ಪೋಲಿಸ್ ಪಾಟೀಲ ಅವರಿಗೆ ಹೃದಯ ಸಂಬಂಧಿ ಕಾಯಿಲೆಗೆ ಸಂಬಂಧಿಸಿದ ಚಿಕಿತ್ಸೆಗಾಗಿ ರೋಣದಿಂದ ಬೆಂಗಳೂರಿನ ನಾರಾಯಣ ಆಸ್ಪತ್ರೆಗೆ ತೆರಳುತ್ತಿದ್ದಾಗ ನೆಲಮಂಗಲ ತಾಲೂಕಿನ ಟಿ. ಬೇಗೂರ ಬಳಿ ಅವರ ಕಾರಿಗೆ ಲಾರಿ ಡಿಕ್ಕಿ ಹೊಡೆದಿದೆ. ಈ ಭೀಕರ ಅಪಘಾತದಲ್ಲಿ ಶಿವನಗೌಡ, ಪ್ರಮೀಳಾ ಸ್ಥಳದಲ್ಲೇ ಪ್ರಾಣ ಕಳೆದುಕೊಂಡಿದ್ದಾರೆ. ಇನ್ನುಳಿದ ಹೊನ್ನಮ್ಮ ಪೊಲೀಸ್ ಪಾಟೀಲ, ಬಸವರಾಜ ಗಂಗರಗೊಂಡ, ಸುನೀಲ ಸೋಮನಗೌಡ್ರ ಅವರಿಗೆ ಗಾಯಗಳಾಗಿವೆ.

ಮಳೆಗೆ ಗೋಡೆ ಕುಸಿದು ವೃದ್ಧೆ ಸಾವು

ಹಾಸನ: ಒಂದು ವಾರದಿಂದ ಸುರಿಯುತ್ತಿರುವ ಮಳೆಗೆ ಗೋಡೆ ಕುಸಿದು ವೃದ್ಧೆಯೊಬ್ಬರು ಸಾವನ್ನಪ್ಪಿದ ಘಟನೆ ಅರಕಲಗೂಡು ತಾಲೂಕಿನ

ಮತ್ತಿಗೋಡು ಗ್ರಾಮದಲ್ಲಿ ನಡೆದಿದೆ. ಮೃತ ಮಹಿಳೆಯನ್ನು ಜವರಮ್ಮ (63) ಎಂದು ಗುರುತಿಸ ಲಾಗಿದೆ. ಮುಂಜಾನೆ 5:30ರ ಸುಮಾರಿಗೆ ಈ ದುರಂತ ನಡೆದಿದೆ. ಇನ್ನೂ ಮನೆಯಲ್ಲಿ ಮಲಗಿದ್ದ ವೃದ್ಧೆಯ ಮಗ ಪ್ರಾಣಾಪಾಯದಿಂದ ಪಾರಾಗಿದ್ದಾನೆ. ಸ್ಥಳಕ್ಕೆ ಸ್ಥಳೀಯ ಶಾಸಕ ಎ.ಮಂಜು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಮೃತರ ಕುಟುಂಬಸ್ಥರಿಗೆ ಸಾಂತ್ವನ ಹೇಳಿ, ಸೂಕ್ತ ಕ್ರಮಕ್ಕೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಕೊಣನೂರು ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದೆ. ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಬಕೆಟ್ ನೀರಲ್ಲಿ 14 ತಿಂಗಳ ಮಗು ಸಾವು

ಹಾವೇರಿ: ಹಾವೇರಿಯ ಶಿವಬಸವನಗರದ ಮನೆಯೊಂದರ ಎದುರು ತುಂಬಿಟ್ಟಿದ್ದ ಬಕೆಟ್ ನೀರಿನಲ್ಲಿ

ಬಿದ್ದು ಅಸ್ವಸ್ಥಗೊಂಡಿದ್ದ 14 ತಿಂಗಳ ದಕ್ಷಿತ್ ಎಂಬ ಮಗು ಹಾವೇರಿ ಜಿಲ್ಲಾಸ್ಪತ್ರೆಯಲ್ಲಿ ಗುರುವಾರ ರಾತ್ರಿ ಮೃತಪಟ್ಟಿದೆ. ಈ ಅವಘಡದ ಬಗ್ಗೆ ಹಾವೇರಿ ಶಹರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮನೆ ಮುಂಭಾಗದಲ್ಲಿ ಅ.19ರಂದು ಮಗು ಆಟವಾಡುತ್ತಿತ್ತು. ಮನೆಯ ಎದುರು ನೀರು ತುಂಬಿದ್ದ ಬಕೆಟ್‌ನಲ್ಲಿ ತಲೆ ಕೆಳಗಾಗಿ ಮಗು ಬಿದ್ದಿತ್ತು. ಅಲ್ಲಿಯೇ ಪ್ರಜ್ಞೆ ತಪ್ಪಿತ್ತು. ಬಕೆಟ್‌ನಲ್ಲಿ ಮಗುವಿನ ಕಾಲು ನೋಡಿದ್ದ ಪೋಷಕರು ಹಾಗೂ ಸ್ಥಳೀಯರು, ಮಗುವನ್ನು ಮೇಲಕ್ಕೆ ಎತ್ತಿ ಜಿಲ್ಲಾ ಆಸ್ಪತ್ರೆಗೆ ಕರೆದೊಯ್ದಿದ್ದರು. ಅಲ್ಲಿಯೇ ಚಿಕಿತ್ಸೆಗೆ ಸ್ಪಂದಿಸದೇ ಮಗು ಮೃತಪಟ್ಟಿದೆ ಎಂದು ಪೊಲೀಸರು ತಿಳಿಸಿದರು.

ಬಿ.ಆರ್. ಅಂಬೇಡ್ಕರ್ ನಾಮಫಲಕ ವಿರೂಪ

ಚಾಮರಾಜನಗರ: ಕಿಡಿಗೇಡಿಗಳು ಬುದ್ದನ ವಿಗ್ರಹವನ್ನು ಒಡೆದು ಹಾಕಿ, ಡಾ.ಬಿ.ಆರ್.ಅಂಬೇಡ್ಕರ್ ನಾಮಫಲಕವನ್ನು ಕಿತ್ತು ವಿರೂಪಗೊಳಿಸಿದ ಘಟನೆ ತಡರಾತ್ರಿ ಚಾಮರಾಜನಗರ ತಾಲೂಕಿನ ಜ್ಯೋತಿಗೌಡನಪುರ ಗ್ರಾಮದಲ್ಲಿ ನಡೆದಿದೆ. ಜ್ಯೋತಿಗೌಡನಪುರ ಗ್ರಾಮದ ಗುಡಿಯೊಳಗಿಂದ ಬುದ್ದನ ವಿಗ್ರಹವನ್ನು ಹೊರತಂದು ಕಿಡಿಗೇಡಿಗಳು ಒಡೆದು ಹಾಕಿದ್ದಾರೆ. ಅಲ್ಲದೆ, ಗ್ರಾಮದ ಪ್ರಮುಖ ಸ್ಥಳದಲ್ಲಿದ್ದ ಅಂಬೇಡ್ಕರ್ ನಾಮಫಲಕವನ್ನು ಹರಿದು, ಬರಹವನ್ನು ಅಳಿಸಿ ವಿಕೃತಗೊಳಿಸಿದ್ದಾರೆ. ಚಾಮರಾಜನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ.ಕವಿತಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಸಿಸಿಟಿವಿ ದೃಶ್ಯಗಳು, ಸ್ಥಳೀಯರ ಮಾಹಿತಿ ಆಧಾರದ ಮೇಲೆ ಕಿಡಿಗೇಡಿಗಳನ್ನು ಪತ್ತೆಹಚ್ಚಲು ಪೊಲೀಸರು ತೀವ್ರ ಶೋಧ ನಡೆಸುತ್ತಿದ್ದಾರೆ. ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದ್ದು, ತಕ್ಷಣ ಕಿಡಿಗೇಡಿಗಳನ್ನು ಬಂಧಿಸಿ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದ್ದಾರೆ. ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದಾರೆ. ಶಾಂತಿ ಕಾಪಾಡಲು ಪೊಲೀಸ್ ಬಂದೋಬಸ್ತ್ ಜಾರಿಗೊಳಿಸಲಾಗಿದೆ.

ಸಮೀಕ್ಷೆಯಲ್ಲಿ ಮಂಡ್ಯ ನಂ.1

ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆಯಲ್ಲಿ 98.3ರಷ್ಟು ಪ್ರಗತಿ | ಸಿಬ್ಬಂದಿಗೆ ಡಿಸಿ ಕುಮಾರ ಧನ್ಯವಾದ

ಮಂಡ್ಯ: ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ವತಿಯಿಂದ ನಡೆಸುತ್ತಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿ ಮಂಡ್ಯ ಜಿಲ್ಲೆಯು ಶೇ 98.03ರಷ್ಟು ಪ್ರಗತಿ ಸಾಧಿಸಿದ್ದು, ರಾಜ್ಯದ 31 ಜಿಲ್ಲೆಗಳ ಪೈಕಿ ಅಗ್ರಸ್ಥಾನ ಗಳಿಸಿದೆ.

ಮಂಡ್ಯ ಜಿಲ್ಲೆಯಲ್ಲಿ 5,04,016 ಒಟ್ಟು ಕುಟುಂಬಗಳಿದ್ದು, 18,66,350 ಜನಸಂಖ್ಯೆಯಿದೆ. ಇದುವರೆಗೆ 18,29,582 ಮಂದಿಯನ್ನು ಸಮೀಕ್ಷೆ ಮಾಡಲಾಗಿದ್ದು, ಶೇ 98.03ರಷ್ಟು ಪ್ರಗತಿ ಸಾಧಿಸಲಾಗಿದೆ.

ತುಮಕೂರು (ಶೇ 97.03) ಮತ್ತು ಚಿಕ್ಕಮಗಳೂರು (ಶೇ 96.02) ಎರಡು ಮತ್ತು ಮೂರನೇ ಸ್ಥಾನದಲ್ಲಿವೆ. ಚಿತ್ರದುರ್ಗ, ಹಾವೇರಿ, ದಾವಣಗೆರೆ ಜಿಲ್ಲೆಗಳು ಕ್ರಮವಾಗಿ 4 ರಿಂದ 6ನೇ ಸ್ಥಾನದಲ್ಲಿವೆ. ಕೋಲಾರ (83.72), ಬೀದರ್ (ಶೇ 83.32), ಯಾದಗಿರಿ (ಶೇ 83.02), ಬಳ್ಳಾರಿ (ಶೇ 82.19), ಧಾರವಾಡ (ಶೇ 80.96) ಈ ಐದೂ ಜಿಲ್ಲೆಗಳು ಕಡೆಯ ಸ್ಥಾನದಲ್ಲಿವೆ.

ರಾಜ್ಯದ 31 ಜಿಲ್ಲೆಗಳಲ್ಲಿ 1.48 ಕೋಟಿ ಕುಟುಂಬಗಳಿದ್ದು, ಇದರಲ್ಲಿ 1.43 ಕೋಟಿ ಕುಟುಂಬಗಳನ್ನು ಸಮೀಕ್ಷೆ ಮಾಡಲಾಗಿದೆ. 6.14 ಕೋಟಿ ಜನಸಂಖ್ಯೆಯಲ್ಲಿ ಇದುವರೆಗೆ 5.43 ಕೋಟಿ ಮಂದಿಯನ್ನು ಸಮೀಕ್ಷೆ ಮಾಡಲಾಗಿದ್ದು, ಶೇ 88.03ರಷ್ಟು ಪ್ರಗತಿಯಾಗಿದೆ ಎಂದು ಹಿಂದುಳಿದ ವರ್ಗಗಳ ಆಯೋಗದ ಜಾಲತಾಣದಲ್ಲಿ ಮಾಹಿತಿ ಲಭ್ಯವಾಗಿದೆ.

4,651 ಸಮೀಕ್ಷೆದಾರರ ನೇಮಕ: ಈ ಸಮೀಕ್ಷೆಗೆ ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಅವರು ಮಂಡ್ಯ ನಗರದ ವಾರ್ಡ್ ನಂ.20ರಲ್ಲಿರುವ ಬಸವರಾಜು ಎಚ್.ಸಿ ಅವರ ಮನೆಯಿಂದ ಸೆ.22ರಂದು ಚಾಲನೆ ನೀಡಿದ್ದರು. ಮಂಡ್ಯ ಜಿಲ್ಲೆಯಲ್ಲಿ 5,04,016 ಕುಟುಂಬಗಳಿದ್ದು, 4,651 ಸಮೀಕ್ಷೆದಾರರನ್ನು ನಿಯೋಜಿಸಲಾಗಿದೆ. ಒಬ್ಬ ಗಣತಿದಾರರಿಗೆ 120 ಕುಟುಂಬಗಳಂತೆ ಬ್ಲಾಕ್ ಹಂಚಿಕೆ ಮಾಡಲಾಗಿದೆ. 20 ಗಣತಿದಾರರಿಗೆ ಒಬ್ಬ ಮೇಲ್ವಿಚಾರಕರನ್ನು ನೇಮಕ ಮಾಡಲಾಗಿದೆ.

ಸ್ಥಾನ	ಜಿಲ್ಲೆ	ಸಮೀಕ್ಷೆ ಪ್ರಮಾಣ
1	ಮಂಡ್ಯ	98.03
2	ತುಮಕೂರು	97.03
3	ಚಿಕ್ಕಮಗಳೂರು	96.02
4	ಚಿತ್ರದುರ್ಗ	95.51
5	ಹಾವೇರಿ	94.66
6	ದಾವಣಗೆರೆ	93.02
7	ಕೊಪ್ಪಳ	92.65
8	ಗದಗ	92.09
9	ರಾಯಚೂರು	91.55
10	ಬೆಂಗಳೂರು ದಕ್ಷಿಣ	91.31

ಅ.31ರವರೆಗೆ ವಿಸ್ತರಣೆ: ಸೆಪ್ಟೆಂಬರ್ 22ರಿಂದ ಅಕ್ಟೋಬರ್ 7ರೊಳಗೆ ಸಮೀಕ್ಷೆ ಪೂರ್ಣಗೊಳಿಸಲು ಒಟ್ಟು 16 ದಿನಗಳ ಗಡುವು ನೀಡಲಾಗಿತ್ತು. ಕೆಲವು ಜಿಲ್ಲೆಗಳಲ್ಲಿ ಸಮೀಕ್ಷೆ ಪೂರ್ಣಗೊಳ್ಳದ ಕಾರಣ ಸರಕಾರ ಮತ್ತೆ ಅ.18ರವರೆಗೆ ದಿನಾಂಕ ವಿಸ್ತರಿಸಿತ್ತು. ಮತ್ತೆ ಅ.31ರವರೆಗೆ ಸಮೀಕ್ಷೆ ಅವಧಿಯನ್ನು ಮುಖ್ಯಮಂತ್ರಿಯವರು ವಿಸ್ತರಣೆ ಮಾಡಿದ್ದಾರೆ. ದಸರಾ ರಜೆ ಕಳೆದು ಶಾಲೆಗಳು ಆರಂಭವಾಗಿರುವ ಕಾರಣ ಮುಂದಿನ 9 ದಿನ ನಡೆಯಲಿರುವ ಸಮೀಕ್ಷಾ ಕಾರ್ಯದಲ್ಲಿ ಶಿಕ್ಷಕರನ್ನು ಬಳಕೆ ಮಾಡಿಕೊಳ್ಳದಿರಲು ತೀರ್ಮಾನಿಸಲಾಗಿದೆ.

ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿ ಮಂಡ್ಯ ಜಿಲ್ಲೆಯ 7 ತಾಲೂಕುಗಳ ಪೈಕಿ ನಾಗಮಂಗಲ, ಕೃಷ್ಣರಾಜಪೇಟೆ, ಮದ್ದೂರು, ಮಳವಳ್ಳಿ ಈ 4 ತಾಲ್ಲೂಕುಗಳು ಶೇ 100ರಷ್ಟು ಪ್ರಗತಿ ಸಾಧಿಸಿವೆ. ಉಳಿದ 3 ತಾಲೂಕುಗಳಾದ ಪಾಂಡವಪುರ (ಶೇ 99.39), ಮಂಡ್ಯ (ಶೇ 95.17) ಶ್ರೀರಂಗಪಟ್ಟಣ (ಶೇ 93.81)ರಷ್ಟು ಪ್ರಗತಿ ಸಾಧಿಸಿವೆ.

> ಈ ಸಮೀಕ್ಷಾ ಕಾರ್ಯ ನಮ್ಮೆಲ್ಲರ ಜವಾಬ್ದಾರಿ ಎಂಬ ಮನೋಭಾವದೊಂದಿಗೆ ಪರಿಭಾವಿಸಿ ಪ್ರತಿ ಹಂತದಲ್ಲೂ ನಮ್ಮೊಟ್ಟಿಗೆ ಸಹಕರಿಸುವ ಮೂಲಕ ನಿಮ್ಮ ಬದ್ಧತೆ ಮತ್ತು ಕರ್ತವ್ಯ ತತ್ಪರತೆಯನ್ನು ಪ್ರದರ್ಶಿಸಿರುತ್ತೀರಿ. ನಿಮ್ಮ ತಂಡ ಸ್ಫೂರ್ತಿ, ಇಚ್ಛಾ ಶಕ್ತಿಯ ಜತೆಗೆ ಮಂಡ್ಯ ಜಿಲ್ಲೆಯ ಸಾರ್ವಜನಿಕರು ಧನಾತ್ಮಕವಾಗಿ ಸ್ಪಂದನೆ ನೀಡಿ ಸಹಕರಿಸಿದ್ದು ಸಹ ಯಶಸ್ಸಿಗೆ ಕಾರಣವಾಗಿದೆ. ಮೇಲಾಧಿಕಾರಿಗಳು ಹಾಗೂ ಕೆಳ ಮಟ್ಟದ ಸಿಬ್ಬಂದಿ ಶ್ರಮಕ್ಕೆ ಅಭಿನಂದನೆ.
>
> -ಡಾ.ಕುಮಾರ ಮಂಡ್ಯ ಜಿಲ್ಲಾಧಿಕಾರಿ

ಟಿಬಿ ಡ್ಯಾಂ: 3 ಕ್ರೆಸ್ಟ್‌ಗೇಟ್ ತೆರೆದು ನೀರು ಹೊರಕ್ಕೆ

ಹೊಸಪೇಟೆ: ಶಿವಮೊಗ್ಗ, ಚಿಕ್ಕಮಗಳೂರು ಸಹಿತ ಅಚ್ಚುಕಟ್ಟು ಪ್ರದೇಶದಲ್ಲಿ ಮಳೆಯಾಗುತ್ತಿರುವುದರಿಂದ ತುಂಗಭದ್ರಾ ಜಲಾಶಯದಲ್ಲಿ ಒಳಹರಿವು

ಪ್ರಮಾಣ ಹೆಚ್ಚಿದ್ದು, ಶುಕ್ರವಾರ ಅಣೆಕಟ್ಟೆಯ ಮೂರು ಕ್ರೆಸ್ಟ್‌ಗೇಟ್‌ಗಳನ್ನು ತೆರೆದು 8,970 ಕ್ಯೂಸೆಕ್‌ನಷ್ಟು ನೀರನ್ನು ನದಿಗೆ ಹರಿಸಲಾಗಿದೆ.

'ಕಾಲುವೆ ಮತ್ತು ವಿದ್ಯುತ್ ಉತ್ಪಾದನೆಗಾಗಿ 13,524 ಕ್ಯೂಸೆಕ್‌ನಷ್ಟು ನೀರು ಹರಿಯುತ್ತಿದೆ. ಈ ಮೂಲಕ ಜಲಾಶಯದಿಂದ ಒಟ್ಟು 22,938 ಕ್ಯೂಸೆಕ್ನಷ್ಟು ನೀರಿನ ಹೊರಹರಿವು ಇದೆ. ಮೂರು ಕ್ರೆಸ್ಟ್‌ಗೇಟ್‌ಗಲನ್ನು ತಲಾ 2.5 ಅಡಿಯಷ್ಟು ಎತ್ತಿ ನೀರನ್ನು ಹೊರಬಿಡುಲಾಗುತ್ತಿದೆ. ಸದ್ಯ ಒಳಹರಿವಿನ ಪ್ರಮಾಣ 22,938 ಕ್ಯೂಸೆಕ್ ನಷ್ಟಿದೆ. ಒಂದು ವೇಳೆ ಒಳಹರಿವಿನ ಪ್ರಮಾಣದಲ್ಲಿ ಹೆಚ್ಚಳವಾದರೆ ಇನ್ನಷ್ಟು ಗೇಟ್‌ಗಳನ್ನು ತೆರೆದು ನೀರನ್ನು ನದಿಗೆ ಹರಿಸಲಾಗುವುದು. ನದಿ ಪಾತ್ರದ ಜನರು ಎಚ್ಚರಿಕೆಯಿಂದ ಇರಬೇಕು ಎಂದು ತುಂಗಭದ್ರಾ ಮಂಡಳಿ ತಿಳಿಸಿದೆ.

80 ಟಿಎಂಸಿಗಿಂತ ಹೆಚ್ಚು ನೀರು ಸಂಗ್ರಹ ಅಸಾಧ್ಯ

1,633 ಅಡಿ ಎತ್ತರದ ಅಣೆಕಟ್ಟೆಯ ಕ್ರೆಸ್ಟ್‌ಗೇಟ್‌ಗಳು ಶಿಥಿಲಗೊಂಡಿವೆ, ಎಲ್ಲವನ್ನೂ ಬದಲಿಸಬೇಕು ಎಂಬ ತಜ್ಞರ ವರದಿಯ ಹಿನ್ನೆಲೆಯಲ್ಲಿ ಹಾಗೂ ತಜ್ಞರೇ ನೀಡಿದ ಸಲಹೆಯಂತೆ ಈ ಮಳೆಗಾಲದಲ್ಲಿ ಗರಿಷ್ಠ 1,626 ಅಡಿ ಎತ್ತರಕ್ಕಷ್ಟೇ (80 ಟಿಎಂಸಿ ಅಡಿ) ನೀರು ಸಂಗ್ರಹಿಸಿ ಇಟ್ಟುಕೊಳ್ಳಲಾಗಿದೆ. ಈಚೆಗೆ ಒಳಹರಿವಿನ ಪ್ರಮಾಣ 4,700 ಕ್ಯೂಸೆಕ್‌ಗಿಂತಲೂ ಕಡಿಮೆ ಮಟ್ಟಕ್ಕೆ ಇಳಿದಿತ್ತು. ಹೀಗಾಗಿ ಜಲಾಶಯದಿಂದ ಕಾಲುವೆಗಳಿಗೆ ನೀರು ಹರಿಯುತ್ತ 78 ಟಿಎಂಸಿ ಅಡಿಗೆ ನೀರು ಇಳಿದಿತ್ತು. ಇದೀಗ ಹಿಂಗಾರು ಮಳೆ ಬಿರುಸುಗೊಂಡಿರುವುದರಿಂದ ಮತ್ತೆ ಜಲಾಶಯಕ್ಕೆ ನೀರು ಹರಿದುಬರುತ್ತಿದ್ದು, 80 ಟಿಎಂಸಿ ಅಡಿಗಿಂತ ಹೆಚ್ಚು ನೀರು ಸಂಗ್ರಹ ಸಾಧ್ಯವಿಲ್ಲದ ಕಾರಣ ಹೆಚ್ಚುವರಿ ನೀರನ್ನು ಕ್ರೆಸ್ಟ್‌ಗೇಟ್ ತೆರೆದು ನದಿಗೆ ಹರಿಸುವುದು ಅನಿವಾರ್ಯವಾಗಿದೆ.

ಯಕ್ಷಗಾನ ಕಲಾವಿದ ಸುಜನಾ ಸುಳ್ಯ ನಿಧನ

ಸುಳ್ಯ: ತೆಂಕು ತಿಟ್ಟಿನ ಯಕ್ಷಗಾನ ಕಲಾವಿದ ಸುಳ್ಯದ 'ರಂಗಮನೆ'ಯ ಯಜಮಾನ ಸುಜನಾ ಸುಳ್ಯ (89) ಅವರು ವಯೋಸಹಜ ಅನಾರೋಗ್ಯದಿಂದ ಶುಕ್ರವಾರ

ನಿಧನರಾದರು. ಅವರಿಗೆ ಪುತ್ರ, ರಂಗಕರ್ಮಿ ಜೀವನರಾಂ ಸುಳ್ಯ ಮತ್ತು ಪುತ್ರಿ ಇದ್ದಾರೆ. ಸುಳ್ಯದ ಪ್ರಸಿದ್ಧ ನಾವೂರು ಮನೆತನದಲ್ಲಿ ಜನಿಸಿದ ಸುಜನಾ ಅವರು ನಾಟಕ ನಟರಾಗಿ ವೃತ್ತಿ ಆರಂಭಿಸಿದರು. ಮಾವ ಕಾವು ಶ್ರೀನಿವಾಸ ರಾಯರ ಪ್ರೇರಣೆಯಿಂದ ಯಕ್ಷಗಾನ ಕಲಾವಿದರಾಗಿ ಬಳ್ಳಂಬೆಟ್ಟು, ಧರ್ಮಸ್ಥಳ, ಇರಾ ಸೋಮನಾಥೇಶ್ವರ, ಕುದ್ರೋಳಿ, ಕೂಡ್ಲು, ಆದಿಸುಬ್ರಹ್ಮಣ್ಯ, ಸುಂಕದಕಟ್ಟೆ, ಕಟೀಲು ಮೇಳಗಳಲ್ಲಿ 36 ವರ್ಷ ಕಲಾಸೇವೆ ಮಾಡಿದ್ದರು. ಯಕ್ಷಗಾನ ಗುರುಗಳಾಗಿ ಸುಳ್ಯದಲ್ಲಿ 'ವಿದೇಯದೇವಿ ನಾಟ್ಯಕಲಾ ಸಂಘ' ಸ್ಥಾಪಿಸಿ, ರಂಗ ಮನೆಯ 'ಸುಜನಾ ಯಕ್ಷಗಾನ ಅಧ್ಯಯನ ಕೇಂದ್ರ'ದ ಮೂಲಕ ಹಲವರ ಯಕ್ಷಗಾನ ಕಲಿಕೆಗೆ ಪ್ರೇರಕ ಶಕ್ತಿಯಾಗಿದ್ದರು.

ಕೇಂದ್ರದಿಂದ ಸೇಡಿನ ರಾಜಕಾರಣ

ರಾಜ್ಯಕ್ಕೆ ನಿರಂತರವಾಗಿ ಮಲತಾಯಿ ಧೋರಣೆ

ಕಲಬುರಗಿ: ಕೇಂದ್ರ ಸರಕಾರವು ರಾಜ್ಯಕ್ಕೆ ನಿರಂತರವಾಗಿ ಮಲತಾಯಿ ಧೋರಣೆ

ಅನುಸರಿಸುತ್ತಿದ್ದು, ಸೇಡಿನ ರಾಜಕಾರಣ ಮಾಡುತ್ತಿದೆ ಎಂದು ಸಚಿವ ಡಾ.ಶರಣಪ್ರಕಾಶ ಪಾಟೀಲ ಟೀಕಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಈ ಹಿಂದೆಯೂ ವಿಮಾನ ಸಂಚಾರ ಸ್ಥಗಿತಗೊಂಡಾಗ ಮರು ಕಾರ್ಯಾಚರಣೆಗೆ ಆಗ್ರಹಿಸಿದಾಗ ವಿಮಾನಗಳ ಸೇವೆ ಶುರುವಾಗಿತ್ತು. ಇದೀಗ ಪುನಃ ದಿಢೀರ್ ವಿಮಾನ ಸಂಚಾರ ಸ್ಥಗಿತಗೊಳಿಸಲಾಗಿದೆ. ಇದಲ್ಲದೆ ತೆರಿಗೆ ಹಂಚಿಕೆಯಲ್ಲಿಯೂ ರಾಜ್ಯಕ್ಕೆ ಅನ್ಯಾಯ ಮುಂದುವರಿದಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

135 ಕೋಟಿ ರು.ಗಳ ಚೆಕ್ ಸರಕಾರಕ್ಕೆ ಹಸ್ತಾಂತರ

ಕೆಎಸ್‌ಡಿಎಲ್‌ನ ಲಾಭಾಂಶದ ಶೇ.30ರಷ್ಟು ಹಣ ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಸಲ್ಲಿಕೆ

ಬೆಂಗಳೂರು: ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತವು (ಕೆಎಸ್‌ಡಿಎಲ್) 2024-25ನೇ ಸಾಲಿನ ಲಾಭದಲ್ಲಿ 135 ಕೋಟಿ ರುಪಾಯಿಗಳನ್ನು ಸರಕಾರಕ್ಕೆ ಶುಕ್ರವಾರ ಹಸ್ತಾಂತರಿಸಿದೆ.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಂಸ್ಥೆಯ ಪರವಾಗಿ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಮತ್ತು ಕೆಎಸ್‌ಡಿಎಲ್ ಅಧ್ಯಕ್ಷ ಅಪ್ಪಾಜಿ ನಾಡಗೌಡ ಚೆಕ್ ಅನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ನೀಡಿದರು. ಸಚಿವ ಪಾಟೀಲರು ಮಾತನಾಡಿ, ಕೆಎಸ್‌ಡಿಎಲ್ ಸಂಸ್ಥೆ ಕಳೆದ ಹಣಕಾಸು ವರ್ಷದಲ್ಲಿ 1,700 ಕೋಟಿ ರುಪಾಯಿ ವಹಿವಾಟು ನಡೆಸಿ, 451 ಕೋಟಿ ರು. ಲಾಭವನ್ನು ಗಳಿಸಿದೆ. ಇದರ ಪೈಕಿ ನಿಯಮದಂತೆ ಶೇ.30ರಷ್ಟು ಲಾಭಾಂಶವನ್ನು ಸರಕಾರಕ್ಕೆ ಕೊಡಲಾಗಿದೆ. ವಹಿವಾಟು, ಲಾಭ ಮತ್ತು ಲಾಭಾಂಶ ಮೂರರಲ್ಲೂ ಇದು ಸಾರ್ವಕಾಲಿಕ ದಾಖಲೆಯಾಗಿದೆ ಎಂದಿದ್ದಾರೆ.

2022-23ರಲ್ಲಿ ಬಿಜೆಪಿ ಸರಕಾರವಿದ್ದಾಗ ಸಂಸ್ಥೆಯ ವತಿಯಿಂದ ಸರಕಾರಕ್ಕೆ 54 ಕೋಟಿ ರುಪಾಯಿ ಡಿವಿಡೆಂಡ್ (ಲಾಭಾಂಶ) ಕೊಡಲಾಗಿತ್ತು. 2023-24ರಲ್ಲಿ 108 ಕೋಟಿ ಲಾಭಾಂಶ ಹಸ್ತಾಂತರಿಸಲಾಗಿತ್ತು. ಇದಕ್ಕೆ ಹೋಲಿಸಿದರೆ ಲಾಭಾಂಶದಲ್ಲಿ ಈಗ 27 ಕೋಟಿ ಹೆಚ್ಚಳವಾಗಿದೆ. ಮುಂಬರುವ ವರ್ಷಗಳಲ್ಲಿ ಇದು ಮತ್ತಷ್ಟು ಹೆಚ್ಚಲಿದೆ ಎಂದು ವಿಶ್ವಾಸವ್ಯಕ್ತಪಡಿಸಿದರು.



ಕೆಎಸ್‌ಡಿಎಲ್ ಪರವಾಗಿ ಸಿಎಂ ಸಿದ್ದರಾಮಯ್ಯ ಅವರಿಗೆ ಸಚಿವ ಎಂ.ಬಿ.ಪಾಟೀಲ್, ಕೆಎಸ್‌ಡಿಎಲ್ ಅಧ್ಯಕ್ಷ ಅಪ್ಪಾಜಿ ಗೌಡ ಚೆಕ್ ವಿತರಿಸಿದರು.

ಚೆಕ್ ಹಸ್ತಾಂತರದ ಸಮಯದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವ ಕೆ.ಜೆ.ಜಾರ್ಜ್, ಪ್ರಿಯಾಂಕ್ ಖರ್ಗೆ, ಡಾ.ಎಂ.ಸಿ.ಸುಧಾಕರ್, ಸಂತೋಷ್ ಲಾಡ್, ಸರಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್, ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಡಾ.ಪಿ.ಕೆ.ಪ್ರಶಾಂತ್ ಉಪಸ್ಥಿತರಿದ್ದರು.

ಹೋರಿ ಗುದ್ದಿ ಸಾವನ್ನಪ್ಪಿದವರ ಸಂಖ್ಯೆ ನಾಲ್ಕಕ್ಕೇರಿಕೆ

ಹೋರಿ ಮಾಲೀಕರು, ಆಯೋಜಕರ ವಿರುದ್ಧ ಪ್ರಾಣಿ ಹಿಂಸೆ, ನಿರ್ಲಕ್ಷ್ಯ ಆರೋಪದಡಿ ಕ್ರಿಮಿನಲ್ ಪ್ರಕರಣ

ಹಾವೇರಿ: ಜಿಲ್ಲೆಯಾದ್ಯಂತ ಹಟ್ಟಿ ಹಬ್ಬದ ಅಂಗವಾಗಿ ಬುಧವಾರ ಆಯೋಜಿಸಿದ್ದ ಹೋರಿ ಬೆದರಿಸುವ ಆಚರಣೆ ವೇಳೆ ಅವಘಡ ಸಂಭವಿಸಿ ನಾಲ್ವರು ಮೃತಪಟ್ಟಿದ್ದು, ಪ್ರಾಣಿ ಹಿಂಸೆ ಹಾಗೂ ನಿರ್ಲಕ್ಷ್ಯದ ಆರೋಪದಡಿ ಪೊಲೀಸರು ಕ್ರಿಮಿನಲ್ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ದೀಪಾವಳಿ ಹಬ್ಬವನ್ನು ಜಿಲ್ಲೆಯ ಜನರು, ಹಟ್ಟಿ ಹಬ್ಬ (ಹಟ್ಟಿ ಲಕ್ಕವ್ವ ಪೂಜೆ) ಎಂದೇ ಆಚರಿಸುತ್ತಾರೆ. ಹಬ್ಬದ ದಿನದಂದು ಹೋರಿಗಳನ್ನು ಅಲಂಕರಿಸಿ ಪೂಜೆ ಮಾಡುತ್ತಾರೆ. ಇದೇ ಹೋರಿಗಳನ್ನು ಕಿಕ್ಕಿರಿದು ಸೇರುವ ಜನರ ನಡುವೆ ಓಡಿಸುತ್ತಾರೆ. ಈ ಗ್ರಾಮೀಣ ಆಚರಣೆ ವೇಳೆಯಲ್ಲಿಯೇ ಈ ವರ್ಷ ನಾಲ್ವರು ಮೃತಪಟ್ಟಿದ್ದು, 30ಕ್ಕೂ ಹೆಚ್ಚು ಜನರು ಗಾಯಗೊಂಡು ಪ್ರಾಥಮಿಕ ಚಿಕಿತ್ಸೆ ಪಡೆದುಕೊಂಡಿದ್ದಾರೆ.

ಹಾವೇರಿಯ ದಾನೇಶ್ವರಿನಗರದ ಚಂದ್ರಶೇಖರ ಕೋಡಿಹಳ್ಳಿ (75), ಹಾವೇರಿ ತಾಲೂಕಿನ ದೇವಿಹೊಸೂರಿನ ಘನಿಸಾಬ ಮಹಮ್ಮದ್ ಹುಸೇನ್ ಬಂಕಾಪುರ (75), ಹಾನಗಲ್ ತಾಲೂಕಿನ ತಿಳವಳ್ಳಿಯ ಭರತ್ ರಾಮಪ್ಪ ಹಿಂಗಮೇರಿ (24), ಯಳವಟ್ಟಿ ಗ್ರಾಮದ ಶ್ರೀಕಾಂತ ಗುರುಶಾಂತಪ್ಪ ಕೋಣನಕೇರಿ (40) ಎಂಬುವವರು ಅವಘಡದಲ್ಲಿ ಮೃತಪಟ್ಟಿದ್ದಾರೆ.

ದೀಪಾವಳಿ ಹಬ್ಬದ ಹಿನ್ನೆಲೆ ಹಾವೇರಿಯಲ್ಲಿ ನಡೆದ ಹೋರಿ ಬೆದರಿಸುವ ಸ್ಪರ್ಧೆ.

ಮೃತರ ಕುಟುಂಬಸ್ಥರು ಹಾಗೂ ಸಂಬಂಧಿಕರಿಂದ ಹೇಳಿಕೆ ಪಡೆಯಲಾಗಿದೆ. ಪ್ರಾಣಿ ಹಿಂಸೆ ಹಾಗೂ ಪ್ರಾಣಿಯನ್ನು ಪ್ರಚೋದಿಸಿ ನಿರ್ಲಕ್ಷ್ಯ ವಹಿಸಿ ಸಾವಿಗೆ ಕಾರಣವಾದ ಆರೋಪದಡಿ ಹೋರಿ ವಾರಸುದಾರರು/ಪೋಷಕರು, ಆಯೋಜಕರು ಹಾಗೂ ಇತರರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ. ಮುಂಬರುವ ದಿನಗಳಲ್ಲಿ ಸ್ಪರ್ಧೆಗಳು ನಡೆದರೆ, ಹೋರಿ ಮಾಲೀಕರು, ಆಯೋಜಕರು, ಪ್ರೋತ್ಸಾಹಕರು, ಬಹುಮಾನ ಕೊಡಿಸುವ ದಾನಿಗಳು ಹಾಗೂ ಪ್ರಚೋದಿಸುವ ಎಲ್ಲರ ವಿರುದ್ಧವೂ ಕ್ರಿಮಿನಲ್ ಪ್ರಕರಣ ದಾಖಲಿಸಲಾಗುವುದು ಎಂದು ಪೊಲೀಸರು ಎಚ್ಚರಿಕೆ ನೀಡಿದ್ದಾರೆ.

> ಹೋರಿ ಬೆದರಿಸುವ ಸ್ಪರ್ಧೆ ಆಯೋಜನೆಗೆ ಅನುಮತಿ ಇಲ್ಲ. ಇಂಥ ಸ್ಪರ್ಧೆಗಳನ್ನು ಆಯೋಜಿಸದಂತೆ ಹೋರಿ ಮಾಲೀಕರು ಆಯೋಜಕರಿಗೆ ಎಚ್ಚರಿಕೆಯ ನೋಟಿಸ್ ನೀಡಲಾಗುವುದು.
>
> - ಯಶೋಧಾ ವಂಟಗೋಡಿ ಎಸ್‌ಪಿ

ಪಿಡಿಪಿಎಸ್‌ನಡಿ ಈರುಳ್ಳಿ ಖರೀದಿಗೆ ಪ್ರಯತ್ನ

ಬೆಂಗಳೂರು: ಈರುಳ್ಳಿ ಬೆಲೆ ಕುಸಿತ ಹಿನ್ನೆಲೆಯಲ್ಲಿ ಪಿಡಿಪಿಎಸ್ (ಪ್ರೈಸ್ ಡಿಪಿಷಿಯನ್ಸಿ ಪ್ರೊಕ್ಯೂರ್ಮೆಂಟ್ ಸ್ಕೀಂ) ಅಡಿಯಲ್ಲಿ ಖರೀದಿಸುವ ಪ್ರಯತ್ನ ನಡೆದಿದೆ ಎಂದು ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ತಿಳಿಸಿದ್ದಾರೆ.

ಪ್ರಸಕ್ತ ಸಾಲಿನ ಮುಂಗಾರು ಹಂಗಾಮಿನಲ್ಲಿ ಸುರಿದ ಭಾರೀ ಮಳೆಗೆ ಕಟಾವಿಗೆ



ಬಂದಿರುವ ಈರುಳ್ಳಿ ಅಪಾರ ಪ್ರಮಾಣದಲ್ಲಿ ಹಾನಿಯಾಗಿದೆ. ಕಳೆದ ಸಾಲಿನ ಸರಾಸರಿ ಈರುಳ್ಳಿ ಮಾರುಕಟ್ಟೆ ಬೆಲೆಗೆ ಹೋಲಿಕೆ ಮಾಡಿದರೆ ಪ್ರಸಕ್ತ ಸಾಲಿನಲ್ಲಿ ಮಾರಾಟ ದರ ಉತ್ಪಾದನಾ ವೆಚ್ಚಕ್ಕಿಂತ ಕಡಿಮೆ ಇದೆ ಎಂದು ಅಧಿಕಾರಿಗಳು ವರದಿ ಮಾಡಿದ್ದಾರೆ. ಈ ಹಿನ್ನೆಲೆಯಲ್ಲಿ ಪಿಡಿಪಿಎಸ್ ಯೋಜನೆಯಲ್ಲಿ ಈರುಳ್ಳಿ ಖರೀದಿ ಮಾಡಲು ಅನುಮತಿ ನೀಡಬೇಕು ಎಂದು ಕೇಂದ್ರ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು ಎಂದು ಸ್ಪಷ್ಟಪಡಿಸಿದ್ದಾರೆ.

ರಾಜ್ಯದಲ್ಲಿ ಮುಂಗಾರು ಮತ್ತು ಹಿಂಗಾರು ಸೇರಿ ಒಟ್ಟು 2.05 ಲಕ್ಷ ಹೆಕ್ಟೆರ್ ಪ್ರದೇಶದಲ್ಲಿ ಈರುಳ್ಳಿ ಬೆಳೆಯಲಾಗುತ್ತಿದ್ದು, ವಾರ್ಷಿಕ ಉತ್ಪನ್ನ 27 ಲಕ್ಷ ಮೆಟ್ರಿಕ್ ಟನ್‌ಗಳಾಗಿದೆ. ಈರುಳ್ಳಿ ಬೆಳೆ ಹಾನಿಯಾಗಿ, ದಿಢೀರ್ ಬೆಲೆ ಕುಸಿತಗೊಂಡಿದ್ದು, ಜಮೀನಿನಲ್ಲೇ ಈರುಳ್ಳಿ ಬೆಳೆ ನಾಶವಾಗಿರುವ ಹಿನ್ನೆಲೆಯಲ್ಲಿ ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳು ಸಭೆ ಸೇರಿ ಚರ್ಚೆ ನಡೆಸಿ ನಿರ್ಧರಿಸಿದ್ದೇವೆ ಎಂದರು.

ಸಂಘ ಪರಿವಾರ ಇಲ್ಲದಿದ್ದರೆ ನಾವೆಲ್ಲ ಮುಲ್ಲಾಗಳು...

ಪ್ರಿಯಾಂಕ್ ಖರ್ಗೆ, ಎಂ.ಬಿ. ಪಾಟೀಲ್ ವಿರುದ್ಧ ಈಶ್ವರಪ್ಪ ಕಿಡಿ

ವಿಜಯಪುರ: ಸಂಘ ಪರಿವಾರ ಇಲ್ಲದೇ ಹೋದರೆ ನಾವೆಲ್ಲರೂ ಮುಲ್ಲಾಗಳಾಗಿರುತ್ತಿದ್ದೆವು ಎಂದು ಮಾಜಿ ಉಪಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ಸಚಿವ ಪ್ರಿಯಾಂಕ್ ಖರ್ಗೆ ಬಾಯಿಗೆ ಬಂದ ರೀತಿ ಮಾತನಾಡುತ್ತಿದ್ದಾರೆ. ಸಚಿವ ಡಾ.ಎಂ.ಬಿ.ಪಾಟೀಲ ಹಿಂದೂ ಸಮಾಜವನ್ನು ಒಡೆಯುವಲ್ಲಿ ಅಗ್ರ ಸ್ಥಾನದಲ್ಲಿದ್ದಾರೆ ಎಂದು ಕಿಡಿಕಾರಿದರು.

ಸರಕಾರ ಮಾಡುವ ಕೆಲಸವನ್ನು ಸಂಘ ಪರಿವಾರ ಮಾಡುತ್ತಿದೆ. ಸರಕಾರಕ್ಕೆ ಏಕೆ ಈ ಸಂಘ ಪರಿವಾರದ ಮೇಲೆ ದ್ವೇಷ ಎಂದು ಪ್ರಶ್ನಿಸಿದರು. ರಾಜ್ಯ ಸರಕಾರಿ ನೌಕರರು ಸಂಘ ಪರಿವಾರದ ಚಟುವಟಿಕೆಗಳಲ್ಲಿ ಭಾಗವಹಿಸಬಾರದು ಎಂದರೆ ಏನರ್ಥ? ಕೋರ್ಟ್ ಸಹ ಸಂಘ ಪರಿವಾರ ರಾಜಕೀಯ ಸಂಘಟನೆ ಅಲ್ಲ ಎಂದು ಹೇಳಿದೆ. ಇದನ್ನು ಸಚಿವರು ಓದಿಲ್ಲವೇ ಎಂದರು.

ಕಾಂಗ್ರೆಸ್ ಪಕ್ಷಕ್ಕೆ ಹೇಳೋರೋ ಕೇಳೋರು ಯಾರು ಇಲ್ಲ, ಒಂದು ರೀತಿ ಅಪ್ಪ-ಅಮ್ಮ ಇಲ್ಲದ ಪಕ್ಷ, ಒಂದು ಕಡೆ ಮುಖ್ಯಮಂತ್ರಿ ಐದು ವರ್ಷ ನಾನೇ ಸಿಎಂ ಎಂದು ಹೇಳುತ್ತಾರೆ. ಇನ್ನೊಂದು ಕಡೆ ಡಿ.ಕೆ.ಶಿವಕುಮಾರ ಅವರಿಗೆ ಸಿಎಂ ಮಾಡಲು ಯಾವುದೇ ಕಾರಣಕ್ಕೂ ಅವಕಾಶ ಕೊಡಲ್ಲ ಎಂದು ಇನ್ನೊಬ್ಬರು ಹೇಳುತ್ತಾರೆ. ಆದರೆ ಡಿ.ಕೆ. ಶಿವಕುಮಾರ ಸುಮ್ಮನೆ ಕೂಡುವ ಹುಳ ಅಲ್ಲ ಎಂದು ವ್ಯಂಗ್ಯವಾಡಿದರು.

ಕನ್ನೇರಿ ಶ್ರೀ ಹಿಂದೂ ಸಮಾಜ ಒಂದುಗೂಡಿಸುವ ಸನ್ಯಾಸಿ. ಯಾರ ಮುಲಾಜಿಗೂ ಒಳಗಾಗೊಲ್ಲ. ಇಂತಹ ಸನ್ಯಾಸಿಗೆ ಅಗೌರವ ನೀಡುವ ದುಷ್ಟಬುದ್ಧಿ ಸರಕಾರಕ್ಕೆ ಏಕೆ ಬಂದಿತೋ ಎಂದು ಆಕ್ರೋಶ ವ್ಯಕ್ತಪಡಿಸಿದರು. ಕನ್ನೇರಿ ಶ್ರೀಗಳು ಒಂದೇ ಒಂದು ಕರೆ ಕೊಟ್ಟರೆ ರಾಜ್ಯದಲ್ಲಿಯೇ ದಂಗೆ ಏಳುತ್ತದೆ, ಈ ಸರಕಾರದ ಅಂತಿಮ ಕ್ಷಣ ಆರಂಭವಾಗಿದೆ, ಕೂಡಲೇ ಶ್ರೀಗಳ ಮೇಲಿನ ಪ್ರವೇಶ ನಿಷೇಧ ಹಿಂದಕ್ಕೆ ಪಡೆಯಬೇಕು ಎಂದರು.

> ಕನ್ನೇರಿ ಸ್ವಾಮಿಗಳು ನಮ್ಮೆಲ್ಲರಿಗೂ ಎಲ್ಲರಿಗೂ ದೇವರ ಸ್ವರೂಪ. ಅಂತಹ ವ್ಯಕ್ತಿಗೆ ರಾಜ್ಯ ಸರಕಾರ ವಿಜಯಪುರ, ಬಾಗಲಕೋಟೆ ಪ್ರವೇಶ ನಿರ್ಬಂಧ ಹಾಕಿದ್ದು ಕೋಟಿ ಕೋಟಿ ಹಿಂದೂಗಳಿಗೆ, ಭಕ್ತರಿಗೆ ನೋವಾಗಿದೆ. ಕೂಡಲೇ ಶ್ರೀಗಳ ಪ್ರವೇಶ ನಿರ್ಬಂಧ ಹಿಂಪಡೆಯಬೇಕು.
>
> -ಕೆ.ಎಸ್.ಈಶ್ವರಪ್ಪ

ರಾಷ್ಟ್ರಪತಿ ಕುರಿತು ಏಕವಚನ ಬಳಕೆಗೆ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ತಿರುಗೇಟು

ಸಿಎಂ ಸಿದ್ದರಾಮಯ್ಯ ಘನತೆ ಕಾಪಾಡಿಕೊಳ್ಳಲಿ

ಹುಬ್ಬಳ್ಳಿ: ರಾಷ್ಟ್ರಪತಿ, ಪ್ರಧಾನಮಂತ್ರಿ ಕುರಿತು ಏಕವಚನದಲ್ಲಿ ಮಾತನಾಡುವ ಸಿಎಂ ಸಿದ್ದರಾಮಯ್ಯ ಅವರು ಸಾರ್ವಜನಿಕ ಜೀವನದ ಘನತೆ ಕಾಪಾಡಿಕೊಳ್ಳಬೇಕಿದೆ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಸೋನಿಯಾ ಗಾಂಧಿ ಕುರಿತು ಸಿದ್ದರಾಮಯ್ಯ ಏಕವಚನದಲ್ಲಿ ಮಾತನಾಡಲಿ ನೋಡೋಣ. ಆನಂತರ, ಅವರು ಮುಖ್ಯಮಂತ್ರಿ ಸ್ಥಾನದಲ್ಲೇ ಇರುವುದಿಲ್ಲ. ಸಂಸದ ತೇಜಸ್ವಿಸೂರ್ಯ ಅವರ ಬಗ್ಗೆಯೂ ಸಿದ್ದರಾಮಯ್ಯ ಕೀಳಾಗಿ ಮಾತನಾಡಿದ್ದಾರೆ. ಅದಕ್ಕಿಂತ ಕೆಟ್ಟದಾಗಿ ಟೀಕೆ ಮಾಡಲು ನಮಗೂ ಬರುತ್ತೆ. ಆದರೆ, ಅಂತಹ ಸಂಸ್ಕೃತಿ ನಮ್ಮದಲ್ಲ. ಕೈಲಾಗದವರು ಮೈ ಪರಚಿಕೊಂಡಂತೆ, ಕುಣಿಯಲಾಗದವರು ನೆಲ ಡೊಂಕು ಎನ್ನುವ ಪರಿಸ್ಥಿತಿ ಸಿದ್ದರಾಮಯ್ಯ ಅವರದ್ದು ಎಂದು ಹೇಳಿದರು.

ಕಾಂಗ್ರೆಸ್ ಪಕ್ಷದಲ್ಲಿ ಎಲ್ಲವೂ ಸರಿ ಇಲ್ಲ ಎಂಬುದಕ್ಕೆ ಯತೀಂದ್ರ ಸಿದ್ದರಾಮಯ್ಯ ಅವರ ಹೇಳಿಕೆಯೇ ಸಾಕ್ಷಿ. ಡಿ.ಕೆ.ಶಿವಕುಮಾರ್ ಸಿಎಂ ಆಗಬಾರದೆಂದು ಸಿದ್ದರಾಮಯ್ಯ ಅವರೇ ಈ ಹೇಳಿಕೆ ಕೊಡಿಸಿದ್ದಾರೆ. ಈ ಮೂಲಕ ಪಕ್ಷದ ಹೈಕಮಾಂಡ್‌ಗೆ ಅವರು ಸವಾಲು ಹಾಕುತ್ತಿದ್ದಾರೆ ಎಂದರು.

> ದೇಶದಲ್ಲಿ ಉದ್ಯೋಗ ಸೃಷ್ಟಿ ಆಗುತ್ತಿದ್ದರೂ, ರಾಜ್ಯಕ್ಕೆ ಸಮರ್ಪಕವಾಗಿ ತೆರಿಗೆ ಪಾಲು ನೀಡಿದರೂ ಕಾಂಗ್ರೆಸ್‌ನವರು ಸುಳ್ಳು ಹೇಳುತ್ತಿದ್ದಾರೆ. ನಿಜವಾಗಿ ಅವರಿಗೆ ಉದ್ಯೋಗವಿಲ್ಲ. ರಾಜಕೀಯವಾಗಿ ನಿರುದ್ಯೋಗಿಗಳು.
>
> - ಪ್ರಲ್ಹಾದ ಜೋಶಿ ಕೇಂದ್ರ ಸಚಿವ

ಮತ ಕಳವು: ಹೊಣೆಗಾರರನ್ನು ಜೈಲಿಗೆ ತಳ್ಳಲಾಗುವುದು

ಕಲಬುರಗಿ: ವೋಟ್ ಚೋರಿ ಪ್ರಕರಣ ಹೊಸ ತಿರುವು ಪಡೆದಿದ್ದು, ಮತದಾರರ ಪಟ್ಟಿಯಿಂದ ಮತದಾರರ ಹೆಸರು ಅಳಿಸಿಹಾಕಲು ಪ್ರತಿಯೊಂದಕ್ಕೆ ₹ 80 ಪಾವತಿಸಲಾಗಿದೆ ಎನ್ನುವ ಅಂಶ ಎಸ್‌ಐಟಿ ತನಿಖೆಯಿಂದ ತಿಳಿದುಬಂದಿದೆ. ಇದು ಮತಗಳವು ವಿಚಾರದಲ್ಲಿ ನಾವು ಇಷ್ಟು ದಿನ ಹೇಳುತ್ತಿದ್ದ ವಿಷಯ ಎಸ್‌ಐಟಿ ತನಿಖೆಯಿಂದ ದೃಢಪಟ್ಟಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ

ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅವರು, ಎಲ್ಲ ತನಿಖೆಗಳು ಈಗ ಬಿಜೆಪಿ ನಾಯಕರು ಮತ್ತು ಅವರ ಸಹಚರರ ಅಕ್ರಮವನ್ನು ತೋರಿಸುತ್ತಿವೆ. ಬಿಜೆಪಿಯ ವೋಟ್ ಚೋರಿಯ ಪ್ರತಿಯೊಂದು ಕೊಳಕು ತಂತ್ರ ಮತ್ತು ಕಾರ್ಯವೈಖರಿಯನ್ನು ಒಂದೊಂದಾಗಿ ಬಹಿರಂಗ ಪಡಿಸುತ್ತಿವೆ. ಈ ವಿಷಯದಲ್ಲಿ ಭಾಗಿಯಾಗಿರುವ ಪ್ರತಿಯೊಬ್ಬರನ್ನು ಹೊಣೆಗಾರರನ್ನಾಗಿ ಮಾಡಿ ಜೈಲಿಗೆ ಹಾಕಲಾಗುವುದು ಎಂದು 2023ರ ವಿಧಾನಸಭೆ ಚುನಾವಣೆಗೆ ಮುನ್ನ ಆಳಂದ ಮತಕ್ಷೇತ್ರದಲ್ಲಿ ಹಣ ನೀಡುವ ಮೂಲಕ ಸುಮಾರು 6,000ಕ್ಕೂ ಅಧಿಕ ಮತದಾರರನ್ನು ಪಟ್ಟಿಯಿಂದ ತೆಗೆದು ಹಾಕಲು ಯತ್ನಿಸಲಾಗಿತ್ತು. ಕಲಬುರಗಿಯ ಪೂರ್ಣ ಪ್ರಮಾಣದ ದತ್ತಾಂಶ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿದ್ದ ನಿರ್ವಾಹಕರು ಮತದಾರರ ಹೆಸರುಗಳನ್ನು ವ್ಯವಸ್ಥಿತವಾಗಿ ಅಳಿಸಿಹಾಕುವ ಮೂಲಕ ಪ್ರಜಾಪ್ರಭುತ್ವ ಪ್ರಕ್ರಿಯೆಯನ್ನು ಹಾಳುಗೆಡವುತ್ತಿದ್ದರು ಎಂದು ಟೀಕಿಸಿದ್ದಾರೆ.

ವಿಶ್ವವಾಣಿ

ಸಂಪಾದಕೀಯ

ಕುವರಿಯಾದೊಡೆ ಕುಂದೇನು?

ಲಿಂಗಪತ್ತೆಯ ಪ್ರಕ್ರಿಯೆ ಮತ್ತು ಹೆಣ್ಣು ಭ್ರೂಣಹತ್ಯೆಯನ್ನು ಹತ್ತಿಕ್ಕಲು ನಿಷ್ಠುರ ಕ್ರಮಗಳನ್ನು ಕೈಗೊಂಡಿರುವುದರ ಹೊರತಾಗಿಯೂ ಕೆಲವು ದುರುಳರು ಈ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿರುವುದು ವಿಷಾದನೀಯ. ಹಳೇ ಮೈಸೂರು ಪ್ರದೇಶದಲ್ಲಿ ಇಂಥ ಏಳು ಮಂದಿಯ ವಿರುದ್ಧ ಪ್ರಕರಣವನ್ನು ದಾಖಲಿಸಿ ಬಂಧಿಸಿರುವುದು ಇದಕ್ಕೆ ಪುಷ್ಟಿ ನೀಡುತ್ತದೆ. ಇಂಥ ಘಟನೆಗಳು ಮತ್ತೆ ಮತ್ತೆ ವರದಿಯಾಗುವುದನ್ನು ನೋಡಿದಾಗ, ಸಂಚಿ ಹೊನ್ನಮ್ಮ ಅವರ 'ಕುವರಿಯಾದೊಡೆ ಕುಂದೇನು?' ಎಂಬ ಪದ್ಯದಲ್ಲಿನ 'ಪೆಣ್ಣಲ್ಲವೆ ತಮ್ಮನೆಲ್ಲ ಪಡೆದ ತಾಯಿ, ಪೆಣ್ಣಲ್ಲವೆ ಪೊರೆದವಳು, ಪೆಣ್ಣು ಪೆಣ್ಣೆಂದೇಕೆ ಬೀಳುಗಳೆವರು ಕಣ್ಣು ಕಾಣದ ಗಾವಿಲರು' ಎಂಬ ಸಾಲು ನೆನಪಾಗುತ್ತದೆ. ಇಂದು ಪುರುಷನಿಗೆ ಸರಿಸಮನಾಗಿ ಸಮಾಜದ ವಿವಿಧ ಕಾರ್ಯಕ್ಷೇತ್ರಗಳಲ್ಲಿ ತನ್ನ ಛಾಪನ್ನು ಮೂಡಿಸುತ್ತಿದ್ದಾಳೆ ಹೆಣ್ಣು. ಇಷ್ಟಾಗಿಯೂ, ನಮ್ಮ ಜನರಲ್ಲಿ ಕೆಲವರಿಗೆ ಹೆಣ್ಣೆಂದರೆ ಅದೇಕೆ ಅಷ್ಟೊಂದು ಅಸಹನೆ ಮತ್ತು ನಿಕೃಷ್ಟ ಭಾವನೆ ಎಂಬುದು ಅರ್ಥವಾಗದ ಸಂಗತಿ. ಅದರಲ್ಲೂ ಒಬ್ಬ ಹೆಣ್ಣಾಗಿದ್ದುಕೊಂಡು, ತನ್ನ ಒಡಲೊಳಗಿನ ಮತ್ತೊಂದು ಹೆಣ್ಣು ಭ್ರೂಣವನ್ನು ತೆಗೆಸುವಷ್ಟರ ಮಟ್ಟಿಗೆ ತಾಯೊಯೊಬ್ಬಳ ಹೃದಯ ಕಲ್ಲಾಗುವುದೇಕೆ? ಎಂಬುದು ಯಕ್ಷಪ್ರಶ್ನೆ. ಇಂಥವರು ಇರುವುದರಿಂದಲೇ ಲಿಂಗಪತ್ತೆಗೆ ಮತ್ತು ಹೆಣ್ಣು ಭ್ರೂಣಹತ್ಯೆಗೆ ಸಹಕರಿಸುವವರೂ ವಿವಿಧೆಡೆ ಮೈ ಚೆಲ್ಲಿಕೊಂಡು ಮಿಕಗಳಿಗೆ ಬಲೆ ಬೀಸುತ್ತಿದ್ದಾರೆ ಎನ್ನಲಡ್ಡಿಯಿಲ್ಲ. ಹೆಣ್ಣು ಜೀವಗಳನ್ನು ಹೀಗೆ ಗರ್ಭದಲ್ಲಿರುವಾಗಲೇ ಕತ್ತು ಹಿಸುಕಿ ಇಲ್ಲವಾಗಿಸುವುದರಿಂದ, ಮುಂಬರುವ ದಿನಗಳಲ್ಲಿ ಸಮಾಜದಲ್ಲಿ ಗಂಡು ಮತ್ತು ಹೆಣ್ಣು ಜೀವಗಳ ಅನುಪಾತದಲ್ಲಿ ಅದೆಷ್ಟು ಅಂತರ ಮೈದಳೆಯುತ್ತದೆ, ಸಾಮಾಜಿಕ ವ್ಯವಸ್ಥೆಯಲ್ಲಿನ ಸಮತೋಲನ ಅದೆಷ್ಟರ ಮಟ್ಟಿಗೆ ಹದ ತಪ್ಪುತ್ತದೆ ಎಂಬ ಅರಿವೂ ಇಂಥವರಿಗೆ ಇದ್ದಂತಿಲ್ಲ. ಇವರಿಗೆ ಬುದ್ಧಿ ಹೇಳೋರ್‍ಯಾರು?

ಸೊಂಪಾದಕೀಯ

ಕೇಸೊಂದ ಹಾಕಲೇ?

ಕೋರ್ಟ್‌ನಲ್ಲಿ ಕೇಸು ಹಾಕೋದು ಅಂದ್ರೆ ಮೊದಲೆಲ್ಲ, ಕಳ್ಳತನ, ಕೊಲೆ, ಅತ್ಯಾಚಾರ, ಹಣಕಾಸಿನ ಮೋಸ ಎಂಬ ಒಂದಷ್ಟು ಕಾರಣಗಳಿದ್ದವು. ಆದರೆ ಈಗೀಗ ಜನಕ್ಕೆ ಕೇಸು ಹಾಕೋದು ಅಂದ್ರೆ ನೀರು ಕುಡಿದಷ್ಟೇ ಸಲೀಸು. ಅದರಲ್ಲೂ ಈ ಗ್ರಾಹಕರ ವೇದಿಕೆ ಅಂತ ಬಂದಮೇಲೆ ಸಿಕ್ಕ ಸಿಕ್ಕ ಕಾರಣಗಳಿಗೆ ಕಾಮನ್ ಮ್ಯಾನ್‌ಗಳು ಕೇಸು ಹಾಕೋದು ಕಾಮನ್ ಆಗಿಹೋಗಿದೆ. ನಮ್ಮ ಭಾವನೆಗಳಿಗೆ ಧಕ್ಕೆ ಆಯ್ತು, ನನಗೆ ಮಾನಸಿಕ ಹಿಂಸೆ ಆಯ್ತು ಅಂತ ಅದಕ್ಕೆ ನಾನಾ ಕಾರಣಗಳನ್ನು ನೀಡಿ ಕೇಸು ಹಾಕುವುದಲ್ಲದೆ ಅದಕ್ಕೆ ಲೆಕ್ಕವಿಲ್ಲದಷ್ಟು ಅಂದರೆ ಕೋಟ್ಯಾನುಗಟ್ಟಲೆ ಹಣದ ಪರಿಹಾರ ಕೇಳೋದು ಸಾಮಾನ್ಯ ಆಗಿಬಿಟ್ಟಿದೆ. ಒಂದು ವರ್ಷದ ಹಿಂದಿನ ಇಂಥ

ಪ್ರಕರಣವೊಂದನ್ನು ನಿಮಗೆ ಹೇಳಬೇಕು. ಮ್ಯಾಕ್ ಡೊನಾಲ್ಡ್ ಕಂಪನಿಯ ಮೇಲೆ ಗ್ರಾಹಕನೊಬ್ಬ ಇಂಥದ್ದೇ ಕೇಸು ಹಾಕಿ ಹಣ ಎಣಿಸುವ ಹುನ್ನಾರ ಮಾಡಿದ್ದ, ಆದರೆ ಕೋರ್ಟು ಆತನ ಈ ದುರಾಸೆಗೆ ತಣ್ಣೀರು ಎರಚಿತು. ಈ ಮಹಾನುಭಾವ ಮ್ಯಾಕ್ ಡೊನಾಲ್ಡ್ ರೆಸ್ಟೋರೆಂಟ್‌ನಿಂದ ಫ್ರೆಂಚ್ ಫ್ರೈಸ್ ಆರ್ಡರ್ ಮಾಡಿದ್ದನಂತೆ. ಅದಕ್ಕೆ ತಕ್ಕ ಹಾಗೆ ಕಂಪನಿ ಆತನಿಗೆ ಫ್ರೆಂಚ್ ಫ್ರೈಗಳನ್ನೇ ಕಳಿಸಿತು. ಅವುಗಳನ್ನು ತಿಂದು ತೇಗಿದ ಮೇಲೆ ಆತನಿಗೆ ಕಂಪನಿ ಕಳಿಸಿದ ಬಿಲ್‌ನತ್ತ ಕಣ್ಣು ಹರಿಯಿತು. ಅದರಲ್ಲಿನ ಮೊತ್ತ ಸರಿ ಇದ್ದರೂ ಅದರಲ್ಲಿ ಫ್ರೈಸ್ ಪಟ್ಟಿಯಲ್ಲಿ ಮಾತ್ರ ಫ್ರೈಸ್ ಬದಲು ಚಿಕನ್ ಬರ್ಗರ್ ಎಂದು ನಮೂದಿಸಲಾಗಿತ್ತು. ಅದನ್ನು ನೋಡಿದ ಈ ಗ್ರಾಹಕನಿಗೆ ಕಣ್ಣು ಕುಕ್ಕಿ, ಫ್ರೆಂಚ್ ಫ್ರೈಸ್ ತಿಂದ ಮೇಲೂ ಬಾಯಲ್ಲಿ ನೀರು ಬಂತು. ಅದಕ್ಕೆ ಕಾರಣ ಕಂಪನಿ ಮೇಲೆ ಕೇಸು ಹಾಕಬಹುದಲ್ಲ ಅಂತ. ಆತ ಅಲ್ಲಿನ ಮ್ಯಾನೇಜ್‌ಮೆಂಟ್ ಜತೆ ತಕರಾರು ತೆಗೆದ. ಆದ ಪ್ರಮಾದಕ್ಕೆ ಕ್ಷಮೆ ಕೇಳಿ 100 ರುಪಾಯಿಗಳ ಫ್ರೀ ಐಟಂ ಕೊಡಲು ರೆಸ್ಟೋರೆಂಟ್ ಆಫರ್ ಮಾಡಿತು. ಆದರೆ ಅಷ್ಟಕ್ಕೆ ಸಂತುಷ್ಟನಾಗದ ಈ ಗ್ರಾಹಕ ಕೋರ್ಟ್‌ನಲ್ಲಿ ಅವರ ಮೇಲೆ ಕೇಸು ಹಾಕಿ 2 ಕೋಟಿ ರುಪಾಯಿ ಪರಿಹಾರ ಕೇಳಿದ. ಪುಣ್ಯಕ್ಕೆ ಈ ಕೇಸು ಆಲಿಸಿದ ಜಡ್ಜ್, 'ಬಿಲ್‌ನಲ್ಲಿ ತಪ್ಪಾಗಿದೆ. ಆದರೆ, ಅವರೇನೂ ವೆಜ್ ಬದಲು ನಿಮಗೆ ನಾನ್ ವೆಜ್ ತಿನ್ನಿಸಿ ನಿಮ್ಮ ಧಾರ್ಮಿಕ ಭಾವನೆಗಳಿಗೆ ಧಕ್ಕೆ ಮಾಡಿಲ್ಲ' ಅಂತ ಕೇಸನ್ನು ಕಸದ ಬುಟ್ಟಿಗೆ ಎಸೆಯುವ ಮೂಲಕ ಗ್ರಾಹಕನಿಗೆ ಬಿಸಿ ಮುಟ್ಟಿಸಿತು!

ಸಂಪಾದಕರ ಸದ್ಯಶೋಧನೆ

ಹಳೆ ವಿಮಾನವನ್ನು ಬಳಸುವುದೇಕೆ?

ವಿಮಾನಯಾನ ಸಂಸ್ಥೆಗಳು ಫಿಲಿಪ್ಪೈನ್ಸ್ ಸೇರಿದಂತೆ ಕೆಲವು ದೇಶಗಳಿಗೆ ಹಳೆಯ ಅಥವಾ ಕಡಿಮೆ ಪ್ರೀಮಿಯಂ ವಿಮಾನಗಳನ್ನು ಯಾಕೆ ಕಳುಹಿಸುತ್ತವೆ ಮತ್ತು ಇದು ಏನನ್ನು ಸೂಚಿಸುತ್ತದೆ? ಇದು ವಿಮಾನಯಾನ ಸಂಸ್ಥೆಗಳ ವ್ಯವಹಾರ ತಂತ್ರ ಮತ್ತು ನಿರ್ದಿಷ್ಟ ಮಾರುಕಟ್ಟೆಯ ಬೇಡಿಕೆಯನ್ನು ಆಧರಿಸಿದೆ. ಸಾಮಾನ್ಯವಾಗಿ, ಫಿಲಿಪ್ಪೈನ್ಸ್ ಮಾರ್ಗಗಳಲ್ಲಿ ಪ್ರಯಾಣಿಸುವ ಬಹುತೇಕರು ಬೆಲೆಯ ಬಗ್ಗೆ ಹೆಚ್ಚು ಸಂವೇದನಾಶೀಲರಾಗಿರುತ್ತಾರೆ. ಅಂದರೆ, ಅವರು ಕಡಿಮೆ ದರಗಳ ಮೇಲೆ ಹೆಚ್ಚು ಗಮನ ಹರಿಸುತ್ತಾರೆ ಮತ್ತು ಪ್ರಥಮ ದರ್ಜೆ ಅಥವಾ ಹೊಸ/ಉತ್ತಮ ವಿಮಾನಗಳಲ್ಲಿನ ಅತ್ಯುತ್ತಮ ಬಿಜಿನೆಸ್ ಕ್ಲಾಸ್ ಸೀಟುಗಳಿಗೆ ಹೆಚ್ಚಿನ ಹಣವನ್ನು ಪಾವತಿಸಲು ಸಿದ್ಧರಿರುವುದಿಲ್ಲ. ಕೆಲಸ ಅಥವಾ ವೈಯಕ್ತಿಕ ಕಾರಣಗಳಿಗಾಗಿ ಪ್ರಯಾಣಿಸುವ ವಲಸೆ ಕಾರ್ಮಿಕರು ಈ ಮಾರ್ಗಗಳಲ್ಲಿ ಪ್ರಯಾಣಿಸುತ್ತಾರೆ. ಇವರು ಹೆಚ್ಚಾಗಿ ಇಕಾನಮಿ ಕ್ಲಾಸ್ ಅನ್ನು ಬಯಸುತ್ತಾರೆ. ಕತಾರ್ ಏರ್‌ವೇಸ್‌ನಂಥ ವಿಮಾನಯಾನ ಸಂಸ್ಥೆಗಳು ಹಳೆಯ ಆವೃತ್ತಿಯ 777-300ERಗಳನ್ನು ಯಾಕೆ ಬಳಸುತ್ತವೆಯೆಂದರೆ, ಅವುಗಳು ಹೆಚ್ಚಿನ ಸಂಖ್ಯೆಯ ಇಕಾನಮಿ ಸೀಟುಗಳನ್ನು ಹೊಂದಿರುತ್ತವೆ ಮತ್ತು ಕಡಿಮೆ ಪ್ರೀಮಿಯಂ ಸೀಟುಗಳನ್ನು ಹೊಂದಿರುತ್ತವೆ. ಉದಾಹರಣೆಗೆ, ಹಳೆಯ 777 ಮಾದರಿಗಳಲ್ಲಿ ಸಾಮಾನ್ಯವಾಗಿ 3-4-3 ವಿನ್ಯಾಸದಲ್ಲಿ ಇಕಾನಮಿ ಸೀಟುಗಳನ್ನು ಅಳವಡಿಸಲಾಗಿರುತ್ತದೆ. ಇದು ಪ್ರತಿ ವಿಮಾನದಲ್ಲಿ ಗರಿಷ್ಠ ಪ್ರಯಾಣಿಕರನ್ನು ಸಾಗಿಸಲು ಅನುವು ಮಾಡಿಕೊಡುತ್ತದೆ. ಹೆಚ್ಚಿನ ಬೇಡಿಕೆಯಿರುವ ಮಾರುಕಟ್ಟೆಯಲ್ಲಿ ಹೆಚ್ಚು ಜನರನ್ನು ಸಾಗಿಸಲು ಇದು ಲಾಭದಾಯಕ ತಂತ್ರವಾಗಿದೆ. ವಿಮಾನಯಾನ ಸಂಸ್ಥೆಗಳು ತಮ್ಮ ಅತ್ಯಂತ ಹೊಸ ಮತ್ತು ಅತ್ಯುತ್ತಮ ವಿಮಾನಗಳನ್ನು ಹೆಚ್ಚು ಲಾಭದಾಯಕವೆಂದು ಪರಿಗಣಿಸಲಾದ ಮಾರ್ಗಗಳಿಗೆ ಕಳುಹಿಸುತ್ತವೆ. ಈ ಮಾರ್ಗಗಳಲ್ಲಿ ಪ್ರಯಾಣಿಕರು ಹೊಸ ಕ್ಯಾಬಿನ್‌ಗಳು ಮತ್ತು ಪ್ರೀಮಿಯಂ ಸೇವೆಗಳಿಗೆ ಹೆಚ್ಚು ಹಣ ಪಾವತಿಸುತ್ತಾರೆ. ಫಿಲಿಪ್ಪೈನ್ಸ್‌ಗೆ ಹೋಗುವ ಮಾರ್ಗವನ್ನು ಮುಖ್ಯವಾಗಿ ಇಕಾನಮಿ-ಕೇಂದ್ರಿತ ಮಾರ್ಗವೆಂದು ಪರಿಗಣಿಸಿದರೆ, ಹಳೆಯ ಅಥವಾ ಅಪ್‌ಗ್ರೇಡ್ ಆಗದ ವಿಮಾನಗಳನ್ನು ಬಳಸುವುದರಿಂದ ಕಾರ್ಯಾಚರಣೆಯ ವೆಚ್ಚವನ್ನು ಸಮತೋಲನಗೊಳಿಸಲು ಮತ್ತು ಲಾಭವನ್ನು ಕಾಪಾಡಿಕೊಳ್ಳಲು ಸಹಾಯವಾಗುತ್ತದೆ. ಹೊಸ ವಿಮಾನಗಳನ್ನು ಹೆಚ್ಚು ಸ್ಪರ್ಧಾತ್ಮಕ ಮತ್ತು ಪ್ರೀಮಿಯಂ ಪ್ರಯಾಣಿಕರ ಬೇಡಿಕೆಯಿರುವ ಮಾರುಕಟ್ಟೆಗಳಲ್ಲಿ (ಉದಾಹರಣೆಗೆ ಲಂಡನ್, ನ್ಯೂಯಾರ್ಕ್ ಅಥವಾ ಸಿಡ್ನಿ) ನಿಯೋಜಿಸಲಾಗುತ್ತದೆ. ಎಮಿರೇಟ್ಸ್ ಅಥವಾ ಕೊರಿಯನ್ ಏರ್‌ನಂಥ ಕೆಲವು ವಿಮಾನಯಾನ ಸಂಸ್ಥೆಗಳ ದೊಡ್ಡ ಫ್ಲೀಟ್‌ನಲ್ಲಿ ಸಹ, ಹಳೆಯ ವಿಮಾನಗಳು ಕ್ರಮೇಣ ಹೊಸ ಮಾರ್ಗಗಳಿಗೆ ಬದಲಾಗುತ್ತವೆ ಅಥವಾ ಅಪ್‌ಗ್ರೇಡ್ ಆಗುವ ಮೊದಲು ಹೆಚ್ಚು ಸ್ಪರ್ಧೆಯಿಲ್ಲದ ಅಥವಾ ಕಡಿಮೆ ಪ್ರೀಮಿಯಂ ದರದ ಮಾರುಕಟ್ಟೆಗಳಿಗೆ ನಿಯೋಜಿತವಾಗುತ್ತವೆ. ವಿಮಾನಯಾನ ಸಂಸ್ಥೆಗಳು ಪ್ರತಿ ಮಾರ್ಗದಿಂದ ಬರುವ ಆದಾಯದ ಸಾಮರ್ಥ್ಯವನ್ನು ವಿಶ್ಲೇಷಿಸುತ್ತವೆ ಮತ್ತು ನಂತರ ಆ ಆದಾಯವನ್ನು ಗರಿಷ್ಠಗೊಳಿಸಲು ವಿಮಾನದ ಪ್ರಕಾರ ಮತ್ತು ಕ್ಯಾಬಿನ್ ವಿನ್ಯಾಸವನ್ನು ಹೊಂದಿಸುತ್ತವೆ. ಫಿಲಿಪ್ಪೈನ್ಸ್ ಮಾರ್ಗದಲ್ಲಿ ಪ್ರೀಮಿಯಂ ಆದಾಯ ಕಡಿಮೆ ಎಂದು ವಿಮಾನಯಾನ ಸಂಸ್ಥೆಗಳು ತೀರ್ಮಾನಿಸಿವೆ ಎಂದರ್ಥ. ಫಿಲಿಪ್ಪೈನ್ಸ್ ಮತ್ತು ಇತರ ಕೆಲವು ದೇಶಗಳ ಮಾರ್ಗಗಳನ್ನು 'ಇಕಾನಮಿ-ಹೆವಿ' ಅಥವಾ 'ಮೂಲಸೌಕರ್ಯ ನಿರ್ವಹಣೆಯ' ಮಾರ್ಗಗಳೆಂದು ಪರಿಗಣಿಸಲಾಗುತ್ತದೆ, ಅಲ್ಲಿ ಸೀಟುಗಳ ಸಂಖ್ಯೆ ಮತ್ತು ದಕ್ಷತೆಯು ಐಷಾರಾಮಿ ಮತ್ತು ಹೊಸ ಉತ್ಪನ್ನದ ಪ್ರಮುಖ ಅಂಶಗಳಿಗಿಂತ ಹೆಚ್ಚು ಮುಖ್ಯವಾಗುತ್ತದೆ. ಫಿಲಿಪ್ಪೈನ್ಸ್‌ಗೆ ಹಾರುವ ಪ್ರಾದೇಶಿಕ ವಿಮಾನಯಾನ ಸಂಸ್ಥೆಗಳ ನಡುವಿನ ಸ್ಪರ್ಧೆಯು ಬೆಲೆಯನ್ನು ಕಡಿಮೆ ಮಾಡುತ್ತದೆ, ಇದು ಇತರ ದೇಶಗಳಂತೆ ಪ್ರೀಮಿಯಂ ಉತ್ಪನ್ನದಲ್ಲಿ ಹೆಚ್ಚು ಹೂಡಿಕೆ ಮಾಡಲು ಅಂತಾರಾಷ್ಟ್ರೀಯ ವಿಮಾನಯಾನ ಸಂಸ್ಥೆಗಳಿಗೆ ಕಷ್ಟಕರವಾಗಿಸುತ್ತದೆ.

ಆರೆಸ್ಸೆಸ್‌ನ ಕಾರ್ಮಿಕ ಮತ್ತು ಮಹಿಳಾ ಸಂಘಟನೆ

ವೀಕೆಂಡ್ ವಿತ್ ಮೋಹನ್

ಮೋಹನ್ ವಿಶ್ವ
camohanbn@gmail.com

ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರೆಸ್ಸೆಸ್) ಶಾಖೆಗಳಿಗೆ ಒಂದು ದಿನವೂ ಭೇಟಿ ನೀಡದ ಕಾಂಗ್ರೆಸ್ಸಿನ ನಾಯಕರು ಅದರ ಆಳ ಮತ್ತು ಅಗಲದ ಬಗ್ಗೆ ಪುಂಖಾನುಪುಂಖವಾಗಿ ಸುಳ್ಳುಗಳನ್ನು ಹೇಳುತ್ತಿದ್ದಾರೆ. ಆರೆಸ್ಸೆಸ್‌ನಲ್ಲಿ ಜಾತಿಯೆಂಬ ಪರಿಕಲ್ಪನೆ ಇಲ್ಲವೆಂದು ಅನೇಕ ಕಾಂಗ್ರೆಸ್ಸಿಗರಿಗೆ ತಿಳಿದಿದೆ. ಆದರೂ ಅಲ್ಲಿನ ಸ್ವಯಂಸೇವಕರ ಜಾತಿಯ ಬಗ್ಗೆ ಮಾತನಾಡುತ್ತಾರೆ. ಹಲವು ದಶಕಗಳಿಂದ ಆರೆಸ್ಸೆಸ್ ಸಮಾಜಮುಖಿ ಕಾರ್ಯಗಳಿಂದ, ತನ್ನ ವಿರುದ್ಧದ ಟೀಕೆಗಳಿಗೆ ಉತ್ತರ ಕೊಡುತ್ತಾ ಬಂದಿದೆ. 100 ವರ್ಷಗಳನ್ನು ಪೂರೈಸಿದ ಸಂಘದ ಏಳಿಗೆಯನ್ನು ಸಹಿಸಲು ಎಡಚರರಿಗೆ ಸಾಧ್ಯವಾಗುತ್ತಿಲ್ಲ. ನೆಹರು ಕಾಲದಿಂದಲೂ ಎಡಚರರ ಕೈಗೊಂಬೆಯಾಗಿರುವ ಕಾಂಗ್ರೆಸ್ ಪಕ್ಷ ಅವರ ತಲೆಬುಡವಿಲ್ಲದ ನಿರೂಪಣೆಗಳ ಸಂವಹನಗಳಿಗೆ ವೇದಿಕೆ ಕಲ್ಪಿಸಿ ಕೊಟ್ಟಿದೆ. ಬ್ರಿಟಿಷರ ಕಾಲದಿಂದಲೂ ಭಾರತದಲ್ಲಿ ಕಮ್ಯುನಿಸ್ಟ್ ಸಿದ್ಧಾಂತವನ್ನು ಸಂಪೂರ್ಣವಾಗಿ ಜಾರಿಗೆ ತರಬೇಕೆಂಬ ಎಡಚರರ ಕನಸು ಇಂದಿಗೂ ಕನಸಾಗೇ ಉಳಿದಿದೆ. ಎಡಚರರ ವಾದಗಳಿಗೆ ತಲೆ ಬುಡವಿರುವುದಿಲ್ಲ. ಇಂದಿಗೂ ಅವರ ಆರ್ಯ ಮತ್ತು ದ್ರಾವಿಡ ಸಿದ್ಧಾಂತಕ್ಕೆ ಸಣ್ಣದೊಂದು ಪುರಾವೆ ಸಿಕ್ಕಿಲ್ಲ.

ಶಾಲಾ ಮಕ್ಕಳ ಪಠ್ಯರಚನೆಯನ್ನು ನಿಯಂತ್ರಣಕ್ಕೆ ತೆಗೆದುಕೊಂಡಿದ್ದ ಎಡಚರರು ಸ್ವಾತಂತ್ರ್ಯ ಹೋರಾಟದಲ್ಲಿ ಆರೆಸ್ಸೆಸ್‌ನ ಪಾತ್ರದ ಇತಿಹಾಸವನ್ನು ಮುಚ್ಚಿಟ್ಟರು. ಇಂದಿರಾ ಗಾಂಧಿ ಹೇರಿದ ತುರ್ತು ಪರಿಸ್ಥಿತಿಯನ್ನು ಮುಚ್ಚಿಟ್ಟರು, ವೀರ ಸಾವರ್ಕರ್ ಅವರ ಸ್ವಾತಂತ್ರ್ಯ ಹೋರಾಟವನ್ನು ಮುಚ್ಚಿಟ್ಟು ಅವರ ವಿರುದ್ಧ ಅಪಪ್ರಚಾರ ಮಾಡಿದರು, ಆರೆಸ್ಸೆಸ್‌ನ ಸಮಾಜಮುಖಿ ಕೆಲಸಗಳನ್ನು ಇತಿಹಾಸದಲ್ಲಿ ಬರೆಯಲಿಲ್ಲ. ನೆಹರು ಜೈಲಿನಲ್ಲಿದ್ದಾಗ ತಮ್ಮ ಮಗಳು ಇಂದಿರಾ ಗಾಂಧಿಗೆ ಬರೆದ ಪತ್ರವನ್ನು ಮಕ್ಕಳ ಪಠ್ಯದಲ್ಲಿ ಯಾತಕ್ಕೆ ಸೇರಿಸಿದರೋ ಭಗವಂತನೇ ಬಲ್ಲ. ಬ್ರಿಟಿಷರ ವಿರುದ್ಧ ಒಗ್ಗಟ್ಟನ್ನು ಪ್ರದರ್ಶಿಸಲು ಬ್ರಿಟಿಷ್ ಅಧಿಕಾರಿ ನೇತೃತ್ವದಲ್ಲಿ ಸ್ಥಾಪನೆಯಾದ ಕಾಂಗ್ರೆಸ್ ಎಂಬ ಸಂಘಟನೆಯನ್ನು, ಇಂದಿನ ಕಾಂಗ್ರೆಸ್ ಎಂಬ ರಾಜಕೀಯ ಪಕ್ಷಕ್ಕೆ ಹೋಲಿಸಿ ಮಾತನಾಡುತ್ತಾರೆ. ವಲ್ಲಭಭಾಯಿ ಪಟೇಲ್ ಅವರ ಇತಿಹಾಸವನ್ನು ಇವರು ಮಕ್ಕಳ ಪಠ್ಯದಲ್ಲಿ ಆಳವಾಗಿ ಸೇರಿಸಲಿಲ್ಲ. ಸ್ವಾತಂತ್ರ್ಯ ಸಿಕ್ಕ ನಂತರ ಕಾಂಗ್ರೆಸ್ ಸಂಘಟನೆಯನ್ನು ವಿಸರ್ಜಿಸುವಂತೆ ಮಹಾತ್ಮ ಗಾಂಧಿ ಹೇಳಿದ ವಿಚಾರವನ್ನು ಇತಿಹಾಸದಲ್ಲಿ ಹೇಳಲಿಲ್ಲ. ಇತಿಹಾಸದ ಪುಟಗಳಲ್ಲಿ ಅನೇಕ ಸತ್ಯಗಳನ್ನು ಮುಚ್ಚಿಟ್ಟು ಆರೆಸ್ಸೆಸ್ ವಿರುದ್ಧ ನಿರಂತರವಾಗಿ ಅಪಪ್ರಚಾರ ಮಾಡಿಕೊಂಡು ಬಂದಿದ್ದಾರೆ. 100 ವರ್ಷಗಳ ನಂತರವೂ ಅವರ ಅಪಪ್ರಚಾರಗಳಿಗೆ ಸಮಾಜ ಸೊಪ್ಪು ಹಾಕಲಿಲ್ಲ. ಸಚಿವ ಪ್ರಿಯಾಂಕ್ ಖರ್ಗೆಯವರು ಹೈಕಮಾಂಡ್ ಮಟ್ಟದಲ್ಲಿ ಚಾಲ್ತಿಯಲ್ಲಿರಲು ಸಂಘದ ವಿರುದ್ಧ ಮಾತನಾಡಿ ಅವರ ಪಕ್ಷದ ಹಳೆಯ ನಾಯಕರು ಬಳಸಿದ ಮಾರ್ಗವನ್ನು ಬಳಸುತ್ತಿದ್ದಾರೆ. ಆರೆಸ್ಸೆಸ್ ಎಂಬುದು ಜಾತಿಯನ್ನೂ ಮೀರಿದ ಸಂಘಟನೆ. ಜಾತಿಗಳ ಬಗ್ಗೆ ಆರೆಸ್ಸೆಸ್‌ನಲ್ಲಿ ಇಂದಿಗೂ ಚರ್ಚೆಯಾಗುವುದಿಲ್ಲ. ಸ್ವತಃ ಮಹಾತ್ಮ ಗಾಂಧಿಯವರು ಆರೆಸ್ಸೆಸ್‌ನ ಶಿಬಿರಕ್ಕೆ ಭೇಟಿ ನೀಡಿ ಮೆಚ್ಚುಗೆ ವ್ಯಕ್ತಪಡಿಸಿದ್ದರು. ಇದನ್ನೇ ಅಸ್ತ್ರವನ್ನಾಗಿ ಬಳಸಿಕೊಳ್ಳುವ ಎಡಚರರು, ಆರೆಸ್ಸೆಸ್ ಕೇವಲ ಮೇಲ್ವರ್ಗದವರಿಗೆ ಸೇರಿದ್ದು ಎಂಬ ಸುಳ್ಳು ನಿರೂಪಣೆಯನ್ನು ತೇಲಿಬಿಡುತ್ತಾರೆ. ಮತ್ತೊಂದೆಡೆ 'ಸಂಘದಲ್ಲಿ ಬಡವರಿಗೆ ಜಾಗವಿಲ್ಲ, ಮಹಿಳೆಯರಿಲ್ಲ' ಎಂಬ ಮತ್ತೊಂದು ಸುಳ್ಳು ನಿರೂಪಣೆಯನ್ನು ತೇಲಿಬಿಡುತ್ತಾರೆ. ಅವರ ನಿರೂಪಣೆಯನ್ನು ಕಾಂಗ್ರೆಸ್ಸಿನ ನಾಯಕರು ಮುಂದುವರಿಸಿಕೊಂಡು ಹೋಗುತ್ತಾರೆ. ಆದರೆ ಆರೆಸ್ಸೆಸ್‌ನ ಕಾರ್ಯಚಟುವಟಿಕೆಗಳನ್ನು ಹತ್ತಿರದಿಂದ ಗಮನಿಸಿದವರಿಗೆ ಮಾತ್ರ ಅದರ ನೈಜ ಚಿತ್ರಣದ ಅರಿವಾಗುತ್ತದೆ.

ಆರೆಸ್ಸೆಸ್‌ನ ಪ್ರಚಾರಕರಾಗಿದ್ದ ದತ್ತೋಪಂತ ಠೇಂಗಡಿಯವರ ನೇತೃತ್ವದಲ್ಲಿ 1955ರ ಜುಲೈ 23ರಂದು 'ಭಾರತೀಯ ಮಜ್ದೂರ್ ಸಂಘ' ಹೆಸರಿನ ಕಾರ್ಮಿಕ ಸಂಘಟನೆ ಪ್ರಾರಂಭವಾಯಿತು. ಈ ಸಂಘಟನೆಯ ಧ್ವಜದ ಬಣ್ಣ 'ಕೇಸರಿ'. ವಿಶ್ವಕರ್ಮ ಜಯಂತಿಯನ್ನು ಭಾರತೀಯ ಮಜ್ದೂರ್ ಸಂಘವು 'ಭಾರತೀಯ ಶ್ರಮಿಕರ ದಿನ'ವೆಂದು ಘೋಷಿಸಿತ್ತು. ಕಾರ್ಮಿಕ ಸಂಘಟನೆ ಸ್ಥಾಪನೆಯಾದ 12 ವರ್ಷಗಳ ನಂತರ 1967ರಲ್ಲಿ ಮೊಟ್ಟಮೊದಲ ರಾಷ್ಟ್ರೀಯ ಸಮ್ಮೇಳನ ನಡೆಯಿತು. ಅಲ್ಲಿಯವರೆಗೂ ಕಾರ್ಮಿಕ ಸಂಘಟನೆಯನ್ನು ಬಲಪಡಿಸುವ ನಿಟ್ಟಿನಲ್ಲಿ ಸಂಘದ ಅನೇಕರು ಶ್ರಮಪಟ್ಟಿದ್ದರು. ಅಂದಿನ ಕಾಲದಲ್ಲಿ ದೇಶದ ಸುಮಾರು 541 ಕಾರ್ಮಿಕ ಸಂಘಟನೆಗಳು ಭಾರತೀಯ ಮಜ್ದೂರ್ ಸಂಘದ ಜತೆ ಕೈ ಜೋಡಿಸಿದ್ದವು. 12 ವರ್ಷದಲ್ಲಿ 2,50,000ಕ್ಕೂ ಅಧಿಕ ಮಂದಿ ಸಂಘಟನೆಯ ಸದಸ್ಯರಾಗಿದ್ದರು. ಭಾರತೀಯ ಮಜ್ದೂರ್ ಸಂಘವು ಎಂದಿಗೂ ಸಾರ್ವಜನಿಕರ ಆಸ್ತಿಪಾಸ್ತಿಗೆ ಹಾನಿ ಮಾಡುವ ಪ್ರತಿಭಟನೆ ಮಾಡಲಿಲ್ಲ. ಮಾಲೀಕ ಹಾಗೂ ಕಾರ್ಮಿಕರು ಒಂದು ಕುಟುಂಬದ ಸದಸ್ಯರಂತೆ ಒಬ್ಬರಿಗೊಬ್ಬರು ಸಹಕಾರಿಯಾಗಿ ಕೆಲಸ ಮಾಡಬೇಕೆಂಬುದು ಈ ಸಂಘಟನೆಯ ಮೂಲ ಉದ್ದೇಶವಾಗಿತ್ತು. ಮಜ್ದೂರ್ ಸಂಘ ಸ್ಥಾಪನೆಯಾದ 3 ದಶಕದಲ್ಲಿ ದೇಶದ ಅಂದಿನ ದೊಡ್ಡ ಕಾರ್ಮಿಕ ಸಂಘಟನೆಯಾಗಿದ್ದ 'ಇಂಟಕ್' ಅನ್ನೂ ಮೀರಿಸಿ ಬೆಳೆದಿತ್ತು. ದತ್ತೋಪಂತ ಠೇಂಗಡಿಯವರು ಎಂದಿಗೂ ಭಾರತೀಯ ಮಜ್ದೂರ್ ಸಂಘವನ್ನು ಒಂದು ರಾಜಕೀಯ ಪಕ್ಷದ ಸಂಘಟನೆಯನ್ನಾಗಿ ಮಾಡಲಿಲ್ಲ. ಪ್ರತಿಭಟನೆಗಳ ಮೂಲಕ ಪಟ್ಟಣಗಳನ್ನು ಸ್ತಬ್ಧಗೊಳಿಸುವ ಕೆಲಸ ಮಾಡಲಿಲ್ಲ. ಅವರ ಹೋರಾಟವು ಕಾರ್ಮಿಕರ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಸೀಮಿತವಾಗಿತ್ತು.

1962ರ ಜನವರಿ ತಿಂಗಳಲ್ಲಿ ಕನ್ಯಾಕುಮಾರಿಯಲ್ಲಿ ಸ್ವಾಮಿ ವಿವೇಕಾನಂದರ ಸ್ಮಾರಕ ಸ್ಥಾಪಿಸುವುದರ ಕುರಿತಂತೆ ಅಲ್ಲಿನ ಸ್ಥಳೀಯರು ಸರಕಾರದೊಂದಿಗೆ ಚರ್ಚೆಯನ್ನು ಪ್ರಾರಂಭಿಸಿದ್ದರು. ಸ್ಥಳೀಯ ಮಟ್ಟದಲ್ಲಿ ಉತ್ತಮ ಸ್ಪಂದನೆ ಸಿಕ್ಕರೂ ರಾಜಕೀಯ ಒತ್ತಡಗಳಿಂದಾಗಿ ಸರಕಾರದ ಮಟ್ಟದಲ್ಲಿ ಉತ್ತಮ ಸ್ಪಂದನೆ ಸಿಕ್ಕಿರಲಿಲ್ಲ. ಸ್ಮಾರಕ ಸ್ಥಾಪನೆ ವಿಳಂಬವಾಗಲು, ಕನ್ಯಾಕುಮಾರಿಯಲ್ಲಿದ್ದ ಕೆಲವೊಂದು ಕ್ರಿಶ್ಚಿಯನ್ ಮಿಷನರಿಗಳ ಒತ್ತಡವು ಸರಕಾರದ ಮೇಲಿದ್ದುದೇ ಕಾರಣವಾಗಿತ್ತು. ಅಂಥ ಸಮಯದಲ್ಲಿ ಅಲ್ಲಿನ ಸ್ಥಳೀಯರು ಆರೆಸ್ಸೆಸ್‌ನ ಸರಸಂಘಚಾಲಕರಾಗಿದ್ದ ಗುರೂಜಿಯವರನ್ನು ಭೇಟಿಯಾಗಿ ತಮ್ಮ ಸಮಸ್ಯೆಗಳ ಬಗ್ಗೆ ಚರ್ಚಿಸಿದರು. ಆಗ ತಾನೆ 6 ವರ್ಷಗಳ ಸಂಘದ ಸಹಕಾರ್ಯವಾಹ ಜವಾಬ್ದಾರಿಯಿಂದ ನಿವೃತ್ತಿಗೊಂಡಿದ್ದ ಏಕನಾಥ್ ರಾನಡೆಯವರಿಗೆ ಕನ್ಯಾಕುಮಾರಿಯಲ್ಲಿ ಸ್ವಾಮಿ ವಿವೇಕಾನಂದರ ಸ್ಮಾರಕ ನಿರ್ಮಿಸುವ ನಿಟ್ಟಿನಲ್ಲಿ ಸ್ಥಳೀಯರ ಜತೆಗೂಡಬೇಕೆಂದು ಗುರೂಜಿ ಹೇಳುತ್ತಾರೆ. ಅಲ್ಲಿನ ಸ್ಥಳೀಯರಿಗೆ, ಏಕನಾಥ್ ರಾನಡೆಯವರು ಸ್ವಾಮಿ ವಿವೇಕಾನಂದರ 100 ವರ್ಷದ ಹುಟ್ಟುಹಬ್ಬದ ಸಂದರ್ಭದಲ್ಲಿ ಬರೆದಿದ್ದ ಪುಸ್ತಕದ ಅರಿವಿತ್ತು, ಹಾಗಾಗಿ ಅವರನ್ನು ನೇಮಿಸುವಂತೆ ಗುರೂಜಿಯವರ ಬಳಿ ಕೇಳಿಕೊಂಡಿದ್ದರು. ಆರೆಸ್ಸೆಸ್‌ನ ಸ್ವಯಂಸೇವಕರಾಗಿದ್ದ ಏಕನಾಥ್ ರಾನಡೆಯವರು ವಿವಿಧ ಪಕ್ಷದ ರಾಜಕೀಯ ನಾಯಕರುಗಳನ್ನು ಒಪ್ಪಿಸಿ ವಿವೇಕಾನಂದರ ಸ್ಮಾರಕ ನಿರ್ಮಾಣಕ್ಕೆ ವೇಗ ನೀಡುವುದು ಸುಲಭದ ಕೆಲಸವಾಗಿರಲಿಲ್ಲ. ವಿವಿಧ ಪಕ್ಷಗಳ 323 ಸಂಸದರ ಸಹಿ ಹಾಕಿಸಿ ಏಕನಾಥ್ ರಾನಡೆಯವರು ಕನ್ಯಾಕುಮಾರಿಯಲ್ಲಿ ಸ್ವಾಮಿ ವಿವೇಕಾನಂದರ ಸ್ಮಾರಕ ನಿರ್ಮಾಣ ಮಾಡಲು ಸರಕಾರದ ಮೇಲೆ ಒತ್ತಡ ಹಾಕಿಸಿದರು. ಬುದ್ಧಿವಂತ ಪ್ರಚಾರಕರೊಬ್ಬರು ವಿವಿಧ ಸಿದ್ಧಾಂತ ಹೊಂದಿದ್ದ ರಾಜಕೀಯ ಪಕ್ಷಗಳ ಸಂಸದರನ್ನು ಒಂದೆಡೆ ಸೇರಿಸಿ ದೊಡ್ಡದೊಂದು ಯೋಜನೆಯನ್ನು ಬೆಂಬಲಿಸುವಂತೆ ಮಾಡಿದ್ದು ಇತಿಹಾಸ. 1970ರ ಸೆಪ್ಟೆಂಬರ್ 4ರಂದು ಕನ್ಯಾಕುಮಾರಿಯಲ್ಲಿ ಸ್ವಾಮಿ ವಿವೇಕಾನಂದರ ಸ್ಮಾರಕ ನಿರ್ಮಾಣವಾಗಿ, ರಾಷ್ಟ್ರಪತಿಗಳ ಅಮೃತ ಹಸ್ತದಿಂದ ಉದ್ಘಾಟನೆಯಾಯಿತು. ಆರೆಸ್ಸೆಸ್‌ನ ಈ ಇತಿಹಾಸವನ್ನು ಯಾವ ಪಠ್ಯದಲ್ಲಿಯೂ ಎಡಚರರು ಸೇರಿಸಲಿಲ್ಲ, ಹಾಗಾಗಿ ಹಲವರಿಗೆ ಆರೆಸ್ಸೆಸ್‌ನ ನೈಜ ಇತಿಹಾಸದ ಪರಿಚಯವಾಗಲಿಲ್ಲ.

1936ರಲ್ಲಿ ಆರೆಸ್ಸೆಸ್‌ನ ಮಹಿಳಾ ಘಟಕವನ್ನು ಸ್ಥಾಪಿಸಲು ಲಕ್ಷ್ಮೀಬಾಯಿ ಕೇಲ್ಕರ್ ಅವರು ಆರೆಸ್ಸೆಸ್‌ನ ಸಂಸ್ಥಾಪಕರಾದ ಹೆಡ್ಗೆವಾರ್ ಅವರನ್ನು ಭೇಟಿ ಮಾಡಿ ಚರ್ಚಿಸಿದರು. ಸಂಪೂರ್ಣವಾದ ಸ್ವತಂತ್ರ ಮಹಿಳಾ ಸಂಘಟನೆಯನ್ನು ಸ್ಥಾಪಿಸುವುದು ಸೂಕ್ತವೆಂದು ಹೆಡ್ಗೆವಾರ್ ಹೇಳಿದರು. ಪರಿಣಾಮವಾಗಿ, ದೇಶಭಕ್ತ ಮಹಿಳೆಯರನ್ನೊಳಗೊಂಡ 'ರಾಷ್ಟ್ರ ಸೇವಿಕಾ ಸಮಿತಿ'ಯು 1936ರ ಅಕ್ಟೋಬರ್ 25ರಂದು, ವಿಜಯದಶಮಿಯಂದು ಸ್ಥಾಪನೆಯಾಯಿತು. ಈ ಸಮಿತಿಯು ಪ್ರಾರಂಭದ ದಿನದಿಂದಲೂ ಅನೇಕ ಸಮಾಜಮುಖಿ ಕಾರ್ಯಗಳನ್ನು ಅಂದರೆ, ಸಮಾಜಸೇವೆ, ವಿದ್ಯಾಭ್ಯಾಸ, ಭಾರತೀಯ ಸಂಸ್ಕೃತಿಯ ಅನಾವರಣ ಮುಂತಾದ ಅನೇಕ ಕಾರ್ಯಗಳನ್ನು ಮಾಡಿಕೊಂಡು ಬಂದಿದೆ. ಪ್ರಸ್ತುತ ದೇಶದಾದ್ಯಂತ 5215 ಸ್ಥಳಗಳಲ್ಲಿ ಈ ಸಂಘಟನೆ ತನ್ನ ಕಾರ್ಯಗಳನ್ನು ನಡೆಸುತ್ತಿದೆ. ಪ್ರತಿನಿತ್ಯ 875 ಶಾಖೆಗಳನ್ನು ನಡೆಸುತ್ತಿದೆ. ವಿದೇಶಗಳಲ್ಲೂ ರಾಷ್ಟ್ರೀಯ ಸೇವಿಕಾ ಸಮಿತಿಯ ಘಟಕಗಳಿದ್ದು, ಸದಸ್ಯರ ಸಂಖ್ಯೆ ಅಂದಾಜು ಹತ್ತು ಲಕ್ಷವೆಂದು ಹೇಳಬಹುದು. ಈ ಸಮಿತಿಯು ದೇಶದಾದ್ಯಂತ ಸುಮಾರು 475 ಜಾಗಗಳಲ್ಲಿ ಬಡವರು ಮತ್ತು ಹಿಂದುಳಿದ ವರ್ಗದ ಹೆಣ್ಣುಮಕ್ಕಳ ಪರವಾಗಿ ಅನೇಕ ಕಾರ್ಯಕ್ರಮಗಳನ್ನು ಕೈಗೊಂಡಿದೆ. ಮಹಿಳೆಯರಿಗೆ ಗ್ರಂಥಾಲಯ ವ್ಯವಸ್ಥೆ, ಕಂಪ್ಯೂಟರ್ ತರಬೇತಿ, ಯೋಗ, ಅಬಲಾಶ್ರಮ, ಅನಾಥಾಶ್ರಮಗಳನ್ನು ನಡೆಸುತ್ತದೆ. ಸಮಾಜದಲ್ಲಿ ಮಹಿಳೆಯರ ಮೇಲಾಗುವ ದೌರ್ಜನ್ಯಗಳ ಕುರಿತು ಜಾಗೃತಿ ಮೂಡಿಸಿ ಅನೇಕ ಕಾರ್ಯಾಗಾರಗಳನ್ನು ನಿರಂತರವಾಗಿ ನಡೆಸುತ್ತಾ ಬಂದಿದೆ. ಆರೆಸ್ಸೆಸ್‌ನ ಸ್ಥಾಪನೆಯಾಗಿ 100 ವರ್ಷ ಪೂರ್ಣಗೊಂಡ ಹಿನ್ನೆಲೆಯಲ್ಲಿ ವಿಜಯದಶಮಿಯಂದು ನಡೆದ ಪಥಸಂಚಲನದಲ್ಲಿ ರಾಷ್ಟ್ರ ಸೇವಿಕಾ ಸಮಿತಿಯ ಲಕ್ಷಾಂತರ ಮಹಿಳೆಯರು ಪಾಲ್ಗೊಂಡಿದ್ದರು. ಆರೆಸ್ಸೆಸ್‌ನಲ್ಲಿ ಮಹಿಳೆಯರಿಗೆ ಪ್ರವೇಶವಿಲ್ಲವೆಂದು ಸುಳ್ಳು ಹೇಳುವವರು ಒಮ್ಮೆ ರಾಷ್ಟ್ರ ಸೇವಿಕಾ ಸಮಿತಿಯ ಕಾರ್ಯಚಟುವಟಿಕೆಗಳನ್ನು ನೋಡಿ ಮಾತನಾಡಬೇಕು.

ಚೆನ್ನೈ ನಗರದಲ್ಲಿ ಮಳೆಯಿಂದ ಉಂಟಾದ ದೊಡ್ಡ ಮಟ್ಟದ ಪ್ರವಾಹದಲ್ಲಿ ಸ್ಥಳೀಯರ ರಕ್ಷಣೆಗೆ ಮೊದಲು ಧಾವಿಸಿದ್ದು, ವಿಶಾಖಪಟ್ಟಣದಲ್ಲಿ ಚಂಡಮಾರುತದಿಂದ ಉಂಟಾದ ಹಾನಿಪ್ರದೇಶಗಳಿಗೆ ಧಾವಿಸಿ ಜನರ ನೆರವಿಗೆ ಬಂದದ್ದು, ಉತ್ತರ ಕರ್ನಾಟಕದಲ್ಲಿ ಸಂಭವಿಸಿದ ಪ್ರವಾಹ ಪರಿಸ್ಥಿತಿಯಲ್ಲಿ ಜನರ ನೆರವಿಗೆ ಧಾವಿಸಿದ್ದು, ಉತ್ತರಾಖಂಡ್‌ನಲ್ಲಿ ಉಂಟಾದ ಪ್ರವಾಹ ಪರಿಸ್ಥಿತಿಯಲ್ಲಿ ಸಿಲುಕಿದ್ದ ಜನರ ರಕ್ಷಣೆಗೆ ಧಾವಿಸಿದ್ದು, ಕೋವಿಡ್ ಸಮಯದಲ್ಲಿ ಕೋಟ್ಯಂತರ ಜನರ ಮನೆ ಬಾಗಿಲಿಗೆ ಊಟ, ಔಷಧಿ ವ್ಯವಸ್ಥೆಯನ್ನು ಕಲ್ಪಿಸುವಲ್ಲಿ ಸಹಾಯಮಾಡಿದ್ದು ಆರೆಸ್ಸೆಸ್‌ನ ಸ್ವಯಂ ಸೇವಕರು. ಆರೆಸ್ಸೆಸ್‌ನ ದೊಡ್ಡ ಪಾಲು ಸಮಾಜಮುಖಿ ಕಾರ್ಯಗಳಿಗೆ ಮೀಸಲು, ಸಮಾಜದಲ್ಲಿರುವ ಜಾತಿ ತಾರತಮ್ಯವನ್ನು ನಿಲ್ಲಿಸುವ ನಿಟ್ಟಿನಲ್ಲಿ ಆರೆಸ್ಸೆಸ್‌ನ ಪ್ರಚಾರಕರು ಎಲೆಮರೆ ಕಾಯಿಯಂತೆ ಪ್ರತಿನಿತ್ಯ ತಮ್ಮ ಮನೆಗಳನ್ನು ಬಿಟ್ಟು ಕೆಲಸ ಮಾಡುತ್ತಿದ್ದಾರೆ. ಆರೆಸ್ಸೆಸ್ ಸಮಾಜದ ಜತೆ ಬೆರೆತುಹೋಗಿದೆ. 100 ವರ್ಷಗಳ ನಂತರವೂ ಆರೆಸ್ಸೆಸ್ ನಿರಂತರವಾಗಿ ತನ್ನ ಸಮಾಜಮುಖಿ ಕೆಲಸವನ್ನು ಮಾಡುತ್ತಲೇ ಇದೆ. ಈ ಹಿಂದೆಯೂ, ಆರೆಸ್ಸೆಸ್ ವಿರುದ್ಧ ಅನೇಕ ಬಾರಿ ಅಪಪ್ರಚಾರಗಳು ನಡೆದಿವೆ. ಆದರೆ ಆರೆಸ್ಸೆಸ್ ಯಾವುದನ್ನೂ ಲೆಕ್ಕಿಸದೆ ತನ್ನ ಸಮಾಜಮುಖಿ ಕಾರ್ಯಗಳಿಂದ ಇಂಥ ಟೀಕೆಗಳಿಗೆ ಉತ್ತರಿಸುತ್ತಾ ಬಂದಿದೆ.

ಒಂದು ದೇಶ ಒಂದು ಬ್ಯಾಂಕ್ ಆಶಯದ ನೆರವೇರಿಕೆಯೇ?

ಯಕ್ಷಪ್ರಶ್ನೆ

ರಮಾನಂದ ಶರ್ಮಾ
vveditoped@gmail.com

ಸಾರ್ವಜನಿಕ ರಂಗದ ಸಣ್ಣ ಬ್ಯಾಂಕುಗಳನ್ನು ದೊಡ್ಡ ಬ್ಯಾಂಕುಗಳೊಂದಿಗೆ ವಿಲೀನಗೊಳಿಸುವ ಬೃಹತ್ ಯೋಜನೆಯನ್ನು ಸರಕಾರ ರೂಪಿಸುತ್ತಿದ್ದು, 2027ರ ಅಂತ್ಯದೊಳಗೆ ಅದನ್ನು ಪೂರ್ಣಗೊಳಿಸಲು ಕಾರ್ಯಪ್ರವೃತ್ತವಾಗಿದೆ ಎನ್ನಲಾಗುತ್ತಿದೆ. ಈಗ ಸಾರ್ವಜನಿಕ ರಂಗದ 12 ಬ್ಯಾಂಕುಗಳಿದ್ದು, ಪ್ರಸ್ತಾವಿತ ವಿಲೀನ ಕಾರ್ಯಗತವಾದರೆ ಬ್ಯಾಂಕುಗಳ ದೊಡ್ಡಣ್ಣ 'ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ'ವನ್ನು (ಎಸ್‌ಬಿಐ) ಹೊರತುಪಡಿಸಿ ಅವುಗಳ ಸಂಖ್ಯೆಯು 2-3ಕ್ಕೆ ಇಳಿಯಬಹುದು. ಇದು 'ವಿಕಸಿತ ಭಾರತ 2047' ಪರಿಕಲ್ಪನೆಯ ಭಾಗ ಎನ್ನಲಾಗುತ್ತಿದೆ. ಕಡಿಮೆ ಸಂಖ್ಯೆಯ, ಆರ್ಥಿಕವಾಗಿ ಬಲಿಷ್ಠವಾಗಿರುವ ದೊಡ್ಡ ಬ್ಯಾಂಕುಗಳನ್ನು ರಚಿಸಿ, ದೇಶದ ಮುಂದಿನ ಹಂತದ ಸಾಲ ವಿಸ್ತರಣೆ ಮತ್ತು ಆರ್ಥಿಕ ಸುಧಾರಣೆಗಳಿಗೆ ಇಂಬು ನೀಡುವುದು ಈ ವಿಲೀನದ ಹಿಂದಿನ ಉದ್ದೇಶ ಎನ್ನಲಾಗುತ್ತಿದೆ.

ಕೆಲವು ವದಂತಿಗಳ ಪ್ರಕಾರ, ಸ್ಟೇಟ್ ಬ್ಯಾಂಕ್ ಸಂಗಡ ಇನ್ನೊಂದು ಬ್ಯಾಂಕ್ ಮಾತ್ರ ಉಳಿಯುತ್ತಿದ್ದು, ಇದು 'ಒಂದು ದೇಶ, ಒಂದು ತೆರಿಗೆ', 'ಒಂದು ರೇಷನ್ ಕಾರ್ಡ್', 'ಒಂದು ನಾಗರಿಕ ಸಂಹಿತೆ', 'ಒಂದು ಗುರುತಿನ ಚೀಟಿ' ಯಂತೆ 'ಒಂದು ದೇಶ, ಒಂದು ಬ್ಯಾಂಕ್' ಎಂದಾಗಬಹುದೇ? ಎಂಬ ಚಿಂತನೆಯು ಮುಖ್ಯವಾಗಿ ಬ್ಯಾಂಕಿಂಗ್ ವಲಯದಲ್ಲಿ ಕೇಳಿಬರುತ್ತಿದೆ. ಕಳೆದ ತಿಂಗಳು ನಡೆದ ಹಿರಿಯ ಬ್ಯಾಂಕರ್‌ಗಳು ಮತ್ತು ಹಣಕಾಸು ಮಂತ್ರಾಲಯದ ಅಧಿಕಾರಿಗಳ 'ಚಿಂತನ-ಮಂಥನ' ಸಭೆಯಲ್ಲಿ ಈ ನಿಟ್ಟಿನಲ್ಲಿ ವಿಸ್ತೃತ ಚರ್ಚೆಯಾಗಿದ್ದು, ಮುಂದಿನ ದಿನಗಳಲ್ಲಿ ವಿಲೀನದ ರೂಪರೇಷೆಗಳು ಹೊರಬರುವ ಸಾಧ್ಯತೆಯಿದೆ ಎನ್ನಲಾಗುತ್ತಿದೆ.

ಬ್ಯಾಂಕಿಂಗ್ ಉದ್ಯಮದಲ್ಲಿ ಇಂಥ ವಿಲೀನ ಚಟುವಟಿಕೆಯು ದಿಢೀರ್ ಬೆಳವಣಿಗೆಯಲ್ಲ; 1993ರಲ್ಲಿ, ಸಂಕಷ್ಟದಲ್ಲಿದ್ದ 'ನ್ಯೂ ಬ್ಯಾಂಕ್ ಆಫ್ ಇಂಡಿಯಾ'ವನ್ನು 'ಪಂಜಾಬ್ ನ್ಯಾಷನಲ್ ಬ್ಯಾಂಕ್'ನಲ್ಲಿ ವಿಲೀನಗೊಳಿಸಿ ಠೇವಣಿದಾರರ ಹಿತವನ್ನು ರಕ್ಷಿಸಲಾಯಿತು. ರಿಸರ್ವ್ ಬ್ಯಾಂಕ್‌ನ ನಿವೃತ್ತ ಗವರ್ನರ್ ನರಸಿಂಹನ್ ಅವರು ಬ್ಯಾಂಕುಗಳ ವಿಲೀನದ ಬಗ್ಗೆ 1993 ಮತ್ತು 1998ರಲ್ಲಿ ವಿಸ್ತೃತ ವರದಿ ನೀಡಿದರೂ, ಬ್ಯಾಂಕುಗಳ ವಿಲೀನದ ವಿಷಯವು 2017ರವರೆಗೆ ಆಗೊಮ್ಮೆ ಈಗೊಮ್ಮೆ ಸದ್ದುಮಾಡಿ ತಣ್ಣಗಾಯಿತೇ ವಿನಾ, ವಿಲೀನ ಪ್ರಕ್ರಿಯೆಯಲ್ಲಿ ಪ್ರಗತಿಯಾಗಲಿಲ್ಲ. ಆದರೆ 2017ರಲ್ಲಿ ಸರಕಾರವು ದಿಢೀರ್ ಎಂದು ಬ್ಯಾಂಕುಗಳ ವಿಲೀನಕ್ಕೆ ಮುಂದಾಯಿತು; ಬಹುತೇಕ ಒಂದೇ ರೀತಿಯ ಸಾಫ್ಟ್‌ವೇರ್/ಕಾರ್ಯವಿಧಾನವನ್ನು ನೆಚ್ಚಿರುವ ಎಸ್‌ಬಿಐನ ಐದು ಸಹವರ್ತಿ ಬ್ಯಾಂಕುಗಳನ್ನು ಮತ್ತು ನಿರೀಕ್ಷೆಗೆ ತಕ್ಕಂತೆ ವಿಸ್ತರಣೆಗೊಳ್ಳದ ಭಾರತೀಯ ಮಹಿಳಾ ಬ್ಯಾಂಕನ್ನು ಎಸ್‌ಬಿಐನಲ್ಲಿ ವಿಲೀನಗೊಳಿಸಲಾಯಿತು. ಉದ್ಯೋಗಿಗಳಿಂದ ಅಂಥದ್ದೇನೂ ವಿರೋಧ ವ್ಯಕ್ತವಾಗದೆ ಸದರಿ ವಿಲೀನ ಪ್ರಕ್ರಿಯೆಯು ಸಲೀಸಾಗಿ ಕೈಗೂಡಿದ್ದನ್ನು, ವಿಲೀನದ ನಂತರದಲ್ಲಿ ಎಲ್ಲವೂ ಸುಸೂತ್ರವಾಗಿ ನಡೆದಿದ್ದನ್ನು ಕಂಡು ಸರಕಾರವು 2019ರಲ್ಲಿ ದೇನಾ ಬ್ಯಾಂಕ್ ಮತ್ತು ವಿಜಯಾ ಬ್ಯಾಂಕ್‌ಗಳನ್ನು (ಇವೆರಡೂ ಸಣ್ಣ ಗಾತ್ರದವು), ದೊಡ್ಡ ಗಾತ್ರದ ಬ್ಯಾಂಕ್ ಆಫ್ ಬರೋಡಾದಲ್ಲಿ ವಿಲೀನ ಗೊಳಿಸಿತು. ಇಂಥ ವಿಲೀನದಿಂದಾಗಿ ನಿರ್ವಹಣಾ ವೆಚ್ಚದಲ್ಲಿ ಭಾರಿ ಕಡಿತವಾಗಿದ್ದನ್ನು ಮನಗಂಡ ಸರಕಾರವು 2020ರಲ್ಲಿ ಸಿಂಡಿಕೇಟ್ ಬ್ಯಾಂಕನ್ನು ಕೆನರಾ ಬ್ಯಾಂಕ್‌ನಲ್ಲಿ, ಓರಿಯೆಂಟಲ್ ಬ್ಯಾಂಕ್ ಮತ್ತು ಯುನೈಟೆಡ್ ಬ್ಯಾಂಕ್‌ಗಳನ್ನು ಪಂಜಾಬ್ ನ್ಯಾಷನಲ್ ಬ್ಯಾಂಕ್‌ನಲ್ಲಿ, ಆಂಧ್ರ ಬ್ಯಾಂಕ್ ಮತ್ತು ಕಾರ್ಪೊರೇಷನ್ ಬ್ಯಾಂಕ್‌ಗಳನ್ನು ಯೂನಿಯನ್ ಬ್ಯಾಂಕ್‌ನಲ್ಲಿ, ಅಲಹಾಬಾದ್ ಬ್ಯಾಂಕ್ ಅನ್ನು ಇಂಡಿಯನ್ ಬ್ಯಾಂಕ್‌ನಲ್ಲಿ ವಿಲೀನಗೊಳಿಸಿತು. ಇದರಿಂದಾಗಿ ಸಾರ್ವಜನಿಕ ರಂಗದ ಬ್ಯಾಂಕುಗಳ ಸಂಖ್ಯೆಯು 27ರಿಂದ 12ಕ್ಕೆ ಇಳಿಯಿತು.

ಈಗ, ಯುಕೋ ಬ್ಯಾಂಕ್, ಬ್ಯಾಂಕ್ ಆಫ್ ಮಹಾರಾಷ್ಟ್ರ, ಪಂಜಾಬ್ ಆ್ಯಂಡ್ ಸಿಂಧ್ ಬ್ಯಾಂಕ್‌ಗಳು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಲ್ಲೂ, ಬ್ಯಾಂಕ್ ಆಫ್ ಇಂಡಿಯಾ, ಇಂಡಿಯನ್ ಬ್ಯಾಂಕ್, ಯೂನಿಯನ್ ಬ್ಯಾಂಕ್‌ಗಳು ಕೆನರಾ ಬ್ಯಾಂಕ್‌ನಲ್ಲೂ, ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ, ಬ್ಯಾಂಕ್ ಆಫ್ ಬರೋಡಾ, ಇಂಡಿಯನ್ ಓವರ್‌ಸೀಸ್ ಬ್ಯಾಂಕ್‌ಗಳು ಪಂಜಾಬ್ ನ್ಯಾಷನಲ್ ಬ್ಯಾಂಕ್‌ನಲ್ಲೂ ವಿಲೀನವಾಗಬಹುದು ಎನ್ನಲಾಗುತ್ತಿದೆ. ವಿಲೀನದ ನಂತರ ಈ 3 ಬ್ಯಾಂಕುಗಳು ಜಗತ್ತಿನ 20 ದೊಡ್ಡ ಬ್ಯಾಂಕುಗಳ ಪಟ್ಟಿಯಲ್ಲಿ ಕಾಣಿಸಿಕೊಳ್ಳಬಹುದು. ಸದ್ಯ ಜಗತ್ತಿನ 100 ಅಗ್ರಗಣ್ಯ ಬ್ಯಾಂಕುಗಳ ಪಟ್ಟಿಯಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಮಾತ್ರ ಇದೆ (43ನೇ ಸ್ಥಾನ).

ಈ ವಿಲೀನದ ನಂತರ ದೇಶದಲ್ಲಿ, ಸಾರ್ವಜನಿಕ ರಂಗದ ಬ್ಯಾಂಕುಗಳ ಸಂಖ್ಯೆಯಷ್ಟೇ ಅಲ್ಲದೆ, ಅವುಗಳ ಶಾಖೆಗಳ ಸಂಖ್ಯೆಯೂ ಕಡಿತವಾಗುವುದು ಅನಿವಾರ್ಯ. ಶಾಖೆಗಳ ratonalization ಪ್ರಕ್ರಿಯೆಯಲ್ಲಿ ಕೆಲವು ಶಾಖೆಗಳು ಮುಚ್ಚುವುದು ಸಾಮಾನ್ಯ. ಹಾಗೆಯೇ ಸಿಬ್ಬಂದಿಯ ಹೆಚ್ಚಳವೂ ಸಮಸ್ಯೆಯಾಗಬಹುದು. ವಿಲೀನ ಪ್ರಕ್ರಿಯೆಯಲ್ಲಿ ಯಾವುದೇ ಸಿಬ್ಬಂದಿಗೆ 'ಕೆಂಪುಚೀಟಿ' ನೀಡದಿರುವ ನಿಬಂಧನೆಯನ್ನು ಈವರೆಗೆ ಪಾಲಿಸಿದ್ದು ಅದು ಮುಂದುವರಿಯಬಹುದು. ಯಾರಿಗೂ ಉದ್ಯೋಗ ನಷ್ಟದ ಭಯವಿರುವುದಿಲ್ಲ. ಆದರೆ ಮುಂದಿನ ದಿನಗಳಲ್ಲಿ ಬ್ಯಾಂಕಿಂಗ್ ಉದ್ಯಮದಲ್ಲಿ ಉದ್ಯೋಗಾವಕಾಶ ಕ್ಷೀಣಿಸಬಹುದು ಎಂಬ ಭಯ ಕಾಡುತ್ತಿದೆ. ವಿಲೀನಪೂರ್ವದಲ್ಲಿ ಮಾನವ ಸಂಪನ್ಮೂಲದಂಥ ಸಂಕೀರ್ಣ ವಿಚಾರದಲ್ಲಿ ಸಾಕಷ್ಟು ಎಚ್ಚರಿಕೆ ವಹಿಸಿದರೂ, ಈ ನಿಟ್ಟಿನಲ್ಲಿ ಒಂದಿಷ್ಟು ಗೊಂದಲಗಳು ಉದ್ಭವಿಸಿ ನ್ಯಾಯಾಲಯದ ಮೆಟ್ಟಲೇರುವಂಥ ಪರಿಸ್ಥಿತಿ ಎದುರಾಗುವುದನ್ನು ಅಲ್ಲಗಳೆಯಲಾಗದು. ಎಲ್ಲರನ್ನೂ ತೃಪ್ತಿಪಡಿಸಲು ಸಾಧ್ಯವಿಲ್ಲ, ಅಂತೆಯೇ ಕೆಲವು ಅತೃಪ್ತಿಯನ್ನು ಸಹಿಸಿಕೊಳ್ಳಲೇಬೇಕು.

ಈ ವಿಲೀನದಿಂದಾಗಿ ಬ್ಯಾಂಕಿಂಗ್ ಉದ್ಯಮವು ಕೆಲವು ಪ್ರಾದೇಶಿಕ ಮತ್ತು ಭಾಷಾ ಶಕ್ತಿಗಳ ಹಿಡಿತದಿಂದ ಮುಕ್ತಿ ಪಡೆಯುತ್ತದೆ ಎನ್ನಲಾಗುತ್ತಿದೆ. ಬ್ಯಾಂಕಿನ ಮುಖ್ಯ ಕಚೇರಿಯಿರುವ ರಾಜ್ಯದವರು ಮತ್ತು ಭಾಷೆಯವರು ಆ ಬ್ಯಾಂಕುಗಳಲ್ಲಿ ಮೇಲುಗೈ ಸಾಧಿಸುತ್ತಾರೆ ಎನ್ನುವ ಆರೋಪ ಇನ್ನು ಮುಂದೆ ಕೇಳದು ಮತ್ತು ಎಲ್ಲಾ ಬ್ಯಾಂಕುಗಳಲ್ಲಿ 'ಅಖಿಲ ಭಾರತ' ಸ್ವರೂಪ ಕಾಣಬಹುದು ಎನ್ನಲಾಗುತ್ತದೆ. ವಿಲೀನ ಪ್ರಕ್ರಿಯೆಯಲ್ಲಿ ಬ್ಯಾಂಕುಗಳ ಷೇರು ಬಂಡವಾಳ ಹೆಚ್ಚಿಸುವುದು, ತನ್ಮೂಲಕ ಅವನ್ನು ಬಲಾಢ್ಯವಾಗಿಸುವುದು, ಜಾಗತಿಕವಾಗಿ ಸ್ಪರ್ಧಾತ್ಮಕವಾಗಿರುವಂತೆ ವರ್ಧಿಸುವುದು, ದೊಡ್ಡ ಗ್ರಾಹಕರ ಸಾಲದ ಅವಶ್ಯಕತೆಯನ್ನು ಇನ್ನೊಂದು ಬ್ಯಾಂಕಿನ ಸಹಾಯವಿಲ್ಲದೆ (consortium arrangement) ಪೂರೈಸುವುದು, ಬ್ಯಾಂಕುಗಳ ನಿರ್ವಹಣಾ ವೆಚ್ಚವನ್ನು ತಗ್ಗಿಸುವುದು ಮುಖ್ಯವಾಗಿರುತ್ತದೆ.

ದೇಶದಲ್ಲಿ ಸಾಕಷ್ಟು ಸಣ್ಣ ಬ್ಯಾಂಕುಗಳಿವೆ. ಅವುಗಳ 'ಬಂಡವಾಳ ಮೂಲ' ತುಂಬಾ ಸಣ್ಣದಾಗಿದ್ದು ಸದಾ ಸರಕಾರದ ನೆರವಿನ ಅಗತ್ಯವಿರುತ್ತದೆ. ವಿಲೀನದಿಂದಾಗಿ ಬಂಡವಾಳ ಮೂಲ ವರ್ಧಿಸಿ ಅಂತಾರಾಷ್ಟ್ರೀಯ ಮಾನದಂಡಕ್ಕೆ ಹತ್ತಿರವಾಗುತ್ತದೆ ಮತ್ತು ಬ್ಯಾಂಕಿನ ದಕ್ಷತೆ ಹೆಚ್ಚಿ ಹಣಕಾಸು ಸ್ಥಿರತೆಯಲ್ಲಿ ಸುಧಾರಣೆಯಾಗುತ್ತದೆ ಎನ್ನಲಾಗುತ್ತದೆ. ಆದರೆ ವಿಲೀನವನ್ನು ವಿರೋಧಿಸುತ್ತಿರುವ ಬ್ಯಾಂಕ್ ಕಾರ್ಮಿಕ ಸಂಘಗಳು, "ಇದರ ಹಿಂದೆ ಖಾಸಗೀಕರಣದ ಗುಪ್ತ ಕಾರ್ಯಸೂಚಿಯಿದೆ. ಈವರೆಗೆ ಇದ್ದ ಸಾಮಾಜಿಕ ಬ್ಯಾಂಕಿಂಗ್ ಪರಿಕಲ್ಪನೆ ಹಳ್ಳ ಹಿಡಿದು, ಬ್ಯಾಂಕುಗಳು ನೂರಕ್ಕೆ ನೂರು ಕಮರ್ಷಿಯಲ್ ಆಗುತ್ತವೆ. ವಿಲೀನ ಪ್ರಕ್ರಿಯೆ ಯಿಂದ ಹಲವು ಶಾಖೆಗಳು ಮುಚ್ಚುವ, ಹೆಚ್ಚು ಲಾಭ ತರದ ಗ್ರಾಮಾಂತರ ಶಾಖೆಗಳು ಬಲಿಬೀಳುವ ಮತ್ತು ಆರ್ಥಿಕವಾಗಿ ಕೆಳಸ್ತರದಲ್ಲಿರುವವರು ಬ್ಯಾಂಕಿಂಗ್ ಸೌಲಭ್ಯದಿಂದ ವಂಚಿತರಾಗುವ ಸಾಧ್ಯತೆಯಿದೆ" ಎಂದು ಎಚ್ಚರಿಸುತ್ತಿವೆ.

ಕಾರ್ಮಿಕ ಸಂಘಗಳ ವಿರೋಧದಿಂದಾಗಿ ಬ್ಯಾಂಕುಗಳ ವಿಲೀನ ಪ್ರಕ್ರಿಯೆ ನಿಲ್ಲುತ್ತದೆ ಎನ್ನಲಾಗದು. ಈ ಹಿಂದೆಯೂ ಅವು ಬ್ಯಾಂಕುಗಳಲ್ಲಿನ ಗಣಕೀಕರಣವನ್ನು ಮತ್ತು 2017ರಲ್ಲಿ ಆರಂಭವಾದ ವಿಲೀನ ಪ್ರಕ್ರಿಯೆಯನ್ನು ಕೂಡ ವಿರೋಧಿಸಿದ್ದವು. ಆದರೂ ಸರಕಾರ ತನ್ನ ಕಾರ್ಯಸೂಚಿಯನ್ನು ಪೂರ್ಣಗೊಳಿಸಿತು. ಸದ್ಯದ ವಿಲೀನದ ಮಾತುಕತೆಗಳು ಇನ್ನೂ ಪೂರ್ವಭಾವಿ ಹಂತದಲ್ಲಿದ್ದು, ಯಾವುದೂ ಅಧಿಕೃತ ವಾಗಿ ಹೊರಹೊಮ್ಮಿಲ್ಲ. ಅಂತಿಮಹೆಜ್ಜೆ ಇಡುವ ಹೊತ್ತಿಗೆ ಕಾವೇರಿಯಲ್ಲಿ ಇನ್ನೆಷ್ಟು ನೀರು ಹರಿಯುತ್ತದೋ? ಆದರೆ, ಸ್ವಲ್ಪ ವಿಳಂಬವಾದರೂ ಬ್ಯಾಂಕುಗಳ ವಿಲೀನ ಮಾತ್ರ ನಿಶ್ಚಿತ ಎನ್ನಬಹುದು.

(ಲೇಖಕರು ಆರ್ಥಿಕ ಮತ್ತು ರಾಜಕೀಯ ವಿಶ್ಲೇಷಕರು)

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಬೆಳಕು ಚೆಲ್ಲಿದೆ

'ಹಚ್ಚೆಯ ನೋವು, ಇಚ್ಚೆಯ ನೋವು ಕೂಡ ಆಗಿರಬಹುದು' ಎಂಬ ಶೀರ್ಷಿಕೆಯ 'ಶಿಶಿರಕಾಲ' ಅಂಕಣಬರಹ (ಅ.24), ಇಂದಿನ ಯುವಪೀಳಿಗೆಯ ಮನಸ್ಥಿತಿಯ ಮೇಲೂ ಬೆಳಕು ಚೆಲ್ಲಿದಂತಿದೆ. 'ಇಚ್ಛಾ ಪ್ರಾರಬ್ಧ' ಎಂಬ ಪರಿಕಲ್ಪನೆಯನ್ನು ನಾವೆಲ್ಲಾ ಕೇಳಿದ್ದೇವೆ. ಆದರೆ ಈಗೀಗಲಾಗಿ, ಫ್ಯಾಷನ್ ಹೆಸರಿನಲ್ಲಿ ಹಚ್ಚಿಸಿಕೊಳ್ಳುತ್ತಿರುವ ಹಚ್ಚೆಯ ಗೀಳು ಮಾತ್ರ ಮಿತಿಮೀರಿ ಬೆಳೆಯುತ್ತಿದೆ. ಒಂದಂತೂ ನಿಜ- ಫ್ಯಾಷನ್‌ನ ಹಿಂದೆ ಏನಾದರೊಂದು ಉದ್ದೇಶ ಇರುತ್ತದೆ. ಆದರೆ ಉದ್ದೇಶವೇ ಇಲ್ಲದ್ದನ್ನು fad ಎನ್ನುತ್ತಾರೆ. ಒಬ್ಬರು ಮಾಡುತ್ತಾರೆಂದು ಇನ್ನೊಬ್ಬರು, ಅವರನ್ನು ನೋಡಿ ಮತ್ತೊಬ್ಬರು- ಹೀಗೆ ಹಚ್ಚೆ ಹಾಕಿಸಿಕೊಳ್ಳುವವರ ಸಂಖ್ಯೆ ಅತಿರೇಕದ ಪ್ರಮಾಣವನ್ನು ಮುಟ್ಟಿದೆ. ಅದರಲ್ಲೂ, ಯಾವುದಾದರೂ ತಥಾಕಥಿತ ಸೆಲೆಬ್ರಿಟಿ ಹಚ್ಚೆಗೆ ಇನ್ನೂ ಹೆಚ್ಚು ಬೇಡಿಕೆ. ಬಹುಶಃ ಅವರ ಚಿತ್ರವನ್ನು ಹಚ್ಚೆ ಹಾಕಿಸಿಕೊಂಡರೆ ತಾನೂ ಒಂದು ದಿನ ಅವರಂತೆ ಆಗಬಹುದು ಎಂಬ ಭ್ರಮೆ!

ಅದೇನೇ ಇರಲಿ, ಈ ಹಚ್ಚೆ ಹುಚ್ಚುವವರು ಇಂದು ಗಲ್ಲಿ- ಗಲ್ಲಿಗಳಲ್ಲೂ ಕಾಣಸಿಗುತ್ತಾರೆ. ಇದೂ ಒಂದು 'ಸ್ವಯಂ-ಉದ್ಯೋಗ'ದ ಸೃಷ್ಟಿಗೆ ಕಾರಣವಾಗಿದೆ ಎಂದು ಒಪ್ಪಿಕೊಂಡರೂ, ಬೇಡವಾದ ಕಾರಣಕ್ಕೆ ನೋವು ಅನುಭವಿಸುವುದು ಬೇಕೇ? ಎಂಬುದು ಪ್ರಶ್ನೆ. ಜೀವನದಲ್ಲಿ ಒಮ್ಮೆಯೂ ಬೀಳದವ ಇದ್ದಾನೆಯೇ? ಎಂಬುದು ಇನ್ನೊಂದು ಪ್ರಶ್ನೆ. ಒಂದೊಮ್ಮೆ ಅಂಥವರು ಇದ್ದಾರೆ ಎಂದರೆ, ಅವರು ಬದುಕನ್ನೇ ಕಂಡಿಲ್ಲ ಎಂತಲೇ ಅರ್ಥ. ಏಕೆಂದರೆ, ನೋವು, ಕಷ್ಟ, ದುಃಖಗಳಿಲ್ಲದ ಬದುಕು ನಿಜಾರ್ಥದಲ್ಲಿ ಬದುಕೇ ಅಲ್ಲ, ಹಾಗಂತ ಹಚ್ಚೆ ಹಾಕಿಸಿಕೊಂಡು ನೋವನ್ನು ಆಹ್ವಾನಿಸುವುದು ಸರಿಯೇ? ಒಂದೊಮ್ಮೆ ಹಚ್ಚೆ ಹಾಕಿಸಿಕೊಳ್ಳಲಿಲ್ಲ ಅಂದರೆ, ಅವರ ಬದುಕೇ ನಿಷ್ಪ್ರಯೋಜಕವೇ? ಸಾಕಷ್ಟು ಸುಂದರವಾಗಿದ್ದ ಶರೀರಕ್ಕೆ ಕೆಲವರು ಹಚ್ಚೆ ಹಾಕಿಸಿ ಅದನ್ನು ಭಯಾನಕವಾಗಿಸಿ ಕೊಂಡಿರುವುದನ್ನೂ ನಾವು ಕಾಣಬಹುದು.

ಇಲ್ಲಿ ಇನ್ನೂ ಒಂದೆರಡು ಪ್ರಶ್ನೆಗಳಿವೆ- ಹಚ್ಚೆ ಹಾಕಿಸಿಕೊಳ್ಳುವುದರ ಹಿಂದೆ ಯಾವುದಾದರೂ ವೈದ್ಯಕೀಯ ಕಾರಣಗಳೂ ಇರಬಹುದೇ? ಕೆಲವಷ್ಟು ನಾಟಿ ವೈದ್ಯಪದ್ಧತಿಯನ್ನು ಕಂಡಾಗ, ಇದರ ಹಿಂದೆಯೂ ಏನಾದರೂ ಉದ್ದೇಶ ಇದ್ದಿರಬಹುದೇ? ಆದರೇನು, ಆರೋಗ್ಯವಂತರೂ ಹಚ್ಚೆಯ ಹಿಂದೆ ಬೀಳುತ್ತಿರುವುದು ಮಾತ್ರ ವಿಪರ್ಯಾಸ. ಹಚ್ಚೆ ಹಾಕಿಸಿಕೊಂಡವರು ಮೊದಲಿಗಿಂತ ಸುಂದರವಾಗಿ ಕಾಣುವುದು ಅಪರೂಪವೇ. ಇಂದಿನ ಈ 'ಸೌಂದರ್ಯ ಯುಗ'ದಲ್ಲಿ, ಸುಂದರನಾಗಿ/ಳಾಗಿ ಕಾಣಲು ಕೆಲವರು ಏನೆಲ್ಲಾ ಮಾಡಿಕೊಳ್ಳುತ್ತಿದ್ದಾರೆ ಎಂಬುದನ್ನು ಬಿಡಿಸಿ ಹೇಳಬೇಕಿಲ್ಲ. ಸೌಂದರ್ಯವು ಒಳಗಿನಿಂದ ಹೊಮ್ಮಬೇಕೇ ಹೊರತು, ಬಾಹ್ಯ ಪ್ರದರ್ಶನದಿಂದ ಅಲ್ಲ ಅಂತ ಇಂಥವರಿಗೆ ಹೇಳುವುದು ಹೇಗೆ? ಒಟ್ಟಿನಲ್ಲಿ, ಈ ಹಚ್ಚೆಯ ಹುಚ್ಚು ಮಾತ್ರ ಯುವ ಪೀಳಿಗೆಯನ್ನು ಬಿಡುತ್ತಿಲ್ಲ. ದುಡ್ಡು ಕೊಟ್ಟು ನೋವು ಪಡೆದರೂ ಸರಿ, ಅದು ಅವರಿಗೆ ಬೇಕು!

-ಶಂಕರನಾರಾಯಣ ಭಟ್, ಮಾಡಗೇರಿ

ಜಿಎಸ್‌ಟಿಯ ವಾಸ್ತವ

ಅನಿವಾರ್ಯವೆನ್ನಬಹುದಾದ ಆರೋಗ್ಯ ವಿಮೆಯೂ ಸೇರಿದಂತೆ ವಿವಿಧ ವೈದ್ಯಕೀಯ ವೆಚ್ಚಗಳ ಮೇಲೆ ಶೇ.18ರವರೆಗೂ ಜಿಎಸ್‌ಟಿ ಹೇರಿ ಕೇಂದ್ರ ಸರಕಾರವು ಎಂಟು ವರ್ಷ ಕಾಲ ವೃದ್ಧರನ್ನೂ ಪಿಂಚಣಿದಾರರನ್ನೂ ಒಳಗೊಂಡಂತೆ ಎಲ್ಲರನ್ನೂ ಸುಲಿಗೆ ಮಾಡಿತು; ಇದೀಗ ಜಿಎಸ್‌ಟಿ ಇಳಿಕೆಯ ತನ್ನ ನಿರ್ಧಾರವನ್ನು, ದೇಶಕ್ಕೆ ತಾನು ನೀಡಿರುವ ಉಡುಗೊರೆ ಎಂದು ಬಿಂಬಿಸುತ್ತ, 'ಜಿಎಸ್‌ಟಿ ಉಳಿತಾಯ ಉತ್ಸವ' ಎಂಬ ಜಾಹೀರಾತನ್ನೂ ನೀಡುವ ಧಾರ್ಷ್ಟ್ಯವನ್ನು ಪ್ರದರ್ಶಿಸುತ್ತಿದೆ!

ನಾನೂ ಸೇರಿದಂತೆ ದೇಶದ ಲಕ್ಷಾಂತರ ಮಂದಿ ಪಿಂಚಣಿದಾರರು, ಇತರ ವಯೋವೃದ್ಧರು ಈ ಎಂಟು ವರ್ಷಗಳಲ್ಲಿ ಲಕ್ಷ ರುಪಾಯಿವರೆಗೂ ಆರೋಗ್ಯ ವಿಮಾ ಜಿಎಸ್‌ಟಿ ನೀಡಿರುವುದಲ್ಲದೆ ಹಲವು ಲಕ್ಷ ರುಪಾಯಿಗಳನ್ನು ಆರೋಗ್ಯ ವಿಮೆಗಾಗಿ ಖರ್ಚುಮಾಡಿ ಬಸವಳಿದಿದ್ದೇವೆ. ಇದೀಗ, ನನ್ನ ಇನ್ಶೂರೆನ್ಸ್ ಕಂಪನಿಯು ಆರೋಗ್ಯ ವಿಮೆಯ ಕನಿಷ್ಠ ಮಿತಿ ಏರಿಸಿ, ಪ್ರೀಮಿಯಂ ಮೊತ್ತವನ್ನೇ ಹೆಚ್ಚಿಸುವುದರ ಮೂಲಕ, ಜಿಎಸ್‌ಟಿ ಉಳಿಕೆಯಿಂದ ಆಗುವ ಲಾಭವನ್ನು ಸಂಪೂರ್ಣ ಕಸಿದುಕೊಳ್ಳುತ್ತಿದೆ! ಇದನ್ನು ಕಂಡು ಬೇಸತ್ತು ಮತ್ತು ಈ ಪಾಟಿ ವೆಚ್ಚವನ್ನು ಭರಿಸಲಾರದೆ ನಾನು ಈ ಸಲ ಆರೋಗ್ಯ ವಿಮೆಯನ್ನೇ ಕೈ ಬಿಟ್ಟಿದ್ದೇನೆ. ಕೇಂದ್ರ ಸರಕಾರದ ಘೋಷಣೆ, ಜಾಹೀರಾತು, ಪ್ರಚಾರ ಇವುಗಳಿಗೆ ಮರುಳಾಗುವ ಜನರು ಈ ವಾಸ್ತವಗಳೆಡೆಗೆ ಗಮನಹರಿಸಬೇಕು.

-ಎಚ್.ಆನಂದರಾಮ ಶಾಸ್ತ್ರೀ, ಬೆಂಗಳೂರು

ಪ್ರತಿದಿನದ ಗಾಯನವಾಗಲಿ

ನಾಡಹೆಮ್ಮೆಯ ಪ್ರತೀಕವಾಗಿರುವ, ಕುವೆಂಪು ವಿರಚಿತ 'ಜಯ ಭಾರತ ಜನನಿಯ ತನುಜಾತೆ' ನಾಡಗೀತೆಯು ಈ ವರ್ಷ ಶತಮಾನೋತ್ಸವವನ್ನು ಆಚರಿಸಿಕೊಳ್ಳುತ್ತಿದೆ. ಇದು ಕೇವಲ ಗೀತೆಯಲ್ಲ, ಇದೊಂದು ಅಮರ ಕಾವ್ಯ ಹಾಗೂ ಕನ್ನಡ ನಾಡಿನ ಅಸ್ಮಿತೆಯಾಗಿದೆ. ನಾಡು-ನುಡಿ-ಸಂಸ್ಕೃತಿಯನ್ನು ಸಾರುವ ಜೀವಂತ ಸಂಕೇತವಾಗಿದೆ. ನಾಡಿನ ಈ ಸಾಂಸ್ಕೃತಿಕ ಗುರುತನ್ನು ಉಳಿಸುವ ದಿಸೆಯಲ್ಲಿ ರಾಜ್ಯ ಸರಕಾರವು ಕೆಲವೊಂದು ಕ್ರಮಗಳನ್ನು ಕೈಗೊಳ್ಳುವುದು ಅತ್ಯಂತ ಅಗತ್ಯವಾಗಿದೆ. ಕೇವಲ ಸರಕಾರಿ ಶಾಲೆಗಳಲ್ಲದೆ ಎಲ್ಲಾ ಖಾಸಗಿ ಸಿಬಿಎಸ್‌ಇ ಮತ್ತು ಐಸಿಎಸ್‌ಇ ಶಾಲೆಗಳಲ್ಲೂ ನಾಡಗೀತೆಯನ್ನು ಕಡ್ಡಾಯಗೊಳಿಸಬೇಕು. ಕನ್ನಡದ ನೆಲದಲ್ಲಿ ಓದುತ್ತಿರುವ ಪ್ರತಿಯೊಬ್ಬ ವಿದ್ಯಾರ್ಥಿಯೂ ನಾಡಗೀತೆಯಲ್ಲಿರುವ ಆಶಯವನ್ನು ಮತ್ತು ತತ್ವವನ್ನು ಅಳವಡಿಸಿಕೊಂಡರೆ, ಅಂಥವರು ಭವಿಷ್ಯದ ಸತ್ಪ್ರಜೆ ಆಗುವುದರಲ್ಲಿ ಅನುಮಾನವಿಲ್ಲ. ಮಕ್ಕಳಲ್ಲಿ ಈ ನಾಡಿನ ಕುರಿತಾದ ಭಾವನೆ, ಆತ್ಮಗೌರವ ಹಾಗೂ ಭಾಷಾಪ್ರೀತಿಯನ್ನು ಮೂಡಿಸಬಲ್ಲ ಶಕ್ತಿಯುತ ಸಾಧನವಾಗಿದೆ ನಾಡಗೀತೆ; ಆದ್ದರಿಂದ ಇದರ ಶತಮಾನೋತ್ಸವವು ಕೇವಲ ಒಂದು ಆಚರಣೆ ಆಗದೆ, ಕನ್ನಡನಾಡಿನ ಅಸ್ಮಿತೆಯನ್ನು ಮತ್ತೊಮ್ಮೆ ಎತ್ತಿಹಿಡಿಯುವ ಆಂದೋಲನವಾಗಿ ರೂಪಾಂತರಗೊಳ್ಳಲಿ.

-ಡಾ. ವಿಜಯಕುಮಾರ್ ಎಚ್.ಕೆ., ರಾಯಚೂರು

ಭಸ್ಮಾಸುರ ಪ್ರಸಂಗ

'ಆಳುಗರನ್ನು ಅಹಂಕಾರ, ಅಟ್ಟಹಾಸ ಅಮರಿಕೊಂಡರೆ..' ಎಂಬ ಶೀರ್ಷಿಕೆಯ ಪ್ರಕಾಶ್ ಶೇಷರಾಘವಾಚಾರ್ ಅವರ ಲೇಖನ (ಅ.22) ನಿಜವಾಗಿಯೂ ಅರ್ಥಪೂರ್ಣವಾಗಿದೆ. ಶಿವನಿಂದ ವರವನ್ನು ಪಡೆದ ಭಸ್ಮಾಸುರನು ಕಂಟಕಪ್ರಾಯನಾದ ಪುರಾಣ ಪ್ರಸಂಗವು ಇಲ್ಲಿ ನೆನಪಾಗುತ್ತಿದೆ. ನಮ್ಮ ತಲೆಗಳ ಮೇಲೆ ನಾವೇ ಕೈ ಇಟ್ಟುಕೊಳ್ಳುವಂಥ ಸಮಯ ಇನ್ನು ಕೆಲವೇ ದಿನಗಳಲ್ಲಿ ಬಂದರೂ ಅಚ್ಚರಿಯಿಲ್ಲ. ದ್ವೇಷ ರಾಜಕಾರಣವು ಬಹಳ ದಿನ ನಡೆದ ಉದಾಹರಣೆಗಳಿಲ್ಲ.

-ರಾಜಶೇಖರ ಶೀಲವಂತ, ಬೆಂಗಳೂರು

ಒದುಗರ ಓಣಿಗೆ ಭೇಟಿ ಕೊಡಿ

ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಭಟ್ಟರ್ ಸ್ಕಾಚ್

- **ಕೋಕಿಲಾ ಹಿತ್ತಲಮನಿ, ಮೈಸೂರು**
ಆಮೆಗಳ ಹೆರಿಗೆ ಕಣ್ತುಂಬಿಕೊಳ್ಳಲು ಒಮಾನ್ ಸಮುದ್ರತೀರಕ್ಕೆ ಹೋಗಿದ್ದ ಭಟ್ಟರು ಮುಂದಿನ ಪ್ರಕೃತಿ ವೈಚಿತ್ರ್ಯ ನೋಡಲು ಯಾವಾಗ ಅಣಿಯಾಗುತ್ತಾರೆ?
- **ಹೆರಿಗೆಗೆ ಹೋದ ಮೇಲೆ ಬಾಣಂತನಕ್ಕೆ ಹೋಗದಿದ್ದರೆ ಹೇಗೆ?!**

- **ರುಕ್ಮಿಣಿ, ಚಾಮರಾಜಪೇಟೆ**
ಭೀಮ್ ಆರ್ಮಿ ಮಾದರಿಯಲ್ಲಿ 'ಭಟ್ಟರ ಆರ್ಮಿ'ಯನ್ನು ಕಟ್ಟಬೇಕೆಂದಿದ್ದೇವೆ. ಆಗಬಹುದಾ?
- **ಗಣವೇಷ, ಪಥಸಂಚಲನ ಇರುತ್ತಾ?!**

- **ರಾಘಣ್ಣ, ಮೈಸೂರು**
ಭಟ್ರೇ, ಮನುಷ್ಯ ಜೀವಿಗೆ ಭೂಮಿ ಮೇಲೆ ತಡೆದುಕೊಳ್ಳಲಾಗದ ಆ ಎರಡು ಯಾವುವು ಹೇಳ್ತೀರಾ?
- **ಒಂದು ಭಾವನೆಗಳು ಮತ್ತೊಂದು ಕಾಮನೆಗಳು!**

- **ಶೀಲಾ ಒಂಟಿಕೊಪ್ಪಲು, ಮೈಸೂರು**
ಭಟ್ರೇ, ನಿಮಗೆ ಮೈಸೂರಿನ ಎಷ್ಟು ಕೊಪ್ಪಲುಗಳ ಉದ್ದಗಲ ಪರಿಚಯವಿದೆ?
- **ನಿಮ್ಮದೂ ಸೇರಿ ಮೂರು. ಒಂಟಿಕೊಪ್ಪಲು, ತೊಣಚಿಕೊಪ್ಪಲು ಮತ್ತು ಕನ್ನೇಗೌಡನ ಕೊಪ್ಪಲು!**

- **ರಂಗಣ್ಣಾಚಾರ್, ಕೃಷ್ಣಮೂರ್ತಿಪುರಂ**
ಭಟ್ರೇ, ಕುನ್ನಕುಡಿ ವೈದ್ಯನಾಥರಿಗೂ, ಮಹಾತ್ಮ ಗಾಂಧಿಯವರಿಗೂ ಏನು ವ್ಯತ್ಯಾಸ?
- **ಮೊದಲನೆಯವರು ವಯೊಲಿನಿಸ್ಟ್, ಎರಡನೆಯವರು ನಾನ್-ವಯೊಲನಿಸ್ಟ್!**

- **ಅಲಮೇಲು, ಮೇಲುಕೋಟೆ**
ಭಟ್ರೇ, ವಿಶ್ವವಾಣಿಯಲ್ಲಿ 'ಬಸವ ಮಂಟಪ' ಲೇಖನ ಓದಿ ಏನು ಮಾಡುತ್ತಿದ್ದಾರೆ?
- **ಓದಿ ಓದಿ ಮೆಲುಕು ಹಾಕುತ್ತಿದ್ದಾರೆ!**

- **ರುಕ್ಮಿಣಿ ರವಿಕುಮಾರ್, ಚಾಮರಾಜಪೇಟೆ**
ಭಟ್ರೇ, ಕಟ್ಟಿಕೊಂಡ ಗಂಡನನ್ನು ದಿನವೂ ಆಫೀಸಿಗೆ ಕಳಿಸುವ ವೇಳೆ ಸಂಗೀತದ ರಾಗ ಹೇಳಿ 'ಬೈ' ಹೇಳಲು ಸಾಧ್ಯವಿದೆಯಾ?
- **ಯಾಕಿಲ್ಲ? 'ಬೈ' ರವಿ ಹಾಡಬಹುದಲ್ಲ?**

- **ಘಂಟಿ ರಾಮಾಚಾರ್ಯ, ಮೈಸೂರು**
ಭಟ್ರೇ, ಕರ್ನಾಟಕ ಸಂಗೀತಕ್ಕೂ, ಕ್ರಿಕೆಟಿಗೂ ಏನು ಸಾಮ್ಯ?
- **ಅಲ್ಲಿ ಹಾಡಲು, ಇಲ್ಲಿ ಆಡಲು 'ಪಿಚ್' ಬೇಕೇ ಬೇಕು!**

- **ಶಾಲು, ಪಿರಿಯಾಪಟ್ಟಣ**
ಭಟ್ರೇ, ದಿನಗಟ್ಲೆ ಅಡುಗೆಗೂ, ಹೆಚ್ಚಟ್ಲೆ ಅಡುಗೆಗೂ ಏನು ವ್ಯತ್ಯಾಸ?
- **ಮೊದಲನೆದು ದಿನವೂ ಮಾಡುವ ಅಡುಗೆ, ಎರಡನೆಯದು ತಿಥಿ ಅಡುಗೆ!**

ಜಿಎಸ್‌ಟಿ 2.0: ಲಾಭ ಜನರಿಗೆ ತಲುಪಿದೆಯೇ?

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಸುಂಕಾಸ್ತ್ರದ ರಗಳೆಗಳಿಂದಾಗಿ ಉದ್ಭವಿಸಿದ 'ಭೂ-ರಾಜಕೀಯ'ದ ಅಸ್ಥಿರತೆಗಳ ನಡುವೆಯೂ ಭಾರವು ಆರ್ಥಿಕ ಸ್ಥಿರತೆ ಕಾಯ್ದುಕೊಂಡಿರುವುದು ಹೆಮ್ಮೆಯ ವಿಚಾರ. ಸರಕಾರದ ಜಿಎಸ್‌ಟಿ ವರಮಾನ ಒಂದಷ್ಟು ಕಡಿತಗೊಂಡರೂ, ದೇಶದಲ್ಲಿ ಖರೀದಿ ಸಾಮರ್ಥ್ಯ ಹೆಚ್ಚಿರುವುದು ಒಳ್ಳೆಯ ಬೆಳವಣಿಗೆ.

ಕರಪ್ರವರ

ರವೀ ಸಜಂಗದ್ದೆ
vveditoped@gmail.com

ಪ್ರಧಾನಿ ನರೇಂದ್ರ ಮೋದಿಯವರು ಈ ಬಾರಿಯ ಸ್ವಾತಂತ್ರ್ಯೋತ್ಸವದ ಭಾಷಣದಲ್ಲಿ, ''ದೀಪಾವಳಿಯ ಸಂದರ್ಭದಲ್ಲಿ ಹಲವು ವಸ್ತುಗಳ ಮೇಲಿನ ತೆರಿಗೆಯನ್ನು ಕಡಿತಗೊಳಿಸುವ ನಿಟ್ಟಿನಲ್ಲಿ ಕೇಂದ್ರ ಸರಕಾರವು ಕಾರ್ಯಪ್ರವೃತ್ತವಾಗಿದೆ'' ಎಂದಿದ್ದರು. ಇದಾದ ಮೂರೇ ವಾರಗಳಲ್ಲಿ ವಿತ್ತ ಸಚಿವರು ಸುದ್ದಿಗೋಷ್ಠಿ ನಡೆಸಿ, ದಸರಾ ಹಬ್ಬದ ಮೊದಲ ದಿನದಿಂದಲೇ ದಿನಬಳಕೆಯ ವಸ್ತುಗಳನ್ನು ಶೇ.5ರ ಅಥವಾ ಶೂನ್ಯ ತೆರಿಗೆಯ ವ್ಯಾಪ್ತಿಗೆ ತರುವ 'ಜಿಎಸ್‌ಟಿ 2.0' ಐತಿಹಾಸಿಕ ನಿರ್ಣಯವನ್ನು ಘೋಷಿಸಿ, ಹಬ್ಬದ ಮೆರುಗನ್ನು ಮತ್ತಷ್ಟು ಹೆಚ್ಚಿಸಿದ್ದರು. ಅಂತೆಯೇ ದಸರಾ ವೇಳೆ ದೇಶಾದ್ಯಂತ ಸಾಕಷ್ಟು ವಸ್ತುಗಳು ದಾಖಲೆ ಪ್ರಮಾಣದಲ್ಲಿ ಮಾರಾಟಗೊಂಡವು. ಅಲ್ಲಿಗೆ, ನಿರೀಕ್ಷೆಗಿಂತ ಒಂದು ತಿಂಗಳ ಮೊದಲೇ ತೆರಿಗೆ ಕಡಿತದ ಸಡಗರ!

ಅಕ್ಟೋಬರ್ 22ಕ್ಕೆ 'ಜಿಎಸ್‌ಟಿ 2.0' ಜಾರಿಯಾಗಿ ಒಂದು ತಿಂಗಳಾಗಿದೆ. ಯಾವೆಲ್ಲಾ ಕ್ಷೇತ್ರಗಳು ಜಿಎಸ್‌ಟಿ ಲಾಭವನ್ನು ಗ್ರಾಹಕರಿಗೆ ಹೇಗೆಲ್ಲಾ ವರ್ಗಾಯಿಸಿ ದೇಶದ ಜಿಡಿಪಿಗೆ ಪಾಲು ನೀಡಿವೆ ಎಂಬುದನ್ನು ಅವಲೋಕಿಸೋಣ. ಈ ಸಂಬಂಧವಾಗಿ ಕೇಂದ್ರ ಸರಕಾರವು 'ರಿಪೋರ್ಟ್ ಕಾರ್ಡ್' ಅನ್ನು ಬಿಡುಗಡೆ ಮಾಡಿದೆ. ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು 'ಜಿಎಸ್‌ಟಿ ಉಳಿತಾಯ ಉತ್ಸವ'ದ ಸುದ್ದಿಗೋಷ್ಠಿಯಲ್ಲಿ ಮಾತನಾಡುತ್ತಾ, ''ಪ್ರಧಾನಿ ಮೋದಿಯವರ ನೇತೃತ್ವದಲ್ಲಿ ಈ ಹಬ್ಬದ ಉಡುಗೊರೆಯನ್ನು ಜನರ ಮುಂದಿಟ್ಟಿದ್ದೇವೆ. ಜಿಎಸ್‌ಟಿ ದರ ಕಡಿತಗಳು ಜನರ ಮನಸ್ಸು-ಜೇಬಿಗೆ ಸಂತಸ-ಸಂಭ್ರಮ-ಸಮಾಧಾನಗಳನ್ನು ತಂದಿವೆ. ಬಹುತೇಕ ಆಹಾರ ಪದಾರ್ಥಗಳು, ದಿನಬಳಕೆಯ ಅಗತ್ಯ ವಸ್ತುಗಳು, ಇಲೆಕ್ಟ್ರಾನಿಕ್, ಆಟೋಮೊಬೈಲ್ ಮತ್ತಿತರೆ ಗ್ರಾಹಕ ಉತ್ಪನ್ನಗಳ ಮೇಲಿನ ತೆರಿಗೆಯನ್ನು ತಗ್ಗಿಸಿ ಶೇ.5 ಅಥವಾ ಶೂನ್ಯ ತೆರಿಗೆ ವ್ಯಾಪ್ತಿಗೆ ತಂದಿರುವುದು ಕ್ರಾಂತಿಕಾರಿ ಬದಲಾವಣೆ. ಈ ತೆರಿಗೆ ಕಡಿತದಿಂದಾಗಿ ವಸ್ತುಗಳ ಬೆಲೆ ಶೇ.10ರಿಂದ 20ರಷ್ಟು ಅಗ್ಗವಾಗಿದ್ದು ಗ್ರಾಹಕರಿಗೆ ಭಾರಿ ಲಾಭವಾಗಿದೆ ಮತ್ತು ದೇಶದ 13 ಕೋಟಿ ಜನರ ಜೀವನಮಟ್ಟ ಉನ್ನತೀಕರಿಸಲ್ಪಟ್ಟಂತಾಗಿದೆ'' ಎಂದರು. ಅಂದರೆ, ಜಿಎಸ್‌ಟಿ ಕಡಿತದ ಫಲವಾಗಿ ದೇಶದ ಸುಮಾರು ಶೇ.8-9ರಷ್ಟು ಜನರ ಜೀವನಮಟ್ಟ ಸುಧಾರಿಸಿದೆ! ಇದು ನಿಜಕ್ಕೂ ಶ್ಲಾಘನೀಯ ಮತ್ತು ಖುಷಿಯ ವಿಚಾರ. ಕಾಂಗ್ರೆಸ್ ಸರಕಾರವು ಘೋಷಿಸಿದ್ದ, ಸ್ವಾತಂತ್ರ್ಯಾನಂತರದಿಂದಲೂ ಚಾಲ್ತಿಯಲ್ಲಿರುವ 'ಗರೀಬಿ ಹಟಾವೋ' ಆಂದೋಲನವು ನಿಜಾರ್ಥದಲ್ಲಿ ಸಫಲವಾಗಲು ಕಾಂಗ್ರೆಸ್ಸೇತರ ಸರಕಾರವೇ ಬರಬೇಕಾಯಿತು!

ಜಿಎಸ್‌ಟಿ ಕಡಿತದ ಲಾಭವು ಜನರಿಗೆ ಬಹಳಷ್ಟು ಅನುಕೂಲ ಮಾಡಿಕೊಟ್ಟಿದೆ. ಇದು ಜನರ ಪಾಲಿನ ಉಳಿತಾಯ ಮಾತ್ರವಲ್ಲ, ದೇಶದ ಆರ್ಥಿಕತೆಯನ್ನು ದೊಡ್ಡ ಮಟ್ಟದಲ್ಲಿ ಬೂಸ್ಟ್ ಮಾಡುವ ಮಹತ್ತರ ಕಾರ್ಯಯೋಜನೆಯೂ ಹೌದು. ಕಂಪನಿಗಳು ತೆರಿಗೆ ಕಡಿತದ ಆಂದೋಲನವನ್ನು ಬೇರೆ ಬೇರೆ 'ಆಫರ್'ಗಳು, ಆಕರ್ಷಕ ಜಾಹೀರಾತುಗಳ ಮೂಲಕ ಜನರ ಮುಂದಿಟ್ಟು ತಮ್ಮ ವಹಿವಾಟನ್ನು ಹೆಚ್ಚಿಸಿಕೊಳ್ಳುವ ಮಾರ್ಗವನ್ನು ಅನುಸರಿಸಿ ಪ್ರಯೋಜನ ಪಡೆದುಕೊಂಡಿದ್ದರ ಜತೆಗೆ, ಗ್ರಾಹಕರಿಗೂ ಸರಕಾರಕ್ಕೂ ಅಧಿಕ ಲಾಭ ಮಾಡಿಸಿವೆ. ಹಣಕಾಸಿನ ವ್ಯವಹಾರವು ದಾಖಲೆ ಪ್ರಮಾಣದಲ್ಲಿ ಆಗಿರುವುದನ್ನು ಅಂಕಿ-ಅಂಶಗಳು ಹೇಳುತ್ತಿವೆ. ದೇಶಾದ್ಯಂತದ ಬೃಹತ್ ಮಾಲ್‌ಗಳು, ಬ್ರ್ಯಾಂಡ್‌ಗಳು, ಆನ್‌ಲೈನ್ ಪೋರ್ಟಲ್‌ಗಳು (ಅಮೆಜಾನ್, ಫ್ಲಿಪ್‌ಕಾರ್ಟ್ ಇತ್ಯಾದಿ) 'ದರ ಕಡಿತಗೊಂಡ ಡೀಲ್'ಗಳನ್ನು ಜನರ ಮುಂದಿಟ್ಟು ತಂತಮ್ಮ ವ್ಯಾಪಾರಗಳನ್ನು ವೃದ್ಧಿಸಿಕೊಂಡಿವೆ.

'ಜಿಎಸ್‌ಟಿ 2.0' ಸುಧಾರಣೆಯ ಒಂದು ತಿಂಗಳ ಟ್ರೆಂಡ್ ನೋಡಿದಾಗ, ದೇಶದ ಕುಟುಂಬಗಳ ಮಾಸಿಕ ಖರ್ಚುಗಳು ಸರಾಸರಿ ಶೇ.10-13ರಷ್ಟು ಇಳಿದಿವೆ. ಸ್ಟೇಷನರಿ, ಬಟ್ಟೆ, ಪಾದರಕ್ಷೆ, ಔಷಧಿಗಳಿಗೆ ಮಾಡುವ ವೆಚ್ಚವು ಶೇ.7-12ರಷ್ಟು ಕಡಿಮೆಯಾಗಿದೆ ಎಂದು ಕೇಂದ್ರ ಸರಕಾರ ಅಂದಾಜಿಸಿದೆ. ಸುಮಾರು 375 ವಸ್ತುಗಳ ಬೆಲೆ ಕಡಿಮೆಯಾಗಿದ್ದು, ವೈಯಕ್ತಿಕ ಆರೋಗ್ಯ ವಿಮೆ ಮತ್ತು ಜೀವವಿಮೆ ಪಾಲಿಸಿಗಳ ಮೇಲೆ ಕೋಟ್ಯಂತರ ರುಪಾಯಿ ತೆರಿಗೆ ಹಣ ಉಳಿತಾಯವಾಗಿದೆ. ಟ್ರ್ಯಾಕ್ಟರ್ ಖರೀದಿಯಲ್ಲಿ 40,000 ರುಪಾಯಿ, ಬೈಕ್/ಸ್ಕೂಟರ್ ಮೇಲೆ ಗರಿಷ್ಠ 8,000 ರುಪಾಯಿ, 32 ಇಂಚುಗಳಿಗಿಂತ ದೊಡ್ಡ ಟಿವಿಯ ಮೇಲೆ 3,500 ರುಪಾಯಿ ಮೊತ್ತವು ಖರೀದಿದಾರಿಗೆ ಉಳಿತಾಯವಾಗುತ್ತಿದೆ. ಹವಾನಿಯಂತ್ರಣ ಸಾಧನಗಳ ಮೇಲಿನ ಜಿಎಸ್‌ಟಿ ಕಡಿಮೆಯಾಗಿದೆ. ಸಣ್ಣ ಕಾರುಗಳ ಖರೀದಿದಾರರು 70,000 ರುಪಾಯಿಗಳವರೆಗೆ ಉಳಿತಾಯ ಮಾಡಿದ್ದಾರೆ. ''ಈ ಉಳಿತಾಯದ ಉಪಕ್ರಮವು ಬಡವರು, ನವ-ಮಧ್ಯಮ ವರ್ಗ ಮತ್ತು ಮಧ್ಯಮ ವರ್ಗದವರ ಕನಸುಗಳನ್ನು ನನಸು ಮಾಡುತ್ತಿದೆ. ಇದು ಜನಸಾಮಾನ್ಯರಿಗೆ ಡಬಲ್ ಬೋನಸ್ ಉಡುಗೊರೆ'' ಎಂದು ಪ್ರಧಾನಿ ಮೋದಿ ಬಣ್ಣಿಸಿದ್ದಾರೆ.

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಅಸಂಬದ್ಧ ವ್ಯಾಪಾರ ನೀತಿಗಳು, ಸುಂಕಾಸ್ತ್ರದ ರಗಳೆಗಳಿಂದಾಗಿ ಉದ್ಭವಿಸಿದ 'ಭೂ-ರಾಜಕೀಯ'ದ ಅಸ್ಥಿರತೆಗಳ ನಡುವೆಯೂ ಭಾರವು ತನ್ನ ಆರ್ಥಿಕ ಸ್ಥಿರತೆಯನ್ನು ಕಾಯ್ದುಕೊಂಡಿರುವುದು ಸಮಾಧಾನ ಮತ್ತು ಹೆಮ್ಮೆಯ ವಿಚಾರ. ಸರಕಾರದ ಜಿಎಸ್‌ಟಿ ವರಮಾನ ಒಂದಷ್ಟು ಕಡಿತಗೊಂಡರೂ, ದೇಶದಲ್ಲಿ ಖರೀದಿ ಸಾಮರ್ಥ್ಯ ಹೆಚ್ಚಿರುವುದರಿಂದ ಅದರ ನಕಾರಾತ್ಮಕ ಪರಿಣಾಮ ಹೆಚ್ಚೇನೂ ಆಗಿಲ್ಲ. ಜಿಎಸ್‌ಟಿ ದರ ಕಡಿತದಿಂದಾಗಿ ವಾಹನ ಮತ್ತು ಇಲೆಕ್ಟ್ರಾನಿಕ್ಸ್ ಕ್ಷೇತ್ರಗಳಲ್ಲಿ ಗರಿಷ್ಠ ಮಾರಾಟ ದಾಖಲಾಗಿದೆ; ಹೀರೋ ಮೋಟರ್ಸ್, ಟಾಟಾ ಮೋಟರ್ಸ್, ಹ್ಯುಂಡೈ ಮುಂತಾದ ವಾಹನ ತಯಾರಕ ಮತ್ತು ಮಾರಾಟ ಸಂಸ್ಥೆಗಳು ಜಿಎಸ್‌ಟಿ ಕಡಿತದ ಮೊದಲ ತಿಂಗಳಿನಲ್ಲೇ ಅತಿಹೆಚ್ಚು ಮಾರಾಟವನ್ನು ದಾಖಲಿಸಿದ ವರದಿಗಳಿವೆ. ದುಬಾರಿ ಬೆಲೆಯ ಬಿಎಂಡಬ್ಲ್ಯೂ ಕಾರು ಕಂಪನಿಯು ದಸರಾ ಸಂದರ್ಭದಲ್ಲಿ ಆರು ನಿಮಿಷಕ್ಕೊಂದು ಕಾರು ಮಾರಿ ದಾಖಲೆ ನಿರ್ಮಿಸಿದೆಯಂತೆ! ಒಟ್ಟಾರೆಯಾಗಿ ಹೇಳುವುದಾದರೆ, ತೆರಿಗೆ ಕಡಿತವು ಹಬ್ಬದ ಸಂಭ್ರಮವನ್ನು ದ್ವಿಗುಣಗೊಳಿಸಿದೆ.

'ಜಿಎಸ್‌ಟಿ ಕಡಿತಕ್ಕೆ ಅನುಗುಣವಾಗಿ ಕಂಪನಿಗಳು ದರಗಳನ್ನು ಪರಿಷ್ಕರಣೆ ಮಾಡಿಲ್ಲ' ಎಂಬುದಾಗಿ ಗ್ರಾಹಕ ವ್ಯವಹಾರಗಳ ಇಲಾಖೆಗೆ ಈ ಒಂದು ತಿಂಗಳಲ್ಲಿ 3,169 ದೂರುಗಳು ದಾಖಲಾಗಿವೆ. ಈ ಪೈಕಿ 94 ದೂರುಗಳನ್ನು ಪರಿಹರಿಸಲಾಗಿದ್ದು, ಮಿಕ್ಕವನ್ನು ಕೇಂದ್ರ ಪರೋಕ್ಷ ತೆರಿಗೆ ಮತ್ತು ಕಸ್ಟಮ್ಸ್ ಮಂಡಳಿಗೆ ರವಾನಿಸಲಾಗಿದೆ. ಗ್ರಾಹಕರು ಹೆಚ್ಚು ಜಾಗೃತರಾಗಿದ್ದಾರೆ ಎಂಬುದಕ್ಕೆ ಈ ದೂರುಗಳ ಸಂಖ್ಯೆಯೇ ಸಾಕ್ಷಿ. ಯಾವ ಕಂಪನಿಯೂ ತೆರಿಗೆ ಕಡಿತದ ಲಾಭವನ್ನು ಗ್ರಾಹಕರಿಗೆ ವರ್ಗಾಯಿಸದೆ ನುಣುಚಿಕೊಳ್ಳದಂತೆ ನಿಗಾ ವಹಿಸುವ ಅಭಯವನ್ನು

ವಿತ್ತ ಸಚಿವರು ನೀಡಿರುವುದು ಗ್ರಾಹಕ-ಸ್ನೇಹಿ ಬೆಳವಣಿಗೆ. ಮಿಕ್ಕಂತೆ, ಮುಂದೆ ನೀಡಲಾಗಿರುವ ಒಂದಷ್ಟು ಅಂಶಗಳ ಕಡೆಗೆ ಗಮನ ಹರಿಸಬೇಕಿದೆ:

- ಕ್ಷೀಣಿಸುತ್ತಿರುವ ಕೈಮಗ್ಗ ಮತ್ತು ಜವಳಿ ಉದ್ಯಮದ ಮೇಲೆ ಜಿಎಸ್‌ಟಿಯು ಒಂದಿಷ್ಟು ಪ್ರಹಾರ ಮಾಡಿದಂತೆ ಕಾಣುತ್ತಿದೆ. 2,500 ರುಪಾಯಿಗಿಂತ ಹೆಚ್ಚಿನ ಬೆಲೆಯ ಕೈಮಗ್ಗ ಮತ್ತು ಜವಳಿ ಉತ್ಪನ್ನಗಳ ಮೇಲಿನ ತೆರಿಗೆಯನ್ನು ಶೇ.12ರಿಂದ 18ಕ್ಕೆ ಏರಿಸಲಾಗಿದೆ. ಈ ನಿರ್ಧಾರವನ್ನು ಮತ್ತೊಮ್ಮೆ ಪರಿಶೀಲಿಸಿ, ಈ ತೆರಿಗೆ ಸ್ತರವನ್ನು ಶೇ.5ರ ವ್ಯಾಪ್ತಿಗೆ ತಂದರೆ, ವಿಶೇಷವಾಗಿ ಕೈಮಗ್ಗ ನೇಕಾರಿಕೆಗೆ ನಿಜಾರ್ಥದಲ್ಲಿ ನೆರವಾಗಬಹುದು. ಕೈಮಗ್ಗದಲ್ಲಿ ತಯಾರಿಸಿದ ಕಾಂಚಿ, ಬನಾರಸ್, ಧರ್ಮಾವರಂ, ಗದ್ವಾಲ್ ಶೈಲಿಯ ಬಹುತೇಕ ಸೀರೆಗಳ ಬೆಲೆ 2,500 ರುಪಾಯಿಗಿಂತ ಹೆಚ್ಚು. ಈ ಸೀರೆಗಳು ಮತ್ತಷ್ಟು ದುಬಾರಿಯಾದರೆ, ಖರೀದಿಸಲು ಮಹಿಳೆಯರು ಹಿಂದೇಟು ಹಾಕಿಯಾರು.
- ವೈಯಕ್ತಿಕ ಆರೋಗ್ಯ ಮತ್ತು ಜೀವವಿಮಾ ಪಾಲಿಸಿಗಳನ್ನು ಶೂನ್ಯ ತೆರಿಗೆಯಡಿ ತಂದಂತೆಯೇ, ಗುಂಪು ವಿಮಾ ಪಾಲಿಸಿಗಳನ್ನೂ ಈಗಿರುವ ಶೇ.18ರ ತೆರಿಗೆ ವ್ಯಾಪ್ತಿಯಿಂದ ಶೂನ್ಯ ತೆರಿಗೆ ವ್ಯಾಪ್ತಿಗೆ ತರುವ ಕೆಲಸ ಶೀಘ್ರವಾಗಿ ಆಗಬೇಕು.
- ಪೂರಕ ಶಿಕ್ಷಣ ವ್ಯವಸ್ಥೆಯಡಿ ಬರುವ ಶಿಕ್ಷಣ ಸಂಸ್ಥೆಗಳಲ್ಲಿ ಬಳಸಲಾಗುವ ಐಟಿ ಸೇವೆ, ಸ್ವಚ್ಛತೆ, ಭದ್ರತೆ, ನಿರ್ವಹಣೆ, ಅಭಿವೃದ್ಧಿ ಶುಲ್ಕ ಇತ್ಯಾದಿಗಳ ಮೇಲಿನ ತೆರಿಗೆಯ ದರವನ್ನು ಶೇ.12ರಿಂದ 18ಕ್ಕೆ ಏರಿಸಿರುವುದು ಪೋಷಕರ ಜೇಬಿಗೆ ಹೊರೆಯಾಗಿದೆ. ಇದನ್ನು ಕೂಡ ಶೇ.5ರ ಸ್ತರಕ್ಕೆ ಇಳಿಸಲು ಕೇಂದ್ರ ಸರಕಾರ ಮನಸ್ಸು ಮಾಡಬೇಕು.
- ಕಾರ್ಮಿಕರ ಶುಲ್ಕಗಳ ಮೇಲಿನ ತೆರಿಗೆಯನ್ನು ಶೇ.12ರಿಂದ 18ಕ್ಕೆ ಏರಿಸಿರುವುದರಿಂದಾಗಿ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ ಒಂದಿಷ್ಟು ತೊಂದರೆಯಾಗಿದೆ. ಇದನ್ನೂ ಕೇಂದ್ರ ಸರಕಾರ ಗಮನದಲ್ಲಿಟ್ಟುಕೊಂಡು ಸಹಾಯಹಸ್ತ ಚಾಚಬೇಕು.
- ಸ್ವಿಗ್ಗಿ, ಝೊಮ್ಯಾಟೋ, ಇನ್‌ಸ್ಟಾಮಾರ್ಟ್, ಬ್ಲಿಂಕ್ ಇಟ್ ಮುಂತಾದ 'ಇ-ಕಾಮರ್ಸ್' ಪ್ಲಾಟ್‌ಫಾರ್ಮ್‌ಗಳು ಒದಗಿಸುವ ವಿತರಣಾ ಶುಲ್ಕದ ಮೇಲಿನ ತೆರಿಗೆ ಶೇ.18ಕ್ಕೆ ಏರಿಕೆಯಾಗಿದೆ. ಹೀಗಾಗಿ ಇಂಥ ವಿತರಣಾ ಸೇವೆಗಳು ದುಬಾರಿಯಾಗಿ ಜನಸಾಮಾನ್ಯರು ಹಿಂದಿಗಿಂತ ಹೆಚ್ಚು ಹಣವನ್ನು ವ್ಯಯಿಸಬೇಕಾಗಿ ಬಂದಿದೆ.
- ದಿವ್ಯಾಂಗರು ಬಳಸುವ ವೀಲ್ ಚೇರ್, ಬ್ರೈಲ್ ತಂತ್ರಾಂಶ/ಪುಸ್ತಕ, ಶ್ರವಣ ಸಾಧನ, ಕೃತಕ ಅಂಗಗಳ ಮೇಲೆ ಶೂನ್ಯ ತೆರಿಗೆಯಿದ್ದರೂ, ಅವುಗಳ ಬಿಡಿಭಾಗಗಳ ಮೇಲಿನ ಜಿಎಸ್‌ಟಿಯನ್ನು ಶೇ.18ಕ್ಕೆ ನಿಗದಿಪಡಿಸಿರುವುದು ಸಮಂಜಸವಲ್ಲ.

ಈ ಮೇಲಿನ ಅಂಶಗಳನ್ನೆಲ್ಲಾ ಗಮನಕ್ಕೆ ತಂದುಕೊಂಡು ತೆರಿಗೆ ವ್ಯವಸ್ಥೆಯನ್ನು ಮತ್ತಷ್ಟು ವ್ಯವಸ್ಥಿತವಾಗಿಸಿದರೆ, 'ಬಚತ್ ಉತ್ಸವ್'ಗಳು ಮುಂದಿನ ದಿನಗಳಲ್ಲೂ ಜನರಿಗೆ ಒಂದಷ್ಟು ಸಮಾಧಾನವನ್ನು ತರುವುದು ದಿಟ.

(ಲೇಖಕರು ಪ್ರಚಲಿತ ವಿದ್ಯಮಾನಗಳ ವಿಶ್ಲೇಷಕರು)

ಸಂಘದಕ್ಷ

ಬೈಂದೂರು ಚಂದ್ರಶೇಖರ ನಾವಡ

ಒಡೆದಾಳುವ ಸ್ವಾರ್ಥಿಗಳನ್ನು ದಿಗ್ಭ್ರಾಂತರಾಗಿಸಿದ ಸಂಘಶಕ್ತಿ

ಅದು 1970-80ರ ದಶಕದ ಕಾಲಘಟ್ಟ. ನಮಗೆ ಆಗಿನ್ನೂ ಹದಿಹರೆಯ. ನಮ್ಮೂರಿನ ಹೃದಯ ಭಾಗದಲ್ಲಿದ್ದ ವಿಶಾಲ ಮೈದಾನದ ಒಂದು ಮೂಲೆಯಲ್ಲಿ, ನಮಗಿಂತ ಕೊಂಚ ಹಿರಿಯರಾದ ವ್ಯಕ್ತಿಯೊಬ್ಬರು ಹತ್ತಾರು ಹುಡುಗರನ್ನು ಸೇರಿಸಿಕೊಂಡು ಎದುರುಗಡೆ ಧ್ವಜವನ್ನು ನೆಟ್ಟು ''ನಮಸ್ತೇ ಸದಾ ವತ್ಸಲೇ ಮಾತೃಭೂಮೇ...'' ಎಂದು ಸುಶ್ರಾವ್ಯವಾಗಿ ಹಾಡುತ್ತಿದ್ದುದನ್ನು ಕೇಳಿದಾಗ ಮೈ ರೋಮಾಂಚನಗೊಳ್ಳುತ್ತಿತ್ತು. ಶರೀರದಲ್ಲಿ ವಿದ್ಯುತ್ ಸಂಚಾರವಾದಂತಾಗುತ್ತಿತ್ತು. ದೇಶಭಕ್ತಿ, ದೇಶಸೇವೆ, ರಾಷ್ಟ್ರ ನಿಷ್ಠೆಗಳ ಪ್ರಥಮ ಪಾಠ ಸಿಕ್ಕಿದ್ದು ಅಲ್ಲೇ. ದೇಶವೆಂದರೆ ಕೇವಲ ಭೂಮಿಯ ಒಂದು ತುಂಡಷ್ಟೇ ಅಲ್ಲ, ಅದು ತಾಯಿಗೆ ಸಮಾನ. 'ಜನ್ಮ ನೀಡಿದ ತಾಯಿ ಮತ್ತು ಜನ್ಮಭೂಮಿ ಸ್ವರ್ಗಕ್ಕಿಂತಲೂ ಮಿಗಿಲು' ಎನ್ನುವ ಮಹೋನ್ನತ ಆದರ್ಶದ ಬೀಜವನ್ನು ನಮ್ಮೆದೆಯಲ್ಲಿ ಬಿತ್ತಿದ್ದೂ ಅಲ್ಲಿಯೇ. ಪ್ರಾಥಮಿಕ ಶಾಲೆಯಿಂದ ಪದವಿಯವರೆಗಿನ ಶಿಕ್ಷಣದಲ್ಲೆಲ್ಲೂ ದಕ್ಕದ, ರಾಷ್ಟ್ರಕ್ಕಾಗಿ ಸಮರ್ಪಣಾಭಾವ ಬೆಳೆಸಿಕೊಳ್ಳಬೇಕೆಂಬ ಆದರ್ಶ ರೂಪುಗೊಂಡಿದ್ದೂ ಅಲ್ಲಿಯೇ.

ಶಾಖೆಗೆ ಬರುತ್ತಿದ್ದ ಪ್ರಚಾರಕರ ಚಿಂತನ-ಮಂಥನವು ಎಳೆಯ ಮನಸ್ಸಿನಲ್ಲಿ 'ರಾಷ್ಟ್ರ ಮೊದಲು, ರಾಷ್ಟ್ರಕ್ಕಾಗಿ ನಾನೇನು ಮಾಡಬಹುದು..' ಎಂಬ ಚಿಂತನೆಗೆ ಪ್ರೇರೇಪಣೆ ನೀಡುತ್ತಿತ್ತು. ಸರಳತೆ, ಸೌಜನ್ಯತೆಯ ಸಂಸ್ಕಾರಯುತ, ನಿಸ್ವಾರ್ಥಭಾವದ ವ್ಯಕ್ತಿತ್ವ ನಿರ್ಮಾಣದ ಸೈದ್ಧಾಂತಿಕ ನೆಲೆಗಟ್ಟು ಅಲ್ಲಿ ರೂಪುಗೊಳ್ಳುತ್ತಿತ್ತು. ಬದುಕನ್ನು ದೇಶಹಿತಕ್ಕಾಗಿ ಸಮರ್ಪಿಸುವ ಸಮರ್ಪಣಾಭಾವದ ಪರಿಚಯವಾಗಿತ್ತು. ಅವರಿವರ ಮನೆಯಲ್ಲಿ ಉಂಡು ದೇಶಕ್ಕಾಗಿ ದುಡಿಯುವ ತ್ಯಾಗ-ಉದಾತ್ತತೆ ಎಂದರೆ ಏನು ಎಂಬುದರ ಪ್ರಾತ್ಯಕ್ಷಿಕೆ ನೀಡುವಂತಿತ್ತು ಸಂಘ ಪ್ರಚಾರಕರ ನಡೆ-ನುಡಿ. ಬಡತನವನ್ನೇ ಹೊದ್ದುಕೊಂಡಿದ್ದರೂ ಅವರಲ್ಲಿ ಪ್ರಾಮಾಣಿಕತೆ, ಅಚಲ ನಿಷ್ಠೆಗೆ ಕೊರತೆ ಇರಲಿಲ್ಲ. ನಮಗಂತೂ ಸಂಘಕ್ಕಾಗಿ ಆಜೀವನ ಅವಿವಾಹಿತರಾಗಿ ದುಡಿಯುವ ಕರ್ಮಠ ಯೋಧರ ಪರಿಚಯವಾಗುತ್ತಿತ್ತು. ನೈಸರ್ಗಿಕ ವಿಕೋಪಗಳು ಎದುರಾದಾಗ ಧಾವಿಸುವ ಸಂಘಶಕ್ತಿ ಕಂಡು ಪುಳಕಿತರಾಗುತ್ತಿದ್ದೆವು. ದೈಹಿಕ ಕಸರತ್ತುಗಳಷ್ಟೇ ಅಲ್ಲದೇ ಸಂಸ್ಕೃತಿ, ಸಂಸ್ಕಾರದ ಜ್ಞಾನಾರ್ಜನೆಗೆ ಅದು ವೇದಿಕೆಯಾಗಿತ್ತು. ಸ್ವಸ್ಥ ಶರೀರದೊಂದಿಗೆ ಸ್ವಸ್ಥ ಮನಸ್ಸಿಗೆ ಬೇಕಾದ ಜೀವನಪದ್ಧತಿ ಅನುಸರಿಸಲು ಯಥೋಚಿತ ಮಾರ್ಗದರ್ಶನ ಅಲ್ಲಿ ಸಿಕ್ಕಿತ್ತು. ದೇಶಪ್ರೇಮ, ಭ್ರಾತೃತ್ವದ ಅಮೃತಧಾರೆ ದೊರಕಿತ್ತೇ ವಿನಾ, ದ್ವೇಷ, ಹಿಂಸೆಯ ವಿಚಾರ ಅಲ್ಲಿ ಎಂದೂ ಸುಳಿದಿರಲಿಲ್ಲ.

ಮುಂದೆ ರಾಷ್ಟ್ರಪ್ರಹರಿಯಾಗಿ ಸೈನ್ಯ ತರಬೇತಿಯ ದಿನಗಳಲ್ಲೂ, ಸೀಮಾಂತ ಪ್ರದೇಶಗಳ ಕಠಿಣ ದಿನಚರಿಗೆ ಅಣಿಗೊಳಿಸಿದ್ದು ಹದಿಹರೆಯದಲ್ಲಿ ದೊರಕಿದ ಸಂಘದ ತರಬೇತಿಯೇ ಎಂದರೆ ತಪ್ಪಾಗದು. ರಾಷ್ಟ್ರಕಟ್ಟುವ ಕಾರ್ಯಕ್ಕಾಗಿ ಬದುಕಿನ ಎಲ್ಲಾ ಐಷಾರಾಮಗಳನ್ನು, ಭೋಗ-ಭಾಗ್ಯಗಳನ್ನು ತ್ಯಜಿಸಿ ಸಾಂಸಾರಿಕ ಜವಾಬ್ದಾರಿಗಳಿಂದ ಮುಕ್ತರಾಗಿ, ಸಮರ್ಪಣಾ ಭಾವದಿಂದ ಸಂಘಕಾರ್ಯಕ್ಕಾಗಿ ಹೊರಟ ತ್ಯಾಗಪುರುಷರ ವೃತ್ತಾಂತವನ್ನು ಕೇಳಿ ರೋಮಗಳು ಸೆಟೆದುನಿಲ್ಲುತ್ತಿದ್ದವು. ಜಾತಿ ತಾರತಮ್ಯದ ಕಾರಣದಿಂದ ಸಮಾಜದಲ್ಲಿ ಮೂಡಿದ್ದ ಬಿರುಕನ್ನು ಅಳಿಸಿ ಒಗ್ಗಟ್ಟಿನ ಮಂತ್ರವನ್ನು ಬೋಧಿಸಿದ ಸಂಘಶಕ್ತಿ ಅಭೇದ್ಯ. ಹಳ್ಳಿ ಹಳ್ಳಿಗೆ ವ್ಯಾಪಿಸಿದ ಈ ಸಂಘಟನೆಯು ರಾಜಕೀಯ ಸಂಘಟನೆಯಂತೆ ವ್ಯಕ್ತಿ ಆಧಾರಿತವಾಗಿದ್ದರೆ ಇಷ್ಟು ಪ್ರಬಲ ಶಕ್ತಿಯಾಗುತ್ತಿರಲಿಲ್ಲವೇನೋ. ಜಾತಿಯ ಆಧಾರದಲ್ಲಿ ನಾಯಕತ್ವದ ಕೋಟೆ ಕಟ್ಟಿಕೊಂಡು ಅಧಿಕಾರದ ಸವಿಯುಣ್ಣುತ್ತಾ ಬ್ರಹ್ಮಾಂಡ ಭ್ರಷ್ಟಾಚಾರದಲ್ಲಿ ಮುಳುಗಿರುವ ರಾಜಕಾರಣಿಗಳಿಗೆ ಸಂಘದ ಏಕತೆಯ ಮಂತ್ರ ರುಚಿಸಲಿಲ್ಲ. ಸಂಘ ಬೆಳೆದಷ್ಟೂ ಅವರ ರೋಷ ಹೆಚ್ಚುತ್ತಲೇ ಇದೆ. ಕಾಲಕಾಲಕ್ಕೆ ನಿಯಂತ್ರಿಸುವ ಅನೇಕ ದಾಳಗಳನ್ನು ಉರುಳಿಸುತ್ತಲೇ ಇದ್ದರೂ ಸಂಘದ ತೇಜಸ್ಸಿನ ಮುಂದೆ ತರಗೆಲೆಯಂತೆ ಧೂಳಿಪಟವಾಗುತ್ತಿದೆ ಅವರ ಕುತ್ಸಿತ ಯತ್ನಗಳು. ಸಂಘಶಕ್ತಿಗೆ 'ಉಘೇ ಉಘೇ' ಎನ್ನುವ ಜನಶಕ್ತಿಯನ್ನು ಕಂಡು ಚಿಂತಾಕ್ರಾಂತರಾಗಿದ್ದಾರೆ ಅವರು.

ಸನಾತನವನ್ನು ಕ್ಯಾನ್ಸರಿಗೆ ಹೋಲಿಸುವ, ಹಿಂದೂಗಳನ್ನು ಜಾತಿಗಳಲ್ಲಿ ಒಡೆದು ಅಧಿಕಾರವನ್ನು ಸದಾ ತಮ್ಮ ಕೈಯಲ್ಲಿ ಇಟ್ಟುಕೊಳ್ಳುವ ಸ್ವಾರ್ಥಿಗಳು ದೇಶಕ್ಕೆ ಆಪತ್ತು-ವಿಪತ್ತು ಎದುರಾದಾಗೆಲ್ಲಾ ಹೇಗೆ ವ್ಯವಹರಿಸಿದ್ದಾರೆ ಎನ್ನುವುದನ್ನು ನಾವು ಮರೆಯಬಾರದು. ಅಧಿಕಾರ ತಮ್ಮ ಕೈಯಲ್ಲಿದ್ದಾಗ, ಪ್ರಜಾಪ್ರಭುತ್ವ ಸುರಕ್ಷಿತ ಎನ್ನುವ ಭ್ರಮೆ ಸೃಷ್ಟಿಸುವಲ್ಲಿ ಸತತವಾಗಿ ಸೋತಾಗ, ಹತಾಶ-ನಿರಾಶ ಮನಸ್ಥಿತಿಯಲ್ಲಿ ಕೋಮುವಾದದ ಹಣೆಪಟ್ಟಿ ಕಟ್ಟಿ ಸಂಘವನ್ನು ದೂಷಿಸುವವರನ್ನು ಜನರು ಹಿಂದೆಂದಿಗಿಂತಲೂ ಇಂದು ಬಹಳ ಚೆನ್ನಾಗಿ ಅರಿತಿದ್ದಾರೆ. ಭಾರತವನ್ನು ಮಾತೆಯಾಗಿ ಸ್ವೀಕರಿಸದ ಮನಸ್ಥಿತಿಯ, ರಾಷ್ಟ್ರನಿಷ್ಠೆ ಇಲ್ಲದ, ಕೇವಲ ದೇಶದ ಸಂಪತ್ತಿನ ಮೇಲೆ ಅಧಿಕಾರ ಬಯಸುವ, ಸರಕಾರದ ಸವಲತ್ತು ಬಯಸುವ, ಸ್ವಾತಂತ್ರ್ಯದ ಹೆಸರಲ್ಲಿ ಸ್ವಚ್ಛಂದತೆ ಬಯಸುವ ಸ್ವಾರ್ಥಿ ನಾಗರಿಕರ ಸಂತಾನ ಹೆಚ್ಚಿಸುವ ರಾಜಕಾರಣಿಗಳು ಈ ದೇಶದ ಅಭ್ಯುದಯಕ್ಕೆ ದೊಡ್ಡ ಕಂಟಕ.

ಇಂದು ಸರಕಾರಿ ಶಾಲೆಗಳಲ್ಲಿ ಸೆಕ್ಯುಲರ್ ಹೆಸರಿನಲ್ಲಿ ವಿದ್ಯಾರ್ಥಿಗಳಿಗೆ ಭಾರತೀಯ ಸಂಸ್ಕಾರ-ಸಂಸ್ಕೃತಿಯ ಅರಿವಿನ ಶಿಕ್ಷಣ ಇಲ್ಲವಾಗಿದೆ. ವಿದ್ಯಾರ್ಥಿಗಳು ಹೆಚ್ಚು ಹೆಚ್ಚು ತಮ್ಮ ಸ್ವಾರ್ಥದ ಕುರಿತು ಯೋಚಿಸುವಂತೆ ಮಾಡುವ ಶಿಕ್ಷಣ ನೀಡಲಾಗುತ್ತಿದೆ. ದೇಶಪ್ರೇಮ-ನಿಷ್ಠೆ ಹಾಗೂ ಕರ್ತವ್ಯದ ಅರಿವು ಮೂಡಿಸುವ ಬದಲು ಕೇವಲ ಹಕ್ಕುಗಳ ಕುರಿತು ಮಾತನಾಡುವಂತೆ ಪ್ರೋತ್ಸಾಹಿಸಲಾಗುತ್ತಿದೆ. ಹಾಗಾಗಿಯೇ ಸಂಘ ಇಂದು ಶಿಕ್ಷಣ ಕ್ಷೇತ್ರಕ್ಕೂ ಹೆಚ್ಚು ಬಿಸುಪಿನಿಂದ ಧುಮುಕುತ್ತಿದೆ. ಸಂಘದ ಶಾಖೆಗಳಲ್ಲಿ, ಶಿಕ್ಷಣ ಸಂಸ್ಥೆಗಳಲ್ಲಿ ಒಳ್ಳೆಯ ಸಂಸ್ಕಾರ ಸಿಗುತ್ತದೆಂಬ ನೆಲೆಯಲ್ಲಿಯೇ ಇಂದು ಶಹರದ ಪೋಷಕರು ದೂರದಲ್ಲೆಲ್ಲೋ ಇರುವ ಶಿಕ್ಷಣ ಸಂಸ್ಥೆಗಳತ್ತ ಧಾವಿಸುತ್ತಿದ್ದಾರೆ.

ರಾಷ್ಟ್ರವನ್ನು ಬಾಹ್ಯವಾಗಿ ರಕ್ಷಿಸುವ ನಮ್ಮ ದೇಶದ ಸೇನೆಯು ವಿವಿಧ ಸೈನ್ಯೋಪಕರಣ-ಶಸ್ತ್ರಾಸ್ತ್ರಗಳಿಂದ ದಿನದಿಂದ ದಿನಕ್ಕೆ ಬಲಿಷ್ಠವಾಗುತ್ತಿದೆ ನಿಜ. ಆದರೆ ಇನ್ನೊಂದೆಡೆ ದೇಶದ ವಿರುದ್ಧ, ಸಾಮಾಜಿಕ ಶಾಂತಿ ಕದಡುವ ದ್ರೋಹಿಗಳ ಸಂಘಟನೆಗಳೂ ಬಲವಾಗುತ್ತಿವೆ. ವೋಟ್ ಬ್ಯಾಂಕ್ ರಾಜಕಾರಣದಿಂದ ಅವುಗಳನ್ನು ತಡೆಯುವ ಶಕ್ತಿ ಪೊಲೀಸರಿಗೂ ಇಲ್ಲವಾಗಿದೆ. 'ಸೋ ವಾಟ್?' ಮೆಂಟಾಲಿಟಿಯ ಇಂದಿನ ಯುವಜನರು ಕಿಂಕರ್ತವ್ಯಮೂಢರಂತಾಗಿದ್ದಾರೆ. ದೇಶದ ಭವಿಷ್ಯದ ಮತ್ತುಏಕತೆಯ ಕುರಿತು ಚಿಂತಿಸಬೇಕಾದ ನಾಯಕರು ಅದಕ್ಕೆ ಬದಲಾಗಿ ತಮ್ಮ ಸ್ವಾರ್ಥ ಚಿಂತನೆಯಲ್ಲಿ ಮುಳುಗಿದ್ದಾರೆ. ಸುತ್ತಮುತ್ತಲ ದೇಶಗಳ ತಲ್ಲಣಗಳಿಂದಾಗಿ ದೇಶದ ಹಿತ ಬಯಸುವ ನಾಗರಿಕರಿಗೆ, ನನ್ನಂಥ ಮಾಜಿ ಸೈನಿಕರಿಗೆ ದೇಶದ ಭವಿಷ್ಯದ ಚಿಂತೆ ಕಾಡುತ್ತಿದೆ. ಈ ಹೊತ್ತಿನಲ್ಲೂ ಆಸೆಯ ಸಣ್ಣ ಕಿರಣ ಗೋಚರಿಸುತ್ತಿದೆ ಯಾದರೆ ಅದು ಕೇವಲ ಸಂಘದ ಕಡೆಯಿಂದ. ಸಂಘಶಕ್ತಿ ಚಿರಾಯುವಾಗಲಿ. ದೇಶದ ಏಕತೆಗೆ ಜಯವಾಗಲಿ.

(ಲೇಖಕರು ಮಾಜಿ ಸೈನಿಕರು)

ಸಿದ್ಧಾಂತದ ಹೇರಿಕೆಗೆ ಸರಕಾರಿ ಯಂತ್ರದ ದುರ್ಬಳಕೆ

ಕರ್ನಾಟಕ ಸರ್ವ ಜನಾಂಗದ ಶಾಂತಿಯ ತೋಟ. ತಮ್ಮ ಸಿದ್ಧಾಂತ ಒಪ್ಪದವರನ್ನು ಆಡಳಿತದ ಕೋಲಿನಿಂದ ಹಣಿಯಲು ಯತ್ನಿಸುವುದು ಅಪಾಯಕಾರಿ. ಸಿದ್ಧಾಂತಪರ ಭೇದಗಳನ್ನು ಎದುರಿಸುವ ಶಕ್ತಿ ವಾದ - ಪ್ರತಿವಾದದಲ್ಲಿರಬೇಕು, ನಿಷೇಧಗಳಲ್ಲಿ ಅಲ್ಲ. ಇಲ್ಲದಿದ್ದರೆ, ಪ್ರಜಾಸತ್ತೆಯ ಹೆಸರಿನಲ್ಲಿ ಸಿದ್ಧಾಂತದ ಆಡಳಿತ ನಡೆಯುತ್ತದೆ. ಅದು ಕೇವಲ ರಾಜಕೀಯ ಜಯವಲ್ಲ, ಭಾರತದ ಸಂವಿಧಾನಾತ್ಮಕ ಮನೋಭಾವದ ಸೋಲು.

ಕಳಕಳಿ

ಜನಮೇಜಯ ಉಮರ್ಜಿ
vveditoped@gmail.com

ಕಳೆದೊಂದು ವಾರದಿಂದ ಕರ್ನಾಟಕದ ಮಾಧ್ಯಮಗಳಲ್ಲಿ ಸದ್ದು ಮಾಡುತ್ತಿರುವ ಸುದ್ದಿಗಳೆರಡು. ಮೊದಲನೆಯದು, ಮಂತ್ರಿಗಳೊಬ್ಬರು ರಾಷ್ಟ್ರೀಯ ಸ್ವಯಂಸೇವಕ ಸಂಘವನ್ನು ಸಾರ್ವಜನಿಕ ಸ್ಥಳಗಳಲ್ಲಿ ನಿಷೇಧಿಸುವಂತೆ ಬರೆದ ಪತ್ರ, ಅದಕ್ಕೆ ಸಿಕ್ಕ ಮನ್ನಣೆ ಮತ್ತು ಜಾರಿಯಾದ ವೇಗ. ಎರಡನೆಯದು, ಕನೇರಿ ಮಠದ ಕಾಡಸಿದ್ದೇಶ್ವರರು ಇತ್ತೀಚೆಗೆ ಮಹಾರಾಷ್ಟ್ರದ ಜತ್ತ ತಾಲೂಕಿನ ಬೀಳೂರಿನಲ್ಲಿ ಆಡಿದ ಮಾತಿಗೆ ವಿಜಯಪುರ ಜಿಲ್ಲಾ ಪ್ರವೇಶ ನಿರ್ಬಂಧ. ಇವೆರಡೂ ಘಟನೆಗಳಲ್ಲಿ ಸರಕಾರದ ಭಾಗವಾಗಿರುವವರು ತೋರಿದ ಧೋರಣೆ ನೋಡಿದರೆ ಸಂವಿಧಾನ ಮತ್ತು ಪ್ರಜಾಪ್ರಭುತ್ವ ಅಪಾಯದಲ್ಲಿವೆ ಎಂದೆನಿಸದೆ ಇರದು. ಒಂದು ಸಿದ್ಧಾಂತದ ಅಜೆಂಡಾವನ್ನು ಜಾರಿಗೊಳಿಸಲು ಇಡೀ ಸರಕಾರಿ ಯಂತ್ರವನ್ನು ಕೆಲ ಶಕ್ತಿಗಳು ಬಳಸಿಕೊಳ್ಳುತ್ತಿವೆ ಎಂದು ಜನರು ಮಾತನಾಡಿಕೊಳ್ಳುವಂತೆ ಆಗಿದೆ.

ಸಾರ್ವಜನಿಕ ಸ್ಥಳಗಳಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಚಟುವಟಿಕೆಗಳನ್ನು ನಿಷೇಧಿಸುವಂತೆ ಮಂತ್ರಿಗಳೊಬ್ಬರು ಪತ್ರ ಬರೆದರು. ತಕ್ಷಣ ಕಾರ್ಯಪ್ರವೃತ್ತರಾದ ಮುಖ್ಯಮಂತ್ರಿಗಳು ಅದನ್ನು ರಾಜ್ಯದ ಮುಖ್ಯ ಕಾರ್ಯದರ್ಶಿಗೆ ಕಳುಹಿಸಿಯೂಬಿಟ್ಟರು. ಅದು ಆದೇಶವಾಗಿ ಪ್ರಕಟವಾಗಿಯೂಬಿಟ್ಟಿತು. ಇದೆಲ್ಲ ಹೆಚ್ಚು ಕಡಿಮೆ ಮೂರ್ನಾಲ್ಕು ದಿನಗಳಲ್ಲಿ ಆಗಿಹೋಯಿತು. ಈ ಆದೇಶವನ್ನು ಬಳಸಿಕೊಂಡು ಕಲಬುರಗಿ ಜಿಲ್ಲೆಯಲ್ಲಿ ಸಾಕಷ್ಟು ಕಡೆ ವಿವಿಧ ಕಾರಣಗಳನ್ನು ಹೇಳಿ, ಉತ್ತರಕ್ಕೆ ಅವಕಾಶವನ್ನೂ ಕೊಡದೆ, ಪಥಸಂಚಲನವನ್ನು ಕೊನೆಯ ಕ್ಷಣದಲ್ಲಿ ನಿಲ್ಲಿಸಲು ಪ್ರಯತ್ನಗಳು ನಡೆದು, ಕೆಲಕಡೆ ಯಶಸ್ವಿಯೂ ಆಗಿದ್ದು ಮಾಧ್ಯಮಗಳಿಂದ ವಿದಿತವಾಗಿದೆ. ರಾಷ್ಟ್ರೀಯ ಸ್ವಯಂಸೇವಕ ಸಂಘದ ಕಾರ್ಯಾಲಯಗಳನ್ನು ಗುರಿಯಾಗಿಸಿ ಬೆಂಗಳೂರು ಮತ್ತು ಹುಬ್ಬಳ್ಳಿಯಲ್ಲಿ ಪ್ರತಿಭಟನೆಗಳು ನಡೆದದ್ದೂ ಮಾಧ್ಯಮಗಳಲ್ಲಿ ವರದಿಯಾಗಿದೆ. ಇದೇ ಸಂದರ್ಭದಲ್ಲಿ ವಿಜಯಪುರ ಶಾಸಕ ಯತ್ನಾಳರೂ ಒಂದು ಪತ್ರ ಬರೆದರು. ರಾಜಕೀಯವಾಗಿ ಅದನ್ನು ಎದುರಿಸಲಾಗುತ್ತಿದೆಯೇ ಹೊರತು, ಸರಕಾರದಿಂದ ಉತ್ತರವೇನೂ ಬಂದಂತಿಲ್ಲ. ಈ ಪತ್ರ ತಟಸ್ಥವಾಗಿ ಕುಳಿತಿರುವುದು ಎಲ್ಲಿ? ಉತ್ತರ ಜನರಿಗೆ ಗೊತ್ತಿದೆ.

ಮೊನ್ನೆ ಬಿದ್ದ ಮಳೆಗೆ ಕಲ್ಯಾಣ ಕರ್ನಾಟಕ ತತ್ತರಿಸಿತ್ತು. ಅನ್ನ, ಆಶ್ರಯ, ಪರಿಹಾರಕ್ಕಾಗಿ ಪರದಾಡಿದ ಜನರು ಸರಕಾರದ ವೈಫಲ್ಯಕ್ಕೆ ಹಿಡಿಶಾಪ ಹಾಕುತ್ತಿದ್ದರು. ಅದೇ ಸಮಯದಲ್ಲಿ ಸಂಘದ ಸ್ವಯಂಸೇವಕರು ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಸಂತ್ರಸ್ತರ ನೆರವಿಗೆ ಟೊಂಕ ಕಟ್ಟಿ ನಿಂತಿದ್ದರು. ಪಕ್ಕದ ಸೋಲಾಪೂರ ಜಿಲ್ಲೆಯಲ್ಲಿಯ ನೆರೆ ನಿರ್ವಹಣೆಗೂ ನಮ್ಮ ನಿರ್ವಹಣೆಗೂ ವ್ಯತ್ಯಾಸ ಕಾಣುತ್ತಿತ್ತು. ನೆರೆ ಪರಿಹಾರ ಆದ್ಯತೆಯಾಗಿರಬೇಕಾಗಿದ್ದರೂ ಮಂತ್ರಿಗಳು ಸಂಘವನ್ನು ನಿರ್ಬಂಧಿಸಲು ಎಲ್ಲಾ ಶಕ್ತಿ ಹಾಕುತ್ತಿರುವುದು ಏಕೆ? ಎಂಬ ಪ್ರಶ್ನೆ ಜನರನ್ನು ಕಾಡುತ್ತಿದೆ. ಸಂಘದ ಮೇಲಿನ ನಿರ್ಬಂಧವು ಬಿಹಾರ ಚುನಾವಣೆಯಲ್ಲಿ ಲಾಭ ತಂದರೆ ಅದನ್ನು ಮುಖ್ಯಮಂತ್ರಿಗಳಿಗೆ, ಒಂದೊಮ್ಮೆ ಹಾನಿಯಾದರೆ ಅದನ್ನು ಪತ್ರ ಬರೆದ ಮಾನ್ಯ ಮಂತ್ರಿಗಳಿಗೆ ಕಟ್ಟಲು ಯೋಚಿಸಿ, ಇಷ್ಟೊಂದು ತರಾತುರಿಯಲ್ಲಿ ನಿರ್ಧಾರ ತೆಗೆದುಕೊಳ್ಳಲಾಗಿದೆಯೇ? ಎಂಬಂಥ ಚರ್ಚೆಗಳು ಇನ್ನೊಂದು ಮಗ್ಗುಲಲ್ಲಿ ನಡೆದಿವೆ. ಈ ನಡುವೆ, ಸಂಘವನ್ನು ನಿರ್ಬಂಧಿಸಲು ಮುಖ್ಯಕಾರಣ ಗಣವೇಷದ ಭಾಗವಾಗಿರುವ 'ದಂಡ' ಎಂದು ವಾದಿಸುವುದು ಹಾಸ್ಯಾಸ್ಪದವಾಗಿದೆ. ನಾಳೆ ಇದೇ ಜನರು, ದಂಡ ಹಿಡಿದಿದ್ದಾರೆ ಎಂಬ ಕಾರಣಕ್ಕೆ ಅಹಿಂಸಾವಾದಿ ಮಹಾತ್ಮ ಗಾಂಧಿಯವರನ್ನು ಒಪ್ಪದಿರುವ ಸ್ಥಿತಿಗೆ ಬರಬಹುದು.

ಇನ್ನೊಂದು- ಕನೇರಿ ಶ್ರೀಗಳ ಘಟನೆ. ಈ ಹಿಂದೆ ಹೇಳಿದಂತೆ 'ಬಸವ ಸಂಸ್ಕೃತಿ ಅಭಿಯಾನ' ನಡೆದದ್ದೇ ಪ್ರಸ್ತುತ ಕರ್ನಾಟಕದ ಸಾಂಸ್ಕೃತಿಕ ನಾಯಕನನ್ನು ವಿಜೃಂಭಿಸಲು ಮತ್ತು ಅದರ ನೀಲಿನಕ್ಷೆ ತಯಾರಾದದ್ದು ಅಲ್ಲಿಂದಲೇ. 'ಪ್ರತ್ಯೇಕ ಧರ್ಮ' ಎಂಬುದು ಧರ್ಮ ವಿಭಜನೆಯ ತಂತ್ರ ಎಂದು ಜನ ಅರ್ಥ ಮಾಡಿಕೊಂಡಾಗ, 'ಭೌಗೋಳಿಕವಾಗಿ, ಸಾಂಸ್ಕೃತಿಕವಾಗಿ ನಾವು ಹಿಂದೂಗಳು. ನಮ್ಮದು ಜೈನ, ಸಿಖ್ಖರಂತೆ ಸಂವಿಧಾನ ಮಾನ್ಯತೆ ಪಡೆಯುವ ಹೋರಾಟ' ಎಂತಲೂ, 'ಏನೇ ಆಗಲಿ ಲಿಂಗಾಯತ-ವೀರಶೈವ ಒಂದು' ಎಂಬ ಅರಿವು ಜನರಿಗೆ ಬಂದದ್ದರಿಂದ, ಈಗ ಅದಕ್ಕೆ ಬೌದ್ಧ ಧರ್ಮದಂತೆ 'ಬಸವ ಧರ್ಮ' ಎಂಬ ಹೊಸ ಹೆಸರು ಇಟ್ಟುಕೊಂಡು, 'ಶರಣ ಸಂಸ್ಕೃತಿ'ಯಾತ್ರೆಗೆ ಬದಲಾಗಿ 'ಬಸವ ಸಂಸ್ಕೃತಿ ಅಭಿಯಾನ'ವು ಕಮ್ಯುನಿಸ್ಟರಿಂದ ಕರ್ನಾಟಕದಲ್ಲಿ ನಡೆದು ಮುಗಿಯಿತು. ಮಾತೆ ಮಹಾದೇವಿಯವರ ಕಾಲದಿಂದಲೂ ಶರಣ ಮೇಳ, ಶರಣ ಸಂಸ್ಕೃತಿ ಇದ್ದದ್ದು ಈಗ ಬದಲಾಯಿತು. ಎಲ್ಲಿಯೂ ಯಡಿಯೂರಪ್ಪ, ಶೆಟ್ಟರ್, ಬೊಮ್ಮಾಯಿಯವರಂಥ ಮಾಜಿ ಮುಖ್ಯಮಂತ್ರಿಗಳು, ಸರಕಾರದ ಭಾಗವಾಗಿರುವ ಶಾಮನೂರು, ಖಂಡ್ರೆ, ಸಭಾಪತಿಗಳಾದ ಹೊರಟ್ಟಿ ಅವರಂಥ ಯಾವ ಘಟಾನುಘಟಿ ನಾಯಕರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳದಿರುವ ಕಾರಣ ಸ್ಪಷ್ಟವಿತ್ತು. ಅಭಿಯಾನದಲ್ಲಿ ಅಲ್ಲಲ್ಲಿ ಜನ ವಿಭಜನೆಯ ವಿರುದ್ಧ ಧ್ವನಿ ಎತ್ತಿದ್ದು ಸುದ್ದಿಯೂ ಆಯಿತು. ಈ ಅಭಿಯಾನದ ಹಿಂದಿನ ಹುನ್ನಾರವನ್ನು ಕನೇರಿಯ ಶ್ರೀಗಳು ಟೀಕಿಸಿದರು. 'ಇದು ಕರ್ನಾಟಕದ ಪ್ರಸ್ತುತ ಸಾಂಸ್ಕೃತಿಕ ನಾಯಕರ ಕೃಪಾಪೋಷಿತ ಅಭಿಯಾನ' ಎಂದರು. ಟೀಕಿಸುವ ಭರದಲ್ಲಿ ಆಡುಭಾಷೆಯಲ್ಲಿ ಎರಡು ಪದಗಳನ್ನು ಬಳಸಿಕೊಂಡರು. ಉತ್ತರ ಕರ್ನಾಟಕದ



ಜನಭಾಷೆಯಲ್ಲಿ ಅವು ಸಾಮಾನ್ಯ ಶಬ್ದಗಳು. ಆ ಶಬ್ದಗಳು ಕಮ್ಯುನಿಸ್ಟ್ ಮಠಾಧಿಪತಿಗಳ ಒಕ್ಕೂಟಕ್ಕೆ ಆಕ್ರೋಶ ತರಿಸಿದವು. ರಾಜ್ಯದ 2-3 ಕಡೆ ಪ್ರತಿಭಟನೆಗಳೂ ನಡೆದವು. ಬಳಸಿದ ಆ ಶಬ್ದಗಳು ಆಡುಭಾಷೆಯದ್ದಾಗಿದ್ದರೂ ಶೋಭೆಯಲ್ಲ ಎಂದು ಜನರಿಗೆ ಅನ್ನಿಸಿದರೂ, ಅದರ ಹೊರತು ಕನೇರಿ ಶ್ರೀಗಳು ಎತ್ತಿರುವ ಪ್ರಶ್ನೆಗಳಿಗೆ ಕಮ್ಯುನಿಸ್ಟ್ ಮಠಾಧಿಪತಿಗಳು ನೀಡಿದ ಸಮಜಾಯಿಷಿಗಳು ಜನರಿಗೆ ಸಮಂಜಸ ಎನಿಸಲಿಲ್ಲ, ಹೀಗಾಗಿ ಅವರು ಹಮ್ಮಿಕೊಂಡಿದ್ದ ಮಠಾಧಿಪತಿಗಳ ಪ್ರತಿಭಟನೆಗಳಿಗೆ ಜನಬೆಂಬಲ ಸಿಗಲಿಲ್ಲ, ಹೊರಗೆ ವೀರಾವೇಷದಿಂದ ಮಾತನಾಡಿದ ನಾಲ್ಕು ಜನ ಹೋರಾಟಗಾರರು, ತೆರೆಮರೆಯಲ್ಲಿ ಸರಕಾರಿ ಯಂತ್ರವನ್ನು ಬಳಸಿ ವಿಜಯಪುರ ಜಿಲ್ಲೆಗೆ ಶ್ರೀಗಳನ್ನು ನಿರ್ಬಂಧಿಸಿ ಅದನ್ನು ಬಾಗಲಕೋಟೆಗೂ ವಿಸ್ತರಿಸಿ ತಮ್ಮ ತನು-ಮನವ ಸಂತೈಸಿಕೊಂಡರು. ಗಲಭೆ ನಡೆಯುವ ಕಾರಣಕ್ಕೆ ನಿರ್ಬಂಧ ಎಂದರೆ, ಅವರನ್ನು ಸಮರ್ಥಿಸುವ ಸಭೆ, ಮೆರವಣಿಗೆ ನಡೆದೇ ಇರಲಿಲ್ಲ. ಅವರ ಸುರಕ್ಷತೆಗೆ ಈ ಕ್ರಮ ಎಂದರೆ, ಗುಪ್ತಚರ ಇಲಾಖೆಗೆ ಯಾರ ಕಾರಣಕ್ಕೆ ಈ ಅಸುರಕ್ಷತೆ ಎಂಬುದು ಗೊತ್ತು ಎಂದಲ್ಲವೇ? ಶ್ರೀ ಕನೇರಿ ಸ್ವಾಮೀಜಿ ಜನಮನದಲ್ಲಿ ಪ್ರಭಾವ ಬೀರಬಲ್ಲ ಅಧ್ಯಾತ್ಮ ನಾಯಕರು, ಅವರಿಗೆ ಲಕ್ಷಾಂತರ ಅನುಯಾಯಿಗಳು ಇದ್ದಾರೆ. ಅವರ ಮಾತು ಕೇಳಲು ಸಾವಿರಾರು ಜನ ಸೇರುತ್ತಾರೆ. ಆದರೆ ಇದೇ ಭಯದಿಂದ, ಸರಕಾರವನ್ನು ಬಳಸಿಕೊಂಡು ಅವರನ್ನು ನಿರ್ಬಂಧಿಸಲಾಗಿದೆ ಎಂಬ ಜನಾಭಿಪ್ರಾಯವಿದೆ. ಯತ್ನಾಳರ ಪತ್ರ ನೈಪಥ್ಯಕ್ಕೆ ಸರಿದಂತೆ, ಕಮ್ಯುನಿಸ್ಟ್ ಮಠಾಧಿಪತಿಗಳು, ಪರಮಾತ್ಮ ಶಿವನ ಬಗ್ಗೆ, ತಾಯಿ ಪಾರ್ವತಿ, ಚಾಮುಂಡಿಯರ ಬಗ್ಗೆ, ಗಣಪತಿಯ ಬಗ್ಗೆ ಆಡಿದ ಮಾತುಗಳು ಧಾರ್ಮಿಕ ಭಾವನೆಗೆ ಧಕ್ಕೆ ತರದಂತೆ ಇವೆ ಎಂದುಕೊಂಡು ನೇಪಥ್ಯಕ್ಕೆ ಸರಿದಿವೆ. ಅಂತೆಯೇ ರಾಜ್ಯದ ಪ್ರಸ್ತುತ ಸಾಂಸ್ಕೃತಿಕ ನಾಯಕರು ಈ ದೇಶದ ರಾಷ್ಟ್ರಪತಿಗಳ ಬಗ್ಗೆ ಆಡಿದ ಮಾತುಗಳೂ ಆಡುಭಾಷೆ ಅನಿಸಿಕೊಂಡು ನೇಪಥ್ಯಕೆ ಸರಿದಿವೆ.

ಕಮ್ಯುನಿಸ್ಟ್ ಪರಿಸರ ವ್ಯವಸ್ಥೆ ತನ್ನ ಸಿದ್ಧಾಂತವನ್ನು ಅನುಷ್ಠಾನಗೊಳಿಸಲು ಸರಕಾರಿ ಯಂತ್ರವನ್ನು ಹೇಗೆಲ್ಲಾ ಬಳಸಿಕೊಳ್ಳುತ್ತದೆ ಎಂಬುದಕ್ಕೆ ಈ ಘಟನೆಗಳು ನಿದರ್ಶನ. ಪಥ ಸಂಚಲನದಲ್ಲಿ ಭಾಗವಹಿಸಿದಕ್ಕಾಗಿ ಒಬ್ಬ ಸರಕಾರಿ ನೌಕರ ಸಸ್ಪೆಂಡೂ ಆಗಿದ್ದಾನೆ. ಸರಕಾರಿ ನೀತಿಗಳನ್ನು ಸಿದ್ಧಾಂತದ ಆಯುಧವಾಗಿ ಬಳಸುವ ಪ್ರಯತ್ನ ಇದು. ಕೆಲವು ಜನ 'ನಿಷ್ಪಕ್ಷಪಾತ ಆಡಳಿತ'ದ ಬದಲಿಗೆ 'ಸೈದ್ಧಾಂತಿಕ ನಿಯಂತ್ರಣ'ದ ದಿಕ್ಕಿಗೆ ಹೆಜ್ಜೆ ಇಡಲು ಸರಕಾರದ ಮೇಲೆ ಪ್ರಭಾವ ಬೀರುತ್ತಿದ್ದಾರೆ. ಭಾರತದ ಕಮ್ಯುನಿಸ್ಟ್ ಚಳವಳಿಗಳು ಸರಕಾರಿ ಸಂಸ್ಥೆಗಳನ್ನು ಸಿದ್ಧಾಂತದ ವಿಸ್ತಾರ ಕೇಂದ್ರಗಳನ್ನಾಗಿ ಬಳಸುವ ನೈಪುಣ್ಯ ಹೊಂದಿದ್ದವು. ಪಶ್ಚಿಮ ಬಂಗಾಳ ಹಾಗೂ ಕೇರಳದ ಮಾದರಿಗಳು ಇದಕ್ಕೆ ಸಾಕ್ಷಿ. ಆಚಿನ್ ವನೈಕ್ ಅವರ 'ದಿ ಇಂಡಿಯನ್ ಲೆಫ್ಟ್' (New Left Review, Issue 159) ಲೇಖನದಲ್ಲಿ ಹೇಳುವಂತೆ, ಪಕ್ಷದ ಯಂತ್ರವೇ ಸರಕಾರದ ಪರ್ಯಾಯ ಆಡಳಿತ ವ್ಯವಸ್ಥೆಯಾಯಿತು. ಆ ಕಾಲದಲ್ಲಿ ಶಿಕ್ಷಕರ ಸಂಘಗಳು, ಪುರಸಭೆಗಳು, ಸರಕಾರಿ ನೌಕರ ಸಂಘಗಳು ಎಲ್ಲವೂ ಪಕ್ಷದ ಹಸ್ತಚಾಲಿತವಾಗಿದ್ದವು. ಸರಕಾರದ ನಿರ್ಧಾರಗಳು ಜನಪರವಾಗಿರಲಿಲ್ಲ; ಅವು ಸಿದ್ಧಾಂತಪರವಾಗಿದ್ದವು.

ಇಂದಿನ ಕರ್ನಾಟಕದ ಸ್ಥಿತಿ ಅದೇ ಮಾದರಿಯತ್ತ ಸಾಗುತ್ತಿದೆ. ಕೆಲವು ಎಡಪಂಥೀಯ ಬುದ್ಧಿಜೀವಿಗಳ ಜಾಲಗಳು ಹಾಗೂ ರಾಜ್ಯ ಸರಕಾರದ ಒಳಗಿನ ಸಿದ್ಧಾಂತಾನುಯಾಯಿಗಳು ಸಿದ್ಧಾಂತ ಹೇರುವ ಶಸ್ತ್ರವಾಗಿ ಆಡಳಿತವನ್ನು ಬಳಸುತ್ತಿದ್ದಾರೆ. ಆರೆಸ್ಸೆಸ್ ನಿಷೇಧದ ಯತ್ನವೇ ಆಗಲಿ, ಕನೇರಿ ಶ್ರೀಗಳ ನಿರ್ಬಂಧವೇ ಆಗಲಿ, ಸಿದ್ಧಾಂತ ಹೇರಿಕೆಯಲ್ಲಿ ಸರಕಾರದ ಬಳಕೆಯನ್ನು ತೋರಿಸುತ್ತವೆ. ಈ ಭಯ ಏತಕ್ಕೆ? ಜನಮಾನಸದಿಂದ, ಜನಪ್ರಿಯತೆಯಿಂದ, ಒಂದಾಗುತ್ತಿರುವ ಸಮಾಜದ ಶಕ್ತಿಯಿಂದ. ಆರೆಸ್ಸೆಸ್ ಒಂದು ಶತಮಾನದಿಂದ ಸಮಾಜಸೇವೆ ಮಾಡುತ್ತಿರುವ ಸಂಘಟನೆ. ಕನೇರಿ ಮಠವು ಭಕ್ತಿ ಹಾಗೂ ಸಮಾಜಮುಖಿ ಧಾರ್ಮಿಕ ಕೇಂದ್ರ. ಇವುಗಳ ವಿರುದ್ಧ ಕ್ರಮ ಕೈಗೊಳ್ಳುವುದು ಧರ್ಮನಿರಪೇಕ್ಷತೆ ಅಲ್ಲ, ಅದು ಆತ್ಮವಿಶ್ವಾಸದ ಕೊರತೆಯ ರಾಜಕೀಯ. ಸತ್ಯಸಂಧ ಸರಕಾರವು ಯಾವ ಪಕ್ಷಕ್ಕೂ, ಯಾವ ಸಿದ್ಧಾಂತಕ್ಕೂ ಅತಿಯಾದ ಪ್ರೀತಿ ಅಥವಾ ದ್ವೇಷವಿಲ್ಲದೆ ವರ್ತಿಸಬೇಕು. ಆದರೆ ಇಂದಿನ ಕ್ರಮಗಳು ಬೇರೆಯವರನ್ನು ಧಾರ್ಮಿಕ ಪ್ರಚೋದಕರು ಎಂದು ಗುರುತಿಸಿ, ತಮ್ಮ ಪಂಥದವರನ್ನು ಬುದ್ಧಿಜೀವಿಗಳು ಎಂದು ಗೌರವಿಸುವ ಹೊಸ ದ್ವಂದ್ವವನ್ನು ತೋರಿಸುತ್ತಿವೆ.

ಕರ್ನಾಟಕ ಸರ್ವ ಜನಾಂಗದ ಶಾಂತಿಯ ತೋಟ. ತಮ್ಮ ಸಿದ್ಧಾಂತ ಒಪ್ಪದವರನ್ನು ಆಡಳಿತದ ಕೋಲಿನಿಂದ ಹಣಿಯಲು ಯತ್ನಿಸುವುದು ಅಪಾಯಕಾರಿ. ಸಿದ್ಧಾಂತಪರ ಭೇದಗಳನ್ನು ಎದುರಿಸುವ ಶಕ್ತಿ ವಾದ-ಪ್ರತಿವಾದದಲ್ಲಿರಬೇಕು, ನಿಷೇಧಗಳಲ್ಲಿ ಅಲ್ಲ. ಇಲ್ಲದಿದ್ದರೆ, ಪ್ರಜಾಸತ್ತೆಯ ಹೆಸರಿನಲ್ಲಿ ಸಿದ್ಧಾಂತದ ಆಡಳಿತ ನಡೆಯುತ್ತದೆ. ಅದು ಕೇವಲ ರಾಜಕೀಯ ಜಯವಲ್ಲ, ಭಾರತದ ಸಂವಿಧಾನಾತ್ಮಕ ಮನೋಭಾವದ ಸೋಲು.

(ಲೇಖಕರು ಪ್ರಚಲಿತ ವಿದ್ಯಮಾನಗಳ ವಿಶ್ಲೇಷಕರು)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue:283

ಸಮಾಚಾರ ಸಣ್ಣದಲ್ಲ

ಮೂನ್ ಲೈಟಿಂಗ್: ಭಾರತೀಯನಿಗೆ ಜೈಲು

ನ್ಯೂಯಾರ್ಕ್: ಈ ಹಿಂದೆ ಭಾರತದಲ್ಲಿ ಭಾರಿ ಸುದ್ದಿಗೆ ಗ್ರಾಸವಾಗಿದ್ದ ಮೂನ್ ಲೈಟಿಂಗ್ ಇದೀಗ ಅಮೆರಿಕದಲ್ಲೂ ಸುದ್ದಿ ಮಾಡುತ್ತಿದ್ದು, ಭಾರತ ಮೂಲದ ವ್ಯಕ್ತಿ 15 ವರ್ಷಗಳ ಜೈಲು ಶಿಕ್ಷೆಗೆ ಗುರಿಯಾಗಿದ್ದಾರೆ. ಇಲ್ಲಿನ ಕಚೇರಿಯ ಮಾಹಿತಿ

ತಂತ್ರಜ್ಞಾನ ವಿಭಾಗದಲ್ಲಿ ಕೆಲಸ ಮಾಡುತ್ತಾ ಬೇರೊಂದು ಸಂಸ್ಥೆಗೆ ಅನೌಪಚಾರಿಕವಾಗಿ ಕೆಲಸ ಮಾಡುತ್ತಿದ್ದ ಭಾರತ ಮೂಲದ 39 ವರ್ಷದ ವ್ಯಕ್ತಿಯನ್ನು ಮಹಾದ್ರೋಹ ಎಂದು ಕರೆದಿರುವ ಅಲ್ಲಿನ ನ್ಯಾಯಾಲಯ, 15 ವರ್ಷ ಕಾರಾಗೃಹ ಶಿಕ್ಷೆ ವಿಧಿಸಿದೆ. ಭಾರತ ಮೂಲದ ನೌಕರ ಮೆಹುಲ್ ಗೋಸ್ವಾಮಿ ಶಿಕ್ಷೆಗೆ ಗುರಿಯಾದ ನೌಕರನಾಗಿದ್ದು, ಒಂದು ಉದ್ಯೋಗದ ಗುತ್ತಿಗೆ ಸಕ್ರಿಯವಾಗಿರುವಾಗ ಅದರ ನಿಯಮ ಉಲ್ಲಂಘಿಸಿ ಬೇರೆ ಕೆಲಸ ಮಾಡುವುದು ತೆರಿಗೆದಾರರ 50 ಸಾವಿರ ಡಾಲರ್ (43 ಲಕ್ಷ ರು.) ವಂಚಿಸಿದ ಅಪರಾಧಕ್ಕೆ ಸಮ ಎಂದು ಸರಟೊಗಾ ಕೌಂಟಿ ಶೆರೀಫ್ ಕಚೇರಿಯು ಅಭಿಪ್ರಾಯಪಟ್ಟಿದೆ ಎಂದು ಅಮೆರಿಕದ ಮಾಧ್ಯಮಗಳು ವರದಿ ಮಾಡಿವೆ. ಮೆಹುಲ್ ಗೋಸ್ವಾಮಿ ನ್ಯೂಯಾರ್ಕ್‌ನಲ್ಲಿ ಅಲ್ಲಿನ ರಾಜ್ಯ ಸರಕಾರಿ ಸ್ವಾಮ್ಯದ ಐಟಿ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಾ ಬೇರೊಂದು ಖಾಸಗಿ ಕಂಪನಿಯಲ್ಲಿ (ಗ್ಲೋಬಲ್ ಫೌಂಡರೀಸ್) ಕಂಟ್ರಾಕ್ಟರ್ ಆಗಿ ಸೇವೆ ಸಲ್ಲಿಸುತ್ತಿದ್ದರು.

ಎನ್‌ಡಿಎ ವಿರುದ್ಧ ಪ್ರಶಾಂತ್ ವಾಗ್ದಾಳಿ

ಪೂರ್ವ ಚಂಪಾರಣ್: ಬಿಹಾರದಲ್ಲಿನ ನಿತೀಶ್ ಕುಮಾರ್ ನೇತೃತ್ವದ ಎನ್‌ಡಿಎ ಸರಕಾರದ ವಿರುದ್ಧ ಜನ ಸುರಾಜ್ ಸಂಸ್ಥಾಪಕ ಪ್ರಶಾಂತ್ ಕಿಶೋರ್

ಶುಕ್ರವಾರ ತೀವ್ರ ವಾಗ್ದಾಳಿ ನಡೆಸಿದ್ದಾರೆ. ಚಾತ್ ಹಬ್ಬಕ್ಕೆ ಸ್ವಗ್ರಾಮಕ್ಕೆ ಮರಳಲು ಬಿಹಾರದ ಯುವ ಜನತೆ ಪರದಾಡುತ್ತಿದ್ದರೆ, ಗುಜರಾತಿನಲ್ಲಿ ಬುಲೆಟ್ ರೈಲು ನಿರ್ಮಾಣ ಮಾಡಲಾಗುತ್ತಿದೆ ಎಂದು ಆರೋಪಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಕಿಶೋರ್, ಇದು ಜನ ಸೂರಜ್ ಜನ್ಮಭೂಮಿ, ಇಲ್ಲಿಂದಲೇ ಮೂರುವರೆ ವರ್ಷಗಳ ಹಿಂದೆ ಪಕ್ಷ ಅಸ್ತಿತ್ವಕ್ಕೆ ಬಂದಿದೆ. ಬಿಹಾರದ ಜನರ ರಾಜಕೀಯ ಗುಲಾಮಗಿರಿಯನ್ನು ಕೊನೆಗೊಳಿಸುವೆ. ಇಲ್ಲಿನ ಜನ ಲಾಲುಗೆ ಹೆದರಿ ಬಿಜೆಪಿಗೆ ಮತ ಹಾಕುತ್ತಿದ್ದರು, ಇಲ್ಲ ಬಿಜೆಪಿಗೆ ಹೆದರಿ ಲಾಲುಗೆ ಮತ ಹಾಕುತ್ತಿದ್ದರು. ಈಗಿರುವ ವ್ಯವಸ್ಥೆಯನ್ನು ಮುಂದುವರಿಸಬೇಕೇ ಅಥವಾ ಬದಲಾವಣೆಯನ್ನು ತರಬೇಕೇ ಎಂಬುದನ್ನು ಮುಂದಿನ 10-15 ದಿನಗಳಲ್ಲಿ ಜನ ನಿರ್ಧರಿಸಬೇಕು ಎಂದರು. ಗುಜರಾತ್‌ನಲ್ಲಿ 1 ಲಕ್ಷ ಕೋಟಿ ರು. ಮೌಲ್ಯದ ಬುಲೆಟ್ ರೈಲು ನಿರ್ಮಿಸಲಾಗುತ್ತಿದೆ. ಆದರೆ ಬಿಹಾರದ ಯುವಕರು ಚಾತ್ ಗಾಗಿ ಮನೆಗೆ ಬರಲು ರೈಲಿನಲ್ಲಿ ಸೀಟು ಪಡೆಯಲು ಹೆಣಗಾಡುತ್ತಿದ್ದಾರೆ ಎಂದು ಆರೋಪಿಸಿದರು.

ಹಮಾಸ್ ಉಗ್ರರಿಗೆ ಭಗತ್‌ಸಿಂಗ್ ಹೋಲಿಕೆ!

ದೆಹಲಿ: ಕಾಂಗ್ರೆಸ್ ಸಂಸದನೋರ್ವ ಹಮಾಸ್ ಉಗ್ರರನ್ನು ಸ್ವಾತಂತ್ರ್ಯ ಹೋರಾಟಗಾರ ಭಗತ್ ಸಿಂಗ್‌ಗೆ ಹೋಲಿಸಿದ್ದಾರೆ. ಹಮಾಸ್ ಹಾಗೂ ಭಗತ್ ಸಿಂಗ್ ಇಬ್ಬರ ಹೋರಾಟ ಒಂದೇ ಎಂದು ಉತ್ತರ ಪ್ರದೇಶದ ಸಹರಾನಪುರದ ಕಾಂಗ್ರೆಸ್ ಸಂಸದ ಇಮ್ರಾನ್ ಮಸೂದ್ ನೀಡಿದ ಹೇಳಿಕೆ ಭಾರಿ ವಿವಾದಕ್ಕೆ ಕಾರಣವಾಗಿದೆ. ಬಿಜೆಪಿ ಈ ಹೇಳಿಕೆಯನ್ನು ಖಂಡಿಸಿದ್ದು, ಇದು ಸ್ವಾತಂತ್ರ್ಯವೀರನಿಗೆ ಮಾಡಿದ ಅವಮಾನ ಎಂದಿದೆ. ಉಗ್ರರೊಂದಿಗೆ ಭಗತ್ ಸಿಂಗ್ ಹೋಲಿಕೆ ಮಾಡಿರುವುದು ಅತೀ ದೊಡ್ಡ ತಪ್ಪು, ತಕ್ಷಣವೇ ಕ್ಷಮೆ ಕೇಳುವಂತೆ ಬಿಜೆಪಿ ಆಗ್ರಹಿಸಿದೆ.

ಸದ್ಯದಲ್ಲೇ ಪ್ರಧಾನಿ ನಿವಾಸ ಸ್ಥಳಾಂತರ

ದೆಹಲಿ: ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ದೆಹಲಿಯಲ್ಲಿರುವ ಅಧಿಕೃತ ನಿವಾಸ ಬದಲಾಗುತ್ತಿದೆ, ಈ ಮೂಲಕ ಸೌತ್ ಬ್ಲಾಕ್ ನಿಂದ ಸ್ಥಳಾಂತರಗೊಳ್ಳುತ್ತಿರುವ ಮೊದಲ ಪ್ರಧಾನಿ ನರೇಂದ್ರ ಮೋದಿ ಆಗಿರುತ್ತಾರೆ. ಈ ತಿಂಗಳ ಆರಂಭದಲ್ಲಿ ಸೇವಾ ತಿರಥ್ ಎಂಬ ಹೆಸರಿನ ಹೊಸ ಪ್ರಧಾನಮಂತ್ರಿ ಕಚೇರಿ ಸಂಕೀರ್ಣಕ್ಕೆ ಸಂಪುಟ ಕಾರ್ಯದರ್ಶಿ ಕಚೇರಿ ಸ್ಥಳಾಂತರಗೊಂಡಿದ್ದು, ಪ್ರಧಾನಿ ಕಚೇರಿ ಶೀಘ್ರದಲ್ಲೇ ಸೌತ್ ಬ್ಲಾಕ್ ನಿಂದ ಸ್ಥಳಾಂತರಗೊಳ್ಳಲಿದೆ. ಸಂಪುಟ ಕಾರ್ಯದರ್ಶಿ ಟಿ.ವಿ. ಸೋಮನಾಥನ್ ಹೊಸ ಸಂಕೀರ್ಣದಿಂದ ಕೆಲಸ ಮಾಡಲು ಪ್ರಾರಂಭಿಸಿದ್ದರೂ, ಅದು ಇನ್ನೂ ಉದ್ಘಾಟನೆಗೊಂಡಿಲ್ಲ. ಈ ಸಂಕೀರ್ಣವು ಪ್ರಧಾನ ಮಂತ್ರಿ ಕಚೇರಿ, ರಾಷ್ಟ್ರೀಯ ಭದ್ರತಾ ಮಂಡಳಿ ಸಚಿವಾಲಯ ಮತ್ತು ವಿಶೇಷ ರಕ್ಷಣಾ ಗುಂಪಿನ ಕಚೇರಿಗಳನ್ನು ಒಳಗೊಂಡಿದೆ.

{ **ದೇವೇಂದ್ರ ಫಡ್ನವೀಸ್** } ಮಹಾರಾಷ್ಟ್ರ ಸಿಎಂ

2029ರ ವರೆಗೂ ನಾನೇ ಮಹಾರಾಷ್ಟ್ರ ಸಿಎಂ ಹುದ್ದೆಯಲ್ಲಿರುತ್ತೇನೆ. ನನ್ನನ್ನು ಮುಖ್ಯಮಂತ್ರಿ ಗಾದಿಯಿಂದ ಇಳಿಸುವ ಬಗ್ಗೆ ಯಾವುದೇ ರೀತಿಯ ಒಪ್ಪಂದ ಇಲ್ಲವೇ ಚರ್ಚೆ ಆಗಿಲ್ಲ. ಪಕ್ಷದ ಬಗ್ಗೆ ನಾನು ತಿಳಿದಿರುವಂತೆ ಆ ವಿಚಾರ ಇನ್ನೂ ದೂರದಲ್ಲಿದ್ದು ಮುಂದಿನ ಚುನಾವಣೆಯಲ್ಲಷ್ಟೇ ಈ ವಿಷಯ ಪ್ರಸ್ತುತವಾಗಲಿದೆ.

ಬಿಹಾರದಲ್ಲಿ ರಂಗೇರಿದ ಚುನಾವಣಾ ಪ್ರಚಾರ ಸಭೆ | ಪ್ರಧಾನಿ ನಮೋ, ಗೃಹ ಸಚಿವ ಅಮಿತ್ ಶಾ ಆರ್‌ಜೆಡಿ ವಿರುದ್ಧ ವಾಗ್ದಾಳಿ

ನಿತೀಶ್ ನೇತೃತ್ವದಲ್ಲಿ ಪ್ರಗತಿ ಕಂಡಿರುವ ಬಿಹಾರ: ಮೋದಿ

ಪಟನಾ: ಮುಖ್ಯಮಂತ್ರಿ ನಿತೀಶ್ ಕುಮಾರ್ ನೇತೃತ್ವದಲ್ಲಿ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟವು (ಎನ್‌ಡಿಎ) ಎಲ್ಲಾ ದಾಖಲೆಗಳನ್ನು ಮುರಿದು ಮುಂದಿನ ತಿಂಗಳು ನಡೆಯಲಿರುವ ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಗೆಲ್ಲಲಿದೆ ಎಂದು ಪ್ರಧಾನಿ ಮೋದಿ ಶುಕ್ರವಾರ ಹೇಳಿದ್ದಾರೆ. ಈಗಾಗಲೇ ಬಿಹಾರದಲ್ಲಿ ಎನ್‌ಡಿಎ ಆಡಳಿತದಲ್ಲಿದ್ದು, ರಾಜ್ಯವು ನಿತೀಶ್ ನೇತೃತ್ವದಲ್ಲಿ ಬಹಳ ಪ್ರಗತಿ ಕಂಡಿದೆ ಎಂದೂ ಅವರು ಇಲ್ಲಿನ ಸಮಷ್ಟಿಪುರದಲ್ಲಿ ನಡೆದ ಚುನಾವಣಾ ಪ್ರಚಾರ ಸಭೆಯಲ್ಲಿ ಹೇಳಿದರು.

ಮುಖ್ಯಮಂತ್ರಿ ಅಭ್ಯರ್ಥಿಯನ್ನು ಹೆಸರಿಸಲು ಆಡಳಿತ ಪಕ್ಷಗಳು ಹಿಂಜರಿಯುತ್ತಿರುವ ಬಗ್ಗೆ ವಿರೋಧ ಪಕ್ಷದ ಮಹಾಘಟಬಂಧನ್ ಮೈತ್ರಿಕೂಟ ತೀವ್ರ ಟೀಕೆ ವ್ಯಕ್ತಪಡಿಸಿದ ಬೆನ್ನಲ್ಲೇ ಮೋದಿಯಿಂದ ಈ ಹೇಳಿಕೆ ಬಂದಿದೆ. ಗುರುವಾರ ಮಹಾಘಟಬಂಧನ್ ರಾಷ್ಟ್ರೀಯ ಜನತಾದಳದ ನಾಯಕ ತೇಜಸ್ವಿ ಯಾದವ್ ಅವರನ್ನು ತನ್ನ ಸಂಭಾವ್ಯ ಮುಖ್ಯಮಂತ್ರಿ ಎಂದು ಘೋಷಿಸಿದೆ. ಪಾಟ್ನಾದಲ್ಲಿ ತೇಜಸ್ವಿ ಯಾದವ್ ಮತ್ತು ಲಾಲು ಪ್ರಸಾದ್ ಯಾದವ್ ಅವರನ್ನು ಭೇಟಿಯಾದ ಒಂದು ದಿನದ ನಂತರ ಕಾಂಗ್ರೆಸ್‌ನ ಅಶೋಕ್ ಗೆಹ್ಲೋಟ್ ಈ ಘೋಷಣೆ ಮಾಡಿದ್ದಾರೆ.

ಜಂಗಲ್ ರಾಜ್‌ನ ನಾಯಕರು ತಮ್ಮ ಕುಟುಂಬಗಳ ಬಗ್ಗೆ ಮಾತ್ರ ಕಾಳಜಿ ವಹಿಸುತ್ತಾರೆ. ಅವರು ಬಿಹಾರದ ಯುವಕರ ಜೀವನವನ್ನು ನಾಶಮಾಡುತ್ತಾರೆ. ಆದರೆ ಹಾಲಿ ಮುಖ್ಯಮಂತ್ರಿ ನಿತೀಶ್ ಕುಮಾರ್ ನೇತೃತ್ವದ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟವು ರಾಜ್ಯವನ್ನು ಸಮೃದ್ಧಗೊಳಿಸಿದೆ ಎಂದೂ ಪ್ರಧಾನಿ ಹೇಳಿದ್ದಾರೆ. ಬಿಹಾರದಲ್ಲಿ ಅಭಿವೃದ್ಧಿಯನ್ನು ತಡೆಯಲು ಆರ್‌ಜೆಡಿ ಮತ್ತು ಕಾಂಗ್ರೆಸ್ ಯಾವುದೇ ಅವಕಾಶವನ್ನು ಬಿಟ್ಟುಕೊಟ್ಟಿಲ್ಲ. 2004ರಿಂದ 2014ರ ವರೆಗೆ ಬಿಹಾರದಲ್ಲಿ ನಿತೀಶ್ ಕುಮಾರ್ ನೇತೃತ್ವದ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟ ಸರಕಾರಕ್ಕೆ ಸಹಾಯ ಮಾಡದಂತೆ ಕೇಳುವ ಮೂಲಕ ಆರ್‌ಜೆಡಿ ಕೇಂದ್ರದಲ್ಲಿ ಕಾಂಗ್ರೆಸ್ ಸರಕಾರಕ್ಕೆ ಬೆದರಿಕೆ ಹಾಕುತ್ತಿತ್ತು ಎಂದರು. ಬಿಹಾರ ಚುನಾವಣೆ ಎನ್‌ಡಿಎ-ಲಠ್‌ಬಂಧನ್ ನಡುವಿನ ಹೋರಾಟ ಎಂದೂ ಪ್ರಧಾನಿ ಹೇಳಿದರು.

ನ.14ರಂದು ಬಿಹಾರ ದೀಪಾವಳಿ: ರಾಜ್ಯದ ವಿಧಾನಸಭಾ ಚುನಾವಣೆಯಲ್ಲಿ ಆರ್‌ಜೆಡಿ ಮತ್ತು ಅದರ ಮಿತ್ರಪಕ್ಷಗಳು ಅವಮಾನಕರ ಸೋಲು ಅನುಭವಿಸಿದ ನಂತರ ಬಿಹಾರದಲ್ಲಿ ನ.14ರಂದು ನಿಜವಾದ ದೀಪಾವಳಿ ಆಚರಿಸಲಾಗುತ್ತದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ. ಬಿಹಾರದ ಸಿವಾನ್‌ನಲ್ಲಿ ಚುನಾವಣಾ ರ‍್ಯಾಲಿಯಲ್ಲಿ ಶುಕ್ರವಾರ ಮಾತನಾಡಿದ ಅವರು, ಲಾಲು ಪ್ರಸಾದ್ ಹಾಗೂ ರಾಬ್ರಿದೇವಿ 20ಕ್ಕೂ ಅಧಿಕ ವರ್ಷಗಳ ಕಾಲ ಸಿವಾನ್‌ನ ಜನರ ಮೇಲೆ ಜಂಗಲ್ ರಾಜ್ ಹೇರಿಕೆ ಮಾಡಿದ್ದರು. ಇದೀಗ ಕ್ರಿಮಿನಲ್ ಹಿನ್ನೆಲೆಯಿರುವ ಮೊಹಮ್ಮದ್ ಶಹಾಬುದ್ದೀನ್ ಮಗ ಒಸಾಮಾ ಸಾಹಬ್‌ಗೆ ರಘುನಾಥಪುರ ಕ್ಷೇತ್ರದಿಂದ ಟಿಕೆಟ್ ನೀಡಿದ್ದು, ವಿಧಾನಸಭಾ ಚುನಾವಣೆಯಲ್ಲಿ ಅವರನ್ನು ಸೋಲಿಸಿ ಎಂದು ಅಲ್ಲಿನ ಮತದಾರರಿಗೆ ಶಾ ಕರೆ ನೀಡಿದ್ದಾರೆ. ಬಿಹಾರದಲ್ಲಿ ಇಂಡಿಯಾ ಮೈತ್ರಿಕೂಟವು ಸಂಪೂರ್ಣವಾಗಿ ಛಿದ್ರಗೊಂಡಿದೆ. ಕಾಂಗ್ರೆಸ್ ನೇತೃತ್ವದಲ್ಲಿ ಮತ ಅಧಿಕಾರ ಯಾತ್ರೆ ಮಾಡುವ ಮೂಲಕ ಅವರ ನಾಯಕ ರಾಹುಲ್ ಗಾಂಧಿ ಅವರು ಒಳನುಸುಳುಕೋರರು ಇಲ್ಲಿರಬಹುದು ಎಂದು ಹೇಳಿದ್ದರು. ಆದರೆ ಬಿಹಾರದಲ್ಲಿ ಒಬ್ಬನೇ ಒಬ್ಬ ಒಳನುಸುಳುಕೋರ ಇರುವುದಕ್ಕೆ ನಾವು ಅವಕಾಶ ನೀಡುವುದಿಲ್ಲ ಎಂದೂ ಅಮಿತ್ ಶಾ ಹೇಳಿದ್ದಾರೆ.

ನವೆಂಬರ್ 6 ಮತ್ತು 11ರಂದು ಬಿಹಾರ ವಿಧಾನಸಭೆಗೆ ಚುನಾವಣೆ ನಡೆಯಲಿದೆ.

ಎನ್‌ಡಿಎ ಪರ ಮೋದಿ ಬಿಹಾರದಲ್ಲಿ ಚುನಾವಣಾ ಪ್ರಚಾರ ಭಾಷಣ ಮಾಡಿದರು.

ಇಬ್ಬರಿಂದ ಬಿಹಾರ ನಿಯಂತ್ರಣ: ತೇಜಸ್ವಿ ಯಾದವ್ ವಾಗ್ದಾಳಿ

ನಿತೀಶ್ ಕುಮಾರ್ ಅವರನ್ನು ಬಿಜೆಪಿ ಹೈಜಾಕ್ ಮಾಡಿದ್ದು, ಗುಜರಾತ್‌ನ ಇಬ್ಬರು ಬಿಹಾರವನ್ನು ನಿಯಂತ್ರಿಸುತ್ತಿದ್ದಾರೆ ಎಂದು ಪ್ರಧಾನಿ ಮೋದಿ ಹಾಗೂ ಅಮಿತ್ ಶಾ

ಹೆಸರು ಹೇಳದೆ ಇಂಡಿಯಾ ಮೈತ್ರಿಕೂಟದ ಸಿಎಂ ಅಭ್ಯರ್ಥಿ ತೇಜಸ್ವಿ ಯಾದವ್ ವಾಗ್ದಾಳಿ ನಡೆಸಿದ್ದಾರೆ. ಕೇಂದ್ರ ಸರಕಾರವು ರಾಜ್ಯದ ಭ್ರಷ್ಟ ನಾಯಕರು ಹಾಗೂ ಕ್ರಿಮಿನಲ್‌ಗಳನ್ನು ರಕ್ಷಿಸುತ್ತಿದೆ ಎಂದು ಅವರು ಆರೋಪಿಸಿದ್ದಾರೆ. ಸಹರ್ಸಾ ಜಿಲ್ಲೆಯ ಸಿಮ್ರಿ ಭಕ್ತಯಾರ್‌ಪುರದಲ್ಲಿ ನಡೆದ ಚುನಾವಣಾ ಸಮಾವೇಶದಲ್ಲಿ ಮಾತನಾಡಿದ ಅವರು ಬಡ, ನಿರುದ್ಯೋಗ, ಭ್ರಷ್ಟಾಚಾರ ಹಾಗೂ ಕ್ರಿಮಿನಲ್ ಪ್ರಕರಣ ಹೆಚ್ಚಿರುವ ರಾಜ್ಯ ಬಿಹಾರ ಎಂದು ಕೇಳುವಾಗ ಓರ್ವ ಬಿಹಾರಿಯಾಗಿ ನನಗೆ ಕೋಪ ಬರುತ್ತದೆ. ರಾಜ್ಯದಲ್ಲಿ 20 ವರ್ಷಗಳ ಹಾಗೂ ಕೇಂದ್ರದಲ್ಲಿ 11 ವರ್ಷಗಳ ಎನ್‌ಡಿಎ ಆಡಳಿತ ಇದ್ದರೂ ರಾಜ್ಯದ ಜನರ ತಲಾ ಆದಾಯ ಹಾಗೂ ರೈತರ ಆದಾಯ ಕಡಿಮೆ ಇದೆ ಎಂದೂ ಹೇಳಿದ್ದಾರೆ.

ಪಿಯೂಷ್ ಪಾಂಡೆ ಇನ್ನಿಲ್ಲ

ಮಿಲೇ ಸುರ್ ಮೇರಾ ತುಮ್ಹಾರ ಗೀತೆ ರಚನೆಕಾರ

ದೆಹಲಿ: ಭಾರತದ ಜಾಹೀರಾತು ಕ್ಷೇತ್ರದ ದಿಗ್ಗಜ, ಕ್ರಿಯೇಟಿವಿಟಿಗೆ ಹೆಸರಾಗಿದ್ದ ಪಿಯೂಷ್ ಪಾಂಡೆ (70) ಅವರು ಶುಕ್ರವಾರ ಬೆಳಿಗ್ಗೆ ನಿಧನರಾಗಿದ್ದಾರೆ. ಕಳೆದ ಕೆಲ ದಿನಗಳಿಂದ ತೀವ್ರ ಅನಾರೋಗ್ಯದಿಂದ ಬಳಲುತ್ತಿದ್ದ ಅವರ ಆರೋಗ್ಯ ಚೇತರಿಸಿಕೊಳ್ಳದ ಹಿನ್ನೆಲೆಯಲ್ಲಿ ಇಹಲೋಕ ತ್ಯಜಿಸಿದ್ದಾರೆ. ಅಂತ್ಯಕ್ರಿಯೆ ಮುಂಬೈನ ಶಿವಾಜಿ ಪಾರ್ಕ್‌ನಲ್ಲಿ ನೆರವೇರಲಿದೆ.

ಪಾಂಡೆ ಅವರು ನಾಲ್ಕು ದಶಕಗಳ ಕ್ರಿಯೇಟಿವ್ ವೃತ್ತಿಯಲ್ಲಿ ಭಾರತೀಯ ಜಾಹೀರಾತಿನ ಭಾಷೆ, ಶೈಲಿ ಮತ್ತು ದೃಶ್ಯ ರೂಪವನ್ನೇ ಸಂಪೂರ್ಣವಾಗಿ ಪರಿವರ್ತಿಸಿ, ದೇಶದ ಅತ್ಯಂತ ಸ್ಮರಣೀಯ ಪ್ರಚಾರಗಳನ್ನು ಸೃಷ್ಟಿಸಿದ್ದಾರೆ.

ತೊಂಭತ್ತರ ದಶಕದಲ್ಲಿ ದೇಶದ ಏಕತೆಯ ಧ್ವನಿಯಂತಾಗಿದ್ದ 'ಮಿಲೇ ಸುರ್ ಮೇರಾ ತುಮ್ಹಾರ' ಗೀತೆ ದಿನಾಲೂ ದೂರದರ್ಶನದಲ್ಲಿ ಪ್ರಸಾರವಾಗುತ್ತಿತ್ತು. ಆ ಗೀತೆಯ ರಚನೆಗಾರರಾಗಿ ದೇಶಾದ್ಯಂತ ಅವರು ಗುರುತಿಸಲ್ಪಟ್ಟವರು. 2014ರಲ್ಲಿ ಪಿಯೂಷ್ ಪಾಂಡೆ ಅವರು ರೂಪಿಸಿದ ಬಿಜೆಪಿಯ ಲೋಕಸಭಾ ಚುನಾವಣಾ ಘೋಷವಾಕ್ಯ 'ಅಬ್ಕೀ ಬಾರ್ ಮೋದಿ ಸರ್ಕಾರ್' ಅತ್ಯಂತ ಪ್ರಭಾವಶಾಲಿಯಾಗಿ ಪಕ್ಷಕ್ಕೆ ಬಹುಮತ ತಂದುಕೊಡುವಲ್ಲಿ ಯಶಸ್ವಿಯಾಯಿತು. ಈ ಸರಳ ಮತ್ತು ತೀಕ್ಷ್ಣವಾದ ಘೋಷವಾಕ್ಯ ರಾಷ್ಟ್ರಮಟ್ಟದಲ್ಲಿ ಪ್ರತಿಧ್ವನಿಸಿತು.

ಫೆವಿಕೋಲ್‌ನೊಂದಿಗೆ ಪಾಂಡೆ ಅವರ ದೀರ್ಘಕಾಲದ ಸಹಯೋಗದಿಂದ 'ಫೆವಿಕೋಲ್ ಬಸ್', 'ಫೆವಿಕೋಲ್ ಫಿಷ್', 'ಫೆವಿಕೋಲ್ ಸೋಫಾ' ಮುಂತಾದ ಐಕಾನಿಕ್ ಜಾಹೀರಾತುಗಳು ಹುಟ್ಟಿಕೊಂಡವು. ಆ ಕ್ಯಾಂಪೇನ್‌ನಲ್ಲಿ ಪಾಂಡೆ ಅವರು ಸರಳತೆ, ಸಾಮಾಜಿಕ ಸಂದೇಶ ಮತ್ತು ಹಾಸ್ಯದ ಮಿಶ್ರಣದ ಮೂಲಕ ಪ್ರೇಕ್ಷಕರನ್ನು ಆಕರ್ಷಿಸಿದರು. ಅದು ಕೇವಲ ಉತ್ಪನ್ನ ಎಂಬಂತಾಗದೆ, 'ಒಡೆಯಬೇಡಿ ಜೋಡಿಸಿ' ಎಂಬ ಸಂದೇಶವನ್ನೂ ನೀಡಿತು.

ಅವರು ರೂಪಿಸಿದ ಮತ್ತೊಂದು ಜಾಹೀರಾತು, ಯುವತಿಯೊಬ್ಬಳು ಕ್ರಿಕೆಟ್ ಮೈದಾನದಲ್ಲಿ ನೃತ್ಯಮಾಡುವ ದೃಶ್ಯ ಹೊಂದಿರುವ ಕುಛ್ ಖಾಸ್ ಹೈ-ಕ್ಯಾಡ್‌ಬರಿ ಡೈರಿ ಮಿಲ್ಕ್ ಕ್ಯಾಂಪೇನ್ ಭಾರತೀಯ ಜಾಹೀರಾತಿನ ಚರಿತ್ರೆಯಲ್ಲಿ ಅಜರಾಮರವಾದುದಾಗಿದೆ. ಇದರಿಂದ ಚಾಕೊಲೇಟ್ ಕೇವಲ ಮಕ್ಕಳಿಗೆ ಮಾತ್ರವಲ್ಲ, ಪ್ರತಿಯೊಬ್ಬರ ಸಂಭ್ರಮದ ಪ್ರತೀಕ ಎಂಬ ಹೊಸ ಭಾವನೆ ಹುಟ್ಟಿತು.

ವೊಡಾಫೋನ್‌ಗಾಗಿ ಪಾಂಡೆ ಅವರು ಎರಡು ಸ್ಮರಣೀಯ ಕ್ಯಾಂಪೇನ್‌ಗಳನ್ನು ನೀಡಿದರು 'ಪಗ್' ಜಾಹೀರಾತುಗಳು ನಿಷ್ಠೆಯ ಸಂಕೇತವಾಗಿದ್ದರೆ, ಜೂಜೂಸ್ ಐಪಿಎಸ್ ಸಮಯದಲ್ಲಿ ಸಾಂಸ್ಕೃತಿಕ ಕ್ರೇಜ್ ಆಗಿ ಮೂಡಿಬಂದವು.

1990ರ ದಶಕದಲ್ಲಿ ಭಾರತದ ಮಧ್ಯಮ ವರ್ಗದ ಆತ್ಮವಿಶ್ವಾಸ ಮತ್ತು ಪ್ರಗತಿಯನ್ನು ಪ್ರತಿಬಿಂಬಿಸಿದ ಈ ಪ್ರಚಾರವು ರಾಷ್ಟ್ರ ಭಾವನೆಯ ಗೀತೆಯಂತಿತ್ತು. 'ಹಮಾರಾ ಬಜಾಜ್' ಕೇವಲ ಒಂದು ಜಾಹೀರಾತು ಆಗಿರಲಿಲ್ಲ, ಅದು ಬದಲಾದ ಭಾರತದ ಕನಸು ಮತ್ತು ಹೆಮ್ಮೆಯ ಪ್ರತೀಕವಾಗಿತ್ತು. 1955ರಲ್ಲಿ ಜೈಪುರ್‌ನಲ್ಲಿ ಪಾಂಡೆ ಅವರು 1982ರಲ್ಲಿ ಒಗಿಲ್ವಿ ಇಂಡಿಯಾಗೆ ಸೇರಿದರು. 1994ರಲ್ಲಿ ಅವರು ಒಗಿಲ್ವಿ ಬೋರ್ಡ್ ಆಫ್ ಡೈರೆಕ್ಟರ್ಸ್‌ನ ಸದಸ್ಯರಾದರು, ಸಂಸ್ಥೆಯನ್ನು ಭಾರತದ ಅತ್ಯಂತ ಶ್ರೇಷ್ಠ ಜಾಹೀರಾತು ಸಂಸ್ಥೆಯನ್ನಾಗಿ ಬೆಳೆಸಲು ಪ್ರಮುಖ ಪಾತ್ರವಹಿಸಿದರು. ಅವರಿಗೆ ಪದ್ಮಶ್ರೀ ಪ್ರಶಸ್ತಿ ಹಾಗೂ ಎಲ್‌ಐಎ ಲೆಜೆಂಡ್ ಅವಾರ್ಡ್ ಲಭಿಸಿದೆ.



ಬ್ರ್ಯಾಂಡ್‌ಗಳಿಗಿಂತ ಮೀರಿದ ಪರಂಪರೆ

ಈ ಪ್ರಮುಖ ಕ್ಯಾಂಪೇನ್‌ಗಳ ಹೊರತಾಗಿಯೂ ಪಿಯೂಷ್ ಪಾಂಡೆ ಅವರ ಸೃಜನಶೀಲ ಗುರುತು ಪಾಂಡ್ಸ್ ಪೌಡರ್‌ನ ಗೂಗ್ಲಿ ವೂಗ್ಲಿ ಊಶ್, ಚಲ್ ಮೇರಿ ಲೂನಾ, ಬೆಲ್ ಬಜಾವೋ, ಅಮಿತಾಭ್ ಬಚ್ಚನ್ ನೊಂದಿಗೆ ಪೋಲಿಯೋ ಅಭಿಯಾನ, ಫಾರ್ಚೂನ್ ಆಯಿಲ್, ಗೂಗಲ್ ರಿಯೂನಿಯನ್ ಸೇರಿದಂತೆ ಅನೇಕ ಕ್ಷೇತ್ರಗಳಲ್ಲಿ ವಿಶಿಷ್ಟ ಕ್ಯಾಂಪೇನ್‌ಗಳ ಮೂಲಕ ಜಾಹೀರಾತು ಜಗತ್ತಿನಲ್ಲಿ ಛಾಪು ಮೂಡಿಸಿದರು.

ಕಾಶ್ಮೀರ: ರಾಜ್ಯಸಭಾ ಚುನಾವಣೆಯಲ್ಲಿ ಬಿಜೆಪಿ ಅಚ್ಚರಿಯ ಗೆಲುವು | ಎನ್‌ಸಿ ಅಡ್ಡ ಮತದಾನ

ಎನ್‌ಸಿ 3, ಬಿಜೆಪಿಗೆ 1 ಸ್ಥಾನ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದ ನಾಲ್ಕು ರಾಜ್ಯಸಭಾ ಸ್ಥಾನಗಳಿಗೆ ಶುಕ್ರವಾರ ನಡೆದ ಚುನಾವಣೆಯ ಫಲಿತಾಂಶ ಪ್ರಕಟವಾಗಿದ್ದು, ಬಿಜೆಪಿ ಅಡ್ಡ ಮತದಾನದ ಮೂಲಕ ಒಂದು ಸ್ಥಾನವನ್ನು ಗೆದ್ದು ಅಚ್ಚರಿ ಮೂಡಿಸಿದೆ. ಆಡಳಿತಾರೂಢ ನ್ಯಾಷನಲ್ ಕಾನ್ಫರೆನ್ಸ್ ಉಳಿದ ಮೂರು ಸ್ಥಾನಗಳನ್ನು ಗೆದ್ದು ಬೀಗಿದೆ. 370ನೇ ವಿಧಿ ರದ್ದುಪಡಿಸಿದ ನಂತರ, 2021ರಿಂದ ಖಾಲಿ ಇದ್ದ ಜಮ್ಮು ಮತ್ತು ಕಾಶ್ಮೀರದ ನಾಲ್ಕು ರಾಜ್ಯಸಭಾ ಸ್ಥಾನಗಳನ್ನು

ಭರ್ತಿ ಮಾಡಲು ದ್ವೈವಾರ್ಷಿಕ ಚುನಾವಣೆ ನಡೆಯಿತು.

ಶಾಸಕರು ಬೆಳಗ್ಗೆ 9 ರಿಂದ ಸಂಜೆ 4 ರವರೆಗೆ ವಿಧಾನಸಭೆ ಸಂಕೀರ್ಣದಲ್ಲಿರುವ ಮೂರು ಪ್ರತ್ಯೇಕ ಮತಗಟ್ಟೆಗಳಲ್ಲಿ ತಮ್ಮ ಮತ ಚಲಾಯಿಸಿದರು. 90 ಸದಸ್ಯರನ್ನು ಹೊಂದಿರುವ ಜಮ್ಮು ಮತ್ತು ಕಾಶ್ಮೀರ ವಿಧಾನಸಭೆಯಲ್ಲಿ, 89 ಶಾಸಕರು ಮತ ಚಲಾಯಿಸಿದರೆ, ಪೀಪಲ್ಸ್ ಕಾನ್ಫರೆನ್ಸ್ ಅಧ್ಯಕ್ಷ ಮತ್ತು ಶಾಸಕ ಸಜದ್ ಗನಿ ಲೋನ್ ಮತದಾನದಿಂದ ದೂರ ಉಳಿದರು. ಪಿಎಸ್‌ಎ ಅಡಿಯಲ್ಲಿ ಬಂಧಿತರಾಗಿ ಕಥುವಾ ಜೈಲಿನಲ್ಲಿರುವ ದೋಡಾದ ಎಎಪಿ ಶಾಸಕ ಮೆಹ್ರಾಜ್ ಮಲಿಕ್ ಅಂಚೆ ಮತಪತ್ರದ ಮೂಲಕ ಮತ ಚಲಾಯಿಸಿದರು

ನ್ಯಾಷನಲ್ ಕಾನ್ಫರೆನ್ಸ್ ಚೌಧರಿ ಮುಹಮ್ಮದ್ ರಂಜಾನ್, ಶಮ್ಮಿ ಒಬೆರಾಯ್, ಸಜಾದ್ ಕಿಚ್ಲೂ ಮತ್ತು ಇಮ್ರಾನ್ ನಬಿ ದಾರ್ ಅವರನ್ನು ಕಣಕ್ಕಿಳಿಸಿತ್ತು. ಬಿಜೆಪಿ ಮೂರು ಸ್ಥಾನಗಳಿಗೆ ಅಲಿ ಮೊಹಮ್ಮದ್ ಮಿರ್, ರಾಕೇಶ್ ಮಹಾಜನ್ ಮತ್ತು ಜಮ್ಮು ಮತ್ತು ಕಾಶ್ಮೀರ ಬಿಜೆಪಿ ಅಧ್ಯಕ್ಷ ಸತ್ ಶರ್ಮಾ ಅವರನ್ನು ಕಣಕ್ಕಿಳಿಸಿತ್ತು.

ಮೂರು ಸ್ಥಾನಗಳನ್ನು ಖಚಿತವಾಗಿ ಗೆಲ್ಲುವ ಸಾಮರ್ಥ್ಯ ಹೊಂದಿದ್ದ ಎನ್‌ಸಿ ಅವುಗಳನ್ನು ಪಡೆದುಕೊಂಡಿತು. ಆದರೆ ಬಿಜೆಪಿಯ ಸತ್ ಶರ್ಮಾ ನಾಲ್ಕನೇ ಸ್ಥಾನವನ್ನು ಗೆದ್ದರು. ಅದರಲ್ಲಿ ಅಡ್ಡ ಮತದಾನ ಮಾಡಿರುವುದು ಕಂಡುಬಂದಿತು. ಬಿಜೆಪಿಯ 28 ಮತಗಳ ವಿರುದ್ಧ, ಶರ್ಮಾ ಹೆಚ್ಚುವರಿ ಮತಗಳನ್ನು ಪಡೆದರು.

ಎಲ್ಲಾ ವಿರೋಧ ಪಕ್ಷದ ಶಾಸಕರ ಬೆಂಬಲ ಹೊಂದಿದ್ದ ಆಡಳಿತಾರೂಢ ಎನ್‌ಸಿ ನಾಲ್ಕೂ ಸ್ಥಾನಗಳನ್ನು ಗೆಲ್ಲುವ ನಿರೀಕ್ಷೆಯಿತ್ತು, ಆದರೆ ಅಡ್ಡ ಮತದಾನದಿಂದ ಒಂದು ಸ್ಥಾನ ಕಳೆದುಕೊಂಡಿದೆ.

ಪಾಕಿಸ್ತಾನ ಸೇನಾ ಮುಖ್ಯಸ್ಥನಿಗೆ ತಾಲಿಬಾನ್ ಬಹಿರಂಗ ಬೆದರಿಕೆ

ಪಾಕಿಸ್ತಾನ ಮತ್ತು ಅಫ್ಘಾನಿಸ್ತಾನ ನಡುವೆ ಮತ್ತೆ ಸಂಘರ್ಷದ ಅಪಾಯ | ಪಾಕಿಸ್ತಾನಕ್ಕೆ ಬೆದರಿಕೆ

ಕಾಬೂಲ್: ಹಿಂಸಾತ್ಮಕ ಸೇನಾ ಘರ್ಷಣೆಗಳ ನಂತರ ಪಾಕಿಸ್ತಾನ ಮತ್ತು ಅಫ್ಘಾನಿಸ್ತಾನ ನಡುವಿನ ಕದನ ವಿರಾಮ ಮುಕ್ತಾಯವಾಗಿದ್ದು, ಎರಡೂ ದೇಶಗಳ ನಡುವೆ ಮತ್ತೆ ಸಂಘರ್ಷದ ಅಪಾಯವನ್ನು ಹೆಚ್ಚಿಸಿದೆ. ಅಕ್ಟೋಬರ್ 15ರಂದು ಪಾಕಿಸ್ತಾನ ಮತ್ತು ಅಫ್ಘಾನ್ ತಾಲಿಬಾನ್ ನಡುವೆ ತಾತ್ಕಾಲಿಕ 48 ಗಂಟೆಗಳ ಕದನ ವಿರಾಮಕ್ಕೆ ಸಹಿ ಹಾಕಲಾಗಿತ್ತು. ಇದೀಗ ತೆಹ್ರೀಕ್-ಇ-ತಾಲಿಬಾನ್ ಪಾಕಿಸ್ತಾನ್ (ಟಿಟಿಪಿ) ವಿಡಿಯೋ ಮೂಲಕ ಪಾಕಿಸ್ತಾನಕ್ಕೆ ಬೆದರಿಕೆಯನ್ನು ಹಾಕಿದೆ. ಈ ವಿಡಿಯೊಗಳಲ್ಲಿ ಟಿಟಿಪಿಯ ಉನ್ನತ ಕಮಾಂಡರ್ ಪಾಕಿಸ್ತಾನದ ಸೇನಾ ಮುಖ್ಯಸ್ಥ ಫೀಲ್ಡ್ ಮಾರ್ಷಲ್ ಅಸಿಮ್ ಮುನೀರ್ ಅವರಿಗೆ ಬೆದರಿಕೆ ಹಾಕುತ್ತಿರುವುದು ಕಂಡು ಬಂದಿದೆ.

ಪಾಕಿಸ್ತಾನಿ ಸೇನೆಯು ಸೈನಿಕರನ್ನು ಕೊಲ್ಲಲು ಕಳುಹಿಸುವುದನ್ನು ತಪ್ಪಿಸಬೇಕು ಮತ್ತು ಬದಲಾಗಿ ಉನ್ನತ ಅಧಿಕಾರಿಗಳು ತಮ್ಮನ್ನು ಯುದ್ಧಭೂಮಿಗೆ ಕರೆದೊಯ್ಯಬೇಕು ಎಂದು ಹೇಳಿದ್ದಾರೆ. ಈ ವೀಡಿಯೊಗಳು ಅಕ್ಟೋಬರ್ 8ರಂದು ನಡೆದ ಹೊಂಚುದಾಳಿಯ ಯುದ್ಧಭೂಮಿ ದೃಶ್ಯಗಳನ್ನು ಒಳಗೊಂಡಿವೆ, ಇದರಲ್ಲಿ ಟಿಟಿಪಿ 22 ಪಾಕಿಸ್ತಾನಿ ಸೈನಿಕರು ಸಾವನ್ನಪ್ಪಿದ್ದಾರೆ ಎಂದು ಹೇಳಿಕೊಂಡಿದೆ ಮತ್ತು ವಶಪಡಿಸಿಕೊಂಡ ಮದ್ದುಗುಂಡುಗಳು ಮತ್ತು ವಾಹನಗಳನ್ನು ತೋರಿಸುತ್ತದೆ. ದಾಳಿಯಲ್ಲಿ 11 ಸೈನಿಕರು ಸಾವನ್ನಪ್ಪಿದ್ದಾರೆ ಎಂದು ಸೇನೆ ಒಪ್ಪಿಕೊಂಡಿದೆ.

ಒಂದು ಕ್ಲಿಪ್‌ನಲ್ಲಿ ಪಾಕಿಸ್ತಾನಿ ಅಧಿಕಾರಿಗಳಿಂದ ಕಮಾಂಡರ್ ಕಾಜಿಮ್ ಎಂದು ಗುರುತಿಸಲ್ಪಟ್ಟ ಹಿರಿಯ ಟಿಟಿಪಿ ವ್ಯಕ್ತಿಯೊಬ್ಬರು ಕ್ಯಾಮೆರಾದಲ್ಲಿ ಕಾಣಿಸಿಕೊಂಡು, 'ನೀವು ಪುರುಷರಾಗಿದ್ದರೆ ನಮ್ಮನ್ನು ಎದುರಿಸಿ' ಎಂದು ಹೇಳುತ್ತಾರೆ. ಅದೇ ವೀಡಿಯೊದಲ್ಲಿ, ಕಾಜಿಮ್ ನಂತರ, 'ನೀವು ನಿಮ್ಮ ತಾಯಿಯ ಹಾಲು ಕುಡಿದಿದ್ದರೆ ನಮ್ಮೊಂದಿಗೆ ಹೋರಾಡಿ' ಎಂದು ಹೇಳುತ್ತಾರೆ. ಅಕ್ಟೋಬರ್ 21ರಂದು, ಕಾಜಿಮ್ ಸೆರೆಹಿಡಿಯಲು ಮಾಹಿತಿ ನೀಡಿದರೆ, ಪಾಕಿಸ್ತಾನಿ ಅಧಿಕಾರಿಗಳು 10 ಕೋಟಿ ಪಾಕಿಸ್ತಾನಿ ರೂಪಾಯಿಗಳ (ಪಿಕೆಆರ್) ಬಹುಮಾನವನ್ನು ಘೋಷಿಸಿದ್ದರು.

ಮಕ್ಕಳಿಂದ ಆಸ್ತಿ ಒಪ್ಪಂದ ರದ್ದು ಸಾಧ್ಯ: ಸುಪ್ರೀಂ ಮಹತ್ವದ ತೀರ್ಪು ಪ್ರಕಟ

ದೆಹಲಿ: ಅಪ್ರಾಪ್ತ ವಯಸ್ಕರು 18 ವರ್ಷ ಪೂರೈಸಿದ ನಂತರ, ಅವರ ಪೋಷಕರು ಅಥವಾ ಪಾಲಕರು ಮಾಡಿದ ಯಾವುದೇ ಆಸ್ತಿ ಮಾರಾಟ ಅಥವಾ ವರ್ಗಾವಣೆಯನ್ನು, ನಾಯಾಲಯದಲ್ಲಿ ಮೊಕದ್ದಮೆ ಹೂಡದೆ ಪ್ರಶ್ನಿಸಬಹುದು ಎಂದು ಸುಪ್ರೀಂಕೋರ್ಟ್

ಮಹತ್ವದ ತೀರ್ಪು ನೀಡಿದೆ.ಆಸ್ತಿ ವರ್ಗಾವಣೆಗಳನ್ನು ಸ್ಪಷ್ಟ ಕ್ರಮಗಳನ್ನು ತೆಗೆದುಕೊಳ್ಳುವ ಮೂಲಕ, ಆಸ್ತಿಯನ್ನು ತಾವೇ ಮಾರಾಟ ಮಾಡುವ ಮೂಲಕ ಅಥವಾ ವರ್ಗಾಯಿಸುವ ಮೂಲಕ ರದ್ದುಗೊಳಿಸಬಹುದು ಎಂದು ಸರ್ವೋಚ್ಚ ನ್ಯಾಯಾಲಯ ಸ್ಪಷ್ಟಪಡಿಸಿದೆ. ಆಸ್ತಿ ಮಾರಾಟ ಅಥವಾ ವರ್ಗಾವಣೆ ಕುರಿತ ಭವಿಷ್ಯದ ವ್ಯಾಜ್ಯಗಳಿಗೆ ಈ ತೀರ್ಪು ಮಾನದಂಡವಾಗಲಿದೆ. ಮೂಲ ಮಾರಾಟವನ್ನು ರದ್ದುಗೊಳಿಸಲು ಅಪ್ರಾಪ್ತ ವಯಸ್ಕರು ಮೊಕದ್ದಮೆ ಹೂಡಬೇಕೇ ಅಥವಾ ಬೇಡವೇ ಎಂಬುದರ ಬಗ್ಗೆ, ಈ ಪ್ರಕರಣದ ವಿಚಾರಣೆ ನಡೆಸಿದ ಕೆಳ ಹಂತದ ನ್ಯಾಯಾಲಯಗಳಲ್ಲಿ ಭಿನ್ನಾಭಿಪ್ರಾಯಗಳಿದ್ದವು. ಇದಕ್ಕೆ ಸ್ಪಷ್ಟನೆ ನೀಡಿರುವ ಸುಪ್ರೀಂಕೋರ್ಟ್ ಔಪಚಾರಿಕ ಮೊಕದ್ದಮೆಯ ಅಗತ್ಯವಿಲ್ಲ ಎಂದು ಹೇಳಿದೆ.

ಬ್ಯಾಂಕ್ ನಾಮಿನಿ ನಿಯಮ ಬದಲಾವಣೆ

ದೆಹಲಿ: ನವೆಂಬರ್ 1ರಿಂದ ಬ್ಯಾಂಕ್‌ಗಳ ನಾಮಿನಿ ನಿಯಮದಲ್ಲಿ ಬದಲಾವಣೆ ಆಗಲಿದ್ದು, ಬ್ಯಾಂಕ್ ಅಕೌಂಟ್, ಲಾಕರ್‌ಗಳಿಗೆ 1ಕ್ಕಿಂತ ಹೆಚ್ಚು ನಾಮಿನಿಗಳನ್ನು ಮಾಡಬಹುದು ಎಂದು ಕೇಂದ್ರ ಹಣಕಾಸು ಇಲಾಖೆ ತಿಳಿಸಿದೆ. ಈ ವರೆಗೆ 1 ಬ್ಯಾಂಕ್ ಖಾತೆ ಅಥವಾ ಲಾಕರ್‌ಗಳಿಗೆ ಇದ್ದ ಒಬ್ಬರು ನಾಮಿನಿ ಬದಲಿಗೆ ನಾಲ್ವರು ನಾಮಿನಿಗಳಿಗೆ ಅವಕಾಶ ಸಿಗಲಿದೆ. ಈ ಮೂಲಕ ಕ್ಲೈಮ್ ಸೆಟಲ್‌ಮೆಂಟ್‌ಗಳು ಮತ್ತಷ್ಟು ನೇರ ಹಾಗೂ ಸುಲಭವಾಗಲಿದೆ. ಡೆಪಾಸಿಟ್ ವೇಳೆಯೇ ಖಾತೆದಾರರು 4 ನಾಮಿನಿಗಳನ್ನು ಆಯ್ಕೆ ಮಾಡಬಹುದು. ಠೇವಣಿದಾರರು ಮೃತರಾದ ನಂತರ ಇದರಲ್ಲಿ ಕ್ರಮಸಂಖ್ಯೆಗೆ ಅನುಗುಣವಾಗಿ ಖಾತೆದಾರರ ಹಣಕಾಸಿಗೆ ಉತ್ತರಾಧಿಕಾರಿಗಳಾಗಲಿದ್ದಾರೆ. ಇದರಿಂದಾಗಿ ಗೊಂದಲ ಇಲ್ಲದೇ ನಿಗದಿತ ಹಣಕಾಸಿನ ಭಾಗವು ಆ ನಾಮಿನಿಗಳಿಗೆ ನೇರವಾಗಿ ವರ್ಗಾವಣೆ ಆಗಲಿದೆ. ಬ್ಯಾಂಕಿಂಗ್ ಕಾನೂನುಗಳು (ತಿದ್ದುಪಡಿ) ಕಾಯಿದೆ-2025 ನವೆಂಬರ್ 1ರಿಂದ ಜಾರಿಗೆ ಬರಲಿದೆ.

300 ಮೀ. ದೂರದವರೆಗೆ ಬೈಕನ್ನು ಎಳೆದುಕೊಂಡು ಹೋದ ಬಸ್ | ಎರ್ಮಜೆನ್ಸಿ ಎಕ್ಸಿಟ್ ಬಳಸಿ ಪ್ರಾಣಾಪಾಯದಿಂದ ಹಲವರು ಪಾರು

ಕರ್ನೂಲ್ ಬಸ್ ದುರಂತ: ಬದುಕಿ ಬಂದವರ ಅನುಭವವೂ ಕರಾಳ

ಕರ್ನೂಲ್: ಇಲ್ಲಿ ನಡೆದ ಬಸ್ ದುರಂತದಿಂದ ಪಾರಾಗಿ ಬಂದ ಪ್ರಯಾಣಿಕರು ತಮ್ಮ ಕರಾಳ ಅನುಭವ ಬಿಚ್ಚಿಟ್ಟಿದ್ದಾರೆ. 'ಬಸ್‌ನ ಬಾಗಿಲುಗಳು ಜಖಂಗೊಂಡ ಕಾರಣ ಬಸ್ಸಿನೊಳಗೆ ಸಿಕ್ಕಿಹಾಕಿಕೊಂಡಂತೆ ಭಾಸವಾಯಿತು, ಜೀವ ಉಳಿಸಿಕೊಳ್ಳಲು ತುರ್ತು ಕಿಟಕಿಗಳನ್ನು ಒಡೆಯುವುದನ್ನು ಬಿಟ್ಟು ಬೇರೆ ದಾರಿಯೇ ಕಾಣಲಿಲ್ಲ' ಎಂದಿದ್ದಾರೆ.

ಪ್ರಾಣಾಪಾಯದಿಂದ ಪಾರಾದ ಜಯಂತ್ ಕುಶ್ವಾಹ ಎಂಬುವರು ಮಾಧ್ಯಮದವರೊಂದಿಗೆ ಮಾತನಾಡಿ, 'ಬಸ್ಸಿನಲ್ಲಿದ್ದವರೆಲ್ಲರೂ ದುರಂತ ನಡೆಯುವ ಸಮಯದಲ್ಲಿ ನಿದ್ರಿಸುತ್ತಿದ್ದರು. ಬಸ್‌ಗೆ ಬೆಂಕಿ ಹತ್ತಿದಾಕ್ಷಣ ನಾವು ಎಲ್ಲರನ್ನೂ ಎಬ್ಬಿಸಿದೆವು. ಮುಖ್ಯ ಬಾಗಿಲು ಲಾಕ್ ಆಗಿ ಜಖಂಗೊಂಡ ಕಾರಣ ಪ್ರಯಾಣಿಕರು ತುರ್ತು ಕಿಟಕಿ ಹಾಗೂ ಇನ್ನಿತರೆ ಕಿಟಕಿಗಳನ್ನು ಒಡೆದು ಬಸ್ಸಿನಿಂದ ಹೊರಗೆ ಹಾರಿದರು. ಆದರೆ ಕೆಲವೊಬ್ಬರು ಹೊರಬಾರದೆ ಪ್ರಾಣ ಬಿಟ್ಟಿದ್ದಾರೆ, ನಿಜಕ್ಕೂ ಇದು ಭೀಕರ ದುರಂತ' ಎಂದು ವಿಷಾದ ವ್ಯಕ್ತಪಡಿಸಿದರು.

ಡ್ರೈವರ್‌ಗೆ ಮಾಹಿತಿ: ಅಪಾಯದಿಂದ ಪಾರಾದ ಮತ್ತೊರ್ವ ಪ್ರಯಾಣಿಕ ಅಶ್ವಿನ್ ಮಾತನಾಡಿ, 'ಗುರುವಾರ ರಾತ್ರಿ, ನಾವು ಬೆಂಗಳೂರಿಗೆ ಪ್ರಯಾಣಿಸಲು ಕುಕತ್ಪಲ್ಲಿಯಲ್ಲಿ ಬಸ್ ಹತ್ತಿದೆವು. ನಾನು ಚಾಲಕನ ಸೀಟಿನ ಹಿಂದೆ ಕುಳಿತಿದ್ದೆ. ದೀರ್ಘ ಪ್ರಯಾಣದ ನಂತರ, ಮಧ್ಯರಾತ್ರಿ 2:30ರಿಂದ 3:30ರ ನಡುವೆ ಕಿಟಕಿಯ ಬದಿಯಲ್ಲಿ ಬೆಂಕಿ ಕಾಣಿಸಿಕೊಂಡಿರುವುದನ್ನು ನಾನು ಗಮನಿಸಿ ತಕ್ಷಣ ಚಾಲಕನಿಗೆ ಎಚ್ಚರಿಕೆ ನೀಡಿದೆ. ಬಸ್ ಅನ್ನು ತಕ್ಷಣವೇ ನಿಲ್ಲಿಸಲಾಯಿತು. ಈ ಮಧ್ಯೆ ನಾವು ತಪ್ಪಿಸಿಕೊಳ್ಳಲು ಕಿಟಕಿಗಳನ್ನು ಒಡೆಯಲು ಪ್ರಯತ್ನಿಸಿದೆ. ಸುಮಾರು 20 ಜನರು ಬಸ್ಸಿನಿಂದ ಹೊರಬರುವಲ್ಲಿ ಯಶಸ್ವಿಯಾದರು, ಆದರೆ ಇತರರು ತಪ್ಪಿಸಿಕೊಳ್ಳಲು ಸಾಧ್ಯವಾಗಲಿಲ್ಲ' ಎಂದಿದ್ದಾರೆ.

ದುರಂತ ಹೇಗಾಯ್ತು?: ಬಸ್‌ಗೆ ಢಿಕ್ಕಿ ಹೊಡೆದ ಬೈಕ್‌ನಲ್ಲಿದ್ದ ವ್ಯಕ್ತಿಯನ್ನು ಶಿವಶಂಕರ್ ಎಂದು ಗುರುತಿಸಲಾಗಿದೆ. ಬಸ್ಸು ಮತ್ತು ಬೈಕ್ ಒಂದೇ ದಿಕ್ಕಿನಲ್ಲಿ ಪ್ರಯಾಣಿಸುತ್ತಿತ್ತು. ವೇಗವಾಗಿ ಬರುತ್ತಿದ್ದ ಬಸ್ಸು ಮೊದಲು ಹಿಂಬದಿಯಿಂದ ಬೈಕಿಗೆ ಡಿಕ್ಕಿ ಹೊಡೆದಿದೆ. ಆ ರಭಸಕ್ಕೆ ಬೈಕ್ ಕೆಳಗಡೆ ಬಿದ್ದಿದೆ, ಆದರೂ ಚಾಲಕ ಬಸ್ಸನ್ನು ವೇಗವಾಗಿ ಚಲಾಯಿಸಿದ್ದಾನೆ. ಕೆಳಭಾಗದಲ್ಲಿ ಸಿಲುಕಿಕೊಂಡಿದ್ದ ಬೈಕನ್ನು ಬಸ್ಸು 300 ಮೀ. ದೂರದವರೆಗೆ ಎಳೆದುಕೊಂಡು ಹೋಗಿದೆ. ಆ ವೇಳೆ ಬೈಕಿನಲ್ಲಿದ್ದ ಪೆಟ್ರೋಲ್ ಕೆಳಕ್ಕೆ ಚೆಲ್ಲಿದೆ. ರಸ್ತೆಯಲ್ಲಿ ಬೈಕನ್ನು ಎಳೆದುಕೊಂಡು ಹೋಗಿದ್ದರಿಂದ ಘರ್ಷಣೆಯಿಂದಾಗಿ ಕಿಡಿ ಹೊತ್ತಿದೆ. ಬೆಂಕಿಯ ಕಿಡಿ ಡೀಸೆಲ್ ಟ್ಯಾಂಕ್ ಮೇಲೆ ಚಿಮ್ಮಿದೆ. ಟ್ಯಾಂಕ್‌ಗೆ ಕಿಡಿ ಚಿಮ್ಮಿದ ಕೂಡಲೇ ಬೆಂಕಿ ಹೊತ್ತಿಕೊಂಡು ಟ್ಯಾಂಕ್ ಸ್ಫೋಟಗೊಂಡಿದೆ. ಸ್ಫೋಟದ ರಭಸಕ್ಕೆ ಡೀಸೆಲ್ ಮೇಲ್ಗಡೆ ಹಾರಿದ್ದರಿಂದ ಸುಲಭವಾಗಿ ಬೆಂಕಿ ಹರಡಿ ಕ್ಷಣಮಾತ್ರದಲ್ಲಿ ಬಸ್ಸು ಧಗಧಗಿಸಿದೆ.

ಕೆಲವು ಶವಗಳು ಗುರುತು ಪತ್ತೆ ಮಾಡಲಾಗದಷ್ಟು ಸಂಪೂರ್ಣವಾಗಿ ಸುಟ್ಟುಹೋಗಿವೆ. ಆಂಧ್ರಪ್ರದೇಶ ಸಾರಿಗೆ ಅಧಿಕಾರಿಗಳು ಈ ಪ್ರಕರಣದ ಕುರಿತು ತೀವ್ರ ತನಿಖೆ ನಡೆಸುತ್ತಿದ್ದಾರೆ ಎಂದು ಟಿಡಿಪಿ ಸಂಸದ ಬೈರೆಡ್ಡಿ ಶಬರಿ ಹೇಳಿದ್ದಾರೆ.



ಪಾರಾದ ಬೆಂಗಳೂರಿನ ಟೆಕ್ಕಿ

ಬಸ್‌ನಲ್ಲಿ ಪ್ರಯಾಣ ಮಾಡಿದ್ದ ಬೆಂಗಳೂರಿನ ಸಾಫ್ಟ್‌ವೇರ್ ಉದ್ಯೋಗಿ ವೇಣು ಗೊಂಡ ಕೂದಲೆಳೆ ಅಂತರದಲ್ಲಿ ಪಾರಾಗಿದ್ದಾರೆ. ಈ ಕುರಿತು ಮಾಧ್ಯಮಗಳೊಂದಿಗೆ ಮಾತನಾಡಿರುವ ಅವರು, ನಾನು ಮತ್ತು ನನ್ನ ಸಹ ಪ್ರಯಾಣಿಕರು ಎಮರ್ಜೆನ್ಸಿ ಎಕ್ಸಿಟ್ ಕಿಟಕಿ ಗ್ಲಾಸ್ ಒಡೆದು ಪಾರಾಗಿದ್ದೇವೆ. ಆದರೆ ನಮ್ಮ ಕಣ್ಣ ಮುಂದೆಯೇ ಬಸ್ ನಲ್ಲಿದ್ದ ಸಹ ಪ್ರಯಾಣಿಕರು ಹೊತ್ತಿ ಉರಿದರೂ ನಾವು ಏನೂ ಮಾಡಲಾಗಲಿಲ್ಲ ಎಂದು ಅಸಹಾಯಕತೆ ವ್ಯಕ್ತಪಡಿಸಿದ್ದಾರೆ. ವೇಣು ಗೊಂಡ ಹೇಳಿಕೆಯ ಪ್ರಕಾರ, ಬಸ್ ಮೊದಲು ಟೂ-ವ್ಹೀಲರ್‌ಗೆ ಡಿಕ್ಕಿ ಹೊಡೆದು ಬಳಿಕ ಬಾಂಬ್ ಸ್ಫೋಟದಂತ ಶಬ್ದದೊಂದಿಗೆ ಬೆಂಕಿ ಹೊತ್ತಿಕೊಂಡಿದೆ. ಸುಮಾರು 45 ನಿಮಿಷಗಳ ಬಳಿಕ ಫೈರ್‌ಫೋರ್ಸ್ ಸ್ಥಳಕ್ಕೆ ತಲುಪಿದೆ. ಅಷ್ಟರೊಳಗೆ ಹಲವರು ಬೆಂಕಿಗಾಹುತಿಯಾಗಿದ್ದಾರೆ.

ಸಾವಿನ ಮನೆ ಕದ ತಟ್ಟಿದ ಕುಟುಂಬ

ಬಸ್ ದುರಂತದಲ್ಲಿ ಬೆಂಗಳೂರಿನಲ್ಲಿ ನೆಲೆಸಿದ್ದ ನೆಲ್ಲೂರು ಜಿಲ್ಲೆಯ ಒಂದೇ ಕುಟುಂಬದ ನಾಲ್ವರು ಸಜೀವದಹನವಾಗಿದ್ದಾರೆ. ನಿದ್ರೆ ಮಂಪರಿನಲ್ಲಿದ್ದ ಸುಂದರ ಕುಟುಂಬ ಬೆಳಗಿನ ಸೂರ್ಯೋದಯ ನೋಡುವುದಕ್ಕೆ ಮುನ್ನವೇ ಸಾವಿನ ಮನೆಗೆ ಪ್ರಯಾಣಿಸಿದೆ.

ಗೊಲ್ಲ ರಮೇಶ್ (35), ಅನುಷಾ (30), ಮಾನ್ವಿತಾ (10) ಹಾಗೂ ಮನೀಶ್ (12) ಮೃತ ದುರ್ದೈವಿಗಳು. ಇವರು ಮೂಲತಃ ನೆಲ್ಲೂರು ಜಿಲ್ಲೆಯ ವಿಂಜಾಮುರು ಮಂಡಲದ ಗೊಲ್ಲವರಿಪಳ್ಳಿಯವರು. ಗೊಲ್ಲ ರಮೇಶ್ ಕುಟುಂಬವು ಬೆಂಗಳೂರಿನಲ್ಲಿ ನೆಲೆಸಿತ್ತು. ವಿಷಯ ತಿಳಿದು ಗೊಲ್ಲವರಿಪಳ್ಳಿಯ ಕುಟುಂಬದಲ್ಲಿ ಆಕ್ರಂದನ ಮುಗಿಲುಮುಟ್ಟಿದೆ. ಪ್ರಾಥಮಿಕ ಮಾಹಿತಿ ಪ್ರಕಾರ, ಗೊಲ್ಲ ರಮೇಶ್ ಕುಟುಂಬ ದೀಪಾವಳಿ ಹಬ್ಬ ಆಚರಣೆಗೆ ನೆಲ್ಲೂರಿಗೆ ತೆರಳಿತ್ತು ಎನ್ನಲಾಗಿದೆ.

ಸಮಾಚಾರ ಸಣ್ಣದಲ್ಲ

ಜನಸೇವಾ ಎಕ್ಸ್‌ಪ್ರೆಸ್ ರೈಲಿನಲ್ಲಿ ಬೆಂಕಿ

ದೆಹಲಿ: ಶುಕ್ರವಾರ ಸಂಜೆ ಬಿಹಾರದ ಸೋನ್‌ಬರ್ಸಾ ಕಚಹರಿ ನಿಲ್ದಾಣದ ಬಳಿ ಅಮೃತಸರದಿಂದ ಸಹರ್ಸಾಗೆ ಪ್ರಯಾಣಿಸುತ್ತಿದ್ದ ಜನಸೇವಾ ಎಕ್ಸ್‌ಪ್ರೆಸ್‌ನಲ್ಲಿ ಬೆಂಕಿ ಕಾಣಿಸಿಕೊಂಡಿದೆ. ಜನರಲ್ ಕಂಪಾರ್ಟ್‌ಮೆಂಟ್ ಕೋಚ್ ಒಂದರಿಂದ ಹೊಗೆ ಬರುತ್ತಿರುವುದು ಕಂಡುಬಂದ ತಕ್ಷಣ ಅಲರ್ಟ್ ಮಾಡಲಾಗಿದೆ. ಈ ಘಟನೆ ಸಂಜೆ 7 ಗಂಟೆ ಸುಮಾರಿಗೆ ಸಂಭವಿಸಿದ್ದು, ಎಲ್ಲಾ ಪ್ರಯಾಣಿಕರನ್ನು ಸುರಕ್ಷಿತವಾಗಿ ಸ್ಥಳಾಂತರಿಸಲಾಗಿದೆ. ಬೆಂಕಿ ಹೊತ್ತಿಕೊಂಡ ಕೋಚ್ ಅನ್ನು ರೈಲಿನಿಂದ ಬೇರ್ಪಡಿಸಲಾಗಿದೆ. ಸಿಗರೇಟ್ ಅಥವಾ ಮೊಬೈಲ್ ಫೋನ್ ಸ್ಫೋಟದಿಂದ ಈ ಬೆಂಕಿ ಅವಘಡ ಸಂಭವಿಸಿದೆ ಎನ್ನಲಾಗಿದೆ. ಇನ್ನೂ ಕೆಲವು ವರದಿಗಳು ಬೆಂಕಿಗೆ ವಿದ್ಯುತ್ ಶಾರ್ಟ್ ಸರ್ಕಿಟ್ ಕಾರಣ ಎಂದು ಸೂಚಿಸುತ್ತವೆ. ಬೆಂಕಿಯ ನಿಜವಾದ ಕಾರಣವನ್ನು ಪತ್ತೆಹಚ್ಚಲು ವಿಧಿವಿಜ್ಞಾನ ತಂಡವು ಪರಿಶೀಲನೆ ನಡೆಸುತ್ತಿದೆ. ಘಟನೆಯ ನಂತರ ರೈಲು ಸಹರ್ಸಾ ನಿಲ್ದಾಣವನ್ನು ಸುರಕ್ಷಿತವಾಗಿ ತಲುಪಿತು. ಯಾವುದೇ ಸಾವು ನೋವುಗಳು ವರದಿಯಾಗಿಲ್ಲ, ಒಬ್ಬ ಪ್ರಯಾಣಿಕನಿಗೆ ಸಣ್ಣಪುಟ್ಟ ಸುಟ್ಟ ಗಾಯಗಳಾಗಿವೆ.

ಇಬ್ಬರು ಐಸಿಸಿ ಉಗ್ರರ ಬಂಧನ

ದೆಹಲಿ: ಇಸ್ಲಾಮಿಕ್ ಸ್ಟೇಟ್ ಆಫ್ ಇರಾಕ್ ಮತ್ತು ಸಿರಿಯಾದೊಂದಿಗೆ ನಂಟು ಹೊಂದಿರುವ ಉಗ್ರ ಸಂಘಟನೆಯ ಚಟುವಟಿಕೆಯನ್ನು ದೆಹಲಿ ಪೊಲೀಸರು ಭೇದಿಸಿದ್ದಾರೆ. ಈ ಜಾಲದಲ್ಲಿದ್ದ ಇಬ್ಬರು ಶಂಕಿತ ಭಯೋತ್ಪಾದಕರನ್ನು ಪೊಲೀಸರು ಬಂಧಿಸಿದ್ದಾರೆ. ಈ ಬಂಧನಗಳು ದೆಹಲಿಯಲ್ಲಿ ಸಂಭವನೀಯ ಭಯೋತ್ಪಾದಕ ದಾಳಿಯನ್ನು ತಪ್ಪಿಸಿವೆ. ಬಂಧಿತರ ಪೈಕಿ ಓರ್ವ ಅದ್ನಾನ್ ಮಧ್ಯ ಪ್ರದೇಶದ ಭೋಪಾಲ್ ಮೂಲದವನಾಗಿದ್ದು, ಮತ್ತೊಬ್ಬ ಆರೋಪಿ ದೆಹಲಿಯವನು ಎಂದು ತಿಳಿದು ಬಂದಿದೆ. ದೆಹಲಿಯ ಸಾದಿಕ್ ನಗರ ಮತ್ತು ಭೋಪಾಲ್‌ನಲ್ಲಿ ನಡೆದ ಸಂಘಟಿತ ಕಾರ್ಯಾಚರಣೆಯಲ್ಲಿ ಮಾಹಿತಿ ಪಡೆದ ನಂತರ ಇಬ್ಬರನ್ನು ಬಂಧಿಸಲಾಗಿದೆ. ಶಂಕಿತರು ಪಾಕಿಸ್ತಾನದೊಂದಿಗೆ ಸಂಪರ್ಕ ಹೊಂದಿರಬಹುದು ಎಂದು ಪೊಲೀಸರು ತಿಳಿಸಿದ್ದಾರೆ. ಆರೋಪಿಗಳು ಐಸಿಸ್ ಜೊತೆ ಸಂಬಂಧ ಹೊಂದಿದ್ದಾರೆ ಮತ್ತು ದೆಹಲಿಯಲ್ಲಿ ಪ್ರಮುಖ ಭಯೋತ್ಪಾದಕ ದಾಳಿಯನ್ನು ಯೋಜಿಸುತ್ತಿದ್ದಾರೆ ಎಂದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ. ಅವರಿಂದ ಎಲೆಕ್ಟ್ರಾನಿಕ್ ಸಾಧನಗಳು ಮತ್ತು ಅಪರಾಧ ಸಾಮಗ್ರಿಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಪಾಕಿಸ್ತಾನ ವಿರುದ್ಧ ಆಫ್ಘಾನ್ ಜಲಾಸ್ತ್ರ

ಕಾಬೂಲ್: ಭಾರತದ ನಂತರ ತಾಲಿಬಾನ್ ಆಳ್ವಿಕೆಯ ಅಫ್ಘಾನಿಸ್ತಾನವು ತನ್ನ ಭೂಪ್ರದೇಶದಲ್ಲಿ ಅಣೆಕಟ್ಟುಗಳನ್ನು ನಿರ್ಮಿಸುವ ಮೂಲಕ ಪಾಕಿಸ್ತಾನಕ್ಕೆ ನೀರಿನ ಹರಿವು ತಡೆಯಲು ಯೋಚಿಸುತ್ತಿದೆ. ತಾಲಿಬಾನ್ ಸರ್ವೋಚ್ಚ ನಾಯಕ ಹಿಬತುಲ್ಲಾ ಅಖುಂಡ್ಜಾದಾ ಅವರು, ಕುನಾರ್ ನದಿಗೆ ಅಡ್ಡಲಾಗಿ ಅಣೆಕಟ್ಟು ನಿರ್ಮಿಸುವಂತೆ ಆದೇಶಿಸಿದ್ದಾರೆ. ಕುನಾರ್‌ನಲ್ಲಿ ಅಣೆಕಟ್ಟುಗಳ ನಿರ್ಮಾಣವನ್ನು ಸಾಧ್ಯವಾದಷ್ಟು ಬೇಗ ಪ್ರಾರಂಭಿಸಬೇಕು, ವಿದೇಶಿ ಕಂಪನಿಗಳಿಗೆ ಕಾಯದೇ ಆಂತರಿಕ ಕಂಪನಿಗಳೊಂದಿಗೆ ಒಪ್ಪಂದ ಮಾಡಿಕೊಳ್ಳಲು ಸೂಚನೆ ನೀಡಿದ್ದಾರೆ ಎಂದು ತಾಲಿಬಾನ್ ಜಲ ಸಚಿವ ಅಬ್ದುಲ್ ಲತೀಫ್ ಮನ್ಸೂರ್ ತಿಳಿಸಿದ್ದಾರೆ. ಅಫ್ಘನ್ನರು ತಮ್ಮದೇ ಆದ ಜಲ ಸಂಪನ್ಮೂಲಗಳನ್ನು ನಿರ್ವಹಿಸುವ ಹಕ್ಕು ಹೊಂದಿದ್ದಾರೆ. ನೀರು ಮತ್ತು ನದಿ ಒಟ್ಟಿಗೆ ಹರಿಯಲು ಸಾಧ್ಯವಿಲ್ಲ ಅಂತ ಮನ್ಸೂರ್ ಪ್ರತಿಪಾದಿಸಿದ್ದಾರೆ. ಕಳೆದ ಮೇ ತಿಂಗಳಲ್ಲಿ ತಾಲಿಬಾನ್ ಆಡಳಿತದ ಸೇನಾ ಜನರಲ್ ಮುಬಿನ್, ಕುನಾರ್ ಪ್ರದೇಶಕ್ಕೆ ಭೇಟಿ ನೀಡಿ ಸ್ಥಳ ಪರಿಶೀಲಿಸಿದ್ದರು. ಬಳಿಕ ಹಣ ಸಂಗ್ರಹಿಸಿ ಅಣೆಕಟ್ಟು ನಿರ್ಮಿಸಲು ತಾಲಿಬಾನ್ ಸರಕಾರಕ್ಕೆ ಒತ್ತಾಯಿಸಿದ್ದರು.

ಕುನಾರ್ ನದಿಯ ಮಹತ್ವ: ಕುನಾರ್ ಪಾಕಿಸ್ತಾನದ ಚಿತ್ರಾಲ್ ಪ್ರದೇಶದಿಂದ ಉಗಮವಾಗುವ 480 ಕಿ.ಮೀ ಉದ್ದದ ನದಿಯಾಗಿದೆ. ಇದು ಅಫ್ಘಾನಿಸ್ತಾನದ ನಂಗಹಾರ್ ಮತ್ತು ಕುನಾರ್ ಪ್ರಾಂತ್ಯಗಳ ಮೂಲಕ ಹಾದುಹೋಗಲಿದ್ದು, ಸಿಂಧೂ ನದಿಯನ್ನು ಸೇರುತ್ತದೆ.

{ ಎಸ್. ಜೈಶಂಕರ್ } ವಿದೇಶಾಂಗ ಸಚಿವ

ಭಯೋತ್ಪಾದನೆಗೆ ಬಲಿಪಶುವಾದವರನ್ನು ಮತ್ತು ಭಯೋತ್ಪಾದಕರನ್ನು ಸಮಾನವಾಗಿ ನೋಡಲು ಸಾಧ್ಯವಿಲ್ಲ. ವಿಶ್ವಸಂಸೆಯ ಚರ್ಚೆಗಳು ಈಗ ಹೆಚ್ಚು ಧ್ರುವೀಕರಣಗೊಂಡಿವೆ. ಭಯೋತ್ಪಾದನೆ ಸೇರಿದಂತೆ ಸುಸ್ಥಿರ ಪರಿಹಾರ ಹುಡುಕಬೇಕಾದ ವಿಶ್ವಸಂಸ್ಥೆಯೇ ಬಿಕ್ಕಟ್ಟಿನಲ್ಲಿರುವಂತೆ ಕಾಣುತ್ತದೆ.

ರಾಜ್ಯದ ಪೊಲೀಸರಿಗೆ ಡಿಜಿ, ಐಜಿಪಿ ಎಂಎ ಸಲೀಂ ಸುತ್ತೋಲೆ

ಜನರ ಜತೆ ಸೌಜನ್ಯದಿಂದ ವರ್ತಿಸಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಇತ್ತೀಚೆಗೆ ಪೊಲೀಸರು ಕೆಲ ಸಂದರ್ಭಗಳಲ್ಲಿ ಸಾರ್ವಜನಿಕರನ್ನು ಭಯ ಬೀಳಿಸುವಂತಹ ಘಟನೆಗಳು ವರದಿಯಾಗುತ್ತಿರುವ ಹಿನ್ನೆಲೆಯಲ್ಲಿ ಜನರ ಜತೆಗೆ ಸೌಜನ್ಯದಿಂದ ವರ್ತಿಸುವಂತೆ ರಾಜ್ಯದ ಪೊಲೀಸ ರಿಗೆ ಡಿಜಿ ಮತ್ತು ಐಜಿಪಿ ಎಂಎ ಸಲೀಂ ಸುತ್ತೋಲೆ ಹೊರಡಿಸಿದ್ದಾರೆ.

ಸುತ್ತೋಲೆಯಲ್ಲಿ ಏನಿದೆ?: ಕಾರ್ಯವಿಧಾನಗಳಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳಬೇಕು. ಪೊಲೀಸ್ ಠಾಣೆಗೆ ಭೇಟಿ ನೀಡುವ ಯಾವುದೇ ವ್ಯಕ್ತಿಯ ಹಿನ್ನೆಲೆಯನ್ನು ಗಮನಿಸಬಾರದು. ಎಲ್ಲರನ್ನೂ ಸಮಾನವಾಗಿ ಪರಿಗಣಿಸಬೇಕು. ಸಾರ್ವಜನಿಕರ ಕುಂದುಕೊರತೆ ತಾಳ್ಮೆಯಿಂದ ಆಲಿಸಬೇಕು. ಕಾನೂನಿನ ಪ್ರಕಾರ ಕಾಲವಿಳಂಬವಿಲ್ಲದೇ ದೂರು ದಾಖಲಿಸಬೇಕು. ಸಾರ್ವಜನಿಕರೊಂದಿಗೆ ಮಾತನಾಡುವಾಗ ಒರಟು ಭಾಷೆ ಬೇಡ, ಯಾವಾಗಲೂ ಸೌಜನ್ಯ ಮತ್ತು ಘನತೆಯಿಂದ ವರ್ತಿಸಬೇಕು. ಯಾವ ಸಂದರ್ಭದಲ್ಲೂ ಯಾವುದೇ ವ್ಯಕ್ತಿ ಅಥವಾ ಸಂಸ್ಥೆಗಳಿಂದ, ಯಾವುದೇ ರೀತಿಯ ಬೇಡಿಕೆ ಇಡುವುದರಿಂದ ಅಥವಾ ಯಾವುದೇ ಅಕ್ರಮ ಸಹಾಯ, ಲಾಭವನ್ನು ಸ್ವೀಕರಿಸುವುದರಿಂದ ಸಂಪೂರ್ಣವಾಗಿ ದೂರವಿರಬೇಕು. ಕರ್ತವ್ಯದ ಸಮಯದಲ್ಲಿ, ಕರ್ತವ್ಯ ಮುಗಿದ ನಂತರವೂ ನೈತಿಕವಾಗಿ ಇತರರಿಗೆ ಮಾದರಿಯಾಗುವಂತೆ ಇದ್ದು ಇಲಾಖೆಯ ನೀತಿ ನಿಯಮ ಎತ್ತಿಹಿಡಿಯಬೇಕು.

ಸ್ಟೇಷನ್ ಹೌಸ್ ಡೈರಿಗಳು ಮತ್ತು ಕೇಸ್ ಫೈಲ್‌ಗಳಲ್ಲಿ ನಿಖರ ಮತ್ತು ಕೇಂದ್ರೀಕರಿಸಿದ ದಾಖಲೆಗಳನ್ನು ಕಾಯ್ದುಕೊಳ್ಳಬೇಕು ಮತ್ತು ಸಮಗ್ರವಾಗಿ ನಿರ್ವಹಿಸಬೇಕು. ತನಿಖಾ ಪ್ರಕ್ರಿಯೆಗಳಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳುವುದು ಮತ್ತು ಪ್ರತಿ ಹಂತದಲ್ಲೂ ಜವಾಬ್ದಾರಿಯಿಂದ ಕಾರ್ಯನಿರ್ವಹಣೆ ಮಾಡಬೇಕು. ಯಾವುದೇ ನಾಗರಿಕರಿಗೆ ಅನಗತ್ಯವಾಗಿ ತೊಂದರೆ ನೀಡಬಾರದು. ಸಂತ್ರಸ್ಥರು, ಮಹಿಳೆಯರು, ಹಿರಿಯ ನಾಗರಿಕರಿಗೆ ಮತ್ತು ಮಕ್ಕಳೊಂದಿಗೆ ವಿಶೇಷ ಕಾಳಜಿಯಿಂದ ಮತ್ತು ಸೂಕ್ಷ್ಮತೆಯಿಂದ ವರ್ತಿಸಬೇಕು. ಸಾರ್ವಜನಿಕರ ದೂರುಗಳ ಸ್ಥಿತಿ ಮತ್ತು ಬಾಕಿ ಇರುವ ಪ್ರಕರಣಗಳ ಕುರಿತು ನಾಗರಿಕರಿಗೆ ಮಾಹಿತಿ ನೀಡಬೇಕು. ಕರ್ತವ್ಯಕ್ಕೆ ಹಾಜರಾಗುವುದು ಮತ್ತು ಅಧಿಕೃತ ಕಾರ್ಯ ನಿರ್ವಹಿಸುವಲ್ಲಿ ಶಿಸ್ತಿನಿಂದ ಸಮಯ ಪಾಲನೆ ಮಾಡಬೇಕು.

ಪೊಲೀಸ್-ಸಾರ್ವಜನಿಕ ಸಂವಹನದಲ್ಲಿ ನ್ಯಾಯಸಮ್ಮತೆಯನ್ನು ಎತ್ತಿಹಿಡಿಯಲು ಸಮವಸ್ತ್ರದ ಮೇಲೆ ಧರಿಸುವ ಕ್ಯಾಮೆರಾಗಳನ್ನು ಮತ್ತು ಲಭ್ಯವಿರುವ ತಂತ್ರಜ್ಞಾನಗಳನ್ನು ಜವಾಬ್ದಾರಿಯುತವಾಗಿ ಬಳಸಿಕೊಳ್ಳಬೇಕು. ಎಲ್ಲಾ ಅಧಿಕೃತ ವಿಷಯಗಳಲ್ಲಿ ನ್ಯಾಯಾಂಗ ಮತ್ತು ಆಡಳಿತಾತ್ಮಕ ಅಧಿಕಾರಿಗಳಿಗೆ ಪೂರ್ಣ ಸಹಕಾರವನ್ನು ನೀಡಿ, ಶೋಧ, ಬಂಧನ ಅಥವಾ ವಿಚಾರಣೆಯ ಸಮಯದಲ್ಲಿ ಸಾರ್ವಜನಿಕರ ಖಾಸಗಿತನ ಮತ್ತು ಘನತೆಯನ್ನು ಗೌರವಿಸಿ, ಅಧಿಕಾರದ ದುರುಪಯೋಗ ಅಥವಾ ದೌರ್ಜನ್ಯದಿಂದ ದೂರವಿರಿ ಮತ್ತು ಸದ್ವರ್ತನೆಗೆ ಮಾದರಿಯಾಗಿರಿ. ಸಮುದಾಯದಲ್ಲಿ ಸಕ್ರಿಯವಾಗಿ ಭಾಗವಹಿಸಿ ಮತ್ತು ಸಾರ್ವಜನಿಕ ಜಾಗೃತಿ ಕಾರ್ಯಕ್ರಮ ಆಯೋಜಿಸಿ, ಪಾರದರ್ಶಕ, ಕಾನೂನುಬದ್ಧ ಮತ್ತು ಸಹಾನುಭೂತಿಯ ಪೊಲೀಸಿಂಗ್ ಅಭ್ಯಾಸಗಳ ಮೂಲಕ ಸಾರ್ವಜನಿಕರ ವಿಶ್ವಾಸ ಹೆಚ್ಚಿಸಿಕೊಳ್ಳಬೇಕು. ಪೊಲೀಸ್ ಕಾರ್ಯಗಳ ಮೇಲೆ ಪ್ರಭಾವ ಬೀರುವ ಅಥವಾ ಭ್ರಷ್ಟಗೊಳಿಸುವ ಯಾವುದೇ ಪ್ರಯತ್ನ ಕಂಡುಬಂದಲ್ಲಿ ಈ ಬಗ್ಗೆ ಹಿರಿಯ ಅಧಿಕಾರಿಗಳಿಗೆ ಮಾಹಿತಿ ನೀಡಬೇಕು. ಬೇರೆ ಠಾಣಾ ವ್ಯಾಪ್ತಿಯ ದೂರು ಬಂದಲ್ಲಿ ದೂರುದಾರರನ್ನು ಸಂಬಂಧಿಸಿದ ಠಾಣೆಗೆ ಹೋಗಿ ದೂರು ನೀಡುವಂತೆ ಹೇಳದೇ, ಠಾಣೆಯಲ್ಲಿ ಶೂನ್ಯ ಪ್ರ.ವ. ವರದಿ ದಾಖಲಿಸಿ ಆ ನಂತರ ವ್ಯಾಪ್ತಿಯ ಆಧಾರದ ಮೇಲೆ ಸಂಬಂಧಪಟ್ಟ ಠಾಣೆಗ ದೂರನ್ನು ವರ್ಗಾಯಿಸುವುದು.

ಮಹಿಳೆಯು ಒಂದು ವೇಳೆ ಆರೋಪಿಯಾಗಿದ್ದಲ್ಲಿ ಅಥವಾ ಸಂತ್ರಸ್ಥೆಯಾಗಿದ್ದಲ್ಲಿ ಆಕೆಯನ್ನು ಮಹಿಳಾ ಪೊಲೀಸ್ ಅಧಿಕಾರಿಯ ನೆರವಿನೊಂದಿಗೆ, ಮಹಿಳೆಯ ವಾಸದ ಸ್ಥಳ, ಮನೆಯಲ್ಲಿಯೇ ವಿಚಾರಣೆ ಮಾಡಬೇಕು. ಕ್ರಿಮಿನಲ್ ಪ್ರಕರಣಗಳಲ್ಲಿ ಮಹಿಳೆಯರು ಭಾಗಿಯಾದಾಗ ಅವರನ್ನು ಬಂಧಿಸಿ ವಿಚಾರಣೆ ನಡೆಸಿದಾಗ, ಅವರಿಗೆ ಯಾವುದೇ ಅವಮಾನಕ್ಕೆ ಒಳಗಾಗದಂತೆ ನೋಡಿಕೊಳ್ಳಬೇಕು ಮತ್ತು ಅವರನ್ನು ಪೊಲೀಸ್ ಠಾಣೆಯಲ್ಲಿ ಇರಿಸಬಾರದು. ಬದಲಿಗೆ ಅವರನ್ನು ರಾಜ್ಯ ಗೃಹ (ಸ್ಟೇಟ್ ಹೋಮ್) ಆಶ್ರಯ ತಾಣಗಳಲ್ಲಿ ಇರಿಸಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಇಲಾಖೆಯ ಘನತೆ ಕಾಪಾಡಲು ಸಲಹೆ

ಪಾರದರ್ಶಕತೆ, ಸೌಜನ್ಯದ ವರ್ತನೆ ಮತ್ತು ನಿಷ್ಠೆಯಿಂದ ಕೆಲಸ ಮಾಡುವುದು. ಪೊಲೀಸರ ನಡವಳಿಕೆಯಲ್ಲಿ ಸೌಜನ್ಯ ಮತ್ತು ಘನತೆ ಎದ್ದು ಕಾಣಬೇಕು. ಸಾರ್ವಜನಿಕರ ಮೇಲೆ ಬಲ ಪ್ರಯೋಗ ಮಾಡುವುದು ಅಥವಾ ದರ್ಪದಿಂದ ವರ್ತಿಸುವುದು ಇಲಾಖೆಯ ಘನತೆಗೆ ತಕ್ಕುದಾದ ನಡವಳಿಕೆಯಲ್ಲ. ಹಕ್ಕುಗಳಿಗೆ ಗೌರವ ನೀಡುವುದು ಮತ್ತು ಸಂಯಮದಿಂದ ವರ್ತಿಸಬೇಕು. ಇದು ಇಲಾಖೆಯ ಘನತೆ ಹೆಚ್ಚಿಸಿ ಜನರಲ್ಲಿ ಬಗ್ಗೆ ಗೌರವ ಮೂಡುವಂತೆ ಮಾಡುತ್ತದೆ ಎಂದು ಡಿಜಿ, ಐಜಿಪಿ ಎಂಎ ಸಲೀಂ ತಿಳಿಸಿದ್ದಾರೆ.

ಯುಎಇಗೆ 3 ದಿನಗಳ ಭೇಟಿಗಾಗಿ ತೆರಳಿರುವ ಆಂಧ್ರ ಸಿಎಂ

ಅಬುದಾಬಿ ಮಂದಿರಕ್ಕೆ ಚಂದ್ರಬಾಬು ಭೇಟಿ

ಅಬುಧಾಬಿ: ಆಂಧ್ರಪ್ರದೇಶದ ಸಿಎಂ ಚಂದ್ರಬಾಬು ನಾಯ್ಡು ಯುನೈಟೆಡ್ ಅರಬ್ ಎಮಿರೇಟ್ಸ್‌ಗೆ (ಯುಎಇ) ಭೇಟಿ ನೀಡಿದ್ದಾರೆ. ಯುಎಇಗೆ 3 ದಿನಗಳ ಭೇಟಿಗಾಗಿ ತೆರಳಿರುವ ಅವರು ಅಬುಧಾಬಿಯಲ್ಲಿರುವ ಬಿಎಪಿಎಸ್ (ಬೋಚಸಂವಾಸಿ ಅಕ್ಷರ ಪುರುಷೋತ್ತಮ ಸ್ವಾಮಿನಾರಾಯಣ ಸಂಸ್ಥೆ) ಹಿಂದೂ ಮಂದಿರಕ್ಕೆ ಭೇಟಿ ನೀಡಿದ್ದಾರೆ.

ಚಂದ್ರಬಾಬು ನಾಯ್ಡು ಅವರು, ಮಧ್ಯಪ್ರಾಚ್ಯದ ಮೊದಲ ಸಾಂಪ್ರದಾಯಿಕ ಕಲ್ಲಿನ ಹಿಂದೂ ದೇವಾಲಯದಲ್ಲಿ ಕೈಯಿಂದ ಕೆತ್ತಿದ ವಿಶಿಷ್ಟ ಲಕ್ಷಣಗಳನ್ನು ವೀಕ್ಷಿಸಿದ ನಂತರ ಭಾವಪರವಶರಾದರು. 'ಇದೊಂದು ಅದ್ಭುತವಾದ ಅನುಭವ. ಇದು ನಿಜವಾದ ಪವಾಡ' ಎಂದು ಅವರು ಹೇಳಿದ್ದಾರೆ.

ಚಂದ್ರಬಾಬು ನಾಯ್ಡು ಅವರಿಗೆ ಬಿಎಪಿಎಸ್ ಹಿಂದೂ ಮಂದಿರದ ಮುಖ್ಯಸ್ಥ ಬ್ರಹ್ಮ ವಿಹರಿದಾಸ್ ಸ್ವಾಮಿ ಮಾರ್ಗ ದರ್ಶನದ ಪ್ರವಾಸವನ್ನು ನೀಡಿದರು. ಅವರು ದೇವಾಲಯದ ವಿನ್ಯಾಸ, ನಿರ್ಮಾಣ ಮತ್ತು ಸಾಂಸ್ಕೃತಿಕ ವೈಶಿಷ್ಟ್ಯಗಳ ಬಗ್ಗೆ ವಿವರಿಸಿದರು. ಸಾಂಪ್ರದಾಯಿಕ ಮೌಲ್ಯಗಳನ್ನು ಕಳೆದುಕೊಳ್ಳದೆ ಆಧುನಿಕ ತಂತ್ರಗಳ ಮೂಲಕ ನಂಬಿಕೆಯನ್ನು ಹೇಗೆ ವ್ಯಕ್ತಪಡಿಸಬಹುದು ಎಂಬುದನ್ನು ಈ ಮಂದಿರವು ಪ್ರದರ್ಶಿಸಿದೆ ಎಂದು ಚಂದ್ರಬಾಬು ನಾಯ್ಡು ಹೇಳಿದ್ದಾರೆ.

ಅಬುದಾಬಿ ಭೇಟಿಯಲ್ಲಿರುವ ಆಂಧ್ರ ಸಿಎಂ ಚಂದ್ರಬಾಬು ನಾಯ್ಡು ಅವರು ಅಲ್ಲಿನ ಹಿಂದೂ ಮಂದಿರಕ್ಕೆ ಭೇಟಿ ಕೊಟ್ಟರು.

ತೆರಿಗೆ ವಂಚನೆ: 30ಕ್ಕೂ ಹೆಚ್ಚು ಖಾಸಗಿ ಬಸ್ ವಶ

ಬೆಂಗಳೂರು: ಬೇರೆ ಬೇರೆ ರಾಜ್ಯಗಳಲ್ಲಿ ನೋಂದಾಯಿಸಿಕೊಂಡು ತೆರಿಗೆ ವಂಚಿಸಿ, ರಾಜ್ಯದಲ್ಲಿ ಸಂಚರಿಸುತ್ತಿದ್ದ 30ಕ್ಕೂ ಹೆಚ್ಚು ಖಾಸಗಿ ಬಸ್‌ಗಳನ್ನು ಸಾರಿಗೆ ಇಲಾಖೆಯ ವಿಶೇಷ ಕಾರ್ಯಪಡೆ ವಶಕ್ಕೆ ಪಡೆದುಕೊಂಡಿದೆ.

ನಾಗಾಲ್ಯಾಂಡ್, ಅರುಣಾಚಲ ಪ್ರದೇಶ, ತಮಿಳು ನಾಡು, ಪಾಂಡೀಚೇರಿ ಸೇರಿ ವಿವಿಧ ರಾಜ್ಯಗಳಲ್ಲಿ ನೋಂದಣಿ ಮಾಡಿಸಿಕೊಂಡು ರಾಜ್ಯದಲ್ಲಿ ಸಂಚರಿಸುತ್ತಿರುವ ಹಲವು ಖಾಸಗಿ ಬಸ್‌ಗಳು ತೆರಿಗೆ ಪಾವತಿಸದೇ ವಂಚನೆ ಮಾಡುತ್ತಿರುವುದು ಬೆಳಕಿಗೆ ಬಂದಿದೆ. 2023ರ ಅಖಿಲ ಭಾರತ ಸಾರಿಗೆ ಪರವಾನಗಿ ನಿಯಮದಡಿ ಯಾವುದೇ ರಾಜ್ಯದಲ್ಲಿ ವಾಹನಗಳನ್ನು ಅದರಲ್ಲೂ ವಾಣಿಜ್ಯ ಉದ್ದೇಶಕ್ಕಾಗಿ ಖಾಸಗಿ ಬಸ್‌ಗಳನ್ನು ನೋಂದಾಯಿಸಿದರೆ ಶುಲ್ಕ 90 ಸಾವಿರ ರೂ.ಗಳನ್ನು ಶುಲ್ಕ ಪಾವತಿಸಬೇಕಾಗುತ್ತದೆ. ಆದರೆ ಇದು ಕೇವಲ ನೋಂದಣಿ ಶುಲ್ಕ ಮಾತ್ರವಾಗಿದ್ದು, ತೆರಿಗೆಯೆಂದು ಪರಿಗಣಿಸಲ್ಪಡುವುದಿಲ್ಲ. ಯಾವುದೇ ರಾಜ್ಯದಲ್ಲಿ ಬಸ್‌ಗಳು ಸಂಚರಿಸಬೇಕಾದರೂ ಆಯಾ ರಾಜ್ಯಕ್ಕೆ ಸಾರಿಗೆ ಇಲಾಖೆ ನಿಗದಿಪಡಿಸಿದ ತೆರಿಗೆಯನ್ನು ಪಾವತಿಸಬೇಕಿದೆ. ಆದರೆ ಬಹುತೇಕ ಟ್ರಾವೆಲ್ಸ್ ಸಂಸ್ಥೆಗಳು ತೆರಿಗೆ ಪಾವತಿಸದೇ ಹೊರ ರಾಜ್ಯದಲ್ಲಿ ನೋಂದಣಿಯ ವೇಳೆ ಪಾವತಿಸಿದ ಶುಲ್ಕದ ರಶೀದಿಯನ್ನೇ ತೋರಿಸಿ ತೆರಿಗೆ ಪಾವತಿಸದೇ ತಪ್ಪಿಸಿಕೊಳ್ಳುತ್ತಿರುವುದು ಕಂಡು ಬರುತ್ತಿದೆ. ಇಂತಹ ಬಸ್‌ಗಳನ್ನು ಬೆನ್ನತ್ತಿದ ಸಾರಿಗೆ ಇಲಾಖೆಯ ಹಿರಿಯ ಅಧಿಕಾರಿಗಳಾದ ಶೋಭಾ ಅವರ ನೇತೃತ್ವದ ಕಾರ್ಯಪಡೆ 30ಕ್ಕೂ ಹೆಚ್ಚು ಖಾಸಗಿ ಬಸ್ಗ‌ಳನ್ನು ವಶಕ್ಕೆ ಪಡೆದುಕೊಂಡಿದೆ. ತೆರಿಗೆ ಪಾವತಿಯ ಬಳಿಕ ಬಸ್‌ಗಳನ್ನು ಬಿಡುವುದಾಗಿ ಸಾರಿಗೆ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಯಾಣಿಕರ ಸುರಕ್ಷತೆಗಾಗಿ ಕಾಳಜಿ ವಹಿಸಬೇಕು: ಡಿಕೆಶಿ

ಬಸ್ ದುರಂತ: ತನಿಖೆಗೆ ಮನವಿ

ಬೆಂಗಳೂರು: ಬಸ್ ಪ್ರಯಾಣದ ವೇಳೆ ಸುರಕ್ಷತೆಯ ಖಾತ್ರಿ ಬಗ್ಗೆ ಎಲ್ಲಾ ರಾಜ್ಯ ಸರಕಾರಗಳು ಜಾಗೃತ ಕ್ರಮಗಳನ್ನು ಕೈಗೊಳ್ಳ ಬೇಕು ಎಂದು ಉಪಮುಖ್ಯ ಮಂತ್ರಿ ಡಿ.ಕೆ. ಶಿವಕುಮಾರ್ ಮನವಿ ಮಾಡಿದ್ದಾರೆ.

ವಿಧಾನಸೌಧದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಳೆದ ವಾರ ಬೆಂಗಳೂರಿನಿಂದ ಹೈದರಾ ಬಾದ್‌ಗೆ ತೆರಳುತ್ತಿದ್ದ ಖಾಸಗಿ ಬಸ್ಸೊಂದರಲ್ಲಿ ಬೆಂಕಿ ಅನಾಹುತವಾಗುವ ಸಾಧ್ಯತೆಯಿತ್ತು. ರಾಯ ಚೂರು ಜಿಲ್ಲೆಯ ಕಾಂಗ್ರೆಸ್ ನಾಯಕಿ ಆ ಬಸ್‌ನಲ್ಲಿದ್ದರು. ತಕ್ಷಣವೇ ಆಕೆ ಜೋರಾಗಿ ಕಿರುಚಿ, ಎಚ್ಚರಿಸಿದ್ದರಿಂದಾಗಿ ದುರಂತ ತಪ್ಪಿತು. ಆ ಬಸ್‌ನಲ್ಲಿ 20ಕ್ಕೂ ಹೆಚ್ಚು ಮಂದಿ ವೈದ್ಯಕೀಯ ವಿದ್ಯಾರ್ಥಿಗಳೂ ಸೇರಿದಂತೆ ಅನೇಕ ಪ್ರಯಾಣಿಕರಿದ್ದರು, ರಾಯಚೂರಿಗೆ ಭೇಟಿ ನೀಡಿದಾಗ ಈ ವಿಚಾರ ಗಮನಕ್ಕೆ ಬಂತು. ಆದರೆ ಘಟನೆ ಬಗ್ಗೆ ಯಾವುದೇ ತನಿಖೆಗಳಾಗಿಲ್ಲ ಎಂದು ವಿಷಾದಿಸಿದರು.

ಕರ್ನೂಲ್‌ನಲ್ಲಿ ನಡೆದಿರುವ ಬಸ್ ದುರಂತ ವಿಷಾದನೀಯ. ಇಂತಹ ಘಟನೆಗಳು ಮರುಕಳಿಸದಂತೆ ಎಚ್ಚರಿಕೆ ವಹಿಸಬೇಕು. ಕರ್ನಾಟಕ, ಆಂಧ್ರ ಪ್ರದೇಶವಷ್ಟೆ ಅಲ್ಲ ದೇಶದ ಎಲ್ಲಾ ರಾಜ್ಯ ಸರಕಾರಗಳು ಪ್ರಯಾಣಿಕರ ಸುರಕ್ಷತೆಗಾಗಿ ಕಾಳಜಿವಹಿಸಬೇಕು. ಕಳೆದ ವಾರ ನಡೆದ ಘಟನೆಯ ಬಗ್ಗೆ ಸೂಕ್ತ ವಿಚಾರಣೆ ನಡೆದು ಸುರಕ್ಷತೆಯ ಮಾನದಂಡಗಳನ್ನು ಅನುಸರಿಸಿದ್ದರೆ, ಕರ್ನೂಲ್‌ನಲ್ಲಿ ಇಂತಹ ದುರಂತಗಳು ನಡೆಯುತ್ತಿರಲಿಲ್ಲ. ರಾಜ್ಯದ ಸಾರಿಗೆ ಹಾಗೂ ಗೃಹ ಸಚಿವರು ಬಸ್‌ಗಳ ಸುರಕ್ಷತೆಯ ಬಗ್ಗೆ ಹೆಚ್ಚು ಆದ್ಯತೆ ನೀಡಬೇಕು. ನಿರಂತರವಾದ ತಪಾಸಣೆಗಳ ಮೂಲಕ ನಿರ್ದೇಶಿತ ಮಾನದಂಡನೆಗಳನ್ನು ಪಾಲನೆಯಾಗಿವೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ಕರ್ನೂಲ್‌ನ ದುರ್ಘಟನೆ ಬಗ್ಗೆ ಉನ್ನತ ಮಟ್ಟದ ತನಿಖೆಯಾಗಲಿ ಎಂದು ಸಲಹೆ ನೀಡಿದರು.

ಬೆಂಗಳೂರಿಗೆ ತೇಜಸ್ವಿ ಕೊಡುಗೆ ಏನು?

ಬೆಂಗಳೂರು ಅಭಿವೃದ್ಧಿಗೆ ಸಂಬಂಧಿಸಿದಂತೆ ತೇಜಸ್ವಿ ಸೂರ್ಯ ಮಾಡಿರುವ ಆರೋಪಕ್ಕೆ ಸಂಬಂಧಿಸಿ ಪ್ರತಿಕ್ರಿಯಿಸಿದ ಡಿಕೆಶಿ, ಲೋಕಸಭಾ ಸದಸ್ಯನಾಗಿ ಆತ ಕರ್ನಾಟಕಕ್ಕೆ ಎಷ್ಟು ಅನುದಾನ ತಂದಿದ್ದಾನೆ? ಎಷ್ಟು ಬಾರಿ ಪ್ರಧಾನಿಯವರನ್ನು ಭೇಟಿ ಮಾಡಿ ಎಷ್ಟು ಅನುದಾನ ಕೋರಿದ್ದಾರೆ? ನಿಗದಿತವಾಗಿ ದೊರೆಯುವ ಅನುದಾನ ಬೇರೆ, ಆದರೆ ವಿಶೇಷ ಅನುದಾನದ ಬಗ್ಗೆ ನಾನು ಪ್ರಶ್ನೆ ಮಾಡುತ್ತಿದ್ದೇನೆ. ಬೆಂಗಳೂರಿನ ಜನ ಆತನಿಗೆ ಮತ ನೀಡಿದ್ದಾರೆ. ಬೆಂಗಳೂರಿಗೆ ಆತನ ಕೊಡುಗೆ ಏನೆಂದು ಉತ್ತರಿಸಲಿ ಎಂದರು.

ಪರಿಣಾಮಕಾರಿ ಯುದ್ಧಕ್ಕೆ ಸೇನೆ ಸದಾ ಸನ್ನದ್ಧವಾಗಿರಬೇಕು

ಯುದ್ಧ ಸಿದ್ಧತೆಗೆ ತರಬೇತಿಯಲ್ಲಿ ಬದಲಾವಣೆ ಅಗತ್ಯ: ಎ.ಪಿ.ಸಿಂಗ್

ವಾಯುಪಡೆ ಅಕಾಡೆಮಿಗೆ 'ತರಬೇತಿ ಕಮಾಂಡ್‌ನ ಹೆಮ್ಮೆ' ಟ್ರೋಫಿ ಹಸ್ತಾಂತರ.

ಬೆಂಗಳೂರು: ಜಾಗತಿಕ ಮಟ್ಟದಲ್ಲಾಗುತ್ತಿರುವ ಬದಲಾವಣೆಯನ್ನು ಗಮನದಲ್ಲಿರಿಸಿಕೊಂಡು ನಮ್ಮ ಸೇನೆಯ ತರಬೇತಿಯಲ್ಲಿ ಪರಿಷ್ಕರಣೆ ಅಗತ್ಯವೆಂದು ಭಾರತೀಯ ವಾಯುಸೇನೆಯ ಏರ್ ಚೀಫ್ ಮಾರ್ಷಲ್ ಎ.ಪಿ. ಸಿಂಗ್ ಹೇಳಿದ್ದಾರೆ.

ಬೆಂಗಳೂರಿನ ಪ್ರಧಾನ ಕಚೇರಿಯ ತರಬೇತಿ ಕಮಾಂಡ್‌ನಲ್ಲಿ ಅ.23 ಮತ್ತು 24ರಂದು ನಡೆದ ತರಬೇತಿ ಕಮಾಂಡರ್‌ಗಳ ಸಮ್ಮೇಳನ 2025ರ ಅಧ್ಯಕ್ಷತೆ ವಹಿಸಿ ಮಾತನಾಡಿ, ಇಂದು ಜಾಗತಿಕ ಮಟ್ಟದಲ್ಲಿ ತಂತ್ರಜ್ಞಾನದಲ್ಲಿ ಆಗುತ್ತಿರುವ ಬದಲಾವಣೆಯನ್ನು ಗಮನದಲ್ಲಿರಿಸಿಕೊಂಡು, ಅದಕ್ಕೆ ಸರಿ ಹೊಂದುವ ರೀತಿಯಲ್ಲಿ ನಮ್ಮ ಮಿಲಿಟರಿ ತರಬೇತಿಯಲ್ಲಿನ ಬದಲಾವಣೆ ಅತ್ಯಗತ್ಯ ಎಂದು ಅಭಿಪ್ರಾಯಪಟ್ಟರು.

ವಿಕಸನಗೊಳ್ಳುತ್ತಿರುವ ಜಾಗತಿಕ ಬೆದರಿಕೆಗಳು ಮತ್ತು ತಂತ್ರಜ್ಞಾನಗಳ ಮುಖಾಂತರ ರಕ್ಷಣಾ ಪಡೆಗಳು ಹೊಂದಿಕೊಳ್ಳುವ, ಪರಿಣಾಮಕಾರಿ ಮತ್ತು ಯುದ್ಧಕ್ಕೆ ಸನ್ನದ್ಧವಾಗಿರುವುದನ್ನು ಖಚಿತ ಪಡಿಸಿಕೊಳ್ಳಲು ಮಿಲಿಟರಿ ತರಬೇತಿಯಲ್ಲಿ ಬದಲಾವಣೆ ಅತ್ಯಗತ್ಯ ಎಂದರು.

ಕಾರ್ಯಕ್ರಮದ ಭಾಗವಾಗಿ, ಕಾರ್ಯಾಚರಣೆ, ನಿರ್ವಹಣೆ ಮತ್ತು ಆಡಳಿತದಲ್ಲಿನ ಅತ್ಯುತ್ತಮ ಸಾಧನೆಗಳನ್ನು ಗುರುತಿಸಿ ವಾಯುಪಡೆ ಮುಖ್ಯಸ್ಥರು ಟ್ರೋಫಿಗಳನ್ನು ಪ್ರದಾನ ಮಾಡಿದರು. 'ತರಬೇತಿ ಕಮಾಂಡ್‌ನ ಹೆಮ್ಮೆ' ಟ್ರೋಫಿಯನ್ನು ವಾಯುಪಡೆ ಅಕಾಡೆಮಿಗೆ ನೀಡಲಾಯಿತು. ಈ ವೇಳೆ ವಾಯುಪಡೆಯ ಮುಖ್ಯಸ್ಥರು ಎಲ್ಲಾ ತರಬೇತಿ ಸಂಸ್ಥೆಗಳ ಕಾರ್ಯಕ್ಷಮತೆಯನ್ನು ಪರಿಶೀಲಿಸಿದರು, ಗಮನಾರ್ಹ ಸಾಧನೆಗಳನ್ನು ಶ್ಲಾಘಿಸಿದರು.

ಕೆನಡಾ ವಿರುದ್ಧ ಸಮರಕ್ಕಿಳಿದ ಅಮೆರಿಕ

ವಾಷಿಂಗ್ಟನ್: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಕೆನಡಾ ವಿರುದ್ಧ ಮತ್ತೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ರಾಜಧಾನಿ ಒಟ್ಟಾವಾ, ಅಮೆರಿಕ ಮಾಜಿ ಅಧ್ಯಕ್ಷ ರೋನಾಲ್ಡ್ ರೇಗನ್ ಅವರನ್ನೊಳಗೊಂಡ 'ಮೋಸದ ಜಾಹೀರಾತು' ಬಿಡುಗಡೆ ಮಾಡುವ ಮೂಲಕ ಅಮೆರಿಕದ ಸುಪ್ರೀಂ ಕೋರ್ಟ್ ಮೇಲೆ ಅಕ್ರಮವಾಗಿ ಪ್ರಭಾವ ಬೀರಲು ಪ್ರಯತ್ನಿಸಿದೆ ಎಂದು ಟ್ರಂಪ್ ಆರೋಪಿಸಿದ್ದಾರೆ. ಈ ಕುರಿತು ಟ್ರಂಪ್ ಶುಕ್ರವಾರ ತಮ್ಮ ಸೋಶಿಯಲ್ ಖಾತೆಯಲ್ಲಿ ಆಕ್ರೋಶ ಹೊರಹಾಕಿದ್ದಾರೆ.

ಜಾಗತಿಕ ಸುಂಕ ನೀತಿಗಳ ಕಾನೂನುಬದ್ಧತೆಗೆ ಸಂಬಂಧಿಸಿದಂತೆ ನವೆಂಬರ್ 5ರಂದು ನ್ಯಾಯಾಲಯವು ವಿಚಾರಣೆ ನಡೆಸಲಿರುವುದನ್ನು ಉಲ್ಲೇಖಿಸಿರುವ ಟ್ರಂಪ್, ಕೆನಡಾ ನಮ್ಮ ದೇಶದ ಇತಿಹಾಸದಲ್ಲೇ ಅತ್ಯಂತ ಪ್ರಮುಖ ತೀರ್ಪೊಂದರ ಕುರಿತು ಅಮೆರಿಕದ ಸುಪ್ರೀಂಕೋರ್ಟ್ ಮೇಲೆ ಅಕ್ರಮವಾಗಿ ಪ್ರಭಾವ ಬೀರಲು ಪ್ರಯತ್ನ ಮಾಡುತ್ತಿದೆ ಎಂದು ಆರೋಪಿಸಿದ್ದಾರೆ.

ಕನ್ಯತ್ವ ಪ್ರಮಾಣಪತ್ರ ಕೇಳಿದ ಮದರಸಾ

ಲಖನೌ: ಉತ್ತರ ಪ್ರದೇಶದ ಮೊರಾದಾಬಾದ್‌ನಲ್ಲಿರುವ ಮದರಸಾ ಆಡಳಿತ ಮಂಡಳಿಯು ಏಳನೇ ತರಗತಿಯ ವಿದ್ಯಾರ್ಥಿನಿಯೊಬ್ಬಳಿಂದ ಕನ್ಯತ್ವ ಪ್ರಮಾಣಪತ್ರವನ್ನು ಕೇಳಿದ್ದು, ತೀವ್ರ ಆಕ್ರೋಶಕ್ಕೆ ಕಾರಣವಾಗಿದೆ. ವಿದ್ಯಾರ್ಥಿನಿಯ ತಂದೆ ಹೇಳುವಂತೆ, ತನ್ನ ಮಗಳು ಕನ್ಯತ್ವ ಪ್ರಮಾಣಪತ್ರ ನೀಡದಿದ್ದರೆ ಆಕೆಯನ್ನು ಹೊರಹಾಕಿ, ವರ್ಗಾವಣೆ ಪ್ರಮಾಣಪತ್ರವನ್ನು ನೀಡುವುದಾಗಿ ಸಂಸ್ಥೆಯ ಆಡಳಿತ ಮಂಡಳಿ ಬೆದರಿಕೆ ಹಾಕಿದೆ. ಈ ಸಂಬಂಧ ವಿದ್ಯಾರ್ಥಿನಿಯ ಕುಟುಂಬ ದೂರು ನೀಡಿದ್ದು, ತನಿಖೆ ನಡೆಯುತ್ತಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಆದಾಗ್ಯೂ, ದೂರು ಸಲ್ಲಿಸಿದ ನಂತರ, ವಿದ್ಯಾರ್ಥಿನಿಯ ಕುಟುಂಬ ಸದಸ್ಯರು ತನಿಖೆಯಲ್ಲಿ ಭಾಗಿಯಾಗಿಲ್ಲ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಸಂತ್ರಸ್ತೆ ಚಂಡೀಗಢದವರಾಗಿದ್ದು, ಮೊರಾದಾಬಾದ್ ನಗರದ ಪಕ್ಬರಾ ಪ್ರದೇಶದಲ್ಲಿರುವ ಜಾಮಿಯಾ ಅಸಾನುಲ್ ಬನಾತ್ ಬಾಲಕಿಯರ ಕಾಲೇಜಿನಲ್ಲಿ ಅಧ್ಯಯನ ಮಾಡುತ್ತಿದ್ದಾರೆ.

ಬಿಎಸ್‌ಸಿ ಮುಗಿಸಿ ನರ್ಸಿಂಗ್ ಹೋಂ ಆರಂಭಿಸಿದ್ದ ಕಿಂಗ್‌ಪಿನ್ ಶ್ಯಾಮಲಾ

ಬನ್ನೂರಿನಲ್ಲಿ 200 ಭ್ರೂಣ ಪರೀಕ್ಷೆ

ಮೈಸೂರು: ತಿ.ನರಸೀಪುರ ತಾಲೂಕಿನ ಬನ್ನೂರು ಹೈವೇ ಬಳಿಯ ಭ್ರೂಣ ಪರೀಕ್ಷೆ ಕೇಂದ್ರದ ಪ್ರಕರಣದಲ್ಲಿ ಕಿಂಗ್‌ಪಿನ್ ಶ್ಯಾಮಲಾ ಓದಿದ್ದು ಬಿಎಸ್ಸಿ ನರ್ಸಿಂಗ್. ಓದು ಮುಗಿಸಿದ ಕೂಡಲೇ ಈಕೆ ನರ್ಸಿಂಗ್ ಹೋಂ ಆರಂಭಿಸಿದ್ದಳು ಎಂದು ತಿಳಿದುಬಂದಿದೆ.

ಬನ್ನೂರು ಮುಖ್ಯ ರಸ್ತೆಯಲ್ಲಿ 15 ಬೆಡ್‌ಗಳ ಆಸ್ಪತ್ರೆ ಆರಂಭಿಸಿ ಅಲ್ಲಿ ಭ್ರೂಣ ಪರೀಕ್ಷೆ ದಂಧೆ ನಡೆಸುತ್ತಿದ್ದಳು. ಇದುವರೆಗೂ ಸುಮಾರು 200ಕ್ಕೂ ಹೆಚ್ಚು ಭ್ರೂಣ ಪರೀಕ್ಷೆ ಈ ಆಸ್ಪತ್ರೆಯಲ್ಲಿ ನಡೆದಿದೆ ಎಂಬ ಅಂಶ ತನಿಖೆಯಲ್ಲಿ ಬಹಿರಂಗವಾಗಿದೆ. ಶ್ಯಾಮಲಾ ತಮ್ಮ ಗೋವಿಂದರಾಜು ಕೂಡ ಕೃತ್ಯದಲ್ಲಿ ಭಾಗಿಯಾಗಿದ್ದ. ಏಜೆಂಟ್ ಪುಟ್ಟರಾಜು ಮೂಲಕ ಗಿರಾಕಿಗಳನ್ನು ಸ್ಕ್ಯಾನಿಂಗ್ ಕೇಂದ್ರಕ್ಕೆ ಕರೆಸುತ್ತಿದ್ದ ಎಂದು ತಿಳಿದು ಬಂದಿದೆ. ಬನ್ನೂರು ಹೈವೇ ಬಳಿಯ ಹುಣಗನಹಳ್ಳಿ ವ್ಯಾಪ್ತಿಯ ಫಾರಂ ಹೌಸ್ ಒಂದರಲ್ಲಿ ಲಿಂಗ ಭ್ರೂಣ ಪತ್ತೆ ಮಾಡಲಾಗುತ್ತಿತ್ತು. ದಾಳಿ ವೇಳೆ 4 ಗರ್ಭಿಣಿಯರು ಭ್ರೂಣ ಲಿಂಗ ಪತ್ತೆಗೆ ಹಾಜರಿದ್ದರು. ಈ ಕೇಂದ್ರದಲ್ಲಿ ಸ್ಕ್ಯಾನಿಂಗ್‌ಗೆ ಬಳಕೆ ಮಾಡುವ ಉಪಕರಣವು ಇತ್ತು. ಈ ಹಿನ್ನೆಲೆಯಲ್ಲಿ ಹೆರಿಗೆ ಪೂರ್ವ ಭ್ರೂಣ ಲಿಂಗ ಪತ್ತೆ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲು ಮಾಡಿಕೊಂಡು ಕೆಲವರನ್ನು ವಶಕ್ಕೆ ಪಡೆಯಲಾಗಿದೆ. ರೇಡ್ ನಡೆದ ಜಾಗದಲ್ಲಿ ಎಷ್ಟು ದಿನಗಳಿಂದ ಭ್ರೂಣ ಪತ್ತೆ ನಡೆಯುತ್ತಿತ್ತು. ಇಲ್ಲಿಯವರೆಗೆ ಎಷ್ಟು ಭ್ರೂಣ ಹತ್ಯೆ ಆಗಿದೆ ಎಂಬುದರ ಬಗ್ಗೆ ತನಿಖೆ ನಡೆಯುತ್ತಿದೆ.

25 ರಿಂದ 35 ಸಾವಿರ ಚಾರ್ಜ್

ಪ್ರಕರಣ ಸಂಬಂಧ ಸಾಲಿಗ್ರಾಮ ತಾಲೂಕಿನ ಬೇಯರ್ ಮೂಲದ ಶಿವಕುಮಾರ್, ಮೈಸೂರು ತಾಲೂಕಿನ ಡಿ.ಸಾಲುಂಡಿ ಗ್ರಾಮದ ಹರೀಶ್ ವಶಕ್ಕೆ ಪಡೆಯಲಾಗಿದೆ. ಮಧ್ಯವರ್ತಿ ಪುಟ್ಟರಾಜು ಎಸ್ಕೇಪ್ ಆಗಿದ್ದಾನೆ. ಒಟ್ಟು ಐವರನ್ನು ಬಂಧಿಸಲಾಗಿದೆ. ಆರೋಪಿಗಳು ಒಂದು ಭ್ರೂಣಪತ್ತೆಗೆ 25 ರಿಂದ 35 ಸಾವಿರ ಚಾರ್ಜ್ ಮಾಡುತ್ತಿದ್ದರು. ಆಸ್ಪತ್ರೆಯಿಂದ ಕಾರಿನಲ್ಲಿ ಸ್ಕ್ಯಾನಿಂಗ್ ಮಿಷಿನ್ ತಂದು ಭ್ರೂಣ ಪತ್ತೆ ಮಾಡಲಾಗುತ್ತಿತ್ತು. ಶ್ಯಾಮಲಾ ಮನೆಯಲ್ಲಿಯೇ ಸ್ಕ್ಯಾನಿಂಗ್ ಮಿಷಿನ್ ಕೂಡ ಇತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅ.31ಕ್ಕೆ ಪಿಎಂ ಮೋದಿ ಏಕತಾ ಪ್ರತಿಮೆ ದರ್ಶನ

ಅಹಮದಾಬಾದ್: ಪ್ರಧಾನಿ ನರೇಂದ್ರ ಮೋದಿ ಅವರು ಅಕ್ಟೋಬರ್ 31ರಂದು ಗುಜರಾತ್‌ನ ನರ್ಮದಾ ಕಣಿವೆಯಲ್ಲಿರುವ ಏಕತಾ ಪ್ರತಿಮೆ ಸ್ಥಳಕ್ಕೆ ಭೇಟಿ ನೀಡಿ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಜನ್ಮ ದಿನಾಚರಣೆಯ ನೇತೃತ್ವ ವಹಿಸಲಿದ್ದಾರೆ. ಪ್ರತಿ ವರ್ಷ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಜನ್ಮ ದಿನಾಚರಣೆಯನ್ನು ಗೌರವಿಸಲು ರಾಷ್ಟ್ರೀಯ ಏಕತಾ ದಿನವನ್ನು ಆಚರಿಸಲಾಗುತ್ತದೆ. ಅವರ ಜನ್ಮ ದಿನಾಚರಣೆಯನ್ನು ಆಚರಿಸಲು ಮತ್ತು ನಾಗರಿಕರಲ್ಲಿ ರಾಷ್ಟ್ರೀಯ ಏಕತೆಯ ಚೈತನ್ಯವನ್ನು ಪುನರುಜ್ಜೀವನಗೊಳಿಸಲು 2014ರಲ್ಲಿ ಮೋದಿ ನೇತೃತ್ವದ ಸರಕಾರವು ರಾಷ್ಟ್ರೀಯ ಏಕತಾ ದಿವಸ್ ಅನ್ನು ಉದ್ಘಾಟಿಸಿತು. ಆ ದಿನದಂದು ಏಕತೆಗಾಗಿ ಓಟ, ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತು ಹಲವಾರು ಕಾರ್ಯಕ್ರಮಗಳು ನಡೆಯುತ್ತವೆ.

ಅಗತ್ಯವಿದ್ದರೆ ಬೆಂಗಳೂರಿಗೆ ಎರಡರಿಂದ ಐದು ಪ್ರಶಸ್ತಿಗಳು ಇರಲಿ: ಸಿಎಂ

ರಾಜ್ಯೋತ್ಸವ ಪ್ರಶಸ್ತಿ ಮಾದರಿಯಲ್ಲಿ ಸಹಕಾರಿ ರತ್ನ ಪ್ರಶಸ್ತಿ

ಬೆಂಗಳೂರು: ರಾಜ್ಯೋತ್ಸವ ಪ್ರಶಸ್ತಿ ಮಾದರಿಯಲ್ಲಿ ಕರ್ನಾಟಕ ಸಹಕಾರಿ ರತ್ನಪ್ರಶಸ್ತಿ ನೀಡುವುದು ಸೂಕ್ತ ಎಂದು ಆಯ್ಕೆ ಸಮಿತಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದ್ದಾರೆ.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ನಡೆದ 72ನೇ ಅಖಿಲ ಭಾರತ ಸಹಕಾರ ಸಪ್ತಾಹದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಈ ಹಿಂದೆ ಸಹಕಾರಿ ವಲಯದಲ್ಲಿ ನೂರಾರು ಪ್ರಶಸ್ತಿ ಕೊಡಲಾಗುತ್ತಿತ್ತು. ಈಗ ಎಷ್ಟನೇ ವರ್ಷದ ಆಚರಣೆಯೋ ಅಷ್ಟೇ ಪ್ರಶಸ್ತಿಗಳನ್ನು ನೀಡಲಾಗುತ್ತಿದೆ ಅಥವಾ ಜಿಲ್ಲೆಗೆ ಒಂದರಂತೆ ಪ್ರಶಸ್ತಿ ನೀಡಿದರೆ ಸೂಕ್ತ. ಬೆಂಗಳೂರಿಗೆ ಅಗತ್ಯವಿದ್ದರೆ ಎರಡರಿಂದ ಐದು ಪ್ರಶಸ್ತಿಗಳು ಇರಲಿ ಸಮಿತಿಯ ತೀರ್ಮಾನದಂತೆ ನೀಡಿ ಎಂದು ಸಲಹೆ ನೀಡಿದರು. ಸಹಕಾರ ಇಲಾಖೆ ಅನಿವಾರ್ಯ ಕಾರಣಗಳಿಂದ ನನ್ನ ಸುಪರ್ದಿಗೆ ಬಂದಿದೆ. ಸಹಕಾರಿ ಕ್ಷೇತ್ರವನ್ನು ಮೊದಲಿನಿಂದಲೂ ಬೆಂಬಲಿಸಿ ಕೊಂಡು ಬಂದಿದ್ದು, ಈ ಕ್ಷೇತ್ರದಲ್ಲಿ ಒಕ್ಕೂಟಗಳನು ಬಲಗೊಳಿಸಬೇಕಿದೆ. ನಾನು ಶಾಸಕರಾಗಿದ್ದ ಸಂದರ್ಭದಲ್ಲಿ ಹಾಲು ಉತ್ಪಾದಕರ ಸಂಘಗಳು ರೈತರ ಅಧೀನದಲ್ಲಿಯೇ ನಡೆಯಬೇಕು ಎಂದು ಒತ್ತಾಯಿಸಿದ್ದೆ. ಈಗಲೂ ಅದರಂತೆ ನಡೆಯುತ್ತಿದೆ. ಮೊದಲಿನಿಂದಲೂ ಈ ಕ್ಷೇತ್ರವನ್ನು ಬೆಂಬಲಿಸಿಕೊಂಡೇ ಬಂದಿದ್ದೇನೆ ಎಂದರು.

ಬ್ಯಾಂಕಿಂಗ್ ವ್ಯವಸ್ಥೆ ನಿಯಂತ್ರಣ ಕಾಯಿದೆ ಪ್ರಕಾರ ಸಹಕಾರಿ ಬ್ಯಾಂಕ್‌ಗಳ ಮ್ಯಾನೇಜರ್‌ಗಳ ಸೇವಾವಧಿಯನ್ನು ಮರು ಪರಿಶೀಲಿಸಲು ಕೇಂದ್ರ ಸರಕಾರಕ್ಕೆ ಪತ್ರ ಬರೆಯುವಂತೆ ಸಭೆಯಲ್ಲಿ ಮುಖ್ಯಮಂತ್ರಿ ಅವರನ್ನು ಕೋರಲಾಯಿತು. ರಾಜ್ಯದ ನೇಕಾರ, ಬಡಗಿ, ಮೀನುಗಾರರ ಸೊಸೈಟಿ ಗಳಂಥ ವೃತ್ತಿಮೂಲ ಸಂಘಗಳನ್ನು ಸಬಲಗೊಳಿಸಬೇಕು. ಸಹಕಾರ ಸಪ್ತಾಹದ ಘೋಷವಾಕ್ಯಗಳನ್ನು ಕೇಂದ್ರ ಸರಕಾರದ ಬದಲಿಗೆ ಆಯಾ ರಾಜ್ಯಗಳೇ ಘೋಷಿಸಬೇಕು ಎಂದು ಅಭಿಪ್ರಾಯಪಟ್ಟರು. ಸಚಿವರಾದ ಎಚ್.ಕೆ ಪಾಟೀಲ್, ಮಾಜಿ ಸಚಿವರಾದ ಕೆ.ಎನ್.ರಾಜಣ್ಣ, ಎಸ್.ಟಿ. ಸೋಮಶೇಖರ್, ಶಾಸಕರಾದ ವೆಂಕಟೇಶ್, ರಾಘವೇಂದ್ರ ಹಿಟ್ನಾಳ್, ರಾಜ್ಯ ಸಹಕಾರ ಮಹಾಮಂಡಳ ಅಧ್ಯಕ್ಷರಾದ ಜಿ.ಟಿ.ದೇವೇಗೌಡ ಹಾಗೂ ಸಹಕಾರ ಮಹಾಮಂಡಲಗಳ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಪ್ರತಿದಿನ ರಾಜ್ಯದಲ್ಲಿ 1 ಕೋಟಿ ಲೀಟರ್ ಹಾಲು ಉತ್ಪಾದನೆ ಆಗುತ್ತಿರುವುದು ಅತ್ಯಂತ ಹೆಮ್ಮೆಯ ವಿಷಯ. ಸಹಕಾರ ತತ್ವದಡಿ ಬರುವ ಎಲ್ಲಾ ಸಂಘ ಸಂಸ್ಥೆಗಳನ್ನು ಸಬಲೀಕರಣ ಗೊಳಿಸಬೇಕು. ರಾಜ್ಯದ ಬಹುತೇಕ ರೈತರ ಸಾಲಮನ್ನಾ ಮಾಡಲಾಗಿದೆ.

-ಸಿದ್ದರಾಮಯ್ಯ, ಮುಖ್ಯಮಂತ್ರಿ

72ನೇ ಅಖಿಲ ಭಾರತ ಸಹಕಾರ ಸಪ್ತಾಹದ ಪೂರ್ವಭಾವಿ ಸಭೆ ಸಿಎಂ ಸಿದ್ದರಾಮಯ್ಯ ನೇತೃತ್ವದಲ್ಲಿ ವಿಧಾನಸೌಧದಲ್ಲಿ ನಡೆಯಿತು.

ಗೂಗಲ್‌ನಿಂದ ಭಾರಿ ಹೂಡಿಕೆ, ಜಗತ್ತಿನ ಎಐ ಹಬ್ ಆಗುತ್ತಿದೆ ಭಾರತ | ಜಾಗತಿಕ ತಂತ್ರಜ್ಞಾನ ನಕಾಶೆಯಲ್ಲಿ ಭಾರತಕ್ಕೆ ವಿಶೇಷ ಸ್ಥಾನ

ಐಟಿ ಮತ್ತು ಎಐ ಕ್ಷೇತ್ರದಲ್ಲಿ ಮೇಕ್ ಇನ್ ಇಂಡಿಯಾ ಕ್ರಾಂತಿ

ಪ್ರಧಾನಮಂತ್ರಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ ಭಾರತ ತಂತ್ರಜ್ಞಾನ ಜಗತ್ತಿನಲ್ಲಿ ಈಗ ಹೊಸ ಸಂಚಲನವನ್ನೇ ಸೃಷ್ಟಿಸಿದೆ. ಇಂಟರ್‌ನೆಟ್ ದಿಗ್ಗಜ ಗೂಗಲ್ ಈ ನಿರ್ಧಾರ ಇಡೀ ಜಗತ್ತಿನ ಗಮನ ಸೆಳೆದಿದೆ.

ಅಮೆರಿಕದ ಇಂಟರ್‌ನೆಟ್ ಸರ್ಚ್ ಎಂಜಿನ್ ದಿಗ್ಗಜ ಗೂಗಲ್ ಕೂಡ ಭಾರತ ದಲ್ಲಿ ಲಕ್ಷಾಂತರ ಕೋಟಿ ರುಪಾಯಿ ಬಂಡವಾಳ ಹೂಡಿಕೆ ಮಾಡುತ್ತಿರುವುದು ಗಮನಾರ್ಹ. ಗೂಗಲ್ ನಮ್ಮ ದೇಶದಲ್ಲಿ ಮಾಡುತ್ತಿರುವ ಇದುವರೆಗಿನ ಅತಿ ದೊಡ್ಡ ಹೂಡಿಕೆ ಇದಾಗಿದೆ. ಇದರಿಂದಾಗಿ ಭಾರತ ಈಗ ಜಾಗತಿಕ ಮಟ್ಟದಲ್ಲಿ ಎಐ ಹಬ್ ಆಗಿ ಹೊರಹೊಮ್ಮುತ್ತಿದೆ. ಮೋದಿ ಸರಕಾರಕ್ಕೆ ಇದೊಂದು ಐತಿಹಾಸಿಕ ಮೈಲಿಗಲ್ಲಾಗಿದೆ.

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಅಮೆರಿಕದ ದಿಗ್ಗಜ ಕಂಪನಿಗಳಿಗೆ ತವರಿನಲ್ಲಿಯೇ ಹೂಡಿಕೆ ಮಾಡುವುದಕ್ಕೆ ಆದ್ಯತೆ ನೀಡಿ ಎಂದು ಒತ್ತಾಯಿಸಿದ್ದರೂ, ಅಮೆರಿಕದ ಕಂಪನಿಗಳು ಭಾರತದಲ್ಲಿ ಹಿಂದೆಂದೂ ಕಂಡರಿಯದಷ್ಟು ದೊಡ್ಡ ಪ್ರಮಾಣದಲ್ಲಿ ಬಂಡವಾಳ ಹೂಡುತ್ತಿರುವುದು ಗಮನಾರ್ಹ. ಈ ಬಹುರಾಷ್ಟ್ರೀಯ ಕಂಪನಿಗಳು ಭಾರತದಲ್ಲಿ ಉದ್ಯಮ ಸ್ನೇಹಿ ವಾತಾವರಣ, ಉಜ್ವಲ ಪ್ರಗತಿಯ ಮುನ್ನೋಟವನ್ನು ಅಕ್ಷರಶಃ ಮನಗಂಡಿವೆ. ಅದ್ದರಿಂದಲೇ ಗೂಗಲ್ ಕೂಡ ಭಾರತದಲ್ಲಿ ಮಹತ್ವದ ಎಐ ಹಬ್ ನಿರ್ಮಿಸುವ ಯೋಜನೆಯನ್ನು ಹಮ್ಮಿಕೊಂಡಿದೆ. ಇದು ಜಾಗತಿಕ ತಂತ್ರಜ್ಞಾನ ನಕಾಶೆಯಲ್ಲಿ ಭಾರತಕ್ಕೆ ವಿಶೇಷ ಸ್ಥಾನವನ್ನು ಕಲ್ಪಿಸಿದೆ. ಇದರ ಮುಖ್ಯಾಂಶಗಳನ್ನು ತಿಳಿಯೋಣ ಬನ್ನಿ.

ಗೂಗಲ್‌ನಿಂದ ದಾಖಲೆಯ 1.25 ಲಕ್ಷ ಕೋಟಿ ಹೂಡಿಕೆ: ಆಂಧ್ರಪ್ರದೇಶದಲ್ಲಿ ಸ್ಥಾಪಿಸುತ್ತಿರುವ ಮಹತ್ವದ ಎಐ ಹಬ್, ಅಮೆರಿಕದ ಹೊರಗೆ ಗೂಗಲ್ ನಿರ್ಮಿಸುತ್ತಿರುವ ಅತ್ಯಂತ ದೊಡ್ಡ ಎಐ ಕೇಂದ್ರವಾಗಿರುವುದು ವಿಶೇಷ. ವಿಶಾಖಪಟ್ಟಣಂನಲ್ಲಿ ಇದು ನಿರ್ಮಾಣವಾಗುತ್ತಿದ್ದು, 1 ಗಿಗಾವ್ಯಾಟ್ ಸಾಮರ್ಥ್ಯದ ಭವ್ಯ ಡೇಟಾ ಸೆಂಟರ್ ಕ್ಯಾಂಪಸ್ ತಲೆ ಎತ್ತಲಿದೆ. ಗೂಗಲ್‌ನ ಪೂರ್ಣ ಪ್ರಮಾಣದ ಎಐ ಯೋಜನೆಯ ಭಾಗವಾಗಿ ಇದು ನಿರ್ಮಾಣವಾಗಲಿದೆ. ಅದ್ದರಿಂದ ಸಮಗ್ರ ಕ್ಲೌಡ್ ಮೂಲಸೌಕರ್ಯಗಳು, ಡೇಟಾ ಸ್ಟೊರೇಜ್, ಎಐ ಮಾದರಿಗಳು ಭಾರತದಲ್ಲಿ ನಿರ್ಮಾಣವಾಗಲಿದೆ.

ಗೂಗಲ್ ಈ ಎಐ ಹಬ್ ಯೋಜನೆಯ ಸಲುವಾಗಿ, ಮುಂದಿನ ಐದು ವರ್ಷಗಳಲ್ಲಿ 15 ಶತಕೋಟಿ ಡಾಲರ್ (ಸುಮಾರು 1.25 ಲಕ್ಷ ಕೋಟಿ ರುಪಾಯಿ) ಹೂಡಿಕೆಯನ್ನು ಮಾಡಲಿದೆ. ದೇಶದಲ್ಲಿ ಹೆಚ್ಚುತ್ತಿರುವ ಎಐ ಬೇಡಿಕೆಯನ್ನು ಪೂರೈಸಲು ಇದರಿಂದ ಪ್ರಯೋಜನವಾಗಲಿದೆ. ಲಕ್ಷಾಂತರ ಉದ್ಯೋಗಗಳು ಸೃಷ್ಟಿಯಾಗಲಿದೆ. ಇಲ್ಲಿ ಹೂಡಿಕೆಯು ಕೇವಲ ಸರ್ವರ್‌ಗಳು ಮತ್ತು ಡೇಟಾ ಸೆಂಟರ್‌ಗಳಿಗೆ ಮಾತ್ರ ಸೀಮಿತವಾಗಿಲ್ಲ, ಎಐ ಕೌಶಲಾಭಿವೃದ್ಧಿ, ಸಂಶೋಧನೆ, ಸ್ಥಳೀಯ ಸ್ಟಾರ್ಟಪ್‌ಗಳು, ಡಿಜಿಟಲ್ ತಂತ್ರಜ್ಞಾನದ ಅಭಿವೃದ್ಧಿಗೆ ಹೂಡಿಕೆ ವಿಸ್ತರಣೆಯಾಗಲಿದೆ. ಭಾರತದಲ್ಲಿ ಡಿಜಿಟಲ್ ಮೂಲಸೌಕರ್ಯದ ಪ್ರಗತಿಗೆ ಇದು ಪುಷ್ಟಿ ನೀಡಲಿದೆ.

ಆಂಧ್ರಪ್ರದೇಶದ ವಿಶಾಖಪಟ್ಟಣದಲ್ಲಿ ಅಸ್ತಿತ್ವಕ್ಕೆ ಬರಲಿರುವ ಗೂಗಲ್ ಎಐ ಹಬ್ ಯೋಜನೆಯ ಪರಿಣಾಮ ಟೆಕ್ನಾಲಜಿಯ ಅಭಿವೃದ್ಧಿ ಮಾತ್ರವಲ್ಲದೆ ಹೇರಳ ಉದ್ಯೋಗಗಳು ಸಿಗಲಿವೆ. ಸ್ಟಾರ್ಟಪ್ ಇಕೊ ಸಿಸ್ಟಮ್ ಬೆಳೆಯಲಿದೆ. ಹೆಲ್ತ್ ಕೇರ್, ಶಿಕ್ಷಣ, ಕೃಷಿ, ಉದ್ದಿಮೆ, ಆತಿಥ್ಯೋದ್ಯಮ ಮೊದಲಾದ ವಲಯಗಳಿಗೂ ಬೆಳೆಯಲು ಅವಕಾಶ ಸೃಷ್ಟಿಯಾಗಲಿದೆ.

ಭಾರತ ಈಗ ಕೇವಲ ಗ್ರಾಹಕವಲ್ಲ, ಎಐ ಉತ್ಪಾದಕ ಮತ್ತು ಸಂಶೋಧಕ ರಾಷ್ಟ್ರವಾಗಿಯೂ ವಿಕಾಸವಾಗುತ್ತಿರುವುದು ವಿಶೇಷ. 2025ರ ಅಕ್ಟೋಬರ್‌ನಲ್ಲಿ ದಿಲ್ಲಿಯಲ್ಲಿ ನಡೆದ 'ಭಾರತ್ ಎಐ ಶಕ್ತಿ' ಕಾರ್ಯಕ್ರಮದಲ್ಲಿ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ಐಟಿ ಸಚಿವ ಅಶ್ವಿನಿ ವೈಷ್ಣವ್, ಆಂಧ್ರಪ್ರದೇಶ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಮತ್ತು ಅವರ ಪುತ್ರ, ರಾಜ್ಯ ಐಟಿ ಸಚಿವ ನಾರಾ ಲೋಕೇಶ್ ಅವರು ಈ ಕುರಿತ ಘೋಷಣೆಯನ್ನು ಮಾಡಿದರು. ಗೂಗಲ್ ಕ್ಲೌಡ್ ಸಿಒಒ ಥಾಮಸ್ ಕುರಿಯನ್ ಸಮಾರಂಭದಲ್ಲಿ ಮಾತನಾಡುತ್ತಾ, ಗೂಗಲ್ ಕಂಪನಿಯು ಭಾರತದಲ್ಲಿ ಕಳೆದ 21 ವರ್ಷದಿಂದ ಅಸ್ತಿತ್ವದಲ್ಲಿದ್ದು 14,000 ಭಾರತೀಯ ಉದ್ಯೋಗಿಗಳು ಸೇವೆ ಸಲ್ಲಿಸುತ್ತಿದ್ದಾರೆ. ಗೂಗಲ್‌ನ ಐದು ಎಐ ಹಬ್‌ಗಳು ಈಗಾಗಲೇ ಭಾರತದಲ್ಲಿ ಸಕ್ರಿಯವಾಗಿವೆ ಎಂದು ತಿಳಿಸಿದ್ದಾರೆ.

ಗೂಗಲ್ ಸಿಇಒ ಸುಂದರ್ ಪಿಚ್ಚೈ ಅವರು ಎಕ್ಸ್ ಸಾಮಾಜಿಕ ಜಾಲತಾಣದಲ್ಲಿ ಮಾಡಿರುವ ಪೋಸ್ಟ್‌ನಲ್ಲಿ, ವಿಶಾಖಪಟ್ಟಣಂನಲ್ಲಿ ಸ್ಥಾಪನೆಯಾಗುತ್ತಿರುವ ಎಐ ಹಬ್ ಬಗ್ಗೆ ಪ್ರಧಾನಿ ನರೇಂದ್ರ ಮೋದಿಯವರ ಬಳಿ ಮಾತನಾಡಿರುವುದಾಗಿ ತಿಳಿಸಿದ್ದಾರೆ. ಪಿಚ್ಚೈ ಅವರ ಪ್ರಕಾರ ಎಐ ಹಬ್ ಗಿಗಾವ್ಯಾಟ್ ಸಾಮರ್ಥ್ಯದ ಕಂಪ್ಯೂಟ್ ಕೆಪಾಸಿಟಿಯನ್ನು ಒಳಗೊಳ್ಳಲಿದೆ. ಅಂತಾರಾಷ್ಟ್ರೀಯ ಸಬ್‌ಸೀ ಗೇಟ್ ವೇ, ದೊಡ್ಡ ಮಟ್ಟದ ಇಂಧನ ಮೂಲಸೌಕರ್ಯವನ್ನು ಒಳಗೊಳ್ಳಲಿದೆ.

ಇದರಿಂದಾಗಿ ಭಾರತದ ಉದ್ಯಮಿಗಳು, ತಂತ್ರಜ್ಞಾನ ವಲಯ ಮತ್ತು ಜನರಿಗೆ ಎಐ ತಂತ್ರಜ್ಞಾನದ ಪ್ರಯೋಜನಗಳು ಹೆಚ್ಚು ಲಭಿಸಲಿದೆ. ದೇಶದ ಆರ್ಥಿಕ ಪ್ರಗತಿಗೂ ಇದು ಕಾರಣವಾಗಲಿದೆ.

ಲಕ್ಷಾಂತರ ನೇರ-ಪರೋಕ್ಷ ಉದ್ಯೋಗ ಸೃಷ್ಟಿ ನಿರೀಕ್ಷೆ: ಈ ಡೇಟಾ ಸೆಂಟರ್‌ಗಳು ಸಂಪೂರ್ಣವಾಗಿ ಪರಿಸರಸ್ನೇಹಿಯಾಗಿರುವ ಸ್ವಚ್ಛ ಮತ್ತು ಹಸಿರು ಇಂಧನವನ್ನು ಬಳಸಿಕೊಳ್ಳಲಿದೆ. ಹೆಚ್ಚುವರಿಯಾಗಿ ಹೊಸ ಅಂತಾರಾಷ್ಟ್ರೀಯ ಜಲಾಂತರ್ಗಾಮಿ ಕೇಬಲ್‌ಗಳು ಗೂಗಲ್‌ನ ಗ್ಲೋಬಲ್ ನೆಟ್‌ವರ್ಕ್ ಜತೆಗೆ ಭಾರತವನ್ನು ನೇರವಾಗಿ ಸಂಪರ್ಕಿಸಲಿದೆ. ಗೂಗಲ್ 12 ದೇಶಗಳಲ್ಲಿ ಎಐ ಸೆಂಟರ್‌ಗಳ ಜಾಗತಿಕ ನೆಟ್‌ವರ್ಕ್ ಹೊಂದಿದ್ದು, ಭಾರತವೂ ಇದರಲ್ಲಿ ಸೇರ್ಪಡೆಯಾಗಲಿದೆ. ಹೀಗಾಗಿ ಗೂಗಲ್‌ನ ಶಕ್ತಿಶಾಲಿ ಎಐ ತಂತ್ರಜ್ಞಾನದ ನೆರವು ಭಾರತೀಯ ಬಿಸಿನೆಸ್ ಮತ್ತು ಡೆವಲಪರ್‌ಗಳಿಗೆ ದೊರೆಯಲಿದೆ. ಟೆಲಿಕಾಂ ದಿಗ್ಗಜ ಭಾರ್ತಿ ಏರ್‌ಟೆಲ್ ವಿಶಾಖಪಟ್ಟಣಂನಲ್ಲಿ ವಿಶೇಷ ಡೇಟಾ ಸೆಂಟರ್ ಮತ್ತು ಕೇಬಲ್ ಲ್ಯಾಂಡಿಂಗ್ ಸ್ಟೇಷನ್ ಅನ್ನು ನಿರ್ಮಿಸಲಿದೆ. ಭಾರತದಾದ್ಯಂತ ಪ್ರಬಲ ಫೈಬರ್ ನೆಟ್ ವರ್ಕ್ ಅನ್ನೂ ಅಭಿವೃದ್ಧಿಪಡಿಸಲಿದೆ. ಇದು ವೇಗದ ಮತ್ತು ವಿಶ್ವಾಸಾರ್ಹ ಇಂಟರ್ ನೆಟ್ ಸಂಪರ್ಕವನ್ನು ಒದಗಿಸಲಿದೆ.

ಅದಾನಿ ಸಮೂಹದ ಕಂಪನಿಯಾಗಿರುವ ಅದಾನಿ ಕೊನ್ನೆಕ್ಸ್, ಬೃಹತ್ ಎಐ ಡೇಟಾ ಸೆಂಟರ್‌ನ ಫೌಂಡೇಷನ್ ನಿರ್ಮಾಣದಲ್ಲಿ ತೊಡಗಿಸಿಕೊಳ್ಳಲಿದೆ. ಇದು ಅದಾನಿ ಎಂಟರ್ ಪ್ರೈಸಸ್ ಮತ್ತು ಎಡ್ಜ್ ಕೊನೆಕ್ಸ್ ಜತೆ ಸಹಭಾಗಿತ್ವವನ್ನು ಹೊಂದಿದೆ. ಈ ಜಂಟಿ ಸಹಭಾಗಿತ್ವದಲ್ಲಿ ಹೊಸ ಪವರ್ ಲೈನ್‌ಗಳನ್ನು ಮತ್ತು ಸ್ಟೋರೇಜ್ ಟೆಕ್ನಾಲಜಿಗಳನ್ನು ಅಳವಡಿಸಲಾಗುವುದು. ಕ್ಲೀನ್ ಮತ್ತು ಗ್ರೀನ್ ಎನರ್ಜಿ ತಂತ್ರಜ್ಞಾನವನ್ನು ಇದು ಅವಲಂಬಿಸಿದೆ, ಅಂದರೆ ಇಡೀ ಯೋಜನೆಯು ಪರಿಸರ ಸ್ನೇಹಿಯಾಗಿದೆ. ಈ ಬೃಹತ್ ಯೋಜನೆಯು 2026 ಮತ್ತು 2030ರೊಳಗೆ ಪೂರ್ಣವಾಗುವ ನಿರೀಕ್ಷೆ ಇದೆ. ಈ ಎಐ ಹಬ್‌ನ ಪರಿಣಾಮ ತಂತ್ರಜ್ಞಾನ, ನಿರ್ಮಾಣ ಮತ್ತು ನವೀಕರಿಸಬಹುದಾದ ಇಂಧನ ವಲಯದಲ್ಲಿ ಲಕ್ಷಾಂತರ ಹೊಸ ಉದ್ಯೋಗಗಳು ಸೃಷ್ಟಿಯಾಗಲಿದೆ. ವರದಿಗಳ ಪ್ರಕಾರ 1 ಲಕ್ಷದ 88 ಸಾವಿರ ನೇರ ಮತ್ತು ಪರೋಕ್ಷ ಉದ್ಯೋಗಗಳು ಸೃಷ್ಟಿಯಾಗಲಿದೆ.ಹಲವಾರು ಪ್ರಮುಖ ತಂತ್ರಜ್ಞಾನ ಕಂಪನಿಗಳು ಹೊಸ ಡೇಟಾ ಸೆಂಟರ್‌ಗಳನ್ನು ನಿರ್ಮಿಸಲು ಪೈಪೋಟಿ ನಡೆಸುತ್ತಿರುವ ಸಂದರ್ಭದಲ್ಲಿ ಗೂಗಲ್‌ನ ಈ ನಡೆ ಮಹತ್ವಪೂರ್ಣವಾಗಿದೆ. ಎಐ ಸೇವೆ ಕ್ಷೇತ್ರದಲ್ಲಿ ಅಭೂತಪೂರ್ವ ಬೇಡಿಕೆ ಸೃಷ್ಟಿಯಾಗಿರುವುದನ್ನೂ ಇಲ್ಲಿ ಗಮನಿಸಬಹುದು. ಮೈಕ್ರೊಸಾಫ್ಟ್ ಮತ್ತು ಅಮೆಜಾನ್ ಈಗಾಗಲೇ ಭಾರತದಲ್ಲಿ ಡೇಟಾ ಸೆಂಟರ್‌ಗಳನ್ನು ನಿರ್ಮಿಸಲು ಬಿಲಿಯನ್ ಡಾಲರ್‌ಗಟ್ಟಲೆ ಹೂಡಿಕೆಯನ್ನು ಮಾಡಿವೆ. ಓಪನ್ ಎಐ ಕೂಡ ಭಾರತದಲ್ಲಿ ಈ ವರ್ಷಾಂತ್ಯಕ್ಕೆ ಕೇಂದ್ರವನ್ನು ತೆರೆಯುವುದಾಗಿ ಘೋಷಿಸಿದೆ. ಕೃತಕ ಬುದ್ಧಿಮತ್ತೆ ಅಥವಾ ಎಐ ತಂತ್ರಜ್ಞಾನದ ಅಭಿವೃದ್ಧಿಯಿಂದ ಆರ್ಥಿಕ, ಸಾಮಾಜಿಕ, ವ್ಯೂಹಾತ್ಮಕ ಪ್ರಗತಿಗೆ ಸಹಕಾರಿ ಎಂಬುದು ಮೋದಿ ಸರಕಾರದ ಇಂಗಿತವಾಗಿದೆ. ಭಾರತದಲ್ಲಿ ಡಿಜಿಟಲ್ ಮೂಲಸೌಕರ್ಯ ಅಭಿ ವೃದ್ಧಿಗೆ, ಉದ್ಯೋಗಾವಕಾಶಕ್ಕೂ ಸಹಕರಿಸಲಿದೆ. ದೂರ ದೃಷ್ಟಿ, ಮಹತ್ವಾಕಾಂಕ್ಷೆ ಇದ್ದಾಗ ಇಂಥ ಸಾಧನೆಗಳು ಸಾಧ್ಯವಾಗುತ್ತವೆ ಎಂಬುದಕ್ಕೆ ಇದು ಸಾಕ್ಷಿಯಾಗಿದೆ.

ಇಂಟರ್‌ನೆಟ್ ಕಂಪನಿಗಳಿಗೆ ಭಾರತದಲ್ಲಿ ಹೂಡಿಕೆ ಏಕೆ ಇಷ್ಟ?: ಪ್ರಧಾನಿ ನರೇಂದ್ರ ಮೋದಿಯವರಿಗೆ 2047 ರೊಳಗೆ ಭಾರತವನ್ನು ಅಭಿವೃದ್ಧಿ ಹೊಂದಿದ ದೇಶ ವನ್ನಾಗಿ ವಿಕಾಸಗೊಳಿಸುವ ದೂರದೃಷ್ಟಿ ಇದೆ. ಈ ನಿಟ್ಟಿನಲ್ಲಿ ಕೇಂದ್ರ ಸರಕಾರ ಕಾರ್ಯಪ್ರವೃತ್ತವಾಗಿದ್ದು, ಎಲ್ಲಾ ವಲಯಗಳಲ್ಲಿಯೂ ಅಭಿವೃದ್ಧಿಯ ಮಂತ್ರ ಅನುರಣಿಸುತ್ತಿದೆ. ಐಟಿ, ಎಐ ಮತ್ತು ಡೇಟಾ ಸೆಂಟರ್‌ಗಳು ಭವಿಷ್ಯದ ಜಗತ್ತಿನ ಡಿಜಿಟಲ್ ಮೂಲ ಸೌಕರ್ಯಗಳಾಗಿವೆ. ಭಾರತದ ಡಿಜಿಟಲ್ ಭವಿಷ್ಯದ ಸುವರ್ಣಯುಗ ಈಗ ಆರಂಭವಾಗಿದೆ.

ಭಾರತದಲ್ಲಿ ಡೇಟಾಗಳಿಗೆ ತಗಲುವ ವೆಚ್ಚ ಕಡಿಮೆಯಾಗಿರುವುದು ಮತ್ತು ಇಂಟರ್‌ನೆಟ್ ಬಳಕೆದಾರರ ದೊಡ್ಡ ನೆಲೆ ಇರುವುದು ಗೂಗಲ್‌ನಂತಹ ತಂತ್ರಜ್ಞಾನ ಕಂಪನಿಗಳಿಗೆ ಇಲ್ಲಿ ಬೃಹತ್ ಹೂಡಿಕೆ ಮಾಡಲು ಆಕರ್ಷಕ ಅಂಶಗಳಾಗಿದೆ. ಇದರ ಪರಿಣಾಮವಾಗಿ ಭಾರತದಲ್ಲಿ ಎಐ ಸಂಶೋಧನೆ ಮತ್ತು ಅಭಿವೃದ್ಧಿಯೂ ಹೆಚ್ಚಲಿದೆ. ಕಳೆದ ಐದು ವರ್ಷಗಳಿಂದೀಚೆಗೆ ಭಾರತದ ಡೇಟಾ ಸೆಂಟರ್ ಇಂಡಸ್ಟ್ರಿಯು ತ್ವರಿತವಾಗಿ ಬೆಳೆಯುತ್ತಿದೆ. 2024ರಲ್ಲಿ ಇದು 1 ಗಿಗಾವ್ಯಾಟ್ ಸಾಮರ್ಥ್ಯದ ಮೈಲುಗಲ್ಲನ್ನು ದಾಟಿದೆ. 2019ರ ಮಟ್ಟಕ್ಕೆ ಹೋಲಿಸಿದರೆ ಮೂರು ಪಟ್ಟು ವೃದ್ಧಿಸಿದೆ. ಕೇಂದ್ರ ಐಟಿ ಸಚಿವ ಅಶ್ವಿನ್ ವೈಷ್ಣವ್ ಅವರು ಈ ಬೆಳವಣಿಗೆಯನ್ನು ಸ್ವಾಗತಿಸಿ ನೀಡಿರುವ ಹೇಳಿಕೆ ಮಹತ್ವಪೂರ್ಣ. ದೇಶದಲ್ಲಿ ಎಐ ಪ್ರಗತಿಗೆ ಇದು ನಿರ್ಣಾಯಕವಾಗಲಿದೆ, ಜತೆಗೆ ಸಮುದ್ರದ ಒಳಗೆ ಕೇಬಲ್ ನೆಟ್‌ವರ್ಕ್ ಸಂಪರ್ಕ ವ್ಯವಸ್ಥೆಯಿಂದ ಅಂಡ 'ಮಾನ್ ನಿಕೋಬಾರ್ ದ್ವೀಪ ಸ್ತೋಮಗಳು ಗ್ಲೋಬಲ್ ಇಂಟರ್‌ನೆಟ್ ಡೇಟಾ ವರ್ಗಾವಣೆಗೆ ಆಯಕಟ್ಟಿನ ಹಬ್ ಆಗಲಿದೆ. ಗೂಗಲ್ ಮತ್ತು ಇತರ ಇಂಟರ್‌ನೆಟ್ ಆಧರಿತ ಕಂಪನಿಗಳಿಗೆ ಏಷ್ಯಾ, ಆಸ್ಟ್ರೇಲಿಯಾ ಮತ್ತು ಇತರ ವಲಯಗಳನ್ನು ಸಂಪರ್ಕಿಸಲು ಅಂಡಮಾನ್ ದ್ವೀಪಸ್ತೋಮಗಳು ಸಹಕರಿಸಲಿವೆ. ಭಾರತದ ಡೇಟಾ ಸಾಮರ್ಥ್ಯವೂ ಹೊಸ ಎತ್ತರಕ್ಕೇರಲಿದೆ, ಆದ್ದರಿಂದ ಸರಕಾರ ಈ ಕ್ರಮಗಳಿಗೆ ಬೆಂಬಲಿಸಲಿದೆ ಎಂದು ಅವರು ವಿವರಿಸಿದ್ದಾರೆ.

ಸಿಗಡಿಯಿಂದ ಸಾಫ್ಟ್‌ವೇರ್‌ವರೆಗಿನ ಭಾರತದ ಹೊಸ ವ್ಯಾಪಾರ ಒಪ್ಪಂದ

ಪ್ರಸ್ತುತ

ಪಿಯೂಷ್ ಗೋಯಲ್
vveditoped@gmail.com

ಒಂದು ಲಕ್ಷ ಡಾಲರ್‌ಗಿಂತ ಹೆಚ್ಚು ತಲಾ ಆದಾಯ ಹೊಂದಿರುವ ಶ್ರೀಮಂತ ಯುರೋಪಿಯನ್ ರಾಷ್ಟ್ರಗಳ ಒಕ್ಕೂಟ ದೊಂದಿಗೆ ಒಂದು ನವೀನ ವ್ಯಾಪಾರ ಒಪ್ಪಂದಕ್ಕೆ ಸಹಿ ಹಾಕುವ ಮೂಲಕ, ಭಾರತವು ಸಮೃದ್ಧಿಯ ಮತ್ತೊಂದು ಹೆಬ್ಬಾಗಿಲನ್ನು ತೆರೆದಿದೆ. ಇದು ಭಾರ ತೀಯ ರೈತರು, ಮೀನುಗಾರರು ಮತ್ತು ಎಂಎಸ್ ಎಂಇಗಳಿಗೆ ಲಾಭದಾಯಕ ಮಾರುಕಟ್ಟೆಯನ್ನು ತೆರೆ ಯುತ್ತದೆ ಮತ್ತು ಪ್ರಧಾನಿ ಮೋದಿಯವರ 'ವಿಕಸಿತ ಭಾರತ 2047' ಧ್ಯೇಯಕ್ಕೆ ಹೊಸ ವೇಗ ನೀಡುತ್ತದೆ.

ಸ್ವಿಟ್ಜರ್‌ಲ್ಯಾಂಡ್, ನಾರ್ವೆ, ಐಸ್‌ಲ್ಯಾಂಡ್ ಮತ್ತು ಲೀಚ್ಟೆನ್ ಸ್ಟೈನ್ ದೇಶಗಳನ್ನು ಒಳಗೊಂಡಿರುವ ಯುರೋಪಿಯನ್ ಮುಕ್ತ ವ್ಯಾಪಾರ ಒಕ್ಕೂಟ ದೊಂದಿಗಿನ 'ವ್ಯಾಪಾರ ಮತ್ತು ಆರ್ಥಿಕ ಪಾಲು ದಾರಿಕೆ ಒಪ್ಪಂದ, ಶುಭ ನವರಾತ್ರಿಯ ಸಂದರ್ಭದಲ್ಲಿ ಅಂದರೆ ಅಕ್ಟೋಬರ್ 1ರಿಂದ ಜಾರಿಗೆ ಬಂದಿದ್ದು, ಇದು ನಿಜಕ್ಕೂ ಐತಿಹಾಸಿಕ ಹೆಜ್ಜೆಯಾಗಿದೆ. EFTA ರಾಷ್ಟ್ರಗಳು 15 ವರ್ಷಗಳಲ್ಲಿ 100 ಬಿಲಿಯನ್ ಹೂಡಿಕೆ ಮಾಡುವ ಭರವಸೆ ನೀಡಿವೆ, ಇದು ಕನಿಷ್ಠ ಹತ್ತು ಲಕ್ಷ (ಒಂದು ಮಿಲಿಯನ್) ಉದ್ಯೋಗಗಳನ್ನು ಸೃಷ್ಟಿಸುತ್ತವೆ ಮತ್ತು ಪ್ರಧಾನಿ ಮೋದಿಯವರ 'ಮೇಕ್ ಇನ್ ಇಂಡಿಯಾ' ಅಭಿಯಾನಕ್ಕೆ ಉತ್ತೇಜನ ನೀಡುತ್ತವೆ.

ವ್ಯಾಪಾರ ತಂತ್ರಗಾರಿಕೆ: ಮೋದಿ ಸರಕಾರವು ಗತ ಕಾಲದ ಸಂಕೋಚಗಳನ್ನು ಸಂಪೂರ್ಣವಾಗಿ ಬದಿಗೊತ್ತಿದೆ. ನಮ್ಮ ಉತ್ಪನ್ನಗಳು ಮತ್ತು ಸೇವೆಗಳಿಗೆ ಉನ್ನತ, ಅಭಿವೃದ್ಧಿ ಹೊಂದಿದ ಮಾರುಕಟ್ಟೆಗಳಲ್ಲಿ ನೇರ ಪ್ರವೇಶ ಕಲ್ಪಿಸುವ ಮುಕ್ತ ವ್ಯಾಪಾರ ಒಪ್ಪಂದ ಗಳನ್ನು ಅದು ಮುಕ್ತವಾಗಿ ಒಪ್ಪಿಕೊಂಡಿದೆ. ಈ ಒಪ್ಪಂದಗಳು ಕೇವಲ ಹೊಸ ಬಾಗಿಲುಗಳನ್ನು ತೆರೆ ಯುತ್ತದೆ ಮಾತ್ರವಲ್ಲ, ಉದ್ಯಮಗಳಿಗೆ ಚುರುಕು ಮುಟ್ಟಿಸಿ, ನಮ್ಮನ್ನು ಮುನ್ನಡೆಸಬಲ್ಲ ಸ್ಪರ್ಧಾತ್ಮಕತೆ ಮತ್ತು ಗುಣಮಟ್ಟವನ್ನು ಅವುಗಳಲ್ಲಿ ತುಂಬುತ್ತವೆ. ಜುಲೈ 2025ರಲ್ಲಿ, ಭಾರತವು ಇಂಗ್ಲೆಂಡ್‌ನೊಂದಿಗೆ ಒಂದು ಐತಿಹಾಸಿಕ ಒಪ್ಪಂದಕ್ಕೆ ಸಹಿ ಹಾಕಿತಲ್ಲದೇ, ಯುರೋಪಿಯನ್ ಯೂನಿಯನ್ ಜತೆಗಿನ ಮಾತುಕತೆಗಳೂ ಉತ್ತಮ ಪ್ರಗತಿ ಸಾಧಿಸಿವೆ. ಇದಕ್ಕೂ ಮುನ್ನ, ಪ್ರಧಾನಿ ಮೋದಿಯವರ ದೃಢ ನಿರ್ಧಾರವು ಆಸ್ಟ್ರೇಲಿಯಾ ಮತ್ತು ಯುಎಇ ಜೊತೆ ಉಭಯ ಲಾಭದಾಯಕ ಒಪ್ಪಂದಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿತ್ತು.

ಭಾರತೀಯ ಉದ್ಯಮವು ಇಂದು ಜಾಗತಿಕ ರಂಗ ವನ್ನು ಗೆಲ್ಲುವ ಆತ್ಮವಿಶ್ವಾಸದಿಂದ ಬೀಗುತ್ತಾ, ದೃಢ ವಾಗಿ ನಿಂತಿದೆ, ತೀವ್ರ ಸ್ಪರ್ಧೆಯ ನಡುವೆಯೂ ಸಮೃದ್ಧವಾಗಿ ಬೆಳೆಯುತ್ತಿದೆ. ವಿಸ್ತೃತ ಸಮಾಲೋಚನೆ ಗಳ ಮೂಲಕ ರಚಿಸಲಾದ ಮೋದಿ ಯುಗದ ಪ್ರತಿ ಯೊಂದು ಎಫ್.ಟಿ.ಎ.ಯನ್ನೂ ಎಲ್ಲಾ ಪಾಲು ದಾರರು ಮುಕ್ತಕಂಠದಿಂದ ಶ್ಲಾಘಿಸಿದ್ದಾರೆ. ಭಾರತ ವನ್ನು ಆಕರ್ಷಣೀಯವನ್ನಾಗಿಸುವ ಪರಿವರ್ತನೆಯ ಪಯಣ 11 ವರ್ಷಗಳ ಹಿಂದೆ ಆರಂಭವಾಯಿತು. ಪ್ರಧಾನಿ ಮೋದಿಯವರು ನಮ್ಮ ದುರ್ಬಲ ಆರ್ಥಿಕತೆಯ ಹಣೆಪಟ್ಟಿಯಿಂದ ಪಾರುಮಾಡಿ, ಅದನ್ನು ವ್ಯಾಪಾರ ಮತ್ತು ಬಂಡವಾಳವನ್ನು ಆಕರ್ಷಿಸುವ ಪ್ರಬಲ ಆಯಸ್ಕಾಂತವಾಗಿ ಪರಿವರ್ತಿಸಿದರು. ಆಳವಾದ ಸುಧಾರಣೆಗಳ ಮೂಲಕ, ಅನುವಂಶಿಕ ವಾಗಿ ಬಂದ ಸಂಕಷ್ಟಗಳಾದ ಆರ್ಥಿಕ ನಿಶ್ಚಲತೆ, ತೀವ್ರ ಹಣದುಬ್ಬರ, ಭ್ರಷ್ಟಾಚಾರ ಮತ್ತು ಅಸಮರ್ಥತೆಗಳನ್ನು ನಿರ್ಮೂಲನೆ ಮಾಡಿತು. ಉತ್ಪಾದನಾ ಸಂಬಂಧಿತ ಪ್ರೋತ್ಸಾಹ ಯೋಜನೆಯೊಂದೇ ಮಾರ್ಚ್ 2025 ರ ವೇಳೆಗೆ 1.76 ಲಕ್ಷ ಕೋಟಿ ಹೂಡಿಕೆಗಳನ್ನು ಆಕರ್ಷಿಸಿದ್ದು, 12 ಲಕ್ಷಕ್ಕೂ ಅಧಿಕ ಉದ್ಯೋಗಗಳನ್ನು ಸೃಷ್ಟಿಸಿದೆ. ಪಿಎಂ ಗತಿ ಶಕ್ತಿ ಮತ್ತು ರಾಷ್ಟ್ರೀಯ ಲಾಜಿಸ್ಟಿಕ್ಸ್ ನೀತಿಯು ವೆಚ್ಚಗಳನ್ನು ಗಣನೀಯವಾಗಿ ಕಡಿತಗೊಳಿಸಿ, ಮೂಲಸೌಕರ್ಯ ವನ್ನು ಸುವ್ಯವಸ್ಥಿತಗೊಳಿಸಿವೆ. ನಮ್ಮ ಡಿಜಿಟಲ್ ಬೆನ್ನೆಲುಬಾದ ಜನ್‌ಧನ್, ಯುಪಿಐ, ಮತ್ತು ಟ್ರೇಡ್ ಕನೆಕ್ಟ್ ಅವಕಾಶಗಳನ್ನು ಪ್ರತಿಯೊಬ್ಬರಿಗೂ ತಲುಪಿ ಸಿದೆ. ಇದು ಆರು ವರ್ಷಗಳಲ್ಲಿ 12,000 ಲಕ್ಷ ಕೋಟಿ ಮೌಲ್ಯದ 65,000 ಕೋಟಿ ವಹಿವಾಟುಗಳಿಗೆ ಶಕ್ತಿ ನೀಡಿ, ಸೌಲಭ್ಯ ವಂಚಿತರನ್ನು ಆರ್ಥಿಕ ಮುಖ್ಯ ವಾಹಿನಿಗೆ ತಂದಿದೆ.



ಹೂಡಿಕೆ ಮತ್ತು ಉದ್ಯೋಗ ಸೃಷ್ಟಿ: ಇದೀಗ ಯುರೋಪಿಯನ್ ಮುಕ್ತ ವ್ಯಾಪಾರ ಸಂಘದಿಂದ 100 ಬಿಲಿಯನ್ ಯುಎಸ್ ಡಾಲರ್‌ಗಳ ಬಂಡವಾಳ ಹರಿವು ಹರಿದು ಬರುತ್ತಿದ್ದು, ಇದು ಒಂದು ಮಿಲಿಯನ್ ನೇರ ಹಾಗೂ ಅಸಂಖ್ಯಾತ ಪರೋಕ್ಷ ಉದ್ಯೋಗಗಳನ್ನು ಸೃಷ್ಟಿಸುವ ಭರವಸೆ ಮೂಡಿಸಿದೆ. ಕಳೆದ 25 ವರ್ಷಗಳಲ್ಲಿ ಈ ರಾಷ್ಟ್ರಗಳಿಂದ ಬಂದ ಒಟ್ಟು ಎಫ್.ಡಿ.ಐ ಕೇವಲ 11.9 ಬಿಲಿಯನ್ ಯುಎಸ್ ಡಾಲರ್‌ಗಳಾಗಿತ್ತು. ಅದಕ್ಕೆ ಹೋಲಿಸಿದರೆ, ಈ ಹೂಡಿಕೆಯ ಬದ್ಧತೆಯು ಒಂದು ಬೃಹತ್ ಜಿಗಿತವೇ ಸರಿ. 2024-25ರಲ್ಲಿ ಭಾರತದ ಒಟ್ಟು ಎಫ್.ಡಿ.ಐ 14%ರಷ್ಟು ಏರಿಕೆ ಕಂಡು 81 ಬಿಲಿಯನ್ ಯು.ಎಸ್ ಡಾಲರ್‌ಗಳನ್ನು ತಲುಪಿದೆ. ಈ ಹಿನ್ನೆಲೆಯಲ್ಲಿ, ವಿಶ್ವದ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಪ್ರಮುಖ ಆರ್ಥಿಕತೆಯಲ್ಲಿನ ಅಪಾರ ಅವಕಾಶಗಳು ಮತ್ತು ಪರಿಣಾಮಕಾರಿಯಾಗಿ ಜಾರಿಗೊಂಡಿರುವ ಸುಭದ್ರ ಬೌದ್ಧಿಕ ಆಸ್ತಿ ಹಕ್ಕು ಕಾನೂನುಗಳ ಬಲದಿಂದಾಗಿ, ಈ ವಾಸ್ತವಿಕ ಹೂಡಿಕೆಯ ಹರಿವು ಬದ್ಧತೆಯನ್ನೂ ಮೀರುವ ಸಾಧ್ಯತೆ ದಟ್ಟವಾಗಿದೆ.

ರೈತರು ಮತ್ತು ಮೀನುಗಾರರು ಕೇವಲ ವಿದೇಶಿ ನೇರ ಬಂಡವಾಳ ಅಷ್ಟೇ ಅಲ್ಲದೆ, ಜವಳಿ ಮತ್ತು ರತ್ನಾಭರಣ ಗಳಂತಹ ಕಾರ್ಮಿಕ ಕೇಂದ್ರಿತ ರಫ್ತು ಕ್ಷೇತ್ರಗಳು ಭಾರಿ ಏರಿಕೆ ಕಾಣಲಿವೆ. ಇದು ಉದ್ಯೋಗದ ಬೃಹತ್ ಅಲೆಗಳನ್ನೇ ಸೃಷ್ಟಿಸಲಿದೆ. ಯುರೋಪಿಯನ್ ಮುಕ್ತ ವ್ಯಾಪಾರ ಸಂಘದ ಶ್ರೀಮಂತ ಗ್ರಾಹಕರು ನಮ್ಮ ಕೃಷಿ ಉತ್ಪನ್ನಗಳು, ಚಹಾ ಮತ್ತು ಕಾಫಿಗಾಗಿ ಹಾತೊರೆಯುತ್ತಿದ್ದಾರೆ. ಭಾರತವು ಹೈನುಗಾರಿಕೆಯಂತಹ ತನ್ನ ಸೂಕ್ಷ್ಮ ವಲಯಗಳನ್ನು ರಕ್ಷಿಸಿಕೊಂಡಿದ್ದು, ಅದೇ ಸಮಯ ದಲ್ಲಿ ಅಕ್ಕಿ, ಬೇಳೆಕಾಳುಗಳು, ದ್ರಾಕ್ಷಿ, ಮಾವು, ತರಕಾರಿಗಳು, ಸಿರಿಧಾನ್ಯಗಳು ಮತ್ತು ಗೋಡಂಬಿಗಳ ರಫ್ತಿಗೆ ಹೊಸ ಅವಕಾಶಗಳನ್ನು ತೆರೆದು ಕೊಟ್ಟಿದೆ. ಬಿಸ್ಕತ್ತುಗಳು, ಮಿಠಾಯಿಗಳು, ಚಾಕೊಲೇಟ್ ಮತ್ತು ಸಾಸ್ ಗಳಂತಹ ಸಂಸ್ಕರಿಸಿದ ಆಹಾರ ಪದಾರ್ಥಗಳ ಮೇಲಿನ ಸುಂಕ ಕಡಿತವು ಈ ಒಪ್ಪಂದವನ್ನು ಇನ್ನಷ್ಟು ಸಿಹಿಗೊಳಿಸಿದೆ. ಇದಲ್ಲದೆ, ಗುಣಮಟ್ಟದ ಮಾನದಂಡ ಗಳ ಕುರಿತಾದ ಸುಗಮ ಸಹಕಾರದ ಮೂಲಕ, ಹೆಪ್ಪುಗಟ್ಟಿದ ಸೀಗಡಿ ಮತ್ತು ಸ್ಕ್ವಿಡ್ ಮೀನುಗಳ ರಫ್ತು ಭಾರಿ ಪ್ರಮಾಣ ದಲ್ಲಿ ಹೆಚ್ಚಾಗಲಿದ್ದು, ಇದು ಮೀನುಗಾರರಲ್ಲಿ ಸಂತಸ ತಂದಿದೆ. ಈ ಒಪ್ಪಂದಗಳು ತಯಾರಕರಲ್ಲಿ, ಸೇವಾ ಪೂರೈಕೆ ದಾರರಲ್ಲಿ ಮತ್ತು ಸಾಮಾನ್ಯ ನಾಗರಿಕರಲ್ಲಿ ಹೊಸ ಉತ್ಸಾಹ ವನ್ನು ಹುಟ್ಟುಹಾಕುತ್ತವೆ. ಭಾರತದ ಭವಿಷ್ಯವು ಪ್ರತ್ಯೇಕ ವಾಗಿ ಉಳಿಯುವುದರಲ್ಲಿಲ್ಲ, ಬದಲಿಗೆ ಸಕ್ರಿಯವಾಗಿ ಪಾಲ್ಗೊಳ್ಳುವುದರಲ್ಲಿದೆ. ಜಾಗತಿಕ ಹೆಜ್ಜೆಗುರುತನ್ನು ವಿಸ್ತರಿಸುವುದು, ಶಿಕ್ಷಣ ಮತ್ತು ಡಿಜಿಟಲ್ ಕ್ರಾಂತಿಯ ಮೂಲಕ ಸಬಲೀ ಕರಣಗೊಳಿಸುವುದು ಹಾಗೂ ಸುಸ್ಥಿರ ಭವಿಷ್ಯವನ್ನು ನಿರ್ಮಿಸುವುದು ನಮ್ಮ ಗುರಿಯಾಗಿದೆ. ವ್ಯಾಪಾರ ಮತ್ತು ತಂತ್ರಜ್ಞಾನಗಳು ಮಾನವಕುಲದ ಸೇವೆ ಗೈಯುವ ಹಾಗೂ ನಾವೀನ್ಯತೆ ಮತ್ತು ಸರ್ವರನ್ನೂ ಒಳಗೊಳ್ಳುವಿಕೆಯ ಜೊತೆಜೊತೆಯಾಗಿ ಸಾಗುವ ವಾಣಿಜ್ಯ ಜಗತ್ತಿನಲ್ಲಿ, ಭಾರತದ ನಾಯಕನ ಸ್ಥಾನ ವನ್ನು ನಾವೆಲ್ಲರೂ ಒಟ್ಟಾಗಿ ಪುನಃಸ್ಥಾಪಿಸೋಣ.

(ಲೇಖಕರು: ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವರು)

ವರ್ಷದಲ್ಲಿ 3ನೇ ಬಾರಿ ಕೆಆರ್‌ಎಸ್ ಭರ್ತಿ

ಮಂಡ್ಯ: ನಾಡಿಗೆ ನೀರುಣಿಸುವ ಮಂಡ್ಯ ಜಿಲ್ಲೆಯ ಕೆಆರ್‌ಎಸ್ ಜಲಾಶಯ, ಈ ವರ್ಷ ದಾಖಲೆಗಳ ಮೇಲೆ ದಾಖಲೆ ನಿರ್ಮಿಸಿದೆ. ಈ ವರ್ಷ ಕಾವೇರಿ ಜಲಾನಯನ ಪ್ರದೇಶದಲ್ಲಿ ಉತ್ತಮವಾಗಿ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ, ಒಂದೇ ವರ್ಷದಲ್ಲಿ ಮೂರನೇ ಬಾರಿಗೆ ಕೃಷ್ಣರಾಜ ಸಾಗರ ಜಲಾಶಯ ಭರ್ತಿಯಾಗಿ ದಾಖಲೆ ನಿರ್ಮಿಸಿದೆ.

ಕಳೆದ ಜೂನ್ ತಿಂಗಳಲ್ಲಿ ಅಂದರೆ ಜುಲೈ ಅಥವಾ ಆಗಸ್ಟ್‌ನಲ್ಲಿ ಭರ್ತಿಯಾಗುತ್ತಿದ್ದ ಕೆಆರ್‌ಎಸ್ ಜಲಾಶಯ ಜೂನ್‌ನಲ್ಲೇ ಅವಧಿಗೂ ಮೊದಲೇ ಸಂಪೂರ್ಣ ಭರ್ತಿಯಾಗುವ ಮೂಲಕ ದಾಖಲೆ ನಿರ್ಮಿಸಿತ್ತು. ಇದಾದ ಬಳಿಕ ಈಗ ಹಿಂಗಾರು ಮಳೆಯಲ್ಲೂ ಜಲಾಶಯ ಸಂಪೂರ್ಣ ಭರ್ತಿಯಾಗಿ ದಾಖಲೆ ನಿರ್ಮಿಸಿದೆ. 124.80 ಅಡಿಗಳ ಸಾಮರ್ಥ್ಯ ಇರುವ ಡ್ಯಾಂ ಭರ್ತಿಯಾದ ಹಿನ್ನೆಲೆಯಲ್ಲಿ ಕಾವೇರಿ ನದಿಗೆ 20 ಸಾವಿರ ಕ್ಯುಸೆಕ್‌ಗೂ ಅಧಿಕ ನೀರನ್ನು ಹರಿಸಲಾಗುತ್ತಿದೆ. ಹಿಗಾಗಿ ಮುನ್ನೆಚ್ಚರಿಕೆ ಕ್ರಮವಾಗಿ ನದಿ ಪಾತ್ರದ ಜನರು ಸುರಕ್ಷಿತ ಸ್ಥಳಕ್ಕೆ ತೆರಳುವಂತೆ ಹಾಗೂ ಜನ ಜಾನುವಾರುಗಳು ನದಿಗೆ ಇಳಿಯದಂತೆ ಕಾವೇರಿ ನೀರಾವರಿ ನಿಗಮ ಎಚ್ಚರಿಕೆ ಸಂದೇಶ ನೀಡಿದೆ. ಸದ್ಯ ಈ ಬಾರಿ ಹಿಂಗಾರು ಮಳೆಯಲ್ಲೂ ಕೂಡ ಕೆ.ಆರ್.ಎಸ್ ಜಲಾಶಯ ಮತ್ತೊಮ್ಮೆ ಭರ್ತಿಯಾಗುವ ಮೂಲಕ, ಮಂಡ್ಯ ಜಿಲ್ಲೆಯ ಕೃಷಿ ಭೂಮಿಗೆ ಸಂತೃಪ್ತಿಯ ಜತೆಗೆ ರೈತರಿಗೆ ಸಂತಸ ತಂದಿದೆ. ಇದೇ ತಿಂಗಳು ಕೆಆರೆಸ್ ಜಲಾಶಯದಲ್ಲಿ ಸರಕಾರದ ವತಿಯಿಂದ ಕಾವೇರಿ ಆರತಿ ಕೂಡ ವಿಜೃಂಭಣೆಯಿಂದ ನಡೆದಿತ್ತು.

25.59 ಕೋಟಿ ಕಾಣಿಕೆ ಸಂಗ್ರಹ | 400 ಸಿಬ್ಬಂದಿ ಎಣಿಕೆ ಕಾರ್ಯದಲ್ಲಿ ಭಾಗಿ

ಆದಾಯದಲ್ಲೂ ಹಾಸನಾಂಬೆ ಮಹಿಮೆ

ಹಾಸನ: ನಿರೀಕ್ಷೆಯಂತೆಯೇ ಈ ಬಾರಿಯ ಹಾಸನಾಂಬೆ ಹಾಗೂ ಸಿದ್ದೇಶ್ವರಸ್ವಾಮಿ ಜಾತ್ರಾ ಮಹೋತ್ಸವದಲ್ಲಿ ಕಾಣಿಕೆ ರೂಪದಲ್ಲಿ ದಾಖಲೆ ಪ್ರಮಾಣದ ಆದಾಯ ಸಂಗ್ರಹ ಆಗಿದೆ.

ಅ.9 ರಿಂದ 23 ರ ವರೆಗೆ ಜರುಗಿದ ಜಾತ್ರಾ ಮಹೋತ್ಸವಕ್ಕೆ 26,06,691 ಮಂದಿ ಭಕ್ತರು ಜಿಲ್ಲೆ, ರಾಜ್ಯ, ದೇಶ-ವಿದೇಶಗಳಿಂದ ಆಗಮಿಸಿ ದೇವಿಯ ದರ್ಶನ ಪಡೆದಿದ್ದು, ಭಕ್ತರಿಂದ ಕೋಟಿಗಟ್ಟಲೇ ಕಾಣಿಕೆ ಸಂಗ್ರಹ ಆಗಿದೆ. ಕಳೆದ ಗುರುವಾರ ಮಧ್ಯಾಹ್ನ ದೇವಿಯ ಗರ್ಭಗುಡಿ ಬಾಗಿಲು ಮುಚ್ಚಲಾಯಿತು.

ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ, ದೇವಾಲಯದ ಆಡಳಿತಾಧಿಕಾರಿ ಮಾರುತಿ ಅವರ ಮೇಲ್ವಿಚಾರಣೆಯಲ್ಲಿ ಹುಂಡಿ ಎಣಿಕೆ ಕಾರ್ಯ ನಡೆಯಿತು. 400ಕ್ಕೂ ಹೆಚ್ಚು ಮಂದಿ ಅಧಿಕಾರಿಗಳು ಹಾಗೂ ಸಿಬ್ಬಂದಿ, 25ಕ್ಕೂ ಹೆಚ್ಚು ಬ್ಯಾಂಕ್ ಸಿಬ್ಬಂದಿ ಎಣಿಕೆ ಕಾರ್ಯದಲ್ಲಿ ತೊಡಗಿದ್ದರು. 25,59,87,327 ರು.ಹಣ ಸಂಗ್ರಹವಾಗಿದ್ದು, ಇದು ಹಾಸನಾಂಬೆ ಇತಿಹಾಸದಲ್ಲೇ ಸಾರ್ವಕಾಲಿಕ ದಾಖಲೆ. 1000, 300 ರೂ. ಟಿಕೆಟ್ ಹಾಗೂ ಲಾಡು ಪ್ರಸಾದ ಮಾರಾಟದಿಂದ 21,91,75,052 ರೂ.,ಹುಂಡಿಯಲ್ಲಿ 3,68,12,275 ರೂ.ಸಂಗ್ರಹವಾಗಿದೆ ಎಂದು ವಿವರಿಸಿದರು. ಹಾಗೆಯೇ ಹರಕೆಯ ರೂಪದಲ್ಲಿ 75 ಗ್ರಾಂ. 300 ಮಿಲಿ ಚಿನ್ನ, 1 ಕೆಜಿ 58 ಗ್ರಾಂ. 400 ಮಿಲಿ ಬೆಳ್ಳಿ ವಸ್ತುಗಳನ್ನು ಭಕ್ತರು ಹುಂಡಿಗೆ ಹಾಕಿದ್ದಾರೆ. ಇದಲ್ಲದೆ ವಿದೇಶಿ ಕರೆನ್ಸಿಗಳನ್ನು ಭಕ್ತರು ಹುಂಡಿಗೆ ಹಾಕಿದ್ದಾರೆ. ಇಂಡೋನೇಷಿಯಾ-263 ರೂ, ನೇಪಾಳ-3.13 ರೂ, ಮಲೇಷಿಯಾ-28.75 ರೂ, ಯುಎಸ್‌ಎ-526 ರೂ, ಮಾಲ್ಡೀವ್ಸ್-57.29 ರೂ, ಕೆನಡಾ-6259 ರೂ, ಕುವೈತ್-286 ರೂ, ಯುಎಇ-239 ರೂ. ಸೇರಿ 7653 ರೂ. ಫಾರಿನ್ ಕರೆನ್ಸಿ ಹಾಸನಾಂಬೆ ಹುಂಡಿ ಸೇರಿವೆ. ಮಾತ್ರವಲ್ಲದೆ ಈಗಾಗಲೇ ನಿಷೇಧ ಗೊಂಡಿರುವ 1000, 500 ರೂ. ಮುಖ ಬೆಲೆಯ 42,530 ಹಳೇ ನೋಟುಗಳನ್ನೂ ಹಾಕಿ ದ್ದಾರೆ. ಇದು ದೇವಿಯ ಮಹಿಮೆ ದೇಶ- ವಿದೇಶಗಳಲ್ಲೂ ಹರಡಿರು ವುದಕ್ಕೆ ಸಾಕ್ಷಿಯಾ ಗಿದೆ. ಅಷ್ಟೇ ಅಲ್ಲದೆ, ಭಕ್ತರು ತಮ್ಮ ಇಷ್ಟಾರ್ಥಗಳನ್ನು ಈಡೇರಿಸುವಂತೆ ದೇವಿಯನ್ನು ಕೋರಿ ಬರೆದ ಪತ್ರಗಳೂ ಸಹ ಪತ್ತೆಯಾಗಿವೆ.ಸಂಜೆ ವೇಳೆಗೆ ಎಣಿಕೆ ಕಾರ್ಯ ಮುಗಿಯುವ ಸಾಧ್ಯತೆ ಇದೆ.

15.17 ಲಕ್ಷ: ಇನ್ನು ಪ್ರತ್ಯೇಕ ಅಕೌಂಟ್ ಹೊಂದಿರುವ ಸಿದ್ದೇಶ್ವರಸ್ವಾಮಿ ದೇವಾಲಯದ ಹುಂಡಿ ಎಣಿಕೆಯೂ ಪೂರ್ಣಗೊಂಡಿದ್ದು, ಒಟ್ಟಾರೆ 15,17,785 ರು.ಕಾಣಿಕೆ ಸಂಗ್ರಹವಾಗಿದೆ.

ಹಾಸನಾಂಬೆ ಹುಂಡಿ ಹಣ ಎಣಿಕೆಯಲ್ಲಿ ತೊಡಗಿದ್ದ ಸಿಬ್ಬಂದಿ.

ಕಾಣಿಕೆ ಸಂಗ್ರಹ?

ವರ್ಷ	ಮೊತ್ತ (ಕೋಟಿ ರು.)
2013	1.21
2014	1.27
2015	1.46
2016	2.67
2017	4.14
2018	2.68
2019	3.06
2020	22.79
2021	1.54
2022	3.36
2023	8.72
2024	12.63
2025	25.59

ಐತಿಹಾಸಿಕ ದಾಖಲೆ ಸೃಷ್ಟಿ

ಹಲವು ವಿಶೇಷತೆಗಳಿಂದ ಕೂಡಿದ್ದ ಈ ಬಾರಿ ಹಾಸನಾಂಬೆ ಜಾತ್ರಾ ಮಹೋತ್ಸವ ನಿರೀಕ್ಷೆಯಂತೆಯೇ ಐತಿಹಾಸಿಕ ದಾಖಲೆ ಸಹ ಬರೆದಿದೆ. ಕಳೆದ ವರ್ಷ 17,42,240 ಮಂದಿ ಭಕ್ತರು ದೇವಿ ದರ್ಶನ ಪಡೆದಿದ್ದರು. ಒಟ್ಟಾರೆ ಕಾಣಿಕೆ ರೂಪದ ಆದಾಯ 12,63,83,808 ರೂ.ಸಂಗ್ರಹ ವಾಗಿತ್ತು. ಇದು ಹಾಸನಾಂಬೆ ದೇವಿ ಜಾತ್ರಾ ಮಹೋತ್ಸವದ ಇತಿಹಾಸದಲ್ಲೇ ಈ ವರೆಗಿನ ಹೊಸ ದಾಖಲೆ ಆಗಿತ್ತು. ಆದರೆ 2025ರಲ್ಲಿ ಅಳಿಸಲು ಕಷ್ಟ ಎನ್ನುವಂತಹ ವಿನೂತನ ದಾಖಲೆ ಸೃಷ್ಟಿಯಾಗಿದೆ. ಅ.9 ರಿಂದ 23 ರ ವರೆಗೆ 26,06,691 ಮಂದಿ ಭಕ್ತರು ದೇವಿಯ ದರ್ಶನ ಪಡೆದಿದ್ದು, ಒಂದು ದಾಖಲೆಯಾದರೆ, ಒಟ್ಟಾರೆ ಆದಾಯ 25,59,87,327 ಕೋಟಿ ತಲುಪಿರುವುದು ಹೊಚ್ಚ ಹೊಸ ದಾಖಲೆಯಾಗಿದೆ. ಈ ಬಾರಿ ಅಚ್ಚುಕಟ್ಟು, ಶಿಸ್ತುಬದ್ಧ ಉತ್ಸವ ನಡೆದಿದ್ದು ಒಂದು ಸಂತೋಷವಾದರೆ, ಆದಾಯ ಗಣನೀಯವಾಗಿ ಏರಿಕೆಯಾಗಿರುವುದು ಜಿಲ್ಲಾಡಳಿತ ಹಾಗೂ ಉಸ್ತುವಾರಿ ಸಚಿವರು ಹಿರಿ ಹಿರಿ ಹಿಗ್ಗುವಂತಾಗಿದೆ.

ಪಥಸಂಚಲನಕ್ಕೆ ಅವಕಾಶ ಕೋರಿದ ಆರ್‌ಎಸ್‌ಎಸ್ ಅರ್ಜಿ ವಿಚಾರಣೆ ಮುಂದಕ್ಕೆ

ಚಿತ್ತಾಪುರ: ಶಾಂತಿ ಸಭೆಗೆ ಹೈ ಸೂಚನೆ

ವಿಶ್ವವಾಣಿ ಸುದ್ದಿಮನೆ ಕಲಬುರಗಿ

ಚಿತ್ತಾಪುರದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್) ಪಥಸಂಚಲನಕ್ಕೆ ಅನುಮತಿ ನೀಡುವ ಕುರಿತು ನಡೆಯುತ್ತಿರುವ ವಿವಾದದ ಹಿನ್ನಲೆಯಲ್ಲಿ ಕಲಬುರಗಿ ಹೈಕೋರ್ಟ್ ವಿಭಾಗೀಯ ಪೀಠವು ಮಹತ್ವದ ಆದೇಶ ಹೊರಡಿಸಿದೆ.

ನ್ಯಾಯಮೂರ್ತಿ ಎಂ.ಜಿ.ಎಸ್. ಕಮಲ್ ಅವರ ಏಕಸದಸ್ಯ ಪೀಠವು, ಅಕ್ಟೋಬರ್ 28 ರಂದು ಎಲ್ಲ ಸಂಘಟನೆಗಳೊಂದಿಗೆ ಶಾಂತಿ ಸಮಿತಿ ಸಭೆ ನಡೆಸಿ, ಅದರ ವರದಿಯನ್ನು ಅಕ್ಟೋಬರ್ 30 ರಂದು ಮಧ್ಯಾಹ್ನ 2.30ಕ್ಕೆ ನ್ಯಾಯಾಲಯಕ್ಕೆ ಸಲ್ಲಿಸಬೇಕು ಎಂದು ಜಿಲ್ಲಾಡಳಿತಕ್ಕೆ ನಿರ್ದೇಶನ ನೀಡಿದೆ. ಶುಕ್ರವಾರ ನಡೆದ ವಿಚಾರಣೆಯಲ್ಲಿ ಪೀಠವು ವಾದ-ಪ್ರತಿವಾದ ಆಲಿಸಿ, ಆರ್‌ಎಸ್‌ಎಸ್ ಪಥ ಸಂಚಲನಕ್ಕೆ ಅನುಮತಿ ನೀಡುವ ಅಥವಾ ಮುಂದೂಡುವ ನಿರ್ಧಾರವನ್ನು ಶಾಂತಿ ಸಮಿತಿ ಸಭೆಯಲ್ಲಿಯೇ ಕೈಗೊಳ್ಳಬೇಕು ಎಂದು ಜಿಲ್ಲಾಡಳಿತಕ್ಕೆ ಸೂಚಿಸಿತು.

ಸರಕಾರದಿಂದ ಕಾಲಾವಕಾಶ ಬೇಡಿಕೆ: ಸರಕಾರದ ಪರ ವಾದ ಮಂಡಿಸಿದ ಅಟಾರ್ನಿ ಜನರಲ್ (ಎಜಿ) ಶಶಿಕಿರಣ ಶೆಟ್ಟಿ ಅವರು, ನೆಲ ಮಟ್ಟದಲ್ಲಿ ಶಾಂತಿ-ಸುವ್ಯವಸ್ಥೆ ಕಾಪಾಡಲು ಹಾಗೂ ವಿವಿಧ ಸಂಘಟನೆಗಳ ನಡುವಿನ ಉದ್ವಿಗ್ನತೆ ನಿವಾರಿಸಲು ಇನ್ನಷ್ಟು ಸಮಯ ಅಗತ್ಯವಿದೆ ಎಂದು ಕೋರ್ಟ್‌ಗೆ ಮನವಿ ಮಾಡಿದರು. ಜಿಲ್ಲಾಧಿಕಾರಿ (ಡಿಸಿ) ವರದಿಯನ್ನು ಕೋರ್ಟ್‌ನಲ್ಲಿ ಓದಿಕೊಟ್ಟ ಎಜಿ ಅವರು, ಪರಿಸ್ಥಿತಿ ಉದ್ವಿಗ್ನವಾಗಿರುವ ಕಾರಣ ಅರ್ಜಿಯನ್ನು ತಿರಸ್ಕರಿಸದೆ ಪರಿಗಣನೆಗೆ ಬಾಕಿ ಇಡಲಾಗಿದೆ. ಶೀಘ್ರದಲ್ಲೇ ಸಂಘಟಕರು ಮತ್ತು ಶಾಂತಿ ಸಮಿತಿ ಸದಸ್ಯರೊಂದಿಗೆ ಸಭೆ ನಡೆಸಲು ಅಧಿಕಾರಿಗಳು ನಿರ್ಧರಿಸಿದ್ದಾರೆ ಎಂದು ತಿಳಿಸಿದರು.

ನ್ಯಾಯಾಲಯದ ಸೂಚನೆಗಳು: ನ್ಯಾಯಮೂರ್ತಿ ಎಂ.ಜಿ.ಎಸ್. ಕಮಲ್ ಅವರು, ಮಾಧ್ಯಮ ವರದಿಗಳ ಆಧಾರದ ಮೇಲೆ ನ್ಯಾಯಾಲಯ ತೀರ್ಮಾನ ಕೈಗೊಳ್ಳುವುದಿಲ್ಲ. ಸರಕಾರದ ವರದಿಯೇ ಮುಖ್ಯ ದಾಖಲೆ. ಅಂತಿಮವಾಗಿ ನ್ಯಾಯಾಲಯವು ಜಿಲ್ಲಾಡಳಿತಕ್ಕೆ ಅಕ್ಟೋಬರ್ 28 ರಂದು ಜಿಲ್ಲಾ ಕೇಂದ್ರ ಕಚೇರಿಯಲ್ಲಿ ಸಭೆ ನಡೆಸುವಂತೆ ಹಾಗೂ ನವೆಂಬರ್ 2 ರ ಪಥಸಂಚಲನ ಕುರಿತ ನಿರ್ಣಯವನ್ನು ಅದೇ ಸಭೆಯಲ್ಲಿ ಕೈಗೊಳ್ಳುವಂತೆ ನಿರ್ದೇಶಿಸಿದೆ. ಸಭೆಯ ಸಂಪೂರ್ಣ ವರದಿಯನ್ನು ಅಕ್ಟೋಬರ್ 30ರಂದು ಮಧ್ಯಾಹ್ನ 2.30ಕ್ಕೆ ಕೋರ್ಟ್‌ಗೆ ಸಲ್ಲಿಸಬೇಕು ಎಂದು ನಿರ್ದೇಶನ ನೀಡಿದೆ. ನ್ಯಾಯಾಲಯವು ಇದೇ ವೇಳೆ ಎಲ್ಲ ಸಂಘಟನೆಗಳು ಹಾಗೂ ಅಧಿಕಾರಿಗಳು ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡಲು ಸಂಪೂರ್ಣ ಸಹಕರಿಸಬೇಕು ಎಂದು ಸ್ಪಷ್ಟ ಸೂಚನೆ ನೀಡಿದೆ.

ಅರ್ಜಿದಾರರ ಪರ ವಾದವೇನು?

ಪಿಟೀಷನರ್ ಪರ ವಾದ ಮಂಡಿಸಿದ ಹಿರಿಯ ವಕೀಲ ಅರುಣ್ ಶ್ಯಾಮ್ ಅವರು, ಆರ್‌ಎಸ್‌ಎಸ್ ನವೆಂಬರ್ 2 ರಂದು ಪಥಸಂಚಲನ ನಡೆಸಲು ಸಿದ್ಧವಾಗಿದೆ. ಸರಕಾರ ಸೂಕ್ತ ಪೊಲೀಸ್ ರಕ್ಷಣೆ ಒದಗಿಸಬೇಕು ಎಂದು ವಾದಿಸಿದರು. ಇದಕ್ಕೆ ಪ್ರತಿಯಾಗಿ ಎಜಿ ಶಶಿಕಿರಣ ಶೆಟ್ಟಿ ಅವರು, ವಿಷಯ ಇನ್ನೂ ಪರಿಗಣನೆಯಲ್ಲಿದೆ. ಎರಡು ವಾರಗಳೊಳಗೆ ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸಲಾಗುತ್ತಿದೆ ಎಂದು ಸ್ಪಷ್ಟಪಡಿಸಿದರು.

ಚಿತ್ತವಿಹಾರ

ಗಜಲ್



● ರವಿ ವಿಠ್ಠಲ, ಆಲಬಾಳ

ಕತ್ತಲೆಯಲೇ ಬಂದು
ಕನಸು ಕದ್ದಿದ್ದು
ಸಾಕು ಮಾಡು.
ಸದ್ದಿಲ್ಲದೇ ನನ್ನ
ನಗುವನ್ನು ಕಸಿದದ್ದು
ಸಾಕು ಮಾಡು.

ಏನಿತ್ತು ಅವಸರ
ಈ ಮನವ ಕಾಯಿಸಿ
ಸತಾಯಿಸಲು.
ಮಲ್ಲಿಗೆಯ ಮುಡಿದು
ಮರೆಯಾದದ್ದು
ಸಾಕು ಮಾಡು.

ಹೀಗೆಯೇ ಇಹುದು
ನಿನ್ನ ತಲೆಹರಟೆ
ಎಂದು ಗೊತ್ತಿದೆ.
ಕೆನ್ನೆ ಬಳಿ ಬಂದು
ಮೆಲ್ಲನೆ ತಟ್ಟಿ ಹೋದದ್ದು
ಸಾಕು ಮಾಡು.

ಎಷ್ಟೋ ಹೊತ್ತು
ಕಾದಿದ್ದೇನೆ ನಿನಗೆಂದೇ
ಇಂದು ನಾನು,
ತಿಳಿದು ತಿಳಿದೇ ನೀನು
ಕದ್ದು ನೋಡಿದ್ದು
ಸಾಕು ಮಾಡು.

ಕೊಂಚ ಬಿಡುವು ಮಾಡಿಕೋ
ಇಂದಾದರೂ ನೀನು
ಕುಂಟುನೆಪವ ಹೇಳಿ
ದೂರಾದದ್ದು
ಸಾಕು ಮಾಡು.

ಮಂದ ಬೆಳಕಿನಲಿ
ನಿನ್ನ ನೆರಳು
ನಡುಗುತಿದೆ ರವೀ
ಇಷ್ಟ ಸಖಿಯ
ಹುಡುಕಿ ಊರಲೆದ್ದದ್ದು
ಸಾಕು ಮಾಡು.

ಕನ್ನಡ ಭಾಷೆ ಮತ್ತು ಸಂಸ್ಕೃತಿ ಅಭಿವೃದ್ಧಿಯಲ್ಲಿ ಸಂಘಟನೆಗಳ ಪಾತ್ರ

● ಕೆ.ಎಸ್.ಸೋಮೇಶ್ವರ ಬೆಂಗಳೂರು

ನಮ್ಮ ಮಾತೃಭಾಷೆ ಕನ್ನಡಕ್ಕೆ, ಅದರ ಸಂಸ್ಕೃತಿಗೆ ಸಾವಿರಾರು ವರ್ಷಗಳ ಇತಿಹಾಸವಿದೆ. ಪಂಪ, ರನ್ನರಿಂದ ಮೊದಲ್ಗೊಂಡು ಅನೇಕ ಕವಿ ಪುಂಗವರು, ವಚನಕಾರರು, ಹರಿದಾಸರು, ಜಾನಪದ ಗೀತೆಕಾರರು ಈ ಭಾಷೆಯ ಹಿರಿಮೆಯನ್ನು ಪದಗಳಲ್ಲಿ ತೆರೆದಿಟ್ಟಿದ್ದಾರೆ. ಇವು ಆಯಾ ಕಾಲದ ಸಂಸ್ಕೃತಿಯನ್ನು ಹೇಳುವುದರ ಜತೆಗೆ, ನಮ್ಮ ನಾಡಿನ ಪರಂಪರೆಯನ್ನು ಕೂಡ ಮುಂದಿನ ತಲೆಮಾರಿಗೆ ಎತ್ತಿ ತೋರಿಸುತ್ತವೆ. ಕುವೆಂಪು, ಬೇಂದ್ರೆ, ಡಿವಿಜಿ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಕೆ.ಎಸ್.ನರಸಿಂಹ ಸ್ವಾಮಿ, ಬೆಳಗೆರೆ ಜಾನಕಮ್ಮ, ಅನುಪಮಾ ನಿರಂಜನ, ಕೆ.ಎಸ್.ನಿಸಾರ್ ಅಹಮದ್, ತ್ರಿವೇಣಿ ಹೀಗೆ ಒಬ್ಬೊಬ್ಬರೂ ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಸಂಚಾಲಕರೇ ಎನ್ನಬಹುದು. ಇವರೆಲ್ಲ ಕನ್ನಡ ಭಾಷೆಯ ಸೊಗಡನ್ನು ಜನಗಳಿಗೆ ಅರ್ಥವಾಗುವಂತೆ ಸುಲಭ ರೀತಿಯಲ್ಲಿ ಪರಿಚಯಿಸಿ ಬೆಳೆಸುತ್ತಾ ಹೋದರು.

ಹತ್ತು ದಿಕ್ಕು, ನೂರು ದನಿ

ಕನ್ನಡ ಭಾಷೆಯ ಬೆಳವಣಿಗೆಗೆ ಕೆಲ ವಿದೇಶಿಯರೂ ಕಾರಣರಾಗಿದ್ದಾರೆ. ಇಂದಿನ ವಿವಿಧ 'ಕನ್ನಡ-ಕನ್ನಡ ನಿಘಂಟು'ಗಳಿಗೆ ಮಾತೃಸಮಾನವಾಗಿರುವಂಥದ್ದು 'ಕಿಟೆಲ್ ನಿಘಂಟು'. ಇದನ್ನು ರೂಪಿಸಿದವರು ಜರ್ಮನಿಯ ರೆವರೆಂಡ್ ಫರ್ಡಿನೆಂಡ್ ಕಿಟೆಲ್. ಇದೇ ರೀತಿಯಲ್ಲಿ, ಜರ್ಮನಿಯ ಹರ್ಮನ್ ಮೋಗ್ಲಿಂಗ್ ಅವರು 'ಮಂಗಳೂರು ಸಮಾಚಾರ' ಎಂಬ ಕನ್ನಡ ದಿನಪತ್ರಿಕೆಯನ್ನು ರೂಪಿಸಿ ಬೆಳೆಸಿದರು. ಇನ್ನು ಬಿ.ಎಲ್. ರೈಸ್ ಅವರಂತೂ ಕನ್ನಡದ ಶಾಸನಗಳ ಆಗರವನ್ನೇ ಭೇದಿಸಿ, ಅದರಲ್ಲಿ ದಾಖಲಾಗಿದ್ದ ಕನ್ನಡನಾಡಿನ ವೈವಿಧ್ಯಮಯ ಸಂಸ್ಕೃತಿಯ ಪರಿಚಯವು ಇಂದಿನವರಿಗೂ ದಕ್ಕುವಂತೆ ಮಾಡಿದರು.

ಒಂದಿಷ್ಟು ಹಿನ್ನೋಟ

'ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು' ಎಂದು ಹೇಳಿದವರು ಹುಯಿಲಗೋಳ ನಾರಾಯಣರಾಯರು. ನಮ್ಮ ಭಾಷೆ ಮತ್ತು ಜನರ ಆಚಾರ-ವಿಚಾರಗಳು ಅಂದಿನ ಮೈಸೂರು ರಾಜ್ಯದ ಸುತ್ತಮುತ್ತಲಲ್ಲಿ ಹಂಚಿಹೋಗಿತ್ತು. 1956ರಲ್ಲಿ ಭಾಷಾವಾರು ಪ್ರಾಂತ್ಯಗಳ ರಚನೆಯಾದ ನಂತರ ಮುಂಬೈ, ಹೈದರಾಬಾದ್ ಕರ್ನಾಟಕ ಮತ್ತು ಕೇರಳದ ಗಡಿಭಾಗದ ಹಲವಾರು ಪ್ರಾಂತ್ಯಗಳು ಒಗ್ಗೂಡಿ 'ಕರ್ನಾಟಕ' ರಾಜ್ಯವಾಯಿತು. ಇದು ಹಲವರ ಹೋರಾಟದ ಫಲಶ್ರುತಿ.

ಕನ್ನಡದ ಸಿರಿತನವನ್ನು ವ್ಯವಸ್ಥಿತವಾಗಿ ಬೆಳೆಸಲು ಅಂದಿನ ಮೈಸೂರು ಅರಸರು ಹುಟ್ಟುಹಾಕಿದ್ದು ಕನ್ನಡ ಸಾಹಿತ್ಯ ಪರಿಷತ್ತು. ಇದರ ಚಟುವಟಿಕೆಗೆ 100 ವರ್ಷಕ್ಕೂ ಮಿಗಿಲಾದ ಇತಿಹಾಸವಿದೆ. ಇದರ ಅಂಗಸಂಸ್ಥೆಗಳು ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ಕೆಲಸ ಮಾಡುತ್ತಿವೆ. ಇದೇ ರೀತಿಯಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮುಂತಾದವು 'ಕನ್ನಡ-ಕೇಂದ್ರಿತ' ಎನಿಸಿದ ಹಲವು ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡಿವೆ.

ಹೋರಾಟದ ಹಾದಿ

1960-61ರ ಕಾಲಘಟ್ಟದಲ್ಲಿ, ಕೇಂದ್ರ ಸರಕಾರದ ಹಿಂದಿ ಹೇರಿಕೆಯ ನಡೆಯನ್ನು ಪ್ರತಿಭಟಿಸಿ ವಿದ್ಯಾರ್ಥಿ ಸಂಘಟನೆಗಳು ರಾಜ್ಯಾದ್ಯಂತ ಶಾಂತಿಯುತ ಚಳವಳಿಯನ್ನು ನಡೆಸಿದ ಪರಿಣಾಮ, ಅದಕ್ಕೆ ತಾತ್ಕಾಲಿಕ ತಡೆ ಒದಗಿತು. ಮುಂದೆ 80ರ ದಶಕದಲ್ಲಿ, ರಾಜ್ಯದಲ್ಲಿ ಕನ್ನಡ ಭಾಷೆಗಾಗಿನ ಪ್ರಾಮುಖ್ಯ ಕುರಿತಂತೆ ದೊಡ್ಡ ಆಂದೋಲನವೇ ನಡೆದು, ಅದರ ಸಾಧಕ-ಬಾಧಕಗಳನ್ನು ವಿಮರ್ಶಿಸಲು ಸರಕಾರವು ಸಾಹಿತಿ ವಿ.ಕೃ.ಗೋಕಾಕರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಿತು. ಅದು ನೀಡಿದ ವರದಿಯ ಅನುಷ್ಠಾನಕ್ಕೆ ದೊಡ್ಡ ಚಳವಳಿಯೇ ನಡೆದು 'ಗೋಕಾಕ್ ಚಳವಳಿ' ಎಂದೇ ಅದು ಜನಜನಿತವಾಯಿತು. ಕನ್ನಡದ ಮೇರುನಟ ಡಾ.ರಾಜ್‌ಕುಮಾರ್ ಮಾತ್ರವಲ್ಲದೆ ನಾಡಿನ ವಿವಿಧ ರಂಗಗಳ ಪ್ರಮುಖರು, ಸಾಹಿತಿಗಳು, ಶಿಕ್ಷಣ ತಜ್ಞರು ಈ ಆಂದೋಲನಕ್ಕೆ ಕೈಜೋಡಿಸಿದರು. ಮುಂದೆ, ಕನ್ನಡಿಗರಿಗೆ ಇಲ್ಲಿಯೇ ಉದ್ಯೋಗಕ್ಕೆ ಆದ್ಯತೆ ಕೊಡುವ ವಿಷಯ ಬಂದಾಗ ಹೊಮ್ಮಿದ ಡಾ. ಸರೋಜಿನಿ ಮಹಿಷಿ ವರದಿ ಕೂಡ ಜನಬೆಂಬಲ ಗಳಿಸಿ, ಸರಕಾರದಲ್ಲಿನ ಉದ್ಯೋಗ ನೀತಿಯಲ್ಲಿ ಹಲವು ಬದಲಾವಣೆಗಳಾಗಿವೆ, ಸರಕಾರದ ಇಲಾಖೆಗಳಲ್ಲಿ ಕನ್ನಡದ ಬಳಕೆಯೂ ಸಾಕಷ್ಟು ಆಗುತ್ತಿದೆ.

ಇನ್ನು, ಕನ್ನಡಿಗರ ಸಮಸ್ಯೆಗಳನ್ನು ಕೇಂದ್ರಕ್ಕೆ ಒತ್ತಿ ಹೇಳುವ ಪ್ರಯತ್ನದಲ್ಲಿ ಸಾಕಷ್ಟು ಕನ್ನಡಪರ ಸಂಘಟನೆಗಳು ದಶಕಗಳಿಂದಲೂ ಕೆಲಸ ಮಾಡಿಕೊಂಡು ಬರುತ್ತಿವೆ. ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಪರವಾಗಿ ಜಾಗೃತಿ ಮೂಡಿಸುವುದರ ಜತೆಜತೆಗೆ, ಶಿಕ್ಷಣ ಅಥವಾ ಉದ್ಯೋಗದ ಕಾರಣಕ್ಕೆ ಕರ್ನಾಟಕದಲ್ಲಿ ನೆಲೆಸಿರುವ ಪರರಾಜ್ಯಗಳ ನಾಗರಿಕರಿಗೆ ಕನ್ನಡ ಭಾಷೆಯನ್ನು ಕಲಿಸುವ ಯತ್ನವೂ ಒಂದಿಷ್ಟು ಸಂಘಟನೆಗಳಿಂದ ಆಗುತ್ತಿದೆ. ಇಂಥ ಅವಿರತ ಯತ್ನಗಳಿಂದಾಗಿ, ಪಟ್ಟಣ-ನಗರಿಗಳ ವಾಣಿಜ್ಯ ಸಂಸ್ಥೆಗಳ ನಾಮಫಲಕಗಳು ಕನ್ನಡದಲ್ಲಿ ರಾರಾಜಿಸುವಂತೆ ಆಗಿದ್ದರೂ, ಕೆಲವು ರಾಷ್ಟ್ರೀಕೃತ ಬ್ಯಾಂಕುಗಳಲ್ಲಿನ ಹಲವು ಅರ್ಜಿ ನಮೂನೆಗಳಲ್ಲಿ ಕನ್ನಡದ ಬಳಕೆಯು ಸ್ವಲ್ಪ ಹಿಂದುಳಿದಿರುವಂತೆ ತೋರುತ್ತದೆ.

ಮತ್ತಷ್ಟು ಕೆಲಸವಾಗಬೇಕು

ನಮ್ಮಲ್ಲಿನ ಅನೇಕ ಕನ್ನಡಪರ ಸಂಘಟನೆಗಳು ಸಮಾಜಮುಖಿ ಗುರಿಯನ್ನಿಟ್ಟುಕೊಂಡು ಕೆಲಸ ಮಾಡುವ ಅಗತ್ಯವಿದೆ. ಏಕೆಂದರೆ, ಈ ಸಂಘಟನೆಗಳಿಗೆ ಹೆಚ್ಚಿನ ಯುವಜನರ ಬೆಂಬಲವಿರುತ್ತದೆ. ಉದಾಹರಣೆಗೆ, ಈ ಸಂಘಟನೆಗಳು ಪ್ರತಿ ಶಾಲೆಯಲ್ಲೂ ಪಠ್ಯೇತರ ಚಟುವಟಿಕೆ ಎಂಬಂತೆ ವಾರದಲ್ಲಿ 2 ದಿನವಾದರೂ ಮಕ್ಕಳಿಂದ ಕನ್ನಡದ ಉತ್ತಮ ಕಥೆಗಳನ್ನು, ಪ್ರಮುಖ ಸಾಮಾಜಿಕ ವಿಷಯದ ಕುರಿತಾದ ಹಿರಿಯ ಲೇಖಕರ ಬರಹಗಳನ್ನು ಓದಿಸಬಹುದು. ಜತೆಗೆ, ನಾಡಿನ ವಿವಿಧ ಭಾಗಗಳ ಸಂಸ್ಕೃತಿಯನ್ನು ಮನದಟ್ಟು ಮಾಡಿಕೊಡಲು ಅವರಿಗೆ ಸೂಕ್ತ ವಿಷಯಗಳನ್ನು ನೀಡಿ ಪ್ರಬಂಧ ರಚನೆಗೆ ಅನುವುಮಾಡಿಕೊಟ್ಟು, ಬಹುಮಾನ ನೀಡಿ ಉತ್ತೇಜಿಸಬಹುದಾಗಿದೆ.

ಪ್ರೀತಿಯಿಂದಲೇ ಬೆಳೆಸಿ, ಮನೆ ಕೆಲಸವನ್ನೂ ಕಲಿಸಿ

● ಹುಳಿಗೆರೆ ಮಲ್ಲಿಕಾರ್ಜುನ್ ಚಿಕ್ಕಮಗಳೂರು

ಕೆಲವರಿಗೆ ಇದೊಂದು ಷಾಕಿಂಗ್ ನ್ಯೂಸ್, ಮತ್ತೆ ಕೆಲವರಿಗೆ ಬ್ರೇಕಿಂಗ್ ನ್ಯೂಸ್, ಇನ್ನು ಕೆಲವರಿಗೆ ತೃಪ್ತಿಯ ವಿಷಯ.

ಅದೊಂದು ಸಂವಾದ ಕಾರ್ಯಕ್ರಮ. ಖ್ಯಾತ ಮನಃಶಾಸ್ತ್ರಜ್ಞೆಯ ಅಧ್ಯಕ್ಷತೆಯಲ್ಲಿ 'ನಮ್ಮ ಮಕ್ಕಳು, ನಮ್ಮ ಆಸ್ತಿ' ಎಂಬ ವಿಷಯದ ಬಗ್ಗೆ ಸಂವಾದ ನಡೆಯುತ್ತಿತ್ತು. 'ಮಕ್ಕಳಿಗಾಗಿ ಆಸ್ತಿಯನ್ನು ಮಾಡುವುದಲ್ಲ, ಮಕ್ಕಳನ್ನೇ ಆಸ್ತಿಯನ್ನಾಗಿ ಮಾಡಬೇಕು; ಅದು ಹೇಗೆ? ಮಕ್ಕಳನ್ನು ನೀವು ಹೇಗೆ ಬೆಳೆಸುತ್ತಿದ್ದೀರಿ?' ಎಂಬ ವಿಷಯ ಮುನ್ನೆಲೆಗೆ ಬಂದು ಚರ್ಚೆಗಳು, ವಾದಗಳಿಗೆ ಬಿಸಿಯೇರತೊಡಗಿತ್ತು.

''ಮಕ್ಕಳನ್ನು ಫ್ರೀ ಬಿಟ್ಟಷ್ಟೂ ಬೇಡದ ವಿಷಯಕ್ಕೆ ತಲೆ ಹಾಕುತ್ತವೆ. ಬರೀ ಟಿವಿ, ಮೊಬೈಲ್‌ಗಳಿಗೆ ಅಡಿಕ್ಟ್ ಆಗುತ್ತವೆ, ಹೇಳುವ ಮಾತನ್ನು ಸ್ವಲ್ಪವೂ ಕೇಳುವುದಿಲ್ಲ. ಎದುರು ಜವಾಬು ಕೊಡುತ್ತವೆ. ಹೀಗಾಗಿ, ನನ್ನ ಮಗನನ್ನು ಕರಾಟೆ, ಯೋಗಾಸನ ಮತ್ತು ಅಬಾಕಸ್ ಕ್ಲಾಸ್‌ಗಳಿಗೆ ಸೇರಿಸಿದ್ದೇನೆ. ಸಂಜೆ ಟ್ಯೂಷನ್‌ಗೆ ಕಳುಹಿಸಿಬಿಡುತ್ತೇನೆ. ಫುಲ್ ಬ್ಯುಸಿ ಮಾಡಿದ್ದೇನೆ, ಚೆನ್ನಾಗಿ ಓದುತ್ತಾನೆ, ಫುಲ್ ಆ್ಯಕ್ಟಿವ್ ಆಗಿದ್ದಾನೆ'' ಎಂದು ಮಹಿಳೆಯೊಬ್ಬರು ಹೇಳಿಕೊಂಡರು ಹೆಮ್ಮೆಯಿಂದ, ತಾವೇ ದೊಡ್ಡ ಸಾಧಕಿ ಎಂಬಂತೆ!

ಮತ್ತೊಬ್ಬರು ಎದ್ದು ನಿಂತವರೇ, ''ನನಗೆ ಒಬ್ಬಳೇ ಮಗಳು. ಅವಳೆಂದರೆ ನನಗೆ, ನಮ್ಮ ಮನೆಯವರಿಗೆ ಪಂಚಪ್ರಾಣ. ಆಕೆಯನ್ನು ತುಂಬಾ ಚೆನ್ನಾಗಿ ನಿಗಾ ನೋಡುತ್ತೇವೆ. ಶಾಲೆಗೆ ನಾವೇ ಬಿಡುತ್ತೇವೆ, ನಾವೇ ಕರೆದುಕೊಂಡು ಬರುತ್ತೇವೆ. ಸಂಜೆ ಡಾನ್ಸ್ ಕ್ಲಾಸ್, ಅಬಾಕಸ್, ನಂತರ ಟ್ಯೂಷನ್‌ಗೆ ಕಳಿಸುತ್ತೇವೆ. ಪಾಪ, ತುಂಬಾ ಬ್ಯುಸಿ ಆಕೆ, ಟೈಮೇ ಇರುವುದಿಲ್ಲ. ನಾವೇ ಕೈತುತ್ತು ತಿನ್ನಿಸುತ್ತೇವೆ'' ಎನ್ನುತ್ತಾ ತಾವು ಅತ್ಯುತ್ತಮ ಪೋಷಕರು ಎಂಬಂತೆ ಬಿಂಬಿಸಿಕೊಂಡರು.

ಹೀಗೆ ಒಬ್ಬೊಬ್ಬ ಪೋಷಕರು ಒಂದೊಂದು ರೀತಿಯಲ್ಲಿ ತಮ್ಮ ಮಕ್ಕಳ ಬಗ್ಗೆ ಹಾಗೂ ಅವರನ್ನು ತಾವು ಪೋಷಿಸುತ್ತಿರುವ ಬಗ್ಗೆ ಹೇಳಿಕೊಂಡರು. ಎಲ್ಲರ ವಿಷಯ ಮಂಡನೆಯ ನಂತರ ಮಾತಿಗಿಳಿದ ಮನಃಶಾಸ್ತ್ರಜ್ಞೆ ಒಂದೊಂದೇ ವಿಷಯವನ್ನು ಬಿಡಿಸಿಡುತ್ತಾ ಹೋಗಿದ್ದು ಹೀಗೆ:

- ನಿಮಗೆಲ್ಲರಿಗೂ ನಿಮ್ಮ ನಿಮ್ಮ ಮಕ್ಕಳೆಂದರೆ ಜೀವ, ಬಂಗಾರ, ಉಸಿರು ಎಲ್ಲಾ. ಮಕ್ಕಳಿಗೆ ಯಾವ ಕಷ್ಟವೂ ಬಾರದಂತೆ ಬಹಳ ಜೋಪಾನ ಮಾಡುತ್ತಿದ್ದೀರಿ.
- ಮಕ್ಕಳ ಎದುರಲ್ಲಿ ನಿಮಗಿರುವ ನೋವಿನ ಚಿಕ್ಕ ಎಳೆಯನ್ನೂ ತೋರಿಸುವುದಿಲ್ಲ. ನಿಮ್ಮ ಮಗುವು ಕಲಿಯುತ್ತಿರುವುದು ಪ್ರಾಥಮಿಕ ಶಾಲೆಯಲ್ಲೇ ಇರಲಿ, ಪ್ರೌಢಶಾಲೆಯಲ್ಲೇ ಇರಲಿ ಅವಕ್ಕೆ ತುತ್ತು ಉಣಿಸುತ್ತಲೇ ಇರುತ್ತೀರಿ. ಇದು ಎಲ್ಲಾ ಪೋಷಕರು ಮಾಡುವ ಕೆಲಸ.
- ಜಮೀನು ಚೆನ್ನಾಗಿರಲಿ ಅಂತ ಅದಕ್ಕೆ ನೀರು-ಗೊಬ್ಬರ ಹಾಕಿ, ತಂತಿ ಬೇಲಿಯನ್ನೂ ಕಟ್ಟುವುದು ವಾಡಿಕೆ; ಆದರೆ ನೆಲಕ್ಕೆ ನೋವಾಗುತ್ತದೆ ಅಂತ ಉಳುಮೆ ಮಾಡುವುದನ್ನಾಗಲೀ, ನೆಲವನ್ನು ಅಗೆಯುವುದನ್ನಾಗಲೀ ನಿಲ್ಲಿಸಲಿಕ್ಕೆ ಆಗುವುದಿಲ್ಲವಲ್ಲಾ? ಇದು ನಿಮ್ಮ ಮಕ್ಕಳಿಗೂ ಅನ್ವಯಿಸುವ ವಿಷಯ.
- ನಿಮ್ಮ ಮಕ್ಕಳಿಗೆ ನೀವು ಮಾಡುವ ಆರೈಕೆಯ ಜತೆಜತೆಗೆ, ನೋವಿನ ಪರಿಚಯವೂ ಆಗಬೇಕು, ದುಃಖದ ಅನುಭವಗಳಾಗಬೇಕು. ಮಕ್ಕಳನ್ನು 'ಬ್ಯುಸಿ'ಯಾಗಿ ಇಡಬೇಕೆಂದು ನೀವು ಕಲಿಸುವ ಕರಾಟೆ, ಅಬಾಕಸ್, ಡಾನ್ಸ್ ಅಥವಾ ಇತರೆ ಚಟುವಟಿಕೆಗಳು ಕೊನೆಯವರೆಗೂ ನಿಮ್ಮ ಮಕ್ಕಳನ್ನು ಅನುಸರಿಸಿಕೊಂಡು ಬರಲಾರವು. ಹಾಗಾಗಿ ಮಕ್ಕಳಿಗೆ ನೀವು ಕಲಿಸಬೇಕಾದ್ದು ಮನೆಯಲ್ಲಿನ ಒಂದಷ್ಟು ಕೆಲಸಗಳನ್ನು.
- ಆ ಕೆಲಸಗಳು ಯಾವುವೆಂದರೆ- ಕಸ ಗುಡಿಸುವುದು, ನೆಲ ಒರೆಸುವುದು, ಪಾತ್ರೆ ತೊಳೆಯುವುದು, ತಂದೆ-ತಾಯಿಯರ ಜತೆಗೆ ನಗುನಗುತ್ತಾ ಮಾತನಾಡುವುದು ಇತ್ಯಾದಿ. ಹೀಗೆ ಮಾಡುವುದರಿಂದ ಮಕ್ಕಳಲ್ಲಿ ಚಿಕ್ಕ ವಯಸ್ಸಿನಿಂದಲೇ ಶಿಸ್ತು-ಸಂಯಮ, ಹೊಣೆಗಾರಿಕೆಯ ಪ್ರಜ್ಞೆಗಳು ವ್ಯಕ್ತಿತ್ವದಲ್ಲಿ ಬೆರೆತು ಹೋಗುತ್ತವೆ. ಸಮಸ್ಯೆಯನ್ನು ಪರಿಹರಿಸುವ ಕೌಶಲ ಬೆಳೆಯುತ್ತದೆ. ಮುಂದೆ ಮಕ್ಕಳು ಸಂಬಂಧಗಳ ಮತ್ತು ಕಾರ್ಯಭಾರದ ನಿರ್ವಹಣೆಯಲ್ಲಿ ಸಮರ್ಥರಾಗುತ್ತಾರೆ.

ಕಾರ್ಯಕ್ರಮ ನಡೆಯುತ್ತಿದ್ದ ಆವರಣದಲ್ಲಿ ನಿಶ್ಶಬ್ದ ತಾಂಡವವಾಡುತ್ತಿತ್ತು, ಅನೇಕರ ಮುಖದಲ್ಲಿ 'ಹೌದು ಅಲ್ವಾ?' ಎಂಬ ಭಾವನೆ ಎದ್ದುಕಾಣುತ್ತಿತ್ತು...

ಮನಃಶಾಸ್ತ್ರಜ್ಞೆ ಹೇಳಿದ್ದು ನಿಜ ಅಲ್ಲವೇ? ಮಕ್ಕಳಿಗೆ ನಾವು ವರ್ಗಾಯಿಸಬೇಕಿರುವುದು ನಮ್ಮ ಸಂಸ್ಕಾರ, ಸಂಸ್ಕೃತಿ ಹಾಗೂ ಮನೆತನದ ಗುಣಗಳನ್ನು. ಹಿಂದೆಲ್ಲಾ ಹಬ್ಬ-ಹರಿದಿನಗಳ ಆಚರಣೆಯಲ್ಲಿ ಎಷ್ಟೊಂದು ಸಂಭ್ರಮವಿರುತ್ತಿತ್ತು; ಆದರೆ ಇಂದು ಅವೆಲ್ಲವೂ ಕ್ರಮೇಣ ಮಾಯವಾಗುತ್ತಿದೆ. ಕುಟುಂಬದ ಸದಸ್ಯರ ನಡುವೆ ಇರಬೇಕಾದ ಪರಸ್ಪರ ಬಾಂಧವ್ಯ ಕಾಣೆಯಾಗುತ್ತಿದೆ, ಆ ಜಾಗದಲ್ಲಿ ಸ್ಮಾರ್ಟ್‌ಫೋನ್ ಬಂದು ಕೂತುಬಿಟ್ಟಿದೆ. ಹೆತ್ತವರು ಮಕ್ಕಳಿಗೆ ಏನನ್ನು ನೀಡುತ್ತಾರೋ, ಅದೇ ಅವರಿಗೆ ಮರಳಿ ಸಿಗುತ್ತದೆ. ಮಕ್ಕಳಲ್ಲಿ ಚಿಕ್ಕಂದಿನಿಂದಲೇ ಹೊಣೆಗೇಡಿತನ, ಪ್ರೀತಿರಾಹಿತ್ಯ ಮೈಗೂಡಿಕೊಂಡುಬಿಟ್ಟರೆ, ಪೋಷಕರೆಡೆಗೆ ಅವರಿಂದ ವ್ಯಕ್ತವಾಗುವುದೂ ಅಂಥ ನಡೆಯೇ. ಆದ್ದರಿಂದ, ಮಕ್ಕಳಿಗೆ ಬದುಕಿಗೆ ಅಗತ್ಯವಾಗಿರುವುದನ್ನು ಕಲಿಸುವ ಕಡೆಗೆ ಪೋಷಕರು ಗಮನ ನೀಡಬೇಕು...

ಮನಸ್ಸನ್ನು ಆಧರಿಸುವ ಆರೋಗ್ಯ

● ಮಾಯಾ ಬಾಲಚಂದ್ರ

ನಮ್ಮ ಮೂಲ ಸ್ವಭಾವವನ್ನು ನಿಖರವಾಗಿ ತಿಳಿಯದೆ, ನಮ್ಮ ಅಭಿವೃದ್ಧಿಗೆ ನಾವೇ ತಡೆಯೊಡ್ಡಿಕೊಳ್ಳುತ್ತಿರುತ್ತೇವೆ. ಯಾವಾಗ ನಮ್ಮ ಆಂತರ್ಯದ ಸ್ವರೂಪ ಸ್ಪಷ್ಟವಾಗಿ ತಿಳಿಯುವುದೋ ಆಗ ಎಲ್ಲಾ ಎಲ್ಲೆಗಳನ್ನು ಮೀರಿ, ನಮ್ಮ ಸ್ವಂತದ ಬೆಳವಣಿಗೆ ನಿಜಾರ್ಥದಲ್ಲಿ ಆಗುತ್ತದೆ. ಇದು ಆಗುವುದು ಕಷ್ಟಸಾಧ್ಯ ಎನಿಸುವ ಪರಿಸ್ಥಿತಿ ಎದುರಾಗಲು ಕಾರಣ, ಅಂತಃಶ್ರದ್ಧೆಯ ಅಭಾವ. ಇವೆಲ್ಲಕ್ಕೂ ಮೂಲ ಕಾರಣ ಮನಸ್ಸು.

ಶರೀರ ಹಾಗೂ ಮನಸ್ಸಿನ ಪರಸ್ಪರ ಅವಲಂಬನೆ, ವಿಸ್ಮಯ ಲೋಕವನ್ನೇ ತೆರೆದಿಡುತ್ತದೆ. ಶರೀರದ ದೌರ್ಬಲ್ಯ, ರೋಗ-ರುಜಿನಗಳನ್ನು ಸರಿಪಡಿಸಲು ಮನಸ್ಸಿನಿಂದ ಮಾತ್ರ ಸಾಧ್ಯ. ದೇಹಾರೋಗ್ಯದ ಸಮಸ್ಯೆ ಎದುರಾದಾಗ, ವೈದ್ಯರು ಸೂಚಿಸಿದ ಔಷಧಿ ಸೇವಿಸಿ, ಪಥ್ಯಾಹಾರದೆಡೆಗೆ ಗಮನ ನೀಡಿದರೂ, ಮನಸ್ಸು ರೋಗ ವಾಸಿಯಾಗಲೇ ಬೇಕೆಂದು ತೀರ್ಮಾನಿಸದಿದ್ದರೆ, ಆ ಕಾಯಿಲೆ ವಾಸಿಯಾಗುವುದೇ ಇಲ್ಲ. ಮನಸ್ಸು ದುರ್ಬಲವಾದರೆ, ಖಿನ್ನತೆಗೊಳಗಾದರೆ, ಶರೀರ ಅದನ್ನು ಸರಿಪಡಿಸಲು ಸಾಧ್ಯವಿಲ್ಲ. ಮನಸ್ಸು ತನ್ನನ್ನು ತಾನೇ ಸಂತೈಸಿಕೊಂಡು, ಸಮತೋಲನ ಸಾಧಿಸಬೇಕು. ಮನಸ್ಸು ಕಳೆಗುಂದಿದರೆ ಶರೀರವು ಕಳೆಗುಂದಿಬಿಡುತ್ತದೆ.

ಒಮ್ಮೆ ವೈದ್ಯರ ಬಳಿಗೆ ಬಂದವನೊಬ್ಬ, ತನ್ನ ವಿಲಕ್ಷಣ ಸಮಸ್ಯೆಯನ್ನು ಹೇಳಿಕೊಂಡಿದ್ದ. ಇತ್ತೀಚೆಗೆ ಇದ್ದಕ್ಕಿದ್ದಂತೆ ತಲೆ ತಿರುಗುವುದು, ವಾಂತಿ ಮುಂತಾದವು ವಿನಾಕಾರಣ, ಪದೇ ಪದೆ ಕಾಣಿಸಿಕೊಳ್ಳುತ್ತಿದೆ ಎನ್ನುವುದು ಆತನ ಚಿಂತೆಯಾಗಿತ್ತು. ಇದಕ್ಕೆ ಚಿಕಿತ್ಸೆ ದೊರೆಯಿತಾದರೂ, ಪರಿಹಾರ ದೊರೆಯಲಿಲ್ಲ. ವೈದ್ಯರಿಗೆ ಸವಾಲಾಗಿದ್ದ ಈ ಸಮಸ್ಯೆ, ಕೆಲ ದಿನಗಳ ನಂತರ ತನ್ನಿಂದ ತಾನೇ ವಾಸಿಯಾಗಿ, ವೈದ್ಯರೇ ಹುಬ್ಬೇರಿಸುವಂತೆ ಮಾಡಿತ್ತು. ಕೂಲಂಕಷವಾಗಿ ರೋಗಿಯ ಆರೋಗ್ಯದ ಹಿನ್ನೆಲೆ ವಿಚಾರಿಸಿದಾಗ, ತಿಳಿದು ಬಂದದ್ದಿಷ್ಟು- ಆತನ ಸ್ನೇಹಿತ ಅಪಘಾತಕ್ಕೀಡಾಗಿ, ಆಸ್ಪತ್ರೆಯಲ್ಲಿ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದ. ಅಂದಿನಿಂದ ಈತನಿಗೆ ಈ ಪೀಡೆ ಪ್ರಾರಂಭವಾಗಿತ್ತು. ಆತ ಪ್ರಾಣಾಪಾಯದಿಂದ ಪಾರಾಗಿ ಹೊರಬರುತ್ತಲೇ, ಇವನ ಆರೋಗ್ಯ ಸಮಸ್ಯೆ ಬಗೆಹರಿದಿತ್ತು. ಇಲ್ಲಿ ಇವರಿಬ್ಬರ ಮಧ್ಯೆ ಅಂಥ ಭಾವ ಬಾಂಧವ್ಯ ಇತ್ತೆಂದೇನೂ ತಿಳಿಯಬೇಕಿಲ್ಲ. ಆತನ ಒತ್ತಾಯದಿಂದಾಗಿ, ಆತನ ಬ್ಯಾಂಕ್ ಸಾಲದ ದೊಡ್ಡ ಮೊತ್ತಕ್ಕೆ ಈತ ಜಾಮೀನು ನೀಡಿದ್ದ. ಆತ ಗತಿಸಿದರೆ, ತನ್ನ ಗತಿ ಏನೆಂಬ ಚಿಂತೆಯೇ ಈತನ ಸಮಸ್ಯೆಗಳಿಗೆ ಕಾರಣವಾಗಿತ್ತು.

ಆದಿಕವಿ ವಾಲ್ಮೀಕಿಯು ''ಕೆರಳಿದ ಸರ್ಪವು ಬಾಲಕನನ್ನು ಕಚ್ಚಿ ಕೊಲ್ಲುವಂತೆ, ಚಿಂತೆಯು ಮನಸ್ಸನ್ನು ಮುತ್ತಿ, ಮನುಷ್ಯನನ್ನೇ ನಾಶ ಮಾಡುತ್ತದೆ. ಯಾರು ಶೋಕಾಕುಲನೂ, ಚಿಂತಾಕ್ರಾಂತನೂ, ನಿರುತ್ಸಾಹಿಯೂ ಆಗಿರುವನೋ ಅವನ ಎಲ್ಲ ಕಾರ್ಯಗಳು ಹಾಳಾಗುತ್ತವೆ. ಅವನು ಬಹಳ ವಿಪತ್ತಿಗೀಡಾಗಿ ನರಳಬೇಕಾಗುತ್ತದೆ'' ಎಂದಿದ್ದಾರೆ. ಚಿಂತೆಯನ್ನು ದೂರಕ್ಕೆಸೆಯಲರಿಯದವರು ಯೌವನದಲ್ಲೇ ಸಾವನ್ನಪ್ಪುತ್ತಾರೆ ಎಂದ ಡಾಕ್ಟರ್ ಅಲೆಕ್ಸಿಸ್ ಕೆರೆಲ್‌ರ ಮಾತು ಸಹ ಇದನ್ನೇ ಮಾರ್ನುಡಿಯುತ್ತದೆ. ''ಕ್ರೋಧಾದ್ಭವತಿ ಸಂಮೋಹಃ ಸಂಮೋಹಾತ್ ಸ್ಮೃತಿ ವಿಭ್ರಮಃ, ಸ್ಮೃತಿಭ್ರಂಶಾದ್ಬುದ್ಧಿನಾಶೋ ಬುದ್ಧಿನಾಶಾತ್ ಪ್ರಣಶ್ಯತಿ'' ಎನ್ನುವ ಗೀತಾವಾಕ್ಯವು ನಮ್ಮನ್ನು ಅನುದಿನವೂ ಎಚ್ಚರಿಸುತ್ತಿರಲಿ...

ಮೂರು ಉಳಿಸುವ ಸ್ವಾರ್ಥದಿಂದ ಆರು ನಷ್ಟ

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಬಟ್ಟೆಗಳ ವ್ಯಾಪಾರಿ ಪಾಪಯ್ಯ ಪರಮಲೋಭಿ ಮತ್ತು ಮಹಾಜಿಪುಣ. ಆ ಊರಿನ ಜಮೀನ್ದಾರರ ಮಗನ ಮದುವೆಗೆ ಪಾಪಯ್ಯನಿಗೂ ಆಹ್ವಾನ ಪತ್ರಿಕೆ ಬಂತು. ಜಮೀನ್ದಾರರ ಮೇಲಿರುವ ಗೌರವದಿಂದ ಎಲ್ಲರೂ ಬೆಲೆಬಾಳುವ ಉಡುಗೊರೆಗಳನ್ನು ಕೊಳ್ಳುತ್ತಿದ್ದರು. ಪಾಪಯ್ಯ ಉಡುಗೊರೆ ಕೊಡದೆ ಮದುವೆಗೆ ಹೋಗಬೇಕೆಂದು ಆಲೋಚಿಸಲು ಆರಂಭಿಸಿದನು. ಹೇಗಾದರೂ ಹಣ ಉಳಿಸಬೇಕು ಆದರೆ ಜಮೀನ್ದಾರರಿಗೆ ಗೊತ್ತಾಗಬಾರದು ಎಂದುಕೊಂಡನು.

ಕಡೆಗೆ ಒಂದು ಉಪಾಯ ತೋರಿತು. ಮದುವೆಗೆ ತುಂಬ ಜನ ಬರುತ್ತಾರೆ. ಆ ಗಡಿಬಿಡಿಯಲ್ಲಿ ಯಾರು ಯಾವ ಉಡುಗೊರೆ ತಂದಿದ್ದಾರೆಂದು ತಿಳಿಯುವುದಿಲ್ಲ. ಅದರ ಬಗ್ಗೆ ಲಕ್ಷ್ಯ ಕೊಡುವುದೂ ಇಲ್ಲ. ತನ್ನ ಸ್ನೇಹಿತ ರಾಮಯ್ಯ ಹೇಗೂ ಮದುವೆಗೆ ಉಡುಗೊರೆ ಕೊಂಡುಕೊಂಡೇ ಇರುತ್ತಾನೆ. ಅದರೊಂದಿಗೆ ತನಗೆ ತೋಚಿದ ಯಾವುದಾದರೂ ಚಿಕ್ಕ ವಸ್ತುವನ್ನು ಇಟ್ಟು ಇಬ್ಬರದ್ದೂ ಸೇರಿಸಿ ಕೊಟ್ಟರೆ ಮುಗಿಯಿತು ಎಂದುಕೊಂಡನು. ಅಂದುಕೊಂಡ ಹಾಗೇನೇ ರಾಮಯ್ಯನ ಹತ್ತಿರ ಹೋಗಿ ಕೇಳಿದನು. ಅದಕ್ಕೆ ಆತನು, ''ಜಮೀನ್ದಾರರು ನನಗೆ ಮುಂಚಿತವಾಗಿಯೇ ಬಂದು ಮದುವೆ ಕೆಲಸಗಳನ್ನು ನೋಡಿಕೊಳ್ಳಲು ಹೇಳಿದ್ದಾರೆ. ಅದರಿಂದ ನಾನು ಮೊದಲೇ ಹೋಗುತ್ತೇನೆ. ನೀನು ನಮ್ಮಿಬ್ಬರ ಕಾಣಿಕೆಗಳನ್ನು ಸೇರಿಸಿ ತೆಗೆದುಕೊಂಡು ಬಾ'' ಎಂದನು.

ಪಾಪಯ್ಯ ಮನೆಗೆ ಬಂದು, ರಾಮಯ್ಯ ಕೊಡಲು ಹೊರಟಿದ್ದ ಉಡುಗೊರೆ ಪೆಟ್ಟಿಗೆಯನ್ನು ತೆರೆದು ನೋಡಿದನು. ಅದರಲ್ಲಿ ಅಮೃತ ಶಿಲೆಯಿಂದ ಮಾಡಿದ ಕೃಷ್ಣನ ವಿಗ್ರಹವಿತ್ತು. ಅಷ್ಟರಲ್ಲಿ ಪಾಪಯ್ಯನ ಚಿಕ್ಕ ಮಗ ಓಡುತ್ತಾ ಬಂದು ''ಬೊಂಬೆ ತುಂಬಾ ಚೆನ್ನಾಗಿದೆ. ನಾನು ಆಡಿಕೊಳ್ಳುತ್ತೇನೆ'' ಎಂದು ಕೇಳಿದನು. ಪಾಪಯ್ಯನು ಮಗುವಿಗೆ, ''ಇದು ನಮ್ಮ ವಸ್ತು ಅಲ್ಲ, ಇದರೊಂದಿಗೆ ಆಡಿಕೊಳ್ಳುವಾಗ ಕೈ ಜಾರಿ ಕೆಳಗೆ ಬಿದ್ದರೆ ಮುರಿದು ಹೋಗುತ್ತದೆ. ನಾನು ಹೊಸ ಬೊಂಬೆಯನ್ನು ತೆಗೆದು ಕೊಡುತ್ತೇನೆ'' ಎಂದನು. ಆದರೂ ಮಗು ಕೇಳದೆ, ಪಾಪಯ್ಯನ ಕೈಯಲ್ಲಿರುವ ಬೊಂಬೆಯನ್ನು ಕಿತ್ತುಕೊಂಡು ಪಕ್ಕದ ಕೋಣೆಗೆ ಓಡಿಹೋಯಿತು. ಬೊಂಬೆ ಎಲ್ಲಿ ಮುರಿದು ಹೋಗುವುದೋ ಎಂಬ ಭಯದಿಂದ ಪಾಪಯ್ಯ ಓಡಿ ಹೋಗಿ ಮಗುವನ್ನು ಮುದ್ದಿಸಿ, ಮೆಲ್ಲನೆ ಬೊಂಬೆಯನ್ನು ತೆಗೆದುಕೊಂಡು ಬೇಗ ಬೇಗ ಪೆಟ್ಟಿಗೆಯಲ್ಲಿಟ್ಟು ಅದರ ಸುತ್ತಲೂ ಹುಲ್ಲನ್ನು ಹರಡಿ, ಮೇಲೆ ಬಣ್ಣದ ಕಾಗದಗಳಿಂದ ಅಲಂಕರಿಸಿ, ಅದರ ಮೇಲೆ 'ಪಾಪಯ್ಯ, ರಾಮಯ್ಯ' ಎಂದು ಇಬ್ಬರ ಹೆಸರು ಬರೆದು ಮದುವೆಗೆ ಹೊರಟನು.

ಮದುವೆ ಮನೆಯಲ್ಲಿ ಎಲ್ಲರಿಗಿಂತ ಮುಂಚೆ ಹೋಗಿ ತಾನೇ ವಧು-ವರರಿಗೆ ಉಡುಗೊರೆ ಕೊಟ್ಟನು. ಜಮೀನ್ದಾರರ ಗುಮಾಸ್ತ ಯಾರ ಯಾರ ಹೆಸರಿನಲ್ಲಿ ಏನೇನು ಉಡುಗೊರೆಗಳು ಬಂದಿವೆ ಎಂದು ತಿಳಿದುಕೊಳ್ಳಲು ಪೆಟ್ಟಿಗೆಗಳನ್ನೆಲ್ಲಾ ಬಿಚ್ಚತೊಡಗಿದನು. ಆದರೆ ಪೆಟ್ಟಿಗೆಯನ್ನು ಪೂರ್ತಿಯಾಗಿ ಬಿಚ್ಚಿದ ಮೇಲೆ ಪಾಪಯ್ಯನ ಗುಂಡಿಗೆ ಹಠಾತ್ತನೆ ನಿಂತಂತಾಯಿತು. ಆ ಸಮಯಕ್ಕೆ ರಾಮಯ್ಯ ಸಹ ಅಲ್ಲಿಗೆ ಬಂದನು. ಗುಮಾಸ್ತ ಪೆಟ್ಟಿಗೆಯಿಂದ ಅಮೃತ ಶಿಲೆಯ ಕೃಷ್ಣನ ಬೊಂಬೆ ತೆಗೆದನು. ಬೊಂಬೆಯ ಕೊರಳಲ್ಲಿ ಥಳಥಳ ಹೊಳೆಯುತ್ತಿರುವ ಚಿನ್ನದ ಸರ ಇದೆ.

ರಾಮಯ್ಯ ಗುಮಾಸ್ತನಿಗೆ, ''ಆ ಅಮೃತಶಿಲೆಯ ಕೃಷ್ಣ ನನ್ನ ಉಡುಗೊರೆ, ಆ ಚಿನ್ನದ ಸರ ಪಾಪಯ್ಯನ ಉಡುಗೊರೆ'' ಎಂದು ಹೇಳಿದನು. ಆಗ ಪಾಪಯ್ಯ ಕೆಂಡ ತುಳಿದವನಂತೆ ಬೆಚ್ಚಿದನು. ಆ ಮಾಲೆಯನ್ನು ನೋಡಿ ಆತನ ಮುಖದಲ್ಲಿ ರಕ್ತ ಬತ್ತಿಹೋಯಿತು. ಅದು ಪಾಪಯ್ಯನ ಮಗನ ಕುತ್ತಿಗೆಯಲ್ಲಿದ್ದ ಚಿನ್ನದ ಸರ. ಆತ ಬೊಂಬೆಯೊಂದಿಗೆ ಆಡಿಕೊಳ್ಳುತ್ತಿರುವಾಗ ಆ ಸರವನ್ನು ತೆಗೆದು ವಿಗ್ರಹಕ್ಕೆ ಹಾಕಿರಬೇಕು. ಪಾಪಯ್ಯನು ಭಯ, ಗಡಿಬಿಡಿ, ಆತುರಗಳಲ್ಲಿ ಆ ಬೊಂಬೆಯನ್ನು ತೆಗೆದು ಪೆಟ್ಟಿಗೆಯಲ್ಲಿಟ್ಟು ಹುಲ್ಲು ಮುಚ್ಚಿ, ಬಣ್ಣ ಬಣ್ಣದ ಕಾಗದಗಳೊಂದಿಗೆ ಸುತ್ತಿ ಅಲಂಕರಿಸಿಬಿಟ್ಟಿದ್ದ! ''ಅಯ್ಯೋ! ಎಂಥ ಮನೆಹಾಳು ಕೆಲಸವಾಯಿತು. ಅನ್ಯಾಯವಾಗಿ ಚಿನ್ನದ ಸರ ಕೈ ಬಿಟ್ಟು ಹೋಯಿತಲ್ಲಾ'' ಎಂದು ಪಾಪಯ್ಯ ಮಮ್ಮಲ ಮರುಗಿದ.

ಅತಿಯಾದ ಬುದ್ಧಿವಂತಿಕೆ ಉಪಯೋಗಿಸಿ ಹಣ ಉಳಿಸಲು ವಾಮಮಾರ್ಗಕ್ಕೆ ಇಳಿದರೆ, ಅದರ ಎರಡರಷ್ಟು ಖರ್ಚಾಗಿರುತ್ತದೆ. ಹಣದ ಮೋಹ ಒಳ್ಳೆಯದಲ್ಲ, ಸಂಬಂಧಗಳಿಗೆ ಬೆಲೆ ಕೊಡಬೇಕು. ಅಲ್ಲವೇ?

ಕ್ರಿಕೆಟ್‌ನಲ್ಲಿ ಹಾಸ್ಯ!

● ಕೆ.ಶ್ರೀನಿವಾಸರಾವ್ ಹರಪನಹಳ್ಳಿ

ಕ್ಯಾಚ್ ಹಿಡಿದೇಬಿಟ್ಟ!

ಆ ಮರಿ ಕ್ರಿಕೆಟಿಗ ಹಲವು ವರ್ಷಗಳಿಂದ ಆಡುತ್ತಿದ್ದರೂ ಒಂದೇ ಒಂದು ಕ್ಯಾಚ್ ಹಿಡಿಯಲು ಸಫಲನಾಗಿರಲಿಲ್ಲ. ಈ ಬಾರಿ ಖಂಡಿತ ಒಂದಾದರೂ ಕ್ಯಾಚ್ ಹಿಡಿದೇ ತೀರುವೆನೆಂದು ಸಹ ಆಟಗಾರರೊಂದಿಗೆ ಶಪಥ ಮಾಡಿ ಫೀಲ್ಡಿಂಗ್ ಆರಂಭಿಸಿದ. ಅವನ ಪುಣ್ಯ, 5ನೇ ಓವರಿನಲ್ಲಿ ಬ್ಯಾಟ್ಸ್‌ಮನ್ ಹೊಡೆದ ಚೆಂಡು ಇವನೆಡೆಗೇ ನೇರ ನುಗ್ಗಿ ಬಂದಿತ್ತು. ಕಣ್ಣು ಮುಚ್ಚಿ ಇಷ್ಟದೇವರನ್ನು ಪ್ರಾರ್ಥಿಸಿ ಬೊಗಸೆ ಒಡ್ಡಿದ. ಚೆಂಡು ಕೈ ಸೇರಿತ್ತು. ಸಂತಸ ತಡೆಯಲಾರದೇ ಕೈಎತ್ತಿ ಇಡೀ ಮೈದಾನದ ತುಂಬಾ ಕುಣಿಯಲಾರಂಭಿಸಿದ. 2 ನಿಮಿಷ ಕಾದ ನಾಯಕ ಓಡಿಬಂದು ತಡೆದು ಹೇಳಿದ: ''ಮುಟ್ಠಾಳ, ಕುಣಿತ ನಿಲ್ಲಿಸು. ಅವರಾಗಲೇ 6 ರನ್ ಓಡಿ 7 ರನ್ ಗಳಿಸಿದ್ದಾರೆ. ಬೇಕೂಫ, ಅದು ನೋಬಾಲ್!''

ಬದಲಾದ ನಿಯಮ!

ಕ್ರಿಕೆಟ್ ಜಿದ್ದಾಜಿದ್ದಿಯಿಂದ ಸಾಗಿತ್ತು. ಈ ಕಡೆಯವರ 4 ವಿಕೆಟ್ ಕೆಲವೇ ರನ್‌ಗಳಿಗೆ ಪತನವಾಗಿದ್ದವು. 5ನೇ ಬ್ಯಾಟ್ಸ್‌ಮನ್ ಆಡಲು ಬಂದ. ಬೃಹದಾಕಾರದ ಅವನು ಬಹುಶಃ ಆಯ್ಕೆದಾರರ ಸಂಬಂಧಿ ಇರಬೇಕು. ವಿಕೆಟ್ ಮುಂದೆ ಅವನು ನಿಂತರೆ ವಿಕೆಟ್ ಗೂಟಗಳು, ವಿಕೆಟ್ ಕೀಪರ್ ಯಾವುದೂ ಎದುರಿನವರಿಗೆ ಕಾಣುತ್ತಿರಲಿಲ್ಲ. ಬೌಲರ್ ಸೇರಿ ಎದುರು ತಂಡದ ಎಲ್ಲರೂ ಒಕ್ಕೊರಲಿನಿಂದ ಪ್ರತಿಭಟಿಸಿದರು. ಕ್ಷಣಕಾಲ ಯೋಚಿಸಿದ ಅಂಪೈರ್ ಪಂದ್ಯದ ನಿಯಮವನ್ನೇ ಬದಲಾಯಿಸಿ ಹೀಗೆ ಘೋಷಿಸಿದರು: ''ಚೆಂಡು ಈ ದಾಂಡಿಗನ ಮೈಗೆ ಎಲ್ಲಿಯೇ ಬಡಿದರೂ ಅದು ಎಲ್‌ಬಿಡಬ್ಲ್ಯು.... ಬಡಿಯದೇ ಹಿಂದೆ ಹೋದರೆ ಅದು ವೈಡ್!

ಬ್ಯಾಡ್‌ಲೈಟ್!

ಟೆಸ್ಟ್ ಕ್ರಿಕೆಟ್‌ನ ಮೊದಲ ಇನ್ನಿಂಗ್ಸ್‌ನ ಮೊದಲ ದಿನದ ಆಟ ನಡೆದಿತ್ತು. ಇನ್ನೇನು 4 ಓವರುಗಳ ಆಟವಿದ್ದಾಗ ಕತ್ತಲಾಗಿ ಚೆಂಡು ಅಸ್ಪಷ್ಟವಾಗಿ ಕಾಣುತ್ತಿತ್ತು. ಬ್ಯಾಟ್ಸ್‌ಮನ್ ರಾಘವ 'ಬ್ಯಾಡ್‌ಲೈಟ್' ಎಂದು ಅಂಪೈರ್‌ಗೆ ನಾಲ್ಕಾರು ಬಾರಿ ಮನವಿ ಮಾಡಿದರೂ ಅಂಪೈರ್ ಕಿವಿಗೆ ಹಾಕಿಕೊಳ್ಳದೇ ಆಟ ನಿಲ್ಲಿಸಲಿಲ್ಲ. ರಾಘವನಿಗೆ ತಲೆಕೆಟ್ಟಂತಾಗಿ ಕೂಗಿದ: ''ಅಂಪೈರ್ ಸರ್, ಎಲ್ಲಿದ್ದೀರಿ? ನನಗೆ ಕಾಣ್ತಾ ಇಲ್ಲ. ಮುಂದೆ ಬನ್ನಿ...!''

ಕೂಡಲೇ ಆಟ ಕೊನೆಯಾಗಿತ್ತು....!

ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

2. ಮಹತ್ತರವಾದುದು ಎಂದರ್ಥ (4)
5. ನೆಲೆನಿಲ್ಲು ಎಂದರ್ಥ (4)
6. ಅರ್ಧಚಂದ್ರಾಕೃತಿಯ ರಚನೆಯಿದು (3)
7. ಮಾನಿನಿಗೆ ಬಂದಿರುವ ಸಂಶಯ (3)
9. ರೀತಿಯೊಂದಿಗೆ ಬಂದಿರುವ ಜೋಡಿಪದ (3)
11. ಕರಾವಳಿಯ ಪ್ರಸಿದ್ಧ ಕಲಾಪ್ರಕಾರ (4)
13. ಮನುಜನಿಗೆ ಸಿಕ್ಕಿದ ಹುಟ್ಟು (3)
14. ಸರ ಹಾಕಲು ಮಾಡಿದ ಗಡಿಬಿಡಿ (4)
15. ಕೆಸರಿನಲ್ಲಿ ಹುಟ್ಟಿದ ತಾವರೆ (3)
17. ದರ್ಪಣತಿರುಗಿಬಂದಿದೆ (3)
19. ಜಾಲದಲ್ಲಿ ಸಿಕ್ಕಿಕೊಂಡಿದೆ ಬೆಕ್ಕು (3)
21. ತಿರುಗಿ ಬಂದಿರುವ ಗಾಳಿ (3)
22. ಹಕ್ಕಿಗಳ ಮಧುರವಾದ ಧ್ವನಿ ಇಲ್ಲಿ ದಿಕ್ಕು ತಪ್ಪಿದೆ (4)

ಮೇಲಿಂದ ಕೆಳಕ್ಕೆ

1. ಕಾರ್ಮಿಕರ ಕೆಲಸ ಎಂದರ್ಥ (4)
2. ಮೋಡಗಳಿಂದ ಉಂಟಾದ ಧ್ವನಿ (3)
3. ತಲೆಕೆಳಗಾಗಿರುವ ಸುಂಕ (2)
4. ಅವನು ಮಾವನ ಬಗೆಗೇ ತೋರಿದ ಸಂಶಯ (4)
8. ಯಮನಿಗೂ ಇದೆಯಾ ಕಟ್ಟುಪಾಡು (3)
10. ನೈಜವಾದ ಎಂದರ್ಥ (3)
12. ಇವನು ಹಾಡುಗಾರ (3)
13. ಧಾನ್ಯ ಹಸನು ಮಾಡುವ ಸಾಧನ (3)
14. ಸೂರ್ಯನು ಮುಳುಗುವುದು ಎಂದರ್ಥ (4)
16. ಜನಸಾಮಾನ್ಯರಿಗೆ ಸಂಬಂಧಿಸಿದ (4)
18. ಯಾವ ಕಡೆಯಿಂದ ನೋಡಿದರೂ ಚಿನ್ನ (3)
20. ಶ್ರೀರಾಮನ ಒಬ್ಬ ಮಗ (2)

ಸರಿಯುತ್ತರಗಳು

ಮೇಲಿಂದ ಕೆಳಕ್ಕೆ
1.ಕಾಮಗಾರಿ 2.ಗುಡುಗು
3.ರಕ 4.ಅನುಮಾನ
8.ನಿಯಮ 10.ವಾಸ್ತವ
12.ಗಾಯಕ 13.ಜರಡಿ
14.ಅಸ್ತಮಾನ 16.ಜನಪದ
18.ಕನಕ 20.ಲವ

ಎಡದಿಂದ ಬಲಕ್ಕೆ
2.ಗುರುತರ 5.ಮನೆಮಾಡು
6.ಕಮಾನು 7.ಗುಮಾನಿ 9.ರಿವಾಜು
11.ಯಕ್ಷಗಾನ 13.ಜನುಮ
14.ಅವಸರ 15.ಪಂಕಜ 17.ಡಿನ್ನಕ
19.ಮಾರ್ಜಾಲ 21.ನಮಾವಪ
22.ವರಲಕ

ಸಮಾಚಾರ ಸಣ್ಣದಲ್ಲ

ಪುಣೆ ಸೈಕಲ್ ಟೂರ್ನಿಗೆ ಯುಸಿಐ ಮಾನ್ಯತೆ

ದೆಹಲಿ: ಭಾರತವು ಪ್ರಖ್ಯಾತ ಪ್ರೊ ಸ್ಟೇಜ್ ಎಲಿಟ್ ರೇಸ್ ಫಾರ್ ಮೆನ್ ಅಂತಾರಾಷ್ಟ್ರೀಯ ಸೈಕ್ಲಿಂಗ್ ಸ್ಪರ್ಧೆ ಮತ್ತು ಒಲಿಂಪಿಕ್ ಅರ್ಹತಾ ಅಂಕಗಳ ರೇಸ್ ಆಯೋಜನೆ ಹಕ್ಕುಗಳನ್ನು ಯಶಸ್ವಿಯಾಗಿ ಪಡೆದುಕೊಂಡಿದೆ. ಈ ಸ್ಪರ್ಧೆ 'ಪುಣೆ ಗ್ರ್ಯಾಂಡ್ ಟೂರ್ 2026' ಎಂಬ ಹೆಸರಿನಲ್ಲಿ ನಡೆಯಲಿದ್ದು, ಇದು ಭಾರತದಲ್ಲಿ ನಡೆಯುವ ಮೊದಲ ಯೂನಿಯನ್ ಸೈಕ್ಲಿಸ್ಟ್ ಇಂಟರ್‌ನ್ಯಾಷನಲ್ ಮಾನ್ಯತೆ ಪಡೆದ ಕ್ಲಾಸ್ 2.2 ವರ್ಗದ ಬಹು ಹಂತದ ರಸ್ತೆ ಸೈಕ್ಲಿಂಗ್ ಸ್ಪರ್ಧೆಯಾಗಲಿದೆ. ಯುಸಿಐ ವಾರ್ಷಿಕ ಕ್ಯಾಲೆಂಡರ್‌ನಲ್ಲಿ ಪ್ರಮುಖ ಸ್ಥಾನ ಪಡೆದಿರುವ ಪುಣೆ ಗ್ರ್ಯಾಂಡ್ ಟೂರ್ 2026, ವಿಶ್ವಮಟ್ಟದ ಸೈಕ್ಲಿಂಗ್‌ನಲ್ಲಿ ಭಾರತಕ್ಕೆ ಹೊಸ ದಾರಿ ತೆರೆದುಕೊಳ್ಳಲಿದೆ. ಈ ಸ್ಪರ್ಧೆ ಕ್ರೀಡಾಪಟುಗಳ ಶ್ರಮ, ಉತ್ಸಾಹ ಮತ್ತು ಸ್ಪರ್ಧಾತ್ಮಕ ಚೈತನ್ಯವನ್ನು ಪ್ರದರ್ಶಿಸಲಿದೆ. 2026ರ ಜನವರಿ 19 ರಿಂದ 23 ರವರೆಗೆ ನಡೆಯಲಿರುವ ಈ ಟೂರ್ನಿಯಲ್ಲಿ ನಾಲ್ಕು ಹಂತಗಳ ಸ್ಪರ್ಧೆ ನಡೆಯಲಿದ್ದು, ಒಟ್ಟು 437 ಕಿ.ಮೀ ದೂರವನ್ನು ಒಳಗೊಂಡಿದೆ. ಸೈಕ್ಲಿಂಗ್ ಫೆಡರೇಷನ್ ಆಫ್ ಇಂಡಿಯಾ ಅಧ್ಯಕ್ಷ ಪಂಕಜ್ ಸಿಂಗ್ ಮಾತನಾಡಿ ಯುಸಿಐ ದೇಶದಲ್ಲಿ ಸೈಕ್ಲಿಂಗ್ ಕ್ರೀಡೆಯ ಬೆಳವಣಿಗೆಗೆ ಬದ್ಧವಾಗಿದೆ. ಪುಣೆ ಗ್ರ್ಯಾಂಡ್ ಟೂರ್ 2026 ನಮ್ಮ ಪ್ರಯಾಣದ ಹೆಮ್ಮೆಯ ಮೈಲುಗಲ್ಲು. ಮಹಾರಾಷ್ಟ್ರ ಸರ್ಕಾರದ ಸಹಯೋಗ ದೊಂದಿಗೆ ನಡೆಯುವ ಈ ಸ್ಪರ್ಧೆ, ವೃತ್ತಿಪರ ರೈಡರ್‌ಗಳೊಂದಿಗೆ ಭಾರತೀಯ ಕ್ರೀಡಾಪಟುಗ ಳಿಗೆ ವಿಶ್ವಮಟ್ಟದ ಸ್ಪರ್ಧಾತ್ಮಕ ಅನುಭವ ನೀಡಲಿದೆ ಎಂದು ಹೇಳಿದ್ದಾರೆ.

ಆಸೀಸ್ ನೆಲದಲ್ಲಿ ಇಂದು ವಿರಾಟ ಪ್ರದರ್ಶನಕ್ಕೆ ಕೊನೆಯ ಅವಕಾಶ

ಸಿಡ್ನಿಯಲ್ಲಿ ಸಿಡಿದೇಳಬೇಕಿದೆ ಭಾರತ

ಸಿಡ್ನಿ: ಆಸ್ಟ್ರೇಲಿಯಾ ವಿರುದ್ಧ ಭಾರತ ತಂಡ ಶನಿವಾರ 3 ಪಂದ್ಯಗಳ ಏಕದಿನ ಸರಣಿಯ ಕೊನೆಯ ಪಂದ್ಯವನ್ನಾಡಲಿದೆ. ಈಗಾಗಲೆ ಮೊದಲೆರಡು ಪಂದ್ಯಗಳಲ್ಲಿ ಭಾರತ ತಂಡ ನಿರೀಕ್ಷಿತ ಪ್ರದರ್ಶನ ತೋರದೇ ಸೋಲು ಕಂಡು ಒಂದು ಪಂದ್ಯ ಉಳಿದಿರುವಂತೆಯೇ ಸರಣಿಯನ್ನ ಕಳೆದುಕೊಂಡಿದೆ.

ಇದೀಗ ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾಗೆ ಬಹುತೇಕ ಕೊನೆಯ ಆಸೀಸ್ ಪಂದ್ಯವಾಗಿರುವ ಈ ಪಂದ್ಯದಲ್ಲಿ ಭಾರತ ಗೆಲುವಿನ ಆಸೆ ಹೊಂದಿದೆ. ವೈಟ್‌ವಾಷ್ ಮುಖಭಂಗ ತಪ್ಪಿಸಿಕೊಳ್ಳಲು ಈ ಪಂದ್ಯವನ್ನು ಭಾರತ ತಂಡ ಗೆಲ್ಲಲೇಬೇಕಿದೆ. ಆದರೆ ಸಿಡ್ನಿ ಕ್ರಿಕೆಟ್ ಮೈದಾನದ ದಾಖಲೆ ಗಮನಿಸಿದರೆ ಭಾರತೀಯ ಅಭಿಮಾನಿಗಳಿಗೆ ಮತ್ತೊಂದು ನಿರಾಶೆ ಎದುರಾಗುವ ಭೀತಿ ಕಾಡುತ್ತಿದೆ.

ಭಾರತ ತಂಡ ತನ್ನ ಏಕದಿನ ಕ್ರಿಕೆಟ್ ಇತಿಹಾಸದಲ್ಲಿ ಇಲ್ಲಿ ಆಡಿರುವ ಒಟ್ಟು 19 ಪಂದ್ಯಗಳ ಪೈಕಿ ಗೆದ್ದಿರುವುದು ಕೇವಲ 2 ಪಂದ್ಯಗಳಲ್ಲಿ ಮಾತ್ರ. 16 ಪಂದ್ಯಗಳಲ್ಲಿ ಸೋಲು ಕಂಡಿದೆ. ಉಳಿದ ಒಂದು ಪಂದ್ಯ ಮಳೆಯಿಂದ ರದ್ದಾಗಿದೆ.

ಒಟ್ಟಾರೆ ಎಲ್ಲಾ ತಂಡಗಳ (ವಿಶ್ವಕಪ್, ಬಹುರಾಷ್ಟ್ರೀಯ ತಂಡಗಳ ಸರಣಿ) ದಾಖಲೆ ನೋಡಿದರೆ ಸಿಡ್ನಿಯಲ್ಲಿ ಭಾರತದ 22 ಪಂದ್ಯಗಳನ್ನಾಡಿದ್ದು, 5 ಪಂದ್ಯಗಳಲ್ಲಿ ಗೆಲುವು ಸಾಧಿಸಿದೆ. 16ರಲ್ಲಿ ಸೋಲು ಕಂಡಿದೆ. ಅಂದರೆ ಆಸೀಸ್ ವಿರುದ್ಧ ಮಾತ್ರ ಭಾರತ ಈ ಮೈದಾನದಲ್ಲಿ ಸೋಲು ಕಂಡಿದೆ. ನ್ಯೂಜಿಲೆಂಡ್, ಪಾಕಿಸ್ತಾನ ಹಾಗೂ ಇಂಗ್ಲೆಂಡ್ ವಿರುದ್ಧ ಈ ಮೈದಾನದಲ್ಲಿ ಭಾರತ ಗೆಲುವು ಸಾಧಿಸಿದೆ.

ನವೆಂಬರ್ 27, 2020 ರಂದು ಆಸ್ಟ್ರೇಲಿಯಾ ವಿರುದ್ಧ ಭಾರತ ಕೊನೆಯ ಏಕದಿನ ಪಂದ್ಯವನ್ನಾಡಿತ್ತು. ಆ ಪಂದ್ಯದಲ್ಲಿ ಭಾರತ 66 ರನ್‌ಗಳ ಅಂತರದಿಂದ ಸೋತಿತ್ತು. ಆ ಪಂದ್ಯದಲ್ಲಿ ಆಸ್ಟ್ರೇಲಿಯಾ ಪರ ಆರೋನ್ ಫಿಂಚ್ (114) ಮತ್ತು ಸ್ಟೀವ್ ಸ್ಮಿತ್ (105★) ಶತಕ ಗಳಿಸಿದ್ದರು. ಆಸ್ಟ್ರೇಲಿಯಾ 374 ರನ್ ಗಳಿಸಿದರೆ, ಭಾರತ 308 ರನ್ ಗಳಿಸಿತ್ತು. ನಂತರ ಅದೇ ಮೈದಾನದಲ್ಲಿ ಆಸ್ಟ್ರೇಲಿಯಾ 389 ರನ್ ಗಳಿಸಿತ್ತು. ಭಾರತ 338 ರನ್ ಗಳಿಸಿ ಸೋಲೊಪ್ಪಿಕೊಂಡಿತ್ತು.

ಭಾರತ ಈ ಮೈದಾನದಲ್ಲಿ ಮೊದಲ ಬಾರಿ ಗೆಲುವು ಸಾಧಿಸಿದ್ದು, 2008ರ ಕಾಮನ್‌ವೆಲ್ತ್ ಬ್ಯಾಂಕ್ ತ್ರಿಕೋನ ಸರಣಿಯಲ್ಲಿ. ಆಸ್ಟ್ರೇಲಿಯಾ ವಿರುದ್ಧ ಬೆಸ್ಟ್ ಆಫ್ ತ್ರಿ ಫೈನಲ್‌ನ ಮೊದಲ ಫೈನಲ್ ಪಂದ್ಯದಲ್ಲಿ ಭಾರತ 6 ವಿಕೆಟ್‌ಗಳ ಜಯ ಸಾಧಿಸಿತ್ತು. ಆ ನಂತರ 2012 ಮತ್ತು 2015ರಲ್ಲಿ ಸೋಲು ಕಂಡ ಭಾರತ 2016ರ ಪ್ರವಾಸದಲ್ಲಿ ಮನೀಶ್ ಪಾಂಡೆ ಶತಕದ ನೆರವಿನಿಂದ 5 ಪಂದ್ಯಗಳ ಸರಣಿಯ ಕೊನೆಯ ಪಂದ್ಯದಲ್ಲಿ ಗೆಲುವು ಸಾಧಿಸಿತ್ತು. ಆದರೆ ಸರಣಿಯನ್ನು 4-1ರಲ್ಲಿ ಹೀನಾಯವಾಗಿ ಕಳೆದುಕೊಂಡಿತ್ತು.

ಆಸ್ಟ್ರೇಲಿಯಾದಲ್ಲಿನ ವೇಗದ ಮತ್ತು ಬೌನ್ಸಿ ಪಿಚ್‌ಗಳು ಭಾರತೀಯ ಬ್ಯಾಟ್ಸ್‌ಮನ್‌ಗಳಿಗೆ ಸವಾಲೊಡ್ಡುತ್ತವೆ. ಸಿಡ್ನಿಯ ಪಿಚ್ ಸಹ ಇದಕ್ಕೆ ಹೊರತಾಗಿಲ್ಲ. ಬ್ಯಾಟಿಂಗ್‌ಗೆ ಕಷ್ಟವಾಗುವ ಪಿಚ್‌ನಲ್ಲಿ ಆಸೀಸ್ ಬೌಲರ್‌ಗಳು ಹೆಚ್ಚು ಯಶಸ್ಸು ಕಾಣುತ್ತಾರೆ. ಆಸ್ಟ್ರೇಲಿಯಾ ತಂಡವು ಈ ಮೈದಾನದಲ್ಲಿ ಉತ್ತಮ ಪ್ರದರ್ಶನ ನೀಡುತ್ತದೆ. ಅವರಿಗೆ ಸಿಡ್ನಿಯ ವಾತಾವರಣ ಮತ್ತು ಪಿಚ್‌ಗಳ ಬಗ್ಗೆ ಸಂಪೂರ್ಣ ಅರಿವಿರುವುದರಿಂದ ಈ ಮೈದಾನದಲ್ಲಿ ಕಾಂಗರೂ ಪಡೆ ಅದ್ಭುತ ದಾಖಲೆ ಹೊಂದಿದೆ.

ಆಸ್ಟ್ರೇಲಿಯಾ ತಂಡ ಈ ಮೈದಾನದಲ್ಲಿ 136 ಪಂದ್ಯಗಳನ್ನಾಡಿದ್ದು, 91ರಲ್ಲಿ ಜಯ ಸಾಧಿಸಿದ್ದರೆ, 39 ರಲ್ಲಿ ಸೋಲು ಕಂಡಿದೆ. ಇಂಗ್ಲೆಂಡ್ ತಂಡ 11 (24ರಲ್ಲಿ) ಪಂದ್ಯಗಳಲ್ಲಿ ಗೆಲುವು ಸಾಧಿಸಿ ಈ ಮೈದಾನದಲ್ಲಿ ಹೆಚ್ಚು ಪಂದ್ಯ ಗೆದ್ದ ವಿದೇಶಿ ತಂಡ ಎಂಬ ದಾಖಲೆ ಹೊಂದಿದೆ. ವೆಸ್ಟ್ ಇಂಡೀಸ್ 9 (28ರಲ್ಲಿ) ಪಂದ್ಯಗಳಲ್ಲಿ ಗೆಲುವು ಸಾಧಿಸಿದೆ.

ನವೆಂಬರ್ 28ರಿಂದ ಚೆನ್ನೈ, ಮಧುರೈನಲ್ಲಿ ವಿಶ್ವಕಪ್ ಟೂರ್ನಿ

ಜೂ. ಹಾಕಿ ವಿಶ್ವಕಪ್‌ನಿಂದ ಪಾಕ್ ಹಿಂದಕ್ಕೆ

ದೆಹಲಿ: ನವೆಂಬರ್ 28 ರಿಂದ ಡಿಸೆಂಬರ್ 28 ರವರೆಗೆ ಚೆನ್ನೈ ಮತ್ತು ಮಧುರೈನಲ್ಲಿ ನಡೆಯಲಿರುವ ಜೂನಿಯರ್ ಹಾಕಿ ವಿಶ್ವಕಪ್‌ನಿಂದ ಪಾಕಿಸ್ತಾನ ತಂಡ ಹಿಂದೆ ಸರಿದಿದೆ. ಅಂತಾರಾಷ್ಟ್ರೀಯ ಹಾಕಿ ಫೆಡರೇಶನ್ (ಎಫ್‌ಐಎಚ್) ಶುಕ್ರವಾರ ಈ ಬೆಳವಣಿಗೆಯನ್ನು ದೃಢಪಡಿಸಿದ್ದು, ಪಾಕಿಸ್ತಾನಕ್ಕೆ ಬದಲಿ ತಂಡವನ್ನು ಶೀಘ್ರದಲ್ಲೇ ಘೋಷಿಸಲಾಗುವುದು ಎಂದು ತಿಳಿಸಿದೆ. ಇತ್ತೀಚೆಗೆ ಏಷ್ಯಾಕಪ್ ಹಾಕಿ ಪಂದ್ಯಾವಳಿಯಿಂದಲೂ ಪಾಕ್ ಹಿರಿಯರ ತಂಡ ಕೊನೆಯ ಹಂತದಲ್ಲಿ ಹಿಂದೆ ಸರಿದಿತ್ತು.

24 ತಂಡಗಳ ಜೂನಿಯರ್ ಹಾಕಿ ವಿಶ್ವಕಪ್‌ನಲ್ಲಿ ಭಾರತ, ಚಿಲಿ ಮತ್ತು ಸ್ವಿಟ್ಜರ್‌ಲ್ಯಾಂಡ್ ಜೊತೆಗೆ ಪಾಕಿಸ್ತಾನ ಒಂದು ಗುಂಪಿನಲ್ಲಿ ಸ್ಥಾನ ಪಡೆದಿತ್ತು. ಇದಕ್ಕೂ ಮೊದಲು, ಬಿಹಾರದ ರಾಜ್‌ಗಿರ್‌ನಲ್ಲಿ ನಡೆದ ಏಷ್ಯಾ ಕಪ್‌ನಲ್ಲಿ ಪಾಕಿಸ್ತಾನದ ಬದಲು ಬಾಂಗ್ಲಾದೇಶಕ್ಕೆ ಅವಕಾಶ ನೀಡಲಾಗಿತ್ತು. ಎರಡೂ ರಾಷ್ಟ್ರಗಳ ನಡುವಿನ ದ್ವಿಪಕ್ಷೀಯ ಸಂಬಂಧಗಳು ಹದಗೆಟ್ಟಿರುವ ನಡುವೆ ಭದ್ರತಾ ಕಾಳಜಿಯಿಂದಾಗಿ ಪಾಕಿಸ್ತಾನ ಪಂದ್ಯಾವಳಿಯಿಂದ ಹಿಂದೆ ಸರಿದಿದೆ ಎಂದು ವರದಿಗಳು ತಿಳಿಸಿದೆ.

ಪಾಕಿಸ್ತಾನ ಹಾಕಿ ಫೆಡರೇಶನ್ ಅಧ್ಯಕ್ಷ ರಾಣಾ ಮುಜಾಹಿದ್ ಅವರು ಏಷ್ಯಾ ಕಪ್ ಸಮಯದಲ್ಲಿ ನಡೆದ ಘಟನೆಗಳನ್ನು, ಭಾರತೀಯ ಆಟಗಾರರು ತಮ್ಮ ಪಾಕಿಸ್ತಾನಿ ಸಹವರ್ತಿಗಳೊಂದಿಗೆ ಕೈಕುಲುಕಲು ನಿರಾಕರಿಸಿದ ಕ್ಷಣಗಳನ್ನು ದ್ವಿಪಕ್ಷೀಯ ಕ್ರೀಡಾ ರಾಜತಾಂತ್ರಿಕತೆಯಲ್ಲಿ ನಡೆಯುತ್ತಿರುವ ಸವಾಲುಗಳ ಪುರಾವೆಯಾಗಿ ಉಲ್ಲೇಖಿಸಿದ್ದಾರೆ ಎಂದು ವರದಿಯಾಗಿದೆ.

ವರ್ಷದ ಕೊನೆಯಲ್ಲಿ ನಡೆಯಲಿರುವ ಜೂನಿಯರ್ ವಿಶ್ವಕಪ್‌ನಲ್ಲಿ ಪಾಕಿಸ್ತಾನ ಭಾಗವಹಿಸಲು ಬಾಗಿಲು ತೆರೆದಿರುತ್ತದೆ ಎಂದು ಹಾಕಿ ಇಂಡಿಯಾ ಅಧ್ಯಕ್ಷ ದಿಲೀಪ್ ಟಿರ್ಕಿ ಈ ಹಿಂದೆ ಹೇಳಿದ್ದರು. ಸಂಬಂಧಗಳು ಹದಗೆಟ್ಟಿದ್ದರೂ ಸಹ, ಎಲ್ಲರನ್ನೂ ಒಳಗೊಂಡಂತೆ ಅಂತಾರಾಷ್ಟ್ರೀಯ ಕಾರ್ಯಕ್ರಮಗಳನ್ನು ಆಯೋಜಿಸುವ ಭಾರತದ ಬದ್ಧತೆಯನ್ನು ಒತ್ತಿ ಹೇಳಿದ್ದರು.

ಪಾಕಿಸ್ತಾನಕ್ಕಾಗಿ ಕಾಯುವ ಆಟ ಆಡುವುದಿಲ್ಲವಾದರೂ, ಬಾಗಿಲು ಯಾವಾಗಲೂ ತೆರೆದಿರುತ್ತದೆ ಎಂದು ಟಿರ್ಕಿ ಹೇಳಿದ್ದರು. ಆದರೆ ಪಾಕ್ ತಂಡ ಹಿಂದೆ ಸರಿಯಲು ನಿರ್ಧರಿಸಿದೆ. ಜೂನಿಯರ್ ಹಾಕಿ ವಿಶ್ವಕಪ್‌ಗೆ ಬದಲಿ ತಂಡವನ್ನು ಶೀಘ್ರದಲ್ಲೇ ಘೋಷಿಸಲಾಗುವುದು ಎಂದು ಎಫ್‌ಐಎಚ್ ತಿಳಿಸಿದೆ.

ಕರ್ನಾಟಕ-ಗೋವಾ ತಂಡಗಳ ಹಣಾಹಣಿಗೆ ಮಳೆ ಭೀತಿ

ಶಿವಮೊಗ್ಗದಲ್ಲಿ ಇಂದಿನಿಂದ ರಣಜಿ ಸಂಭ್ರಮ

ಶಿವಮೊಗ್ಗ: ಐದು ವರ್ಷಗಳ ಬಳಿಕ ಶಿವಮೊಗ್ಗ ನಗರದ ಜನತೆ ರಣಜಿ ಪಂದ್ಯವನ್ನು ಕಣ್ತುಂಬಿಕೊಳ್ಳಲು ಸಿದ್ಧರಾಗಿದ್ದಾರೆ. ಕರ್ನಾಟಕ ಹಾಗೂ ಗೋವಾ ತಂಡಗಳ ನಡುವೆ ರಣಜಿ ಟ್ರೋಫಿ ಕ್ರಿಕೆಟ್ ಪಂದ್ಯ ಇಂದಿನಿಂದ ಆರಂಭಗೊಳ್ಳಲಿದೆ.

ರಣಜಿ ಟ್ರೋಫಿ ಎಲೈಟ್ ವಿಭಾಗದ ಬಿ' ಗುಂಪಿನಲ್ಲಿ ಮಯಂಕ್ ಅಗರ್‌ವಾಲ್ ನಾಯಕತ್ವದ ಕರ್ನಾಟಕ ತಂಡ ಹಾಗೂ ದೀಪರಾಜ್ ಗಾಂವ್ಕರ್ ನೇತೃತ್ವದ ಗೋವಾ ತಂಡಗಳು ಮುಖಾಮುಖಿಯಾಗಲಿವೆ. ಅ.25ರಿಂದ 28ರವರೆಗೆ ನಾಲ್ಕು ದಿನಗಳ ಕಾಲ ನವುಲೆಯ ಕೆಎಸ್‌ಸಿಯ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ.

ಕ್ರಿಕೆಟ್ ಪಂದ್ಯ ವೀಕ್ಷಣೆಗೆ ಸಾರ್ವಜನಿಕರಿಗೆ ಉಚಿತ ಪ್ರವೇಶವಿದೆ. ಅಂತರರಾಷ್ಟ್ರೀಯ ಟೂರ್ನಿಗಳ ಅಬ್ಬರದ ನಡುವೆ ರಣಜಿ ಕ್ರಿಕೆಟ್ ಬಗ್ಗೆ ಆಸಕ್ತಿ ಮೂಡಿಸಲು ಶಿವಮೊಗ್ಗದಂತಹ ಎರಡನೇ ಹಂತದ ನಗರದಲ್ಲಿ ರಣಜಿ ಕ್ರಿಕೆಟ್ ಅನ್ನು ಬಿಸಿಸಿಐ ಆಯೋಜಿಸಿದೆ. ಇದರಿಂದ ಇಲ್ಲಿನ ಮಕ್ಕಳಲ್ಲಿ ಹೆಚ್ಚಿನ ಆಸಕ್ತಿ ಮೂಡಲಿದೆ. ಅವರಿಗಾಗಿ ವಿಶೇಷ ಸ್ಟ್ಯಾಂಡ್ ಕೂಡಾ ವ್ಯವಸ್ಥೆ ಮಾಡಲಾಗಿದೆ ಎಂದು ರಾಜ್ಯ ಕ್ರಿಕೆಟ್ ಸಂಸ್ಥೆಯ ಶಿವಮೊಗ್ಗ ವಲಯದ ಹಿಂದಿನ

ಸಂಚಾಲಕರೂ ಆದ ವಿಧಾನಪರಿಷತ್ ಸದಸ್ಯ ಡಿ.ಎಸ್.ಅರುಣ್ ತಿಳಿಸಿದ್ದಾರೆ.

ಮಳೆಯ ಆತಂಕ: ಬಂಗಾಳಕೊಲ್ಲಿಯಲ್ಲಿ ಚಂಡಮಾರುತ ಕಾಣಿಸಿಕೊಂಡಿರುವ ಹಿನ್ನೆಲೆಯಲ್ಲಿ ಪಂದ್ಯಕ್ಕೆ ಮಳೆಯ ಆತಂಕ ಎದುರಾಗಿದೆ. ಆದರೆ ಪರಿಸ್ಥಿತಿ ನಿಭಾಯಿಸಲು ಎರಡು ಸೂಪರ್ ಸಾಪರ್ ಯಂತ್ರ, 20 ಗ್ರೌಂಡ್ಸ್‌ಮನ್‌ಗಳನ್ನು ನಿಯೋಜನೆ ಮಾಡಲಾಗಿದೆ ಎಂದು ಕೆಎಸ್‌ಸಿಎ ವಲಯ ಸಂಚಾಲಕ ಎಚ್.ಎಸ್.ಸದಾನಂದ ತಿಳಿಸಿದ್ದಾರೆ. .

ಐದು ವರ್ಷಗಳ ನಂತರ ರಣಜಿ ಪಂದ್ಯ

ಶಿವಮೊಗ್ಗದಲ್ಲಿ 2020ರ ಜನವರಿ 4ರಿಂದ 7ರವರೆಗೆ ಕರ್ನಾಟಕ ಹಾಗೂ ಮಧ್ಯಪ್ರದೇಶ ತಂಡಗಳ ನಡುವೆ ಇದೇ ಮೈದಾನದಲ್ಲಿ ರಣಜಿ ಪಂದ್ಯ ನಡೆದಿತ್ತು. ಈಗ ಮತ್ತೆ ಐದು ವರ್ಷಗಳ ನಂತರ ಈ ಮಹತ್ವದ ಪಂದ್ಯಕ್ಕೆ ಕೆಎಸ್‌ಸಿಎ ಮೈದಾನ ಸಾಕ್ಷಿಯಾಗಲಿದೆ. 1974ರ ನವೆಂಬರ್ 9ರಿಂದ 11ರವರೆಗೆ ಮೂರು ದಿನಗಳ ಕಾಲ ಮೊದಲ ಬಾರಿಗೆ ಶಿವಮೊಗ್ಗದ ನೆಹರೂ ಮೈದಾನದಲ್ಲಿ ಕರ್ನಾಟಕ ಹಾಗೂ ಆಂಧ್ರಪ್ರದೇಶ ತಂಡಗಳ ನಡುವೆ ರಣಜಿ ಟ್ರೋಫಿ ಕ್ರಿಕೆಟ್ ಆಯೋಜನೆಗೊಂಡಿತ್ತು. 50 ವರ್ಷಗಳ ಅವಧಿಯಲ್ಲಿ ಶಿವಮೊಗ್ಗ ಜಿಲ್ಲೆ ಈಗ 10ನೇ ಬಾರಿಗೆ ರಣಜಿ ಟ್ರೋಫಿ ಟೂರ್ನಿಗೆ ಆತಿಥ್ಯ ವಹಿಸಲು ಸಜ್ಜಾಗಿದೆ.

ಮಯಂಕ್, ಕರುಣ್ ಮಿಂಚು

ಈ ಬಾರಿಯ ರಣಜಿ ಟ್ರೋಫಿಯಲ್ಲಿ ರಾಜ್‌ಕೋಟ್‌ನಲ್ಲಿ ನಡೆದ ತನ್ನ ಮೊದಲ ಪಂದ್ಯದಲ್ಲಿ ಕರ್ನಾಟಕ ತಂಡವು ಸೌರಾಷ್ಟ್ರ ವಿರುದ್ಧ ಡ್ರಾ ಮಾಡಿಕೊಂಡಿತ್ತು. ಚಂಡೀಗಢ ತಂಡದ ವಿರುದ್ಧ ಗೆಲುವು ಸಾಧಿಸಿ ಶುಭಾರಂಭ ಮಾಡಿರುವ ಗೋವಾ ತಂಡ ಉತ್ಸಾಹದಲ್ಲಿದೆ. ಕರ್ನಾಟಕ ತಂಡದಲ್ಲಿ ರಾಷ್ಟ್ರೀಯ ತಂಡವನ್ನು ಪ್ರತಿನಿಧಿಸಿದ್ದ ಮಯಂಕ್ ಅಗರ್‌ವಾಲ್ ಹಾಗೂ ಕರುಣ್ ನಾಯರ್ ಪ್ರಮುಖ ಆಕರ್ಷಣೆಯಾಗಿದ್ದಾರೆ.

ಗೋವಾ ತಂಡದಲ್ಲಿ ಅರ್ಜುನ್ ತೆಂಡೂಲ್ಕರ್ ಸಚಿನ್ ತೆಂಡೂಲ್ಕರ್ ಪುತ್ರ ಅರ್ಜುನ್ ಗೋವಾ ತಂಡದಲ್ಲಿದ್ದಾರೆ. ಉಳಿದಂತೆ ಯುವ ಪ್ರತಿಭೆಗಳು ಈ ತಂಡದಲ್ಲಿ ಮೇಳೈಸಿವೆ.

ದೆಹಲಿಯಲ್ಲಿ ನ.26-27ಕ್ಕೆ 90 ಆಟಗಾರ್ತಿಯರ ಹರಾಜಿಗೆ ಸಿದ್ಧತೆ

ನವೆಂಬರ್‌ನಲ್ಲಿ ಡಬ್ಲ್ಯುಪಿಎಲ್ ಹರಾಜು

ಮುಂಬಯಿ: ಮಹಿಳಾ ಪ್ರೀಮಿಯರ್ ಲೀಗ್ ಹರಾಜು ನವೆಂಬರ್ 26-27ಕ್ಕೆ ದೆಹಲಿಯಲ್ಲಿ ನಡೆಸುವ ಸಾಧ್ಯತೆ ಇದೆ ಎನ್ನಲಾಗಿದೆ. ಇದಕ್ಕೂ ಮೊದಲು, ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ನವೆಂಬರ್ 26 ಮತ್ತು 29 ರ ನಡುವೆ ಹರಾಜು ನಡೆಯಲಿದೆ ಎಂದು ಸೂಚಿಸಿತ್ತು. ಫ್ರಾಂಚೈಸಿಗಳಿಗೆ ಇನ್ನೂ ಔಪಚಾರಿಕ ಸಂವಹನವನ್ನು ಕಳುಹಿಸಲಾಗಿಲ್ಲ. ಆದರೆ ಎಲ್ಲಾ ತಂಡಗಳಿಗೆ ಅನೌಪಚಾರಿಕವಾಗಿ ಸಂಭವನೀಯ ಸ್ಥಳದ ಬಗ್ಗೆ ತಿಳಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಇದು ಒಂದು ದೊಡ್ಡ ಕಾರ್ಯಕ್ರಮ ಆಗಿದ್ದರೂ, ಹರಾಜು ಒಂದೇ ದಿನದಲ್ಲಿ ಮುಗಿಯುವ ನಿರೀಕ್ಷೆಯಿದೆ. ಡಬ್ಲ್ಯುಪಿಎಲ್‌ನಲ್ಲಿ ಕೇವಲ ಐದು ತಂಡಗಳು ಮತ್ತು ಗರಿಷ್ಠ 18 ಆಟಗಾರರ ತಂಡದೊಂದಿಗೆ, 90 ಆಟಗಾರ್ತಿಯರನ್ನು ಹರಾಜಿನಲ್ಲಿ ಇರಿಸಲಾಗಿದ್ದರೂ ಸಹ ಈ ಪ್ರಕ್ರಿಯೆಯು ಹೆಚ್ಚು ಸಮಯ ತೆಗೆದುಕೊಳ್ಳುವ ಸಾಧ್ಯತೆಯಿಲ್ಲ. ಹೆಚ್ಚಿನ ತಂಡಗಳು ಸಾಕಷ್ಟು ಆಟಗಾರ್ತಿಯರನ್ನು ಉಳಿಸಿಕೊಂಡು ಹರಾಜಿಗೆ ಪ್ರವೇಶಿಸುವ ನಿರೀಕ್ಷೆಯಿದೆ. ಫ್ರಾಂಚೈಸಿಗಳು ನವೆಂಬರ್ 5 ರೊಳಗೆ ತಮ್ಮ ಉಳಿಸಿಕೊಂಡ ಆಟಗಾರ್ತಿಯರ ಪಟ್ಟಿಯನ್ನು ಸಲ್ಲಿಸುವಂತೆ ಕೇಳಲಾಗಿದೆ.

ಹರಾಜಿನ ಮೊತ್ತ 15 ಕೋಟಿ

ಪ್ರತಿ ತಂಡಕ್ಕೆ ಐದು ಆಟಗಾರ್ತಿಯರನ್ನು ಉಳಿಸಿಕೊಳ್ಳಲು ಅವಕಾಶವಿದ್ದು, ಒಂದು ತಂಡವು ಎಲ್ಲಾ ಐದು ಆಟಗಾರ್ತಿಯರನ್ನು ಉಳಿಸಿಕೊಳ್ಳಲು ನಿರ್ಧರಿಸಿದರೆ, ಮೊದಲ ಆಟಗಾರ್ತಿಗೆ 3.5 ಕೋಟಿ ರೂ., ಎರಡನೇ ಆಟಗಾರ್ತಿಗೆ 2.5 ಕೋಟಿ ರೂ., ಮೂರನೇ ಆಟಗಾರ್ತಿಗೆ 1.75 ಕೋಟಿ ರೂ., ನಾಲ್ಕನೇ ಆಟಗಾರ್ತಿಗೆ 1 ಕೋಟಿ ರೂ. ಮತ್ತು ಐದನೇ ಆಟಗಾರ್ತಿಗೆ 50 ಲಕ್ಷ ರೂ. ನೀಡಬೇಕಿದೆ. ಒಟ್ಟು ಹರಾಜಿನ ಮೊತ್ತ 15 ಕೋಟಿ ರೂ. ಮತ್ತು ಐದು ಆಟಗಾರ್ತಿಯನ್ನು ತಂಡದಲ್ಲಿ ಉಳಿಸಿಕೊಂಡರೆ 9.25 ಕೋಟಿ ರೂ. ವೆಚ್ಚವಾಗಲಿದೆ.

ಬಿಸಿಸಿಐ ಐದು ರೈಟ್ ಟು ಮ್ಯಾಚ್ ಆಯ್ಕೆಗಳನ್ನು ಅನುಮೋದಿಸಿದೆ. ಆದರೆ ಫ್ರಾಂಚೈಸಿಗೆ ಲಭ್ಯವಿರುವ ಆರ್‌ಟಿಎಂಗಳ ಸಂಖ್ಯೆಯು ಉಳಿಸಿಕೊಂಡ ಆಟಗಾರ್ತಿಯರ ಸಂಖ್ಯೆಯನ್ನು ಅವಲಂಬಿಸಿರುತ್ತದೆ. ಉಳಿಸಿಕೊಂಡ ಪ್ರತಿ ಆಟಗಾರ್ತಿಗೆ, ಫ್ರಾಂಚೈಸಿ ಒಂದು ಆರ್‌ಟಿಎಂ ಆಯ್ಕೆಯನ್ನು ಕಳೆದುಕೊಳ್ಳುತ್ತದೆ. ಉದಾಹರಣೆಗೆ, ಒಂದು ತಂಡವು ಐದು ಆಟಗಾರ್ತಿಯರನ್ನು ಉಳಿಸಿಕೊಂಡರೆ, ಹರಾಜಿನಲ್ಲಿ ಆರ್‌ಟಿಎಂ ಅನ್ನು ಬಳಸುವ ಆಯ್ಕೆಯನ್ನು ಹೊಂದಿರುವುದಿಲ್ಲ. ಆರ್‌ಟಿಎಂ ಬಳಸುವುದು ಬಿಡುವುದು ಫ್ರಾಂಚೈಸಿಗೆ ಬಿಟ್ಟ ನಿರ್ಧಾರವಾಗಿದೆ.

ಫಿಕ್ಸಿಂಗ್ ಪ್ರಕರಣದಲ್ಲಿ ಬಿಸಿಸಿಐ ಮಧ್ಯಪ್ರವೇಶಕ್ಕೆ ಸುಪ್ರೀಂ ಅನುಮತಿ

ಕೆಪಿಎಲ್ ಮೋಸದಾಟಕ್ಕೆ ಮರುಜೀವ

ದೆಹಲಿ: ಅಕ್ರಮ ಬುಕ್ಕಿಗಳು ಮತ್ತು ಕ್ರಿಕೆಟ್ ಮ್ಯಾಚ್ ಫಿಕ್ಸಿಂಗ್ ಪ್ರಕರಣದ ಆರು ಜನ



ಆರೋಪಿಗಳ ವಿರುದ್ಧದ ಕ್ರಿಮಿನಲ್ ಮೊಕದ್ದಮೆಗಳನ್ನು 2022ರಲ್ಲಿ ರದ್ದುಗೊಳಿಸಿದ್ದ ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ಕರ್ನಾಟಕ ಸರ್ಕಾರವು ಸುಪ್ರೀಂ ಕೋರ್ಟ್‌ನಲ್ಲಿ ಸಲ್ಲಿಸಿರುವ ಮೇಲ್ಮನವಿಯಲ್ಲಿ ಮಧ್ಯ ಪ್ರವೇಶಿಸಲು ಬಿಸಿಸಿಐಗೆ ಅನುಮತಿ ನೀಡಲಾಗಿದೆ.

ನ್ಯಾಯಮೂರ್ತಿಗಳಾದ ಸೂರ್ಯ ಕಾಂತ್ ಮತ್ತು ಜೋಯ್ಮಲ್ಯಾ ಬಾಗಚಿ ಅವರನ್ನೊಳಗೊಂಡ ನ್ಯಾಯಪೀಠವು ಈ ಕುರಿತಂತೆ ಇದೇ 16 ರಂದು ಬಿಸಿಸಿಐಗೆ ನ್ಯಾಯಾಲಯಕ್ಕೆ ಸಹಾ ಯ ಮಾಡಲು ಅವಕಾಶ ಕಲ್ಪಿಸಿದೆ. ಪ್ರತಿ ವಾದಿ ಗಳು ಮುಂದಿನ ನಾಲ್ಕು ವಾರಗಳಲ್ಲಿ ಪ್ರಮಾಣ ಪತ್ರ ಸಲ್ಲಿಸುವಂತೆ ತಿಳಿಸಿದೆ. ವಿಚಾರ ಣೆಯನ್ನು ನವೆಂಬರ್ 27ಕ್ಕೆ ನಿಗದಿಪಡಿಸ ಲಾಗಿದೆ.

'ಮ್ಯಾಚ್ ಫಿಕ್ಸಿಂಗ್ ಕೃತ್ಯವು ಸ್ಪಷ್ಟವಾಗಿ ವಂಚನೆಯ ಅಪರಾಧವಾಗಿದೆ. ಇದರಲ್ಲಿ ವಂಚನೆ ಎಸಗುವ ಎಲ್ಲ ಅಂಶಗಳೂ ಒಳಗೊಂಡಿವೆ. ಅವುಗಳಲ್ಲಿ ಅಪ್ರಾಮಾಣಿಕತೆ, ಉದ್ದೇಶಪೂರ್ವಕ ಪ್ರಚೋದನೆ, ಹಾನಿಯನ್ನು ಉಂಟುಮಾಡುವ ದುರುದ್ದೇಶಗಳಿವೆ.

ಏನಿದು ಪ್ರಕರಣ?

2018 ಮತ್ತು 2019ರಲ್ಲಿ ನಡೆದಿದ್ದ ಕರ್ನಾಟಕ ಪ್ರೀಮಿಯರ್ ಲೀಗ್ (ಕೆಪಿಎಲ್) ಟೂರ್ನಿಗಳ ಕೆಲವು ಪಂದ್ಯಗಳಲ್ಲಿ ಮೋಸದಾಟ ನಡೆದ ಆರೋಪಗಳು ಕೇಳಿಬಂದಿದ್ದವು. ಅದರಲ್ಲಿ ಇಬ್ಬರು ಆಟಗಾರರು, ತಂಡವೊಂದರ ಮಾಲೀಕ, ತಂಡದ ಉಸ್ತುವಾರಿ, ಒಬ್ಬ ಕೋಚ್, ಒಬ್ಬ ಬುಕ್ಕಿ ಮತ್ತು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ)ಯ ಒಬ್ಬ ಸದಸ್ಯರ ಮೇಲೆ ಸೆಕ್ಷನ್ 420 ಮತ್ತು 120 ಬಿ ಅಡಿಯಲ್ಲಿ ಎಫ್‌ಐಆರ್ ದಾಖಲಾಗಿತ್ತು. ಈ ಪ್ರಕರಣವನ್ನು 2022ರ ಜನವರಿ 10ರಂದು ಹೈಕೋರ್ಟ್ ರದ್ದುಗೊಳಿಸಿತ್ತು.

ಫಸ್ಟ್ ಸ್ಯಾಲರಿಯ ಫಸ್ಟ್‌ಲುಕ್

ರಾಘವೇಂದ್ರ ಚಿತ್ರವಾಣಿ ಸಂಸ್ಥೆ ಮುನ್ನಡೆಸುತ್ತಿರುವ ಹಿರಿಯ ಸಿನಿಮಾ ಪ್ರಚಾರಕರ್ತ ಸುಧೀಂದ್ರ ವೆಂಕಟೇಶ್ ಈಗ ಹೊಸ ಸಾಹಸಕ್ಕೆ ಕೈಹಾಕಿದ್ದಾರೆ. ತಮ್ಮ ಪುತ್ರ ಪವನ್ ವೆಂಕಟೇಶ್ ನಿರ್ದೇಶನ ಮಾಡುತ್ತಿರುವ ಫಸ್ಟ್ ಸ್ಯಾಲರಿ ಕಿರುಚಿತ್ರದ ನಿರ್ಮಾಣಕ್ಕೆ ಬಂಡವಾಳ ಹೂಡುತ್ತಿದ್ದಾರೆ. ಆ ಮೂಲಕ ನಿರ್ಮಾಪಕರಾಗಿಯೂ ಗುರುತಿಸಿಕೊಳ್ಳುತ್ತಿದ್ದಾರೆ. ಫಸ್ಟ್ ಸ್ಯಾಲರಿ ಶೀರ್ಷಿಕೆಗೆ ಕನಸುಗಳ ಹಾದಿ ಎನ್ನುವ ಅಡಿಬರಹವಿದೆ. ಸದ್ಯ ಫಸ್ಟ್ ಸ್ಯಾಲರಿ ಕಿರುಚಿತ್ರದ ಪೋಸ್ಟರ್ ರಿಲೀಸ್ ಆಗಿದ್ದು, ಕುತೂಹಲ ಮೂಡಿಸಿದೆ.

ಕರೋನಾ ಸಮಯದಲ್ಲಿ ಕರಾಳ ರೋಗ ನಾಶ ಎಂಬ ಕಿರುಚಿತ್ರ ಸೇರಿದಂತೆ ಅನೇಕ

ಕಿರುಚಿತ್ರಗಳನ್ನು ನಿರ್ದೇಶನ ಮಾಡಿ ಅನುಭವ ಹೊಂದಿರುವ ಪವನ್ ವೆಂಕಟೇಶ್, ಈಗ ಫಸ್ಟ್ ಸ್ಯಾಲರಿ ಕಿರುಚಿತ್ರ ನಿರ್ದೇಶನ ಮಾಡುತ್ತಿದ್ದಾರೆ. ಇದು ತಾಯಿ ಸೆಂಟಿಮೆಂಟ್ ಆಧರಿಸಿದ ಕಿರುಚಿತ್ರವಾಗಿದ್ದು, ಬೆಂಗಳೂರು ಸುತ್ತಮುತ್ತ ಐದು ದಿನಗಳ ಕಾಲ ಚಿತ್ರೀಕರಣ ನಡೆಸಲಾಗಿದೆ. ಸದ್ಯ ಶೂಟಿಂಗ್ ಮುಕ್ತಾಯವಾಗಿದ್ದು, ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ನಡೆಯುತ್ತಿವೆ. ಈ ಚಿತ್ರದಲ್ಲಿ ಒಂದು ಹಾಡಿದೆ ಎಂದು ಪವನ್ ಹೇಳಿದರು. ರಿಚರ್ಡ್ ಡ್ಯಾನಿಯಲ್ ಛಾಯಾಗ್ರಾಹಣದ ಜತೆಗೆ ಸಂಕಲನ ಮಾಡಿದ್ದು ವಿಜಯ್ ಹರಿತ್ಸ ಸಂಗೀತ ಸಂಯೋಜಿಸಿದ್ದಾರೆ.

ಸೆಟ್ಟೇರಿತು ಹಲ್ಕಾ ಡಾನ್

ಟಗರು, ಸಲಗ, ಯುಐ.. ಹೀಗೆ ಕನ್ನಡ ಚಿತ್ರರಂಗದಲ್ಲಿ ಹಲವು ಸಿನಿಮಾಗಳನ್ನು ನಿರ್ಮಿಸಿ ಪ್ರಸಿದ್ಧಿ ಪಡೆದಿರುವ ನಿರ್ಮಾಪಕ ಕೆ.ಪಿ.ಶ್ರೀಕಾಂತ್ ಈಗ ತಮ್ಮ ವೀನಸ್ ಎಂಟರ್‌ಟೇನರ್ ಬ್ಯಾನರ್‌ನಲ್ಲಿ ಮತ್ತೊಂದು ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದಾರೆ. ಹಲ್ಕಾ ಡಾನ್ ಶೀರ್ಷಿಕೆಯಲ್ಲಿ ಸಿನಿಮಾ ಸೆಟ್ಟೇರಿದ್ದು, ಬಂಡಿ ಮಹಾಕಾಳಿ ಸನ್ನಿಧಿಯಲ್ಲಿ ಸಿನಿಮಾದ ಮುಹೂರ್ತ ನೆರವೇರಿತು.

ಕಿಚ್ಚ ಸುದೀಪ್ ಚಿತ್ರಕ್ಕೆ ಕ್ಲ್ಯಾಪ್ ಮಾಡಿ ಶುಭಕೋರಿದರೆ, ಗೀತಾಕ್ಕ ಹಾಗೂ ರಚಿತಾ ರಾಮ್ ಕ್ಯಾಮೆರಾಗೆ ಚಾಲನೆ ನೀಡಿದರು. ಶಿವಣ್ಣ ಮೊದಲ ದೃಶ್ಯಕ್ಕೆ ಆ್ಯಕ್ಷನ್ ಕಟ್ ಹೇಳಿದರು. ದುನಿಯಾ ವಿಜಯ್, ವಿನಯ್ ರಾಜ್ ಕುಮಾರ್, ನಿರ್ದೇಶಕ ಆರ್.ಚಂದ್ರು ಸೇರಿದಂತೆ ಹಲವರು ಚಿತ್ರತಂಡಕ್ಕೆ ಶುಭ ಕೋರಿದರು. ರತ್ನನ್ ಪ್ರಪಂಚ ಖ್ಯಾತಿಯ ಪ್ರಮೋದ್ ನಾಯಕನಾಗಿ ನಟಿಸುತ್ತಿದ್ದು, ಅಮೃತಾ ಅಯ್ಯಂಗಾರ್ ನಾಯಕಿಯಾಗಿ ಬಣ್ಣಹಚ್ಚುತ್ತಿದ್ದಾರೆ. ಹಿರಿಯ ನಟ ಸಾಯಿ ಕುಮಾರ್ ಪ್ರಮುಖ ಪಾತ್ರದಲ್ಲಿ ಅಭಿನಯಿಸುತ್ತಿದ್ದಾರೆ. ರಮೇಶ್ ಇಂದಿರಾ,

> ಮುಂದೆ ಶಿವಣ್ಣ ಹಾಗೂ ವಿಜಯ್ ಅವರ ಜತೆ ಸಿನಿಮಾ ಮಾಡುತ್ತೇನೆ. ಅವರಿಬ್ಬರ ಜತೆಗೆ ಹರಿಕೃಷ್ಣ ಸಂಗೀತವಿರಲಿದೆ. ಸಿನಿಮಾರಂಗದಲ್ಲಿ ಹೊಸ ಬೆಂಚ್ ಮಾರ್ಕ್ ಕ್ರಿಯೇಟ್ ಮಾಡುವ ಸಿನಿಮಾ ಅದಾಗಲಿದೆ. ಶಿವಣ್ಣ ಹಾಗೂ ದುನಿಯಾ ವಿಜಯ್ ಅಂತಹ ಎನರ್ಜಿ ತುಂಬಿದ್ದಾರೆ. ಈಗ ಸೆಟ್ಟೇರಿರುವ ಹಲ್ಕಾ ಡಾನ್ ಕನ್ನಡ ಮತ್ತು ತೆಲುಗಿನಲ್ಲಿ ಏಕಕಾಲದಲ್ಲಿ ನಿರ್ಮಾಣವಾಗಲಿದೆ, ಚಿತ್ರದಲ್ಲಿ ಎಲ್ಲರಿಗೂ ಹಿಡಿಸುವ ಒಳ್ಳೆಯ ಕಥೆ ಇದೆ.
>
> -ಕೆ.ಪಿ.ಶ್ರೀಕಾಂತ್ ನಿರ್ಮಾಪಕ

ಜ್ಯೋತಿ ರೈ ಸೇರಿದಂತೆ ದೊಡ್ಡ ತಾರಾಬಳಗವೇ ಚಿತ್ರದಲ್ಲಿದೆ. ಚಲಾ ಕಥೆ ಬರೆದು ನಿರ್ದೇಶನ ಮಾಡುತ್ತಿರುವ ಹಲ್ಕಾ ಡಾನ್ ಕನ್ನಡ ಮತ್ತು ತೆಲುಗಿನಲ್ಲಿ ನಿರ್ಮಾಣವಾಗುತ್ತಿದೆ. ವಿ.ಹರಿಕೃಷ್ಣ ಸಂಗೀತ ನಿರ್ದೇಶನ, ಸತ್ಯಾ ಹೆಗಡೆ ಛಾಯಾಗ್ರಹಣ ಈ ಚಿತ್ರಕ್ಕಿದೆ.

ನಾನು ಒಂದು ಹಂತದಿಂದ ದೊಡ್ಡ ಮಟ್ಟಕ್ಕೆ ಹೋಗಲು ಶ್ರೀಕಾಂತ್ ಅವರ ಬ್ಯಾನರ್ ಕಾರಣ. ಸಲಗ ಸಿನಿಮಾ ಬಳಿಕ ಭೀಮ ಸಿನಿಮಾ ನನಗೆ ಮತ್ತೊಂದು ಜನ್ಮ ಕೊಟ್ಟ ಪ್ರೊಡಕ್ಷನ್ ಹೌಸ್. ಈ ಚಿತ್ರದ ಕಾಂಬಿನೇಷನ್ ಸೂಪರ್ ಆಗಿದೆ, ಹಲ್ಕಾ ಡಾನ್ ಸಿನಿಮಾ ಸೂಪರ್ ಹಿಟ್ ಆಗಲಿ ಎಂದು ದುನಿಯಾ ವಿಜಯ್ ಶುಭ ಹಾರೈಸಿದರು.

ಒಳ್ಳೆಯ ಬ್ಯಾನರ್‌ನಲ್ಲಿ ಸಿನಿಮಾ ಮಾಡುತ್ತಿರುವ ಖುಷಿಕೊಟ್ಟಿದೆ. ಚಿತ್ರರಂಗದ ದಿಗ್ಗಜರು ನಮ್ಮ ಚಿತ್ರಕ್ಕೆ ಶುಭಕೋರಿರುವುದು ಸಂತಸ ತಂದಿದೆ. ನಾನು ಐದಾರು ಬಾರಿ ಈ ಸಿನಿಮಾದ ಕಥೆ ಕೇಳಿದ್ದೇನೆ. ನಿರ್ದೇಶಕರು ಬಲು ಅಚ್ಚುಕಟ್ಟಾಗಿ ಸಿನಿಮಾದ ಸ್ಟೋರಿ ಸಿದ್ಧ ಮಾಡಿಕೊಂಡಿದ್ದಾರೆ ಎಂದು ಪ್ರಮೋದ್ ಸಂತಸದಿಂದ ನುಡಿದರು.

ಪ್ರೀತಿಗಾಗಿ ಪ್ರೇಮಿಯ ಪರದಾಟ

ಪ್ರೇಮಕಥೆಯ ಸಿನಿಮಾಗಳು ಬಲು ಬೇಗ ಮನಸಿಗೆ ಹಿಡಿಸುತ್ತವೆ. ಲವ್ ಸ್ಟೋರಿಯ ಜತೆಗೆ ಮಾಸ್ ಸ್ಟೋರಿ ಇದ್ದರೆ ಪ್ರೇಕ್ಷಕರನ್ನು ಸೆಳೆಯುತ್ತವೆ. ಅಂತೆಯೇ ಈ ವಾರ ತೆರೆಗೆ ಬಂದ ದಿಲ್ ಮಾರ್ ಮಾಸ್ ಕ್ಲಾಸ್ ಆಗಿ ಮೂಡಿಬಂದಿದೆ. ಸಿನಿಮಾ ಆರಂಭದಲ್ಲಿಯೇ ಆ್ಯಕ್ಷನ್ ದೃಶ್ಯಗಳು ಮನಸೂರೆಗೊಳ್ಳುತ್ತದೆ. ರಗಡ್ ಲುಕ್ ನಲ್ಲಿ ಎಂಟ್ರಿಕೊಡುವ ನಾಯಕ ಖಳರನ್ನು ಮುಲಾಜಿಲ್ಲದೆ ಹೆಡೆಮುರಿ ಕಟ್ಟುತ್ತಾನೆ. ಆ ಸನ್ನಿವೇಶಗಳನ್ನು ಗಮನಿಸಿದರೆ ಇದು ಪಕ್ಕಾ, ಮಾಸ್ ಸಿನಿಮಾ ಅನ್ನಿಸುತ್ತದೆ. ಹೀಗೆ ಅಂದುಕೊಳ್ಳುತ್ತಿರುವಾಗಲೇ ಸಿಮಾದ ಕಥೆ ಮಗ್ಗಲು ಬದಲಾಯಿಸುತ್ತದೆ. ನವಿರಾದ ಪ್ರೇಮಕಥೆ ತೆರೆದುಕೊಳ್ಳುತ್ತದೆ.

ಅಲ್ಲಿ ನಾಯಕ ಮುಗ್ಧನಾಗಿ ಕಂಗೊಳಿಸುತ್ತಾನೆ. ಹೀಗಿದ್ದ ನಾಯಕ ಯಾಕೆ ರಗಡ್ ಆದ, ಅದರ ಹಿಂದಿನ ಕಥೆ ಏನು ಎಂಬ ರೋಚಕ ಸ್ಟೋರಿ ತೆರೆದುಕೊಳ್ಳುತ್ತದೆ. ಅದೆಲ್ಲವನ್ನು ಸಿನಿಮಾ ನೋಡಿ ತಿಳಿದರೆ ಚೆಂದ. ಇಲ್ಲಿ ಕೊಂಚ ಅರ್ಜುನ್ ರೆಡ್ಡಿ ಸಿನಿಮಾ ನೆನಪಾಗುತ್ತದೆ. ಆದರೆ ಅದಕ್ಕೂ ವಿಭಿನ್ನವಾದ ಕಥೆ ಸಿನಿಮಾದಲ್ಲಿದೆ.

ಸಂಭಾಷಣೆಕಾರರಾಗಿದ್ದು ಚಂದ್ರಮೌಳಿ, ಈ ಚಿತ್ರಕ್ಕೂ ಸಂಭಾಷಣೆ ಬರೆದು ನಿರ್ದೇಶನ ಮಾಡಿದ್ದಾರೆ. ಹಾಗಾಗಿ ಸಿನಿಮಾ ಡೈಲಾಗ್ ಗಳು ಪಂಚಿಂಗ್ ಆಗಿದ್ದು, ಕೆಲವು ಡೈಲಾಗ್ ಗಳು ಹಾಗೇ ಮನಸಿನಲ್ಲಿ ಉಳಿಯುತ್ತವೆ.

ನಟ ರಾಮ್ ಅದ್ಭುತವಾಗಿ ನಟಿಸಿದ್ದಾರೆ. ಡಬ್ಬಲ್ ಶೇಡ್ ನಲ್ಲಿ ಮಿಂಚಿರುವ ರಾಮ್ ಲವ್ವರ್ ಬಾಯ್ ಆಗಿ ಮೆಚ್ಚುಗೆಯಾಗುವ ಜತೆಗೆ ?ಕ್ಷನ್ ನಲ್ಲಿಯೂ ಅಬ್ಬರಿಸಿದ್ದಾರೆ. ದಿಲ್ ಮಾರ್ ಮೂಲಕ ಚಂದನವನದಲ್ಲಿ ಹೊಸ ಭರವಸೆ ಮೂಡಿಸಿದ್ದಾರೆ. ಡಿಂಪಲ್

ಚಿತ್ರ : ದಿಲ್ ಮಾರ್
ನಿರ್ದೇಶನ : ಚಂದ್ರಮೌಳಿ
ನಿರ್ಮಾಣ : ನಾಗರಾಜು ಭದ್ರಾವತಿ
ತಾರಾಗಣ : ರಾಮ್, ಸಾಯಿಕುಮಾರ್, ಅದಿತಿ, ಡಿಂಪಲ್ ಮುಂತಾದವರು.
ರೇಟಿಂಗ್ : ★★★

ಹಯಾತಿ ಗ್ಲಾಮರ್ ಲುಕ್ ನಲ್ಲಿ ಮಿಂಚಿದರೆ ಅದಿತಿ ಮಗ್ಧತೆಯ ಪಾತ್ರದಲ್ಲಿ ಮುದ್ದಾಗಿ ಕಂಗೊಳಿಸಿದ್ದಾರೆ. ಸಾಯಿ ಕುಮಾರ್ ಖಳನಾಗಿ ಖದರ್ ತೋರಿದ್ದು, ತಮ್ಮ ಪಾತ್ರಕ್ಕೆ ಜೀವತುಂಬಿದ್ದಾರೆ. ಶರತ್ ಲೋಹಿತಾಶ್ವ ಸೇರಿದಂತೆ ಎಲ್ಲರೂ ತಮ್ಮ ಪಾತ್ರಕ್ಕೆ ನ್ಯಾಯ ಒದಗಿಸಿದ್ದಾರೆ.

ಚಿತ್ರದ ಸಂಗೀತ ದಿಲ್‌ಮಾರ್ ಗೆ ಶಕ್ತಿತುಂಬಿದ್ದು, ಛಾಯಾಗ್ರಹಣಕ್ಕೆ ಫುಲ್ ಮಾರ್ಕ್ಸ್ ನೀಡಬಹುದು. ಒಟ್ಟಾರೆ ದಿಲ್ ಮಾರ್ ಪ್ರೇಕ್ಷಕರ ಮನಗೆಲ್ಲುವ ಸಿನಿಮಾವಾಗಿದ್ದು, ಎಲ್ಲರೂ ಒಟ್ಟಾಗಿ ಕುಳಿತು ನೋಡುವ ಸಿನಿಮಾವಾಗಿದೆ.

ಫೌಜಿ ಕಟ್ಟಿದ ಪ್ರಭಾಸ್

ಪ್ರಭಾಸ್ ಸಾಲು ಸಾಲು ಸಿನಿಮಾಗಳಲ್ಲಿ ಬ್ಯುಸಿಯಾಗಿದ್ದಾರೆ. ಹನು ರಾಘವಪುಡಿ ನಿರ್ದೇಶಿಸುತ್ತಿರುವ ಬಹು ನಿರೀಕ್ಷಿತ ಪ್ಯಾನ್ ಇಂಡಿಯಾ ಸಿನಿಮಾ ಫೌಜಿಯಲ್ಲಿಯೂ ಪ್ರಭಾಸ್ ನಟಿಸುತ್ತಿದ್ದು, ಈ ಚಿತ್ರದಲ್ಲಿ ಸೈನಿಕನಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ಸದ್ಯ ಫೌಜಿ ಸಿನಿಮಾದ ಟೈಟಲ್ ಪೋಸ್ಟರ್ ರಿಲೀಸ್ ಆಗಿದ್ದು, ಪ್ರಭಾಸ್ ಹೊಸ ಲುಕ್‌ನಲ್ಲಿ ಮಿಂಚಿದ್ದಾರೆ. ಫೌಜಿ ನಲವತ್ತರ ದಶಕದ ವಸಾಹತುಶಾಹಿ ವಿರುದ್ಧ ನಡೆಯುವ ಹೋರಾಟದ ಕಥೆಯನ್ನು ಒಳಗೊಂಡಿದ್ದು, ಪೋಸ್ಟರ್‌ನಲ್ಲಿ ಉರಿಯುತ್ತಿರುವ ಹರಿದ ಬ್ರಿಟಿಷ್ ಧ್ವಜವಿದೆ, ಇದು ಸ್ವಾತಂತ್ರ್ಯದ ಹೋರಾಟದ ಕಿಚ್ಚನ್ನು ತೋರಿಸುತ್ತದೆ.

ಅವನು ಪದ್ಮವ್ಯೂಹವನ್ನು ಗೆದ್ದ ಪಾರ್ಥನಂತೆ ಪಾಂಡವರ ಪರವಾಗಿ ನಿಂತ ಕರ್ಣನಂತೆ, ಗುರುವಿಲ್ಲದ ಯೋಧ ಏಕಲವ್ಯನಂತೆ, ಸಹಜ ಶೌರ್ಯದಿಂದ ಜನಿಸಿದನೆಂದು ಪೋಸ್ಟರ್‌ನಲ್ಲಿರುವ ಸಾಲುಗಳು ಸಾರುತ್ತವೆ. ಈ ಚಿತ್ರದಲ್ಲಿ ಪ್ರಭಾಸ್‌ಗೆ ಜತೆಯಾಗಿ ಇಮಾನ್ವಿ ನಟಿಸಿದ್ದಾರೆ. ಅನುಪಮ್ ಖೇರ್, ಮಿಥುನ್ ಚಕ್ರವರ್ತಿ, ಜಯಪ್ರದಾ ಮತ್ತು ಭಾನು ಚಂದರ್ ಸೇರಿದಂತೆ ಹಲವರು ತಾರಾಗಣದಲ್ಲಿದ್ದಾರೆ. ಮೈತ್ರಿ ಮೂವಿಮೇಕರ್ಸ್ ಬ್ಯಾನರ್ ನಲ್ಲಿ ನವೀನ್ ಯೆರ್ನೇನಿ ಮತ್ತು ರವಿಶಂಕರ್ ಹಾಗೂ ಭೂಷಣ್ ಕುಮಾರ್ ಫೌಜಿ ಸಿನಿಮಾವನ್ನು ನಿರ್ಮಿಸುತ್ತಿದ್ದಾರೆ. ವಿಶಾಲ್ ಚಂದ್ರಶೇಖರ್ ಸಂಗೀತ ನಿರ್ದೇಶನ, ಸುದೀಪ್ ಚಟರ್ಜಿ ಛಾಯಾಗ್ರಹಣ ಈ ಚಿತ್ರಕ್ಕಿದೆ. ಫೌಜಿ, ತೆಲುಗು ಕನ್ನಡ ತಮಿಳು, ಹಿಂದಿ, ಮಲೆಯಾಳಂ ಜತೆಗೆ ಬೆಂಗಾಲಿ ಭಾಷೆಯಲ್ಲಿಯೂ ರಿಲೀಸ್ ಆಗಲಿದೆ.

ಟಾಲಿವುಡ್‌ಗೆ ಚೈತ್ರಾ

ಟೋಬಿ, ಸಪ್ತ ಸಾಗರದಾಚೆ ಎಲ್ಲೋ.. ಹೀಗೆ ಇನ್ನೂ ಹಲವು ಸಿನಿಮಾಗಳಲ್ಲಿ ನಟಿಸಿ ಮನಗೆದ್ದಿರುವ ಚೈತ್ರಾ ಆಚಾರ್, ಫೌಜಿ ಚಿತ್ರದಲ್ಲಿ ಪ್ರಮುಖ ಪಾತ್ರದಲ್ಲಿ ನಟಿಸುತ್ತಿದ್ದಾರೆ. ಆ ಮೂಲಕ ಟಾಲಿವುಡ್‌ಗೂ ಎಂಟ್ರಿಕೊಟ್ಟಿದ್ದಾರೆ. ಸಹಜಾಭಿನಯದಲ್ಲಿ ಮನಸೆಳೆದ ಚೈತ್ರಾ, ಪ್ರಭಾಸ್ ಸಿನಿಮಾದಲ್ಲಿ ನಟಿಸುತ್ತಿರುವುದು ಅವರ ಅಭಿಮಾನಿಗಳಿಗೆ ಸಂತಸ ತಂದಿದೆ. ಈ ಹಿಂದೆ 3ಬಿಹೆಚ್‌ಕೆ ಚಿತ್ರದ ಮೂಲಕ ತಮಿಳಿನಲ್ಲಿಯೂ ನಟಿಸಿದ್ದ ಚೈತ್ರಾ, ಈಗ ಟಾಲಿವುಡ್ ಅಂಗಳದಲ್ಲಿಯೂ ಮಿಂಚಲು ಸಿದ್ಧವಾಗಿದ್ದಾರೆ.